ವಿಜಾಪೂರ ಜಿಲ್ಲೆಯ ಚಿತ್ರಕಲೆ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ಪ್ರಬಂಧ

ಮಾರ್ಗದರ್ಶಕರು
ಡಾ. ವ್ಹಿ. ಎಮ್. ಬಾಗಾಯತ
ಉಪನ್ಯಾಸಕರು
ಎಸ್.ಆರ್.ಪಿ.ಯು ಕಾಲೇಜ
ಹೊರ್ತಿ, ಬಿಜಾಪೂರ

ಸಂಶೋಧಕಿ
ಗಿರಿಜಾ ಎಸ್. ಬಿರಾದಾರ

ಸಹ ಮಾರ್ಗದರ್ಶಕರು
ಡಾ. ಎಸ್. ಸಿ. ಪಾಟೀಲ
ಡೀನ್, ಲಲಿತಕಲಾ ನಿಕಾಯ
ಮುಖ್ಯಸ್ಥರು, ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ



ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೮

ವಿಜಾಪುರ ಜಿಲ್ಲೆಯ ಚಿತ್ರಕಲೆ

****

ಎಂ. ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಸಂಶೊಧನಾ ಪ್ರಬಂಧ

ಸಂಶೋಧಕಿ
ಗಿರಿಜಾ ಎಸ್. ಬಿರಾದಾರ

ಮಾರ್ಗದರ್ಶಕರು
ಡಾ. ವ್ಹಿ. ಎಮ್. ಬಾಗಾಯತ
ಅಧ್ಯಾಪಕರು
ಎಸ್. ಆರ್. ಪಿ. ಯು. ಕಾಲೇಜ
ಹೊರ್ತಿ, ವಿಜಾಪುರ ಜಿಲ್ಲೆ

ಸಹಮಾರ್ಗದರ್ಶಕರು
ಡಾ. ಎಸ್. ಸಿ. ಪಾಟೀಲ,
ಡೀನ್, ಲಲಿತ ಕಲಾ ನಿಕಾಯ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ದೃಶ್ಯಕಲಾ ವಿಭಾಗ,

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ
೨೦೦೮

ಘೋಷಣಾ ಪತ್ರ

' ವಿಜಾಪುರ ಜಿಲ್ಲೆಯ ಚಿತ್ರ ಕಲೆ ' ಎಂಬ ಶೀರ್ಷಿಕೆಯ ಈ ಸಂಶೋಧನಾ ಪ್ರಬಂಧವನ್ನು ಡಾ. ವ್ಹಿ.ಎಮ್. ಬಾಗಾಯತ ಅಧ್ಯಾಪಕರು, ಎಸ್.ಆರ್.ಪಿ.ಯು. ಕಾಲೇಜ್ ಹೊರ್ತಿ, ವಿಜಾಪೂರ ಜಿಲ್ಲೆ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯ ಕಲಾ ವಿಭಾಗಕ್ಕೆ ಎಮ್.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಈ ಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

(ಗಿರಿಜಾ. ಎಸ್. ಬಿರಾದಾರ)
ಎಮ್. ಫಿಲ್. ವಿದ್ಯಾರ್ಥಿನಿ
ದೃಶ್ಯ ಕಲಾ ವಿಭಾಗ,
ಕನ್ನಡ ವಿಶ್ವಾವಿದ್ಯಾಲಯ ಹಂಪಿ,
ವಿದ್ಯಾರಣ್ಯ

ದಿನಾಂಕ : 29/10/2008
ಸ್ಥಳ : ವಿದ್ಯಾರಣ್ಯ

ಘೋಷಣಾ ಪತ್ರ

' ವಿಜಾಪುರ ಜಿಲ್ಲೆಯ ಚಿತ್ರ ಕಲೆ ' ಎಂಬ ಶೀರ್ಷಿಕೆಯ ಈ ಸಂಶೋಧನಾ ಪ್ರಬಂಧವನ್ನು ಡಾ. ಎಸ್. ಸಿ. ಪಾಟೀಲ, ಡೀನ್, ಲಲಿತ ಕಲಾ ನಿಕಾಯ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ದೃಶ್ಯಕಲಾ ವಿಭಾಗ ಇವರ ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯ ಕಲಾ ವಿಭಾಗಕ್ಕೆ ಎಮ್.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಈ ಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

(ಗಿರಿಜಾ. ಎಸ್. ಬಿರಾದಾರ)
ಎಮ್. ಫಿಲ್. ವಿದ್ಯಾರ್ಥಿನಿ
ದೃಶ್ಯ ಕಲಾ ವಿಭಾಗ,
ಕನ್ನಡ ವಿಶ್ವಾವಿದ್ಯಾಲಯ ಹಂಪಿ,
ವಿದ್ಯಾರಣ್ಯ

ದಿನಾಂಕ : 29/10/2008
ಸ್ಥಳ : ವಿದ್ಯಾರಣ್ಯ

ಪ್ರಮಾಣ ಪತ್ರ

' **ಕುಮಾರಿ ಗಿರಿಜಾ ಎಸ್. ಬಿರಾದಾರ** ' ಎಂಬ ವಿದ್ಯಾರ್ಥಿನಿಯು ನನ್ನ ಮಾರ್ಗದರ್ಶನದಲ್ಲಿ **ವಿಜಾಪುರ ಜಿಲ್ಲೆಯ ಚಿತ್ರಕಲೆ** ಎಂಬ ಶೀರ್ಷಿಕೆಯ ಈ ಸಂಶೋಧನ ಪ್ರಬಂಧವನ್ನು ರಚಿಸಿದ್ದಾರೆ. ಎಮ್. ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯ ಕಲಾ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಇದನ್ನು ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಯಾವ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

(ಮಾರ್ಗದರ್ಶಕರು,)
ಡಾ. ವ್ಹಿ. ಎಮ್. ಬಾಗಾಯತ
ಅಧ್ಯಾಪಕರು,
ಎಸ್. ಆರ್. ಪಿ. ಯು. ಕಾಲೇಜ, ಹೊರ್ತಿ
ವಿಜಾಪುರ ಜಿಲ್ಲೆ .

ದಿನಾಂಕ : 29/10/2008
ಸ್ಥಳ : ವಿದ್ಯಾರಣ್ಯ

ಪ್ರಮಾಣ ಪತ್ರ

' **ಕುಮಾರಿ ಗಿರಿಜಾ ಎಸ್. ಬಿರಾದಾರ** ' ಎಂಬ ವಿದ್ಯಾರ್ಥಿನಿಯು ನನ್ನ ಸಹಮಾರ್ಗದರ್ಶನದಲ್ಲಿ **ವಿಜಾಪುರ ಜಿಲ್ಲೆಯ ಚಿತ್ರಕಲೆ** ಎಂಬ ಶೀರ್ಷಿಕೆಯ ಈ ಸಂಶೋಧನ ಪ್ರಬಂಧವನ್ನು ರಚಿಸಿದ್ದಾರೆ. ಎಮ್. ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯ ಕಲಾ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಇದನ್ನು ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಯಾವ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 31/10/2008
ಸ್ಥಳ : ವಿದ್ಯಾರಣ್ಯ

(ಡಾ. ಎಸ್. ಸಿ. ಪಾಟೀಲ)
ಡೀನ್, ಲಲಿತ ಕಲಾ ನಿಕಾಯ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ದೃಶ್ಯ ಕಲಾವಿಭಾಗ,
ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ.

ವಿಜಾಪುರ ಜಿಲ್ಲೆಯ ಚಿತ್ರಕಲೆ

ಪರಿವಿಡಿ

ಅಧ್ಯಾಯ : ಒಂದು		ಪುಟ ಸಂಖ್ಯೆ
	ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ.	೦೧–೦೯
ಅಧ್ಯಾಯ : ಎರಡು		
	ವಿಜಾಪುರ ಜಿಲ್ಲೆಯ ಸಾಂಸ್ಕೃತಿಕ ಪರಿಸರ, ಲಲಿತ ಕಲೆಗಳು.	೧೦–೨೫
ಅಧ್ಯಾಯ : ಮೂರು		
	ವಿಜಾಪುರ ಜಿಲ್ಲೆಯ ಭಿತ್ತಿಚಿತ್ರಕಲೆ ಮತ್ತು ಹಸ್ತಪ್ರತಿ ಚಿತ್ರಕಲೆ.	೨೬–೪೨
ಅಧ್ಯಾಯ : ನಾಲ್ಕು		
	ವಿಜಾಪುರ ವಸ್ತು ಸಂಗ್ರಹಾಲಯದ ವರ್ಣ ಚಿತ್ರಗಳು.	೪೩–೬೬
ಅಧ್ಯಾಯ : ಐದು		
	ವಿಜಾಪುರ ಜಿಲ್ಲೆಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳು.	೬೭–೭೮
ಅಧ್ಯಾಯ : ಆರು		
	ಕಲಾ ಕ್ಷೇತ್ರಕ್ಕೆ ವಿಜಾಪುರ ಜಿಲ್ಲೆಯ ಕಲಾವಿದರ ಕೊಡುಗೆಗಳು.	೭೯–೧೦೩
ಅಧ್ಯಾಯ : ಏಳು		
	ಸಮಾರೋಪ .	೧೦೪–೧೧೧

ಅನುಬಂಧಗಳು

೧. ಗ್ರಂಥಋಣ

೨. ಸಂಕ್ಷೇಪಗಳು

೩. ಛಾಯಾ ಚಿತ್ರಗಳ ಕೃಪೆ

೪. ನಕಾಶೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಸಂಸ್ಕೃತಿ ಮತ್ತು ಪರಂಪರೆಯನ್ನು ಅರಿಯಲು ಇರುವ ಆಕರಗಳಲ್ಲಿ ಚಿತ್ರಕಲೆಗೆ ವಿಶೇಷ ಸ್ಥಾನವಿದೆ. ಈ ದಿಶೆಯಲ್ಲಿ ಮಾನವನು ತನ್ನ ಸಂಸ್ಕೃತಿಯನ್ನು ಚಿತ್ರಕಲೆಯಲ್ಲಿ ಹೇಗೆ ಅಭಿವ್ಯಕ್ತಗೊಳಿಸಿದ್ದಾನೆ ಎಂಬುದು ಅಥವಾ ಸಂಸ್ಕೃತಿಯ ಒಂದು ಭಾಗವೇ ಆಗಿರುವ ಚಿತ್ರಕಲೆ ಇತರ ಆಕರಗಳಿಗಿಂತ ಬೇರೆಯಾಗಿ ನಮ್ಮ ಸಾಂಸ್ಕೃತಿಕ ಇತಿಹಾಸ ನಿರ್ಮಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ ಎಂದು ಹೇಳಲಾಗಿದೆ. ಚಿತ್ರ ಕಲೆಯನ್ನು ನಮ್ಮ ಪೂರ್ವಜರು ಧರ್ಮ ಪ್ರಚಾರದ ಸಾಧನವಾಗಿ, ಮನರಂಜನೆಗಾಗಿ, ಸುಸಂಸ್ಕೃತ ಸಮಾಜ ನಿರ್ಮಿಸುವಲ್ಲಿ ಭಾವನೆಗಳನ್ನು ಕಲಾತ್ಮಕವಾಗಿ ಅಭಿವ್ಯಕ್ತಗೊಳಿಸುವಲ್ಲಿ ರಾಜಕೀಯ ಉದ್ದೇಶಗಳಿಗಾಗಿ ಹೇಗೆ ಬಳಸಿಕೊಂಡರು.[೧] ಜೊತೆಗೆ ಚಿತ್ರಗಳ ಶೈಲಿ ಕಾಲದಿಂದ ಕಾಲಕ್ಕೆ ಬದಲಾದ ಅವುಗಳ ಬಳಕೆ ಇಂತಹ ಹಲವಾರು ವಿಚಾರಗಳನ್ನು ತಿಳಿದುಕೊಳ್ಳಲು ಇಂತಹ ಅಧ್ಯಯನಗಳು ತುಂಬಾ ಮಹತ್ವದ್ದಾಗಿವೆ.

೧..ಡಾ. ಎಸ್. ಸಿ. ಪಾಟೀಲ : ವರ್ಣ ಸಂಚಯ : ಪುಟ-೧೨

ಒಂದು ಜನಾಂಗದ ಒಳಮೈ ಧರ್ಮ ಮತ್ತು ಆಧ್ಯಾತ್ಮಿಕ ಸಾಧನೆಯಾದರೆ ಅದರ ಅಭಿವ್ಯಕ್ತಿಯಾದ ಕಲೆಗಳು ಆ ಜನಾಂಗದ ಹೊರಮೈಯಾಗುತ್ತವೆ. ಒಂದು ತಳಪಾಯ ಇನ್ನೊಂದು ಕಟ್ಟಡ ಎಂಬಂತೆ ಭಾರತೀಯ ಪರಿಸರದಲ್ಲಿ ಕಲೆಗಳು ಬೆಳೆದು ಬಂದಿವೆ.[೧] ಯಾವುದೇ ಜನಾಂಗದ ಬದುಕು ಜೀವನ ಚರಿತ್ರೆಯೆನಿಸಿದರೆ ಕಲೆಗಳು ಅದರ ಆತ್ಮ ಚರಿತ್ರೆಯೆನಿಸುತ್ತವೆ ಎಂಬ ಮಾತುಗಳು ಬಿಜಾಪುರ ಜಿಲ್ಲೆಯ ಚಿತ್ರಕಲೆಗೂ ಅನ್ವಯಿಸುತ್ತದೆ.

ಈ ಜಿಲ್ಲೆಯ ಚಿತ್ರ ರಚನಾ ಪರಂಪರೆ ಪ್ರಾಚೀನ ಕಾಲದಿಂದ ಇಂದಿನವರೆಗೂ ಉಳಿದುಕೊಂಡು ಬಂದಿರುವುದರ ಜೊತೆಗೆ ವ್ಯಕ್ತಿಯಿಂದ ವ್ಯಕ್ತಿಗೆ ಸಮುದಾಯದಿಂದ ಸಮುದಾಯಕ್ಕೆ, ವಿಭಿನ್ನವಾದ ತಿರುವುಗಳನ್ನು ಪಡೆದುಕೊಂಡಿದೆ. ಅಲ್ಲದೆ ಕೆಲವು ಪ್ರಾಚೀನ ಚಿತ್ರಕಲಾಕೃತಿಗಳು. ಪ್ರಕೃತಿಯ ವಿಕೋಪದಿಂದ ಕಾಲಮಾನದ ಪ್ರಭಾವದಿಂದ ಮತ್ತು ವಿವಿಧ ಬಗೆಯ ಆಪತ್ತುಗಳಿಂದ ಅವನತಿಯತ್ತ ಸಾಗುತ್ತಿವೆ ಇಂತಹ ಚಿತ್ರಗಳನ್ನು ಅಧ್ಯಯನಕ್ಕೊಳಪಡಿಸಿ ಇವುಗಳ ಮಹತ್ವವನ್ನು ಮನವರಿಕೆ ಮಾಡಿಕೊಡುವ ಉದ್ದೇಶವನ್ನು ಪ್ರಸ್ತುತ ಅಧ್ಯಯನ ಹೊಂದಿದೆ.

ಪ್ರಾದೇಶಿಕತೆ ಆ ಪ್ರದೇಶದ ಜನರ ಜೀವನ ವಿಧಾನ, ಆಚಾರ-ವಿಚಾರ, ಧಾರ್ಮಿಕ ನಂಬಿಕೆ ಮುಂತಾದವುಗಳ ಅವರ ಚಿತ್ರ ರಚನೆಯ ಮೇಲೆ ಪ್ರಭಾವ ಬೀರಿ ಈ ಪರಂಪರೆ ವೈವಿಧ್ಯಮಯವಾಗಿ ರೂಪಗೊಳ್ಳಲು ಕಾರಣವಾಗಿದೆ. ಯಾವುದೇ ಕಾಲದ ಚಿತ್ರಗಳು ಆಯಾ ಕಾಲದ ಜನರ ಜೀವನದ ವಿವರಗಳನ್ನು ಒಳಗೊಂಡಿರುತ್ತವೆ. ಹಾಗೆಯೇ ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಇವು ಮಹತ್ವದ ಆಕರಗಳಾಗಿವೆ. ಕಲೆಯ ಅಧ್ಯಯನದಿಂದ ನಿರ್ಮಾತೃಗಳ ಇತಿಹಾಸ ಮತ್ತು ಅವುಗಳ ಪೋಷಕರು ಯಾವ ಕಾರಣ ಮತ್ತು ಉದ್ದೇಶಗಳಿಗಾಗಿ ಅವುಗಳನ್ನು ರಚಿಸಿದರು ಎಂಬುದನ್ನು ತಿಳಿಯುವುದರ ಜೊತೆಗೆ ಚಿತ್ರ ರಚನೆಗೊಂಡ ರೀತಿ, ಸಿದ್ಧತಾ ವಿಧಾನ, ವರ್ಣಗಳ ತಯಾರಿಕೆ, ರಚನಾ ಪರಿಕರಗಳು ಮುಂತಾದ ಅಂಶಗಳನ್ನು ಇಂತಹ ಅಧ್ಯಯನಗಳಿಂದ ತಿಳಿದುಕೊಳ್ಳಬಹುದಾಗಿದೆ. ಹಾಗಾಗಿ ಬಿಜಾಪುರ ಜಿಲ್ಲೆಯ ವ್ಯಾಪ್ತಿಗೆ ಈ ಅಧ್ಯಯನ ಸೀಮಿತಗೊಳಿಸಿ,ಮೇಲಿನ ಅಂಶಗಳನ್ನು ಕಂಡುಕೊಳ್ಳುವ ಉದ್ದೇಶ ಇಲ್ಲಿ ಇಟ್ಟುಕೊಳ್ಳಲಾಗಿದೆ.

ಈ ಜಿಲ್ಲೆಯ ಚಿತ್ರ ಪರಂಪರೆಯಿಂದ ಈ ಜನರ ಕಲಾಭಿಮಾನ, ಧರ್ಮಾಭಿಮಾನದ ಹೆಜ್ಜೆ ಗುರುತುಗಳನ್ನು ಗುರುತಿಸುವುದರ ಜೊತೆಗೆ ಅವರ ಸಾಂಸ್ಕೃತಿಕ ಜೀವನದ

---

೧. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಪುಟ-[illegible]

ಶ್ರೀಮಂತಿಕೆಯ ಕಲಾತ್ಮಕ ಬದಕನ್ನು ಕಂಡುಕೊಳ್ಳುವುದರತ್ತ ಗಮನಹರಿಸಲಾಗಿದೆ. ಈ ಕಿರು ಪ್ರಬಂಧದಲ್ಲಿ ಪೂರಕವಾಗಿ ಕರ್ನಾಟಕದ ಇನ್ನಿತರ ಪ್ರದೇಶಗಳ ಚಿತ್ರಕಲೆಯನ್ನು ಅಲ್ಲಲ್ಲಿ ಸಂದರ್ಭೋಚಿತವಾಗಿ ಬಳಸಿಕೊಳ್ಳಲಾಗಿದೆ.

ವಿಜಾಪುರ ಜಿಲ್ಲೆಯ ಸಾಂಸ್ಕೃತಿಕ ಕೊಡುಗೆಗಳ ಬಗ್ಗೆ ವಿವೇಚಿಸುವಾಗಿ ಚಿತ್ರಕಲೆಯ ಪಾತ್ರವು ಗಮನಾರ್ಹವಾಗಿರುವುದು ಕಂಡುಬರುತ್ತದೆ. ಕರ್ನಾಟಕದಲ್ಲಿ ವಿಜಾಪುರ ಜಿಲ್ಲೆಯು ವಿಶೇಷವಾಗಿ ಚಿತ್ರಕಲಾ ಕ್ಷೇತ್ರಕ್ಕೆ ಹೆಚ್ಚಿನ ಕೊಡುಗೆ ನೀಡಿದೆ. ಚಿತ್ರಕಲೆಯನ್ನು ಕಲಿಸುವುದು, ಚಿತ್ರಕಲೆಯ ಮೂಲಕ ಧರ್ಮೋಪದೇಶ ಮಾಡುವುದು, ಚಿತ್ರಕಲೆಯಿಂದ ಮನೆ ಅರಮನೆ ಮಠ–ಮಾನ್ಯಗಳನ್ನು ಅಲಂಕರಿಸುವುದು ಚಿತ್ರಕಲಾವಿದರನ್ನು ಪ್ರೋತ್ಸಾಹಿಸುವುದು ಮುಂತಾದ ಕ್ರಮಗಳ ಮೂಲಕ ವಿಜಾಪುರ ಜಿಲ್ಲೆಯ ಚಿತ್ರಕಲೆಯನ್ನು ಬೆಳೆಸಿ ಉಳಿಸುವಲ್ಲಿ ಇಲ್ಲಿನ ಜನರು ವಿಶಿಷ್ಟ ಪಾತ್ರವಹಿಸಿದ್ದಾರೆ.

ನಾಡಿನ ಸಂಸ್ಕೃತಿಗೆ ವಿಜಾಪುರ ಜಿಲ್ಲೆಯ ಕೊಡುಗೆಯು ಸಣ್ಣದೇನಲ್ಲ. ಸಾಹಿತ್ಯ,ಸಂಗೀತ,ಶಿಲ್ಪ ಮತ್ತು ಚಿತ್ರಕಲೆಗಳಂತಹ ಕಲಾ ಪ್ರಕಾರಗಳನ್ನು ಬೆಳೆಸಿ ಉಳಿಸುವ ಮೂಲಕ ನಮ್ಮ ನಾಡನ್ನು ಸಾಂಸ್ಕೃತಿಕವಾಗಿ ಸಂಪದ್ಭರಿವಾಗಿ ಮಾಡುವಲ್ಲಿ ವಿಜಾಪುರ ಜಿಲ್ಲೆಯ ಚಿತ್ರಕಲೆಯ ಪಾತ್ರ ಬಹುಮುಖ್ಯವಾಗಿದೆ.

ಕರ್ನಾಟಕದಲ್ಲಿ ಹಲವು ಜಿಲ್ಲೆಯಲ್ಲಿ ಪ್ರಾಚೀನ ಚಿತ್ರಗಳು ಕಂಡುಬರುತ್ತವೆ. ಅವುಗಳ ಕುರಿತು ಅಲ್ಲಲ್ಲಿ ಕಿರುಮಾಹಿತಿ ನೀಡುವ ತುಂಡು ಬರವಣಿಗೆಗಳು[೧] ಲಭ್ಯವಾಗುತ್ತವೆಯೇ ಹೊರತು ಅವುಗಳ ಬಗ್ಗೆ ವ್ಯವಸ್ಥಿತ ಅಧ್ಯಯನದ ಕೊರತೆ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ವಿಜಾಪುರ ಜಿಲ್ಲೆಯ ಪ್ರಾಚೀನ ಚಿತ್ರಕಲೆಯ ಬಗ್ಗೆ ಅಧ್ಯಯನ ಕೈಗೊಳ್ಳುವ ಉದ್ದೇಶವನ್ನು ಈ ಕಿರು ಅಧ್ಯಯನ ಹೊಂದಿದೆ.

ಚಿತ್ರಕಲೆಯ ಪ್ರಕಾರವು ಈ ನಾಡಿನ ಸಾಂಸ್ಕೃತಿಕ ಬೆಳವಣಿಗೆಯಲ್ಲಿ, ಧಾರ್ಮಿಕ ಉನ್ನತಿಯ ಹಿನ್ನೆಲೆಯಲ್ಲಿ ನಾಗರಿಕ ಬದುಕಿನ ವಿವಿಧ ಸ್ಥಳಗಳಲ್ಲಿ ಮಹತ್ವಪೂರ್ಣವಾದ ಪಾತ್ರವಹಿಸಿದ್ದು ಇಂತಹ ಅಧ್ಯಯನಗಳಿಂದ ತಿಳಿದು ಬರುವ ಸಂಗತಿಗಳಾಗಿವೆ.

ಬಿಜಾಪುರ ಜಿಲ್ಲೆಯು ವಿಶಿಷ್ಟವಾದ ಸಾಂಸ್ಕೃತಿಕ ಪರಿಸರ ಹೊಂದಿದ್ದು ಅದರಡಿಯಲ್ಲಿ ಹಲವಾರು ಲಲಿತ ಕಲೆಗಳನ್ನು ಪೋಷಿಸಿ ಬೆಳೆಸಿಕೊಂಡು ಬಂದಿರುವುದು ಕಂಡುಬರುತ್ತದೆ. ವಾಸ್ತುಶಿಲ್ಪ, ಶಿಲ್ಪಕಲೆ, ಚಿತ್ರಕಲೆಗಳಲ್ಲದೆ ಸಂಗೀತ ಮತ್ತು ಸಾಹಿತ್ಯಗಳು ಇಲ್ಲಿ

೧. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಪುಟ–೨೫

ವೈವಿಧ್ಯಮಯವಾಗಿ ಬೆಳೆದಿವೆ. ವಾಸ್ತುಶಿಲ್ಪ ರಚನೆಯ ಹಿನ್ನೆಲೆಯಲ್ಲಿ ಹಿಂದೂ ಶೈಲಿಯ ಸಮಿಶ್ರಣದೊಂದಿಗೆ ಮುಸ್ಲಿಮ್ ಶೈಲಿಯು ಇಲ್ಲಿಯ ವಾಸ್ತು ರಚನೆಗಳಲ್ಲಿ ಗೋಚರಿಸುತ್ತದೆ. ಅದೇ ರೀತಿ ಇಲ್ಲಿನ ಚಿತ್ರಕಲೆಯು ಸಹಿತ ಇಂಡೋಪರ್ಶಿಯನ್ ಶೈಲಿಗಳಿಂದ ಪ್ರಭಾವಿತಗೊಂಡಿರುವುದನ್ನು ಗಮನಿಸಬಹುದು. ಈ ಎಲ್ಲ ಅಂಶಗಳನ್ನು ಅಧ್ಯಯನ ಮಾಡುವ ಉದ್ದೇಶ ಈ ಪ್ರಬಂಧದಲ್ಲಿ ಹೊಂದಲಾಗಿದೆ.

ವಿಜಾಪುರ ಜಿಲ್ಲೆಯ ಚಿತ್ರ ಕಲೆಯು ಪ್ರಾಚೀನ ಕಾಲದಿಂದ ಬೆಳೆದು ಬಂದಿರುವುದನ್ನು ಅನೇಕ ಉದಾಹರಣೆಗಳ ಸಹಿತ ಅವಲೋಕಿಸಬಹುದು ಪ್ರಾಗಿತಿಹಾಸ ಕಾಲದ ಕಲಾತ್ಮಕ ಅವಶೇಷಗಳು ಈ ಜಿಲ್ಲೆಯಲ್ಲಿ ಲಭ್ಯವಾಗಿದ್ದು[೧] ಮುಂದಿನ ಇತಿಹಾಸ ಕಾಲದ ಕಲಾ ಬೆಳವಣಿಗೆಗೆ ಭದ್ರ ಬುನಾದಿಯನ್ನು ಹಾಕಿದವು. ಅಖಂಡ ವಿಜಾಪುರ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿರುವ ಬದಾಮಿಯ ಚಾಳುಕ್ಯರು ಈ ಪ್ರದೇಶದ ಚಿತ್ರಕಲಾ ಬೆಳವಣಿಗೆಯಲ್ಲಿ ತಮ್ಮ ಅಮೂಲ್ಯ ಕಾಣಿಕೆಯನ್ನು ಕೊಟ್ಟಿದ್ದಾರೆ[೨]. ಅದರಂತೆ ಆದಿಲ್‌ಷಾಹಿ ದೊರೆಗಳು ವಿಜಾಪುರ ಪ್ರದೇಶವನ್ನು ಕಲಾತ್ಮಕ ನೆಲೆಯಾಗಿ ರೂಪಿಸುವಲ್ಲಿ ವಿಶಿಷ್ಟ ಕೊಡುಗೆಯನ್ನು ಕೊಟ್ಟಿದ್ದಾರೆ. ವಿಜಾಪುರ ಅರಸರಲ್ಲಿ ಅನೇಕ ಜನ ಸುಲ್ತಾನರು ಸ್ವತಃ ಕಲಾವಿದರಾಗಿದ್ದು ಚಿತ್ರಕಲಾ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ [೩]. ಇಂತಹ ಎಲ್ಲ ಅಂಶಗಳನ್ನು ಅಧ್ಯಯನಕ್ಕೊಳಪಡಿಸುವ ಉದ್ದೇಶವು ಇಲ್ಲಿದೆ.

ವಿಜಾಪುರ ಪ್ರದೇಶವು ದಖ್ಖನ್ ಚಿತ್ರ ಶೈಲಿಯ ಪ್ರಮುಖ ಕೇಂದ್ರವಾಗಿದೆ ದಕ್ಷಿಣ ಭಾರತದಲ್ಲಿ ಪ್ರಖ್ಯಾತಿಯನ್ನು ಪಡೆದುಕೊಂಡ ದಖ್ಖನ್ ಚಿತ್ರ ಶೈಲಿಯ ಪ್ರೋತ್ಸಾಹಕರಲ್ಲಿ ವಿಜಾಪುರದ ಸುಲ್ತಾನರು ಅಗ್ರಗಣ್ಯರಾಗಿದ್ದಾರೆ. ಇವರ ಕಾಲದಲ್ಲಿ ಅನೇಕ ರೀತಿಯ ಚಿತ್ರಕಲಾ ಕೃತಿಗಳು ವಿವಿಧ ಮಾಧ್ಯಮಗಳ ಮೇಲೆ ರಚನೆಯಾಗಿವೆ. ಗೋಡೆಗಳ ಮೇಲೆ ರಚಿಸಿದ ಭಿತ್ತಿ ಚಿತ್ರಗಳು,[೪] ಕಾಗದ, ಮರ, ಚರ್ಮ, ತಾಳೆಗರಿ, ರಟ್ಟು, ಲೋಹ, ಮುಂತಾದವುಗಳ ಮೇಲೆ ರಚನೆಗೊಂಡ ಕಿರುರೂಪ ಚಿತ್ರಗಳು ಮತ್ತು ಗ್ರಂಥಗಳಲ್ಲಿ ರಚನೆ ಮಾಡಲ್ಪಟ್ಟ ಸಾಂದರ್ಭಿಕ ಹಸ್ತ ಪ್ರತಿ ಚಿತ್ರಗಳು[೫] ಇವರ ಕಾಲದಲ್ಲಿ ವಿಶೇಷವಾಗಿ ರಚನೆಯಾಗಿವೆ. ಇವೆಲ್ಲವುಗಳನ್ನು ಅಧ್ಯಯನಕ್ಕೊಳಪಡಿಸುವ ಮುಖ್ಯ ಉದ್ದೇಶವು ಈ ಅಧ್ಯಯನದಲ್ಲಿದೆ.

---

೧. ಡಾ. ಅ. ಸುಂದರ : ಕರ್ನಾಟಕ ಚರಿತ್ರೆ (ಸಂಪುಟ 1) : ಪುಟ-೩೭
೨. ಡಾ. ಶೀಲಾಕಾಂತ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ : ಪುಟ-೧೭
೩. ಡಾ. ವಜೀರಭಾಷಾ ಬಾಗಾಯತ್ : ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಪುಟ-೨೧
೪. ಡಾ. ಯಾದವಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಪುಟ-56
೫. ಡಾ. ವಜೀರಭಾಷಾ ಬಾಗಾಯತ : ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಪುಟ-೧೨

ವಿಜಾಪುರ ಸುಲ್ತಾನರ ಕಾಲದಲ್ಲಿ ವೈವಿಧ್ಯಮಯ ವಿಷಯಗಳಿಗೆ ಸಂಬಂಧಪಟ್ಟಂತೆ ಚಿತ್ರಗಳು ರಚನೆಯಾಗಿವೆ. ರಾಜ ಮಹಾರಾಜರ ಭಾವ ಚಿತ್ರಗಳು ವ್ಯಕ್ತಿ ಚಿತ್ರಗಳು, ಬೇಟೆಯ ದೃಶ್ಯಗಳು, ಶೃಂಗಾರಕ್ಕೆ ಸಂಬಂಧಪಟ್ಟ ಚಿತ್ರಗಳು ರಾಣಿಯರನ್ನು ಒಳಗೊಂಡಂತೆ ರಾಜ ಪರಿವಾರದ ಚಿತ್ರಗಳು, ಯುದ್ಧದ ದೃಶ್ಯಗಳು, ನಿತ್ಯ ಜೀವನದ ಘಟನಾವಳಿಗಳನ್ನು ಬಿಂಬಿಸುವ ಚಿತ್ರಗಳು, ಪ್ರಾಣಿ ಪಕ್ಷಿಗಳು, ನಿಸರ್ಗ ದೃಶ್ಯಗಳು, ಹೂ-ಬಳ್ಳಿಯ ಚಿತ್ರಗಳು, ನಕ್ಷಾ ವಿನ್ಯಾಸದ ಮಾದರಿಗಳು ಅಲಂಕಾರಿಕ ಕೈಬರಹಗಳು, ಹೀಗೆ ವಿವಿಧ ರೀತಿಯ ಚಿತ್ರ ರಚನೆಗಳು ಇಲ್ಲಿ ಕಂಡುಬರುತ್ತವೆ. ಇವೆಲ್ಲವುಗಳ ಜೊತೆಗೆ ರಾಗಮಾಲಾ ಚಿತ್ರಗಳು, ಮತ್ತು ಯೋಗಿನಿಯರ ಚಿತ್ರಗಳು, ಸಂತರ ಚಿತ್ರಗಳುಇಲ್ಲಿ ವಿಶೇಷವಾಗಿದ್ದು ಇವೆಲ್ಲವುಗಳ ಕುರಿತು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ವಿಜಾಪುರ ಪ್ರದೇಶದಲ್ಲಿ ಚಿತ್ರಕಲೆಗೆ ವಿಶೇಷ ಪ್ರೋತ್ಸಾಹ ನೀಡಿದ ಆದಿಲ್‌ಷಾಹಿ ದೊರೆಗಳು ಚಿತ್ರ ರಚನೆಗಾಗಿ ಬೇರೆ ಬೇರೆ ಕಲಾವಿದರನ್ನು ನೇಮಿಸಿಕೊಂಡಿದ್ದರು ಇದರಲ್ಲಿ ಮುಸ್ಲಿಮ್ ಕಲಾವಿದರ ಜೊತೆಗೆ ಹಿಂದೂ ಕಲಾವಿದರು ಸಹಿತ ಭಾಗವಹಿಸಿದ್ದು ತಿಳಿದು ಬರುತ್ತದೆ [೯]. ಈ ನಿಟ್ಟಿನಲ್ಲಿ ಮೊಗಲರ ದಾರಿಯನ್ನು ಇವರು ಅನುಸರಿಸಿದ್ದು ಗೋಚರಿಸುತ್ತದೆ. ಚಿತ್ರ ರಚನೆಗಾಗಿ ಆದಿಲ್‌ಷಾಹಿ ಕಾಲದ ಕಲಾವಿದರು ಬಳಸಿಕೊಳ್ಳುತ್ತಿದ್ದ ಚಿತ್ರ ರಚನಾ ಪರಿಕರಗಳು ವಿಶಿಷ್ಟವಾಗಿದ್ದವು. ಬಣ್ಣಗಳು, ಅಂಟು ದ್ರಾವಕಗಳು, ಕುಂಚಗಳು, ಸೀಸು ಕಡ್ಡಿಗಳು ಇವೆಲ್ಲವುಗಳನ್ನು ಈ ಕಲಾವಿದರು ಯಾವ ಮೂಲದಿಂದ ಮತ್ತು ಹೇಗೆ ಪಡೆದುಕೊಳ್ಳತ್ತಿದ್ದರೆಂದು ಇಂತಹ ಅಧ್ಯಯನಗಳಿಂದ ತಿಳಿದು ಬರುತ್ತದೆ.

ವಿಜಾಪುರ ಪ್ರದೇಶವು ಚಿತ್ರ ಕಲೆಗೆ ವಿಶೇಷ ರೀತಿಯ ಪ್ರೋತ್ಸಾಹ ನೀಡಿ ತನ್ನದೇ ಆದ ಪ್ರತ್ಯೇಕ ಶೈಲಿಯನ್ನು ರೂಪಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು. ಈ ನಿಟ್ಟಿನಲ್ಲಿ ಹಲವಾರು ಚಿತ್ರ ಶೈಲಿಗಳ ಪ್ರಭಾವ, ಪ್ರೇರಣೆಗಳು ಕೊಡು ಕೊಳ್ಳುವಿಕೆಗಳು ಇಲ್ಲಿ ನಡೆಯುವ ಮೂಲಕ ಅಂಥಹ ಪ್ರತ್ಯೇಕ ಶೈಲಿಗೆ ದಾರಿ ಮಾಡಿಕೊಟ್ಟವೆ. ಈ ಪ್ರತ್ಯೇಕ ಶೈಲಿಯು ಯಾವ ಯಾವ ಚಿತ್ರ ಶೈಲಿಗಳಿಂದ ಪ್ರಭಾವಿತ ಗೊಂಡಿದೆ ಎಂಬುದರ ಅಂಶಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿರುವುದು.

ಪ್ರಾಚೀನ ಕಾಲದಿಂದ ಬೆಳೆದು ಬಂದ ವಿಜಾಪುರ ಪ್ರದೇಶದ ಚಿತ್ರಕಲಾ ಪರಂಪರೆಯು ಇಂದಿನ ದಿನಗಳಲ್ಲಿಯೂ ಪ್ರಜ್ವಲ ಮಾನವಾಗಿ ಬೆಳೆದು ಬರುತ್ತಲಿದೆ. ಬೇರೆ ಬೇರೆ ಕಲಾ ಸಂಸ್ಥೆಗಳು, ಕಲಾ ಶಾಲೆಗಳು, ಕಲಾವಿದರು, ಮಠ ಮಾನ್ಯಗಳು, ಸಾರ್ವಜನಿಕರು,

೯.ಡಾ. ಯಾದವಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಪುಟ-೧೨೫

ಮತ್ತು ಜನರು, ಈ ಜಿಲ್ಲೆಯ ಚಿತ್ರ ಕಲಾ ಪರಂಪರೆಯನ್ನು ನಿಲ್ಲದಂತೆ ಬೆಳೆಸಿಕೊಂಡು ಬಂದಿದ್ದಾರೆ. ಈ ಜಿಲ್ಲೆಯ ಅನೇಕ ಕಲಾವಿದರು ರಾಜ್ಯ, ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿಯನ್ನು ಪಡೆದಿದ್ದು ಜಿಲ್ಲೆಗೆ ಹೆಮ್ಮೆ ತಂದಿದ್ದಾರೆ. ಈ ಜಿಲ್ಲೆಯ ಕಲಾ ಸಂಸ್ಥೆಗಳು, ಕಲಾ ಶಾಲೆಗಳು ವಿವಿಧ ರೀತಿಯ ಕಲಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಸಮಕಾಲೀನ ಕಲಾ ಪರಂಪರೆಯನ್ನು ವಿಶಿಷ್ಟವಾಗಿ ಬೆಳೆಸಿಕೊಂಡು ಬರುತ್ತಿದೆ. ಇಂತಹ ಎಲ್ಲ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸುವ ಉದ್ದೇಶವನ್ನು ಹೊಂದಲಾಗಿದೆ.

ವಿಜಾಪುರದಲ್ಲಿ ನೂರು ವರ್ಷಗಳಷ್ಟು ಹಳೆಯದಾದ ವಸ್ತು ಸಂಗ್ರಹಾಲಯವಿದೆ. ಈ ಸಂಗ್ರಹಾಲಯದಲ್ಲಿ ಪ್ರಾಚೀನ ಶಿಲ್ಪ ಕಲೆ, ಚಿತ್ರಕಲೆ ಮತ್ತು ಇನ್ನಿತರ ಕಲಾತ್ಮಕ ವಸ್ತುಗಳನ್ನು ಸಂಗ್ರಹಿಸಿ ಇಡಲಾಗಿದೆ. ಇವು ಬೇರೆ ಬೇರೆ ಕಾಲಮಾನಕ್ಕೆ ಸೇರಿದವುಗಳಾಗಿವೆ. ಆಯಾ ಕಾಲದ ಕಲಾ ವಾತಾವರಣವನ್ನು ಬಿಂಬಿಸುವಲ್ಲಿ ಸಹಕಾರಿಯಾಗಿವೆ. ಈ ಕಲಾತ್ಮಕ ವಸ್ತುಗಳ ವಿಷಯಗಳು, ರಚನಾಕ್ರಮ, ಉದ್ದೇಶ, ಶೈಲಿ, ಪ್ರಭಾವ ಮುಂತಾದವುಗಳನ್ನು ಅಧ್ಯಯನಕ್ಕೆ ಒಳಪಡಿಸುವ ಉದ್ದೇಶವು ಪ್ರಸ್ತುತ ಅಧ್ಯಯನದಲ್ಲಿದೆ.

ವಿಜಾಪುರ ಜಿಲ್ಲೆಯ ಚಿತ್ರಕಲೆಯ ಬಗ್ಗೆ ವಿಶೇಷವಾದಂತಹ ಅಧ್ಯಯನಗಳು ಇದುವರೆಗೆ ನಡೆದಿಲ್ಲ. ವಿಜಾಪುರ ಜಿಲ್ಲೆಯು ಸಾಂಸ್ಕೃತಿಕ ಕೊಡುಗೆಗಳು ಕಲಾ ವಾತಾವರಣ ಮತ್ತು ಇತಿಹಾಸಗಳನ್ನು ಹೇಳುವಾಗ ಸಾಂದರ್ಭಿಕವಾಗಿ ಇವುಗಳ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಡಾ: ಎಸ್. ಸಿ. ಪಾಟೀಲರು, ಕರ್ನಾಟಕದ ಜನಪದ ಚಿತ್ರಕಲೆಯ ಬಗ್ಗೆ ಅಧ್ಯಯನ ಮಾಡುವಾಗ ಈ ಜಿಲ್ಲೆಯ ಚಿತ್ರಕಲಾ ಪ್ರಕಾರಗಳನ್ನು ಬಳಸಿಕೊಂಡಿದ್ದಾರೆ [೧೦]. ಡಾ. ಅ. ಲ. ನರಸಿಂಹನ್‌ರು, ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು ಎಂಬ ಅಧ್ಯಯನದಲ್ಲಿ ಈ ಜಿಲ್ಲೆಯ ಕುಮಟಗಿ ಮತ್ತು ಅಸರ್ ಮಹಲಿನ ಭಿತ್ತಿ ಚಿತ್ರಗಳನ್ನು ಸಾಂದರ್ಭಿಕವಾಗಿ ಉಲ್ಲೇಖಿಸಿದ್ದಾರೆ[೧೧]. ಡಾ. ಯಾದಪ್ಪ. ಪರದೇಶಿಯವರು ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆಯ ಬಗ್ಗೆ ಅಧ್ಯಯನ ಮಾಡುವಾಗ ಈ ಜಿಲ್ಲೆಯ ಭಿತ್ತಿ ಚಿತ್ರಗಳನ್ನು ಸಾಂದರ್ಭಿಕವಾಗಿ ಬಳಸಿಕೊಂಡಿದ್ದಾರೆ[೧೨].

---

೧೦. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ : ಪುಟ-೩೫, ೪೮, ೫೯, ೯೫.
೧೧. ಡಾ. ಅ.ಲ. ನರಸಿಂಹನ್ : ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು : ಪುಟ-೩೫ ರಿಂದ ೫೬
೧೨. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಪುಟ-೫೮, ೩೭೫, ೪೦೧, ೪೭೫.

ನಂತರದಲ್ಲಿ ಡಾ. ವ್ಹಿ. ಎಮ್. ಬಾಗಾಯತ್, ಅವರು ಕರ್ನಾಟಕದ ಮುಸ್ಲಿಮ್ ಅರಸರ ಕಾಲದ ಚಿತ್ರಕಲೆಯನ್ನು ಹೇಳುವಾಗ ಈ ಜಿಲ್ಲೆಯ ಭಿತ್ತಿ ಚಿತ್ರ, ಹಸ್ತ ಪ್ರತಿ ಚಿತ್ರ ಮತ್ತು ಇನ್ನಿತರ ಚಿತ್ರಕಲಾ ಪ್ರಕಾರಗಳನ್ನು ಬಳಸಿಕೊಂಡಿದ್ದಾರೆ[೧೩]. ಇದಲ್ಲದೆ ವಿಜಾಪುರ ಜಿಲ್ಲೆ ಮತ್ತು ಬಾಗಲಕೋಟೆ ಜಿಲ್ಲೆಯ ಗೆಝಿಟೀಯರ್‌ಗಳಲ್ಲಿ[೧೪] ಈ ಪ್ರದೇಶದ ಚಿತ್ರಕಲೆ ಉಲ್ಲೇಖಿಸಲ್ಪಟ್ಟಿದೆ. ಇವೆಲ್ಲವುಗಳ ಹೊರತಾಗಿ ಈ ಜಿಲ್ಲೆಯ ಚಿತ್ರಕಲೆ ಬಗ್ಗೆ ವಿಶೇಷವಾದ ಅಧ್ಯಯನಗಳು ನಡೆಯದೆ ಇರುವುದನ್ನು ಗಮನಿಸಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಸ್ವರೂಪ :

ಪ್ರಸ್ತುತ ಅಧ್ಯಯನವು ವಿಜಾಪುರ ಜಿಲ್ಲೆಯ ಚಿತ್ರಕಲೆ ಕುರಿತಾಗಿದ್ದು ಏಳು ಅಧ್ಯಾಯಗಳಲ್ಲಿ ವಿಷಯವು ವಿಶ್ಲೇಷಣೆಗೆ ಒಳಪಟ್ಟಿದೆ ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ವ್ಯಾಪ್ತಿಗಳನ್ನು ಕುರಿತು ಹೇಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ವಿಜಾಪುರ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಕಲಾ ಹಿನ್ನೆಲೆಗಳನ್ನು ಐತಿಹಾಸಿಕ ಮಹತ್ವದೊಂದಿಗೆ ಬಿಂಬಿಸಲು ಪ್ರಯತ್ನಿಸಲಾಗಿದೆ ಜಿಲ್ಲೆಯ ವಾಸ್ತುಕಲೆ, ಶಿಲ್ಪಕಲೆ, ಇತಿಹಾಸ, ಸಂಗೀತ, ಸಾಹಿತ್ಯ ಮತ್ತು ಚಿತ್ರಕಲೆಯಂತಹ ವಿಷಯಗಳನ್ನು ಐತಿಹಾಸಿಕ ಹಿನ್ನೆಲೆಯೊಂದಿಗೆ ವಿವೇಚನೆಗೆ ಒಳಪಡಿಸಲಾಗಿದೆ.

ಮೂರನೆಯ ಅಧ್ಯಾಯವು ವಿಜಾಪುರ ಜಿಲ್ಲೆಯ ಭಿತ್ತಿಚಿತ್ರಕಲೆ ಮತ್ತು ಹಸ್ತಪ್ರತಿ ಚಿತ್ರಕಲೆ ಎಂಬುದಾಗಿದ್ದು, ಇದರಲ್ಲಿ ಪ್ರದೇಶದ ಭಿತ್ತಿಚಿತ್ರಗಳು, ಹಸ್ತಪ್ರತಿ ಚಿತ್ರಗಳಂತಹ ಕಲಾ ಪ್ರಕಾರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ವಿಜಾಪುರದಲ್ಲಿರುವ ಪ್ರಾಚೀನ ಕಾಲದ ವಸ್ತು ಸಂಗ್ರಹಾಲಯದಲ್ಲಿನ ಚಿತ್ರಕಲಾಕೃತಿಗಳ ಬಗ್ಗೆ ಅಧ್ಯಯನ ಮಾಡಲಾಗುವುದು.

ಐದನೆಯ ಅಧ್ಯಾಯದಲ್ಲಿ ವಿಜಾಪುರ ಜಿಲ್ಲೆಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳು ಅವುಗಳ ಬೆಳವಣಿಗೆ ಅಲ್ಲಿಯ ವಿದ್ಯಾರ್ಥಿ ವೃಂದ, ಅಧ್ಯಾಪಕರ ಕೊಡುಗೆಗಳು ಮತ್ತು ಅವರ ಕಲಾ ಸಾಧನೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಆರನೆಯ ಅಧ್ಯಾಯವು ಕಲಾಕ್ಷೇತ್ರಕ್ಕೆ ವಿಜಾಪುರ ಜಿಲ್ಲೆಯ ಕಲಾವಿದರ ಕೊಡುಗೆಗಳು ಎಂದಾಗಿದ್ದು ಈ ಅಧ್ಯಾಯದಲ್ಲಿ ಈ ಪ್ರದೇಶದ ಹಿರಿಯ ಕಲಾವಿದರು ಮತ್ತು ಸಮಕಾಲೀನ ಕಲಾವಿದರ ಕುರಿತು ಅಧ್ಯಯನ ಮಾಡಲಾಗುವುದು.

---

೧೩. ಡಾ. ವಜೀರಭಾಷಾ ಬಾಗಾಯತ್ : ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಪುಟ-೩೫, ೪೦, ೬೦, ೭೦.
೧೪. ಡಾ. ಮುನಿಸ್ವಾಮಿ (ಸಂ) : ಬಿಜಾಪುರ ಜಿಲ್ಲಾ ಗೆಝೆಟಿಯರ್ : ಪುಟ-೩೭೫, ೪೧೦.

ಜೊತೆಗೆ ಆ ಕಲಾವಿದರು ಕಲಾ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆಗಳು ಪ್ರಶಸ್ತಿ-ಗೌರವಗಳು, ಸ್ಥಾನ-ಮಾನಗಳು ಒಟ್ಟಾರೆಯಾಗಿ ನಾಡಿನ ಕಲಾಕ್ಷೇತ್ರಕ್ಕೆ ಈ ಕಲಾವಿದರು ನೀಡಿದ ಕೊಡುಗೆಗಳನ್ನು ಅಧ್ಯಯನ ಮಾಡುವ ಉದ್ದೇಶವು ಈ ಅಧ್ಯಾಯದಲ್ಲಿದೆ.

ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು ಒಟ್ಟು ಅಧ್ಯಯನದ ಫಲಿತಗಳನ್ನು ಒಳಗೊಂಡಿರುತ್ತದೆ.

ವ್ಯಾಪ್ತಿ :

ಈ ಅಧ್ಯಯನವು ವಿಜಾಪುರ ಜಿಲ್ಲೆಯ ಚಿತ್ರಕಲಾ ಕ್ಷೇತ್ರಕ್ಕೆ ಸೀಮಿತಗೊಂಡಿದ್ದು ಇದರಲ್ಲಿ ಈ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಗಳು, ಭಿತ್ತಿ ಚಿತ್ರಗಳು, ಹಸ್ತ ಪ್ರತಿ ಚಿತ್ರಗಳು, ಕಿರುರೂಪ ಚಿತ್ರಗಳು, ಕಲಾ ಶಿಕ್ಷಣ ಸಂಸ್ಥೆಗಳು ಮತ್ತು ಈ ಪ್ರದೇಶದ ಕಲಾವಿದರ ಕೊಡುಗೆಗಳನ್ನು ಅಧ್ಯಯನ ಮಾಡುವುದಕ್ಕೆ ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಂಡಿದೆ. ವಿಜಾಪುರ ಜಿಲ್ಲೆಯಾದ್ಯಂತ ಅನೇಕ ಜನ ಹಿರಿಯ ಮತ್ತು ಸಮಕಾಲೀನ ಕಲಾವಿದರಿದ್ದು, ಅಧ್ಯಯನದ ಅನುಕೂಲಕ್ಕಾಗಿ ಮತ್ತು ಸೀಮಿತ ಕಾಲಾವಧಿಯ ಹಿನ್ನೆಯಲೆಯಲ್ಲಿ ಕೇವಲ ಹತ್ತು ಜನ ಕಲಾವಿದರನ್ನು ಮಾತ್ರ ಅಧ್ಯಯನಕ್ಕೆ ಪರಿಗಣಿಸಲಾಗಿದೆ. ಇದರಲ್ಲಿ ಐವರು ಹಿರಿಯ ಕಲಾವಿದರ ಮತ್ತು ಐವರು ಸಮಕಾಲೀನ ಯುವ ಕಲಾವಿಧರ ಕೃತಿಗಳನ್ನು ಮಾತ್ರ ಇಲ್ಲಿ ಪರಿಗಣಿಸಲಾಗಿದೆ.

ಅಧ್ಯಯನದ ವಿಧಾನ :

ಈ ಕಿರು ಪ್ರಬಂಧದ ಅಧ್ಯಯನಕ್ಕೆ ಎರಡು ರೀತಿಯ ಆಕರಗಳನ್ನು ಬಳಸಿಕೊಂಡು ವಿಷಯ ಸಂಗ್ರಹ ಮಾಡಲಾಗಿದೆ. ಅವು .ಈ ಕೆಳಗಿನಂತಿವೆ.

೧.ಮೂಲ ಆಕರ ಸಾಮಾಗ್ರಿ

೨.ಅನುಷಂಗಿಕ ಆಕರ ಸಾಮಾಗ್ರಿ

ಮೂಲ ಆಕರ ಸಾಮಾಗ್ರಿ:

ಒಂದು ನಾಡಿನ ಸಂಸ್ಕೃತಿ, ಪರಂಪರೆ, ಚರಿತ್ರೆ, ಕಲೆ, ಜನಜೀವನ, ಐತಿಹಾಸಿಕ ಹಿನ್ನೆಲೆ ಮುಂತಾದ ವಿಷಯಗಳ ಬಗ್ಗೆ ಸಂಶೋಧನೆ ಮಾಡುವಾಗ ಕ್ಷೇತ್ರಕಾರ್ಯ ಪ್ರಮುಖವಾಗಿದ್ದು ಅಷ್ಟೇ ಅನಿವಾರ್ಯವೂ ಆಗಿರುತ್ತದೆ. ಮೂಲ ಆಕರ ಸಾಮಾಗ್ರಿಯಿಂದ ವಿಷಯ ಸಂಗ್ರಹಿಸಲು ಕ್ಷೇತ್ರಕಾರ್ಯವು ಉತ್ತಮ ವಿಧಾನವಾಗಿದೆ.

ಈ ಪ್ರಬಂಧದ ಅಧ್ಯಯನಕ್ಕೆ ಮೂಲ ಆಕರ ಸಾಮಾಗ್ರಿಯಾಗಿ ಅಧ್ಯಯನಕ್ಕೆ ಆಯ್ದುಕೊಂಡ ವಿಜಾಪುರ ಜಿಲ್ಲೆಯಲ್ಲಿರುವಂತಹ ಭಿತ್ತಿ ಚಿತ್ರಗಳು, ಹಸ್ತಪ್ರತಿ ಚಿತ್ರಗಳು, ಕಿರುರೂಪ ಚಿತ್ರಗಳು, ಕಲಾಸಂಸ್ಥೆಗಳು ಮತ್ತು ಕಲಾವಿದರುಗಳನ್ನೇ ಬಳಸಿಕೊಳ್ಳಲಾಗಿದೆ.

ಈ ಅಧ್ಯಯನಕ್ಕೆ ಸಂಬಂಧಪಟ್ಟ ಕ್ಷೇತ್ರಕಾರ್ಯವನ್ನು ವಿವಿಧ ರೂಪಗಳಲ್ಲಿ ಕೈಗೊಳ್ಳಲಾಗಿದೆ. ಫೋಟೋಗ್ರಾಫಿ (ಛಾಯ ಚಿತ್ರಣ) ಮಾಡುವುದು, ವಿಡಿಯೋ ಚಿತ್ರಣ ಮಾಡಿಕೊಳ್ಳವುದು, ರೆಕಾರ್ಡಿಂಗ್ ಮಾಡುವುದು ಕೆಲವು ಸಂದರ್ಭಗಳಲ್ಲಿ ಮೂಲ ಚಿತ್ರದ ಎದುರಿಗೆ ಕುಳಿತು ಪ್ರತಿಕೃತಿ ಮಾಡಿಕೊಂಡು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇದಲ್ಲದೆ ಪ್ರಸ್ತುತ ಚಿತ್ರಕಲಾ ಕ್ಷೇತ್ರದ ಜ್ಞಾನವನ್ನು ಹೊಂದಿರುವ ಹಿರಿಯರನ್ನು ಸಂದರ್ಶನ ಮಾಡುವ ಮೂಲಕವೂ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಹೀಗೆ ಕ್ಷೇತ್ರಕಾರ್ಯದಿಂದ ದೊರೆತ ವಿವರಗಳನ್ನು ಅಧ್ಯಯನಕ್ಕೆ ಮತ್ತು ಬರವಣಿಗೆಗೆ ಅನುಕೂಲವಾಗುವಂತೆ ಪಟ್ಟಿಕೆಗಳಲ್ಲಿ ನಮೂದಿಸಿಕೊಂಡು ಪ್ರಬಂಧ ರಚನೆ ಮಾಡಲಾಗಿದೆ.

ಅನುಷಂಗಿಕ ಆಕರ ಸಾಮಾಗ್ರಿ:

ಹಲವಾರು ಸಂಶೋಧನಾ ಮಹಾಪ್ರಬಂಧಗಳು, ಶಾಸನ ಸಂಪುಟಗಳು, ಗ್ಯಾಝೆಟೀಯರ್‌ಗಳು, ಪ್ರಕಟಿತ-ಅಪ್ರಕಟಿತ ಸಾಹಿತ್ಯ ಕೃತಿಗಳು, ಗ್ರಂಥಗಳು, ಸಂಪಾದನಾ ಗ್ರಂಥಗಳು ಮುಂತಾದವುಗಳನ್ನು ಅಧ್ಯಯನದ ಅನುಷಂಗಿಕ ಆಕರ ಸಾಮಾಗ್ರಿಗಳಾಗಿ ಬಳಸಿಕೊಳ್ಳಲಾಗಿದೆ.

♣♣♣♣♣

ಅಧ್ಯಾಯ : ಎರಡು

ವಿಜಾಪುರ ಜಿಲ್ಲೆಯ ಸಾಂಸ್ಕೃತಿಕ ಪರಿಸರ, ಲಲಿತ ಕಲೆಗಳು

ವಿಜಾಪುರದ ಇತಿಹಾಸ ಬಹು ಪ್ರಾಚೀನವಾದುದು. ರಾಮಾಯಣ ಕಾಲದ ದಂಡ–ಕಾರಣ್ಯದ ಒಂದು ಭಾಗವಾಗಿತ್ತೆಂದೂ ಹೇಳುತ್ತಾರೆ. ಆದರೆ ಈ ಭಾಗದ ಐತಿಹಾಸಿಕ ದಾಖಲೆ ಸಿಗುವುದು. ಕ್ರಿ. ಪೂರ್ವ ೩ನೇ ಶತಮಾನದ ಗ್ರೀಕಿನ ಖ್ಯಾತ ಭೂಗೋಳಜ್ಞ ಟಾಲಮಿಯ ಉಲ್ಲೇಖಗಳಿಂದ. ಆತ ಇಲ್ಲಿಯ ಊರುಗಳ ಹೆಸರುಗಳನ್ನು ಹೇಳಿದ್ದಾನೆ[೧]. ಕ್ರಿ.ಶ. ೬ ರಿಂದ ೯ ನೆಯ ಶತಮಾನದವರೆಗೆ ವಿಜಾಪುರವು ಬಾದಾಮಿಯ ಚಾಲಕ್ಯರ ಆಧೀನದಲ್ಲಿತ್ತು[೨]. ವಿಜಾಪುರದ ಖಚಿತ ಉಲ್ಲೇಖ ದೊರೆಯುವುದು ಕಲ್ಯಾಣಿ ಚಾಲುಕ್ಯರ ಆಳ್ವಿಕೆಯಲ್ಲಿ ಖ್ಯಾತ ರಾಜ ಆರನೆಯ ವಿಕ್ರಮಾದಿತ್ಯನ (ಕ್ರಿ.ಶ.೧೦೨೩) ಎರಡನೆಯ ರಾಜಧಾನಿ ಇದಾಗಿತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ [೩].

---

೧. ಡಾ. ಕೃಷ್ಣಕೋಲಾರ ಕುಲಕರ್ಣಿ : ವಿಸ್ಮಯ ಇದು ವಿಜಾಪುರ : ಪುಟ–೨.
೨. ಡಾ. ಶೀಲಾಕಾಂಡ ಪತ್ತಾರ : ಬಾದಾಮಿ ಸಾಂಸ್ಕೃತಿಕ ಅಧ್ಯಯನ : ಪುಟ–೧೯.
೩. ಡಾ. ದೇವರಕೊಂಡಾರೆಡ್ಡಿ : ಕರ್ನಾಟಕದ ಶಾಸನಗಳು (ಸಂಪುಟ–೪) : ಪುಟ–೯೪.

ಆ ಮುಂದಿನ ದಿನಗಳಲ್ಲಿ ವಿಜಾಪುರ ಕುರಿತು ಅನೇಕ ಶಾಸನಗಳು ಮಾಹಿತಿ ನೀಡುತ್ತವೆ. ಶಾಸನಗಳಲ್ಲಿ ಹೇಳಿದಂತೆ, ಬಾದಾಮಿಯ ಚಾಲುಕ್ಯರ ಮಾಂಡಲೀಕನೊಬ್ಬ ವಿಜಾಪುರ ಪಟ್ಟಣವನ್ನು ಕಟ್ಟಿದ. ಅದಕ್ಕೆ ವಿಜಯಪುರ ಎಂದು ಹೆಸರಿಟ್ಟನು. ಇನ್ನೊಂದು ಹೇಳಿಕೆಯಂತೆ ಅಗ್ರಹಾರವಾದ ಬಿಜ್ಜನ ಹಳ್ಳಿಯ ಮಾಂಡಲೀಕನೊಬ್ಬನ ರಾಜಧಾನಿಯಾದಾಗ ಬಿಜ್ಜಪುರವಾಯಿತು. ಏಳು ಹಳ್ಳಿಗಳು ಸೇರಿ ಬಿಜ್ಜನಹಳ್ಳಿಯಾಯಿತೆಂದು ಒಂದು ದಂತ ಕಥೆ ಇದೆ. ಅದೇ ಬಿಜ್ಜನಹಳ್ಳಿ ಸಂಸ್ಕೃತೀಕರಣವಾಗಿ ವಿದ್ಯಾಪುರವಾಗಿ, ವಿಯಜಪುರವಾಯಿತೆಂದೂ ಮುಂದೆ ಎಜಪುರ, ಬಿಜಾಪುರ ಎಂದು ರೂಢಿಯಾಗಿರಬೇಕು[೪]. ಬಿಜ್ಜನಹಳ್ಳಿಯ ಉಲ್ಲೇಖ ಕ್ರಿ.ಶ. ೧೦೭೪–೭೫ ರ ಒಂದು ಶಾಸನದಲ್ಲಿ ದೊರೆಯುತ್ತದೆ. ಈ ಶಾಸನದಲ್ಲಿ ವಿಜಯಪುರದ ಸ್ವಯಂಭು ಸಿದ್ಧೇಶ್ವರನ ಗುಡಿಗೆ ಬಿಜ್ಜನಹಳ್ಳಿಯ ಭೂಮಿಯನ್ನು ದಾನವಾಗಿ ಕೊಟ್ಟರು ಎಂಬ ಉಲ್ಲೇಖವಿದೆ. ಕ್ರಿ.ಶ.೧೧೯೯ ರಲ್ಲಿ ದೇವಗಿರಿಯ ಯಾದವರ ಆಂಶಿಕಕಾಲೀನ ರಾಜಧಾನಿಯಾಗಿತ್ತೆಂದು ಇಲ್ಲಿಯ ಅರಕಿಲ್ಲೆಯಲ್ಲಿ ಬಿದ್ದ ಏಳೆಂಟು ಶಾಸನಗಳು ಹೇಳುತ್ತವೆ. ಯಾದವರ ರಾಜ್ಯ ಮುಸ್ಲೀಮ್‌ರ ಪಾಲಾದಾಗ ಕ್ರಿ.ಶ.೧೩೧೭ ರಲ್ಲಿ ಮಲ್ಲಿಕಾಫರನ ಮಗ ಕರೀಮುದ್ದೀನನು ಪ್ರಥಮ ರಾಜ್ಯ ಪಾಲನಾಗಿ ವಿಜಾಪುರಕ್ಕೆ ಬಂದನು.

೧೫ ನೆಯ ಶತಮಾನದ ಉತ್ತರಾರ್ಧದಲ್ಲಿ ಬಹಮನಿ ರಾಜ್ಯವು ಬೀದರ ರಾಜಧಾನಿಯಿಂದ ನಡೆಯುತ್ತಿತ್ತು. ಆ ದಿನಗಳಲ್ಲಿ ಬಿಜಾಪುರದಲ್ಲಿ ತುರ್ಕ ವಂಶದ ಯುಸುಫ್ ಖಾನನು ರಾಜ್ಯಪಾಲನಾಗಿದ್ದನು. ಬಹಮನಿ ರಾಜ್ಯದ ಮುಖ್ಯ ಮಂತ್ರಿ ಮಹಮ್ಮೂದ ಗವಾನನ ಮರಣದ ನಂತರ ನಿಜಾಮಶಾಹನು ಕ್ರಿ.ಶ.೧೪೮೯ ರಲ್ಲಿ ತನ್ನ ಸ್ವಾತಂತ್ರ್ಯವನ್ನು ಸಾರಿದನು[೫].

ಯುಸುಫ್ ಖಾನನು ಬಿಜಾಪುರದಲ್ಲಿ ತನ್ನ ಸ್ವತಂತ್ರ ರಾಜ್ಯವನ್ನು ಪ್ರಾರಂಭಿಸುವ ಹೊತ್ತಿಗೆ ತುಂಗಭದ್ರೆಯ ದಡದಲ್ಲಿ ವಿಜಯನಗರ ಸಾಮ್ರಾಜ್ಯವು ತನ್ನ ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದಿತು. ರಾಜಕೀಯ, ಸಾಮಾಜಿಕ, ಹಾಗೂ ಧಾರ್ಮಿಕ ರಂಗಗಳಲ್ಲಿ ತನ್ನದೇ ಆದ ವೈಶಿಷ್ಟಗಳೊಂದಿಗೆ ಮೆರೆಯುತ್ತಿತ್ತು. ಸಾಹಿತ್ಯ, ಶಿಲ್ಪ ಸಂಗೀತ ಇತ್ಯಾದಿಗಳು ಕೂಡ ಅಭಿವೃದ್ಧಿ ಹೊಂದಿದ್ದವು, ಇಂಥದೇ ಒಂದು ಸಾಮ್ರಾಜ್ಯ ಉತ್ತರ ಭಾರತದಲ್ಲಿ ಮೊಗಲ್‌ರದ್ದಾಗಿತ್ತು ಬಿಜಾಪುರ ರಾಜ್ಯವು ಸ್ವತಂತ್ರ ರಾಜ್ಯವಾಗಿದ್ದರೂ ಸಾಮ್ರಾಜ್ಯವಾಗಿರಲಿಲ್ಲ ಅದೊಂದು ಪುಟ್ಟ ಸಂಸ್ಥಾನದಂತ್ತಿತ್ತು. ಯುಸುಫ್ (ಕ್ರಿ.ಶ.೧೪೮೯–೧೫೧೦) ಆತನ ಮಗ ಇಬ್ರಾಹಿಮ್ (ಕ್ರಿ.ಶ.೧೫೧೦–೧೫೩೪) ಮೊಮ್ಮಗ ಮೊದಲ ಇಬ್ರಾಹಿಮ್ (ಕ್ರಿ.ಶ. ೧೫೩೪ – ೧೫೫೭)ರು

೪. ಡಾ. ಕೃಷ್ಣಕೋಲಾರ ಕುಲಕರ್ಣಿ : ವಿಸ್ಮಯ ಇದು ವಿಜಾಪುರ : ಪುಟ–೧೪.
೫. ಜಿ. ಯಜದಾನಿ : ಬೀದರ್ ಇಟ್ಸ್ ಹಿಸ್ಟರಿ ಆಂಡ್ ಮಾನ್ಯುಮೆಂಟ್ಸ್ : ಪುಟ–೨೫

ಪರಸ್ಪರ ಮೊಮ್ಮಗ ಯಾವಾಗಾದರೊಮ್ಮೆ ವಿಜಯನಗರದವರೊಡನೆ ಕಾಲು ಕೆದರಿ ಯುದ್ಧ ಮಾಡಿ ಒಂದು ಕೋಟೆಯನ್ನು ಗೆಲ್ಲುವಲ್ಲಿ ಅಥವಾ ಸೋಲುವಲ್ಲಿ ತೃಪ್ತಿ ಪಡುತ್ತಿದ್ದರು[೬]. ಗೆದ್ದಾಗ ಸಿಕ್ಕಷ್ಟನ್ನು ದೋಚಿಕೊಂಡು ಬಂದು ಬಿಜಾಪುರದ ಭಂಡಾರವನ್ನು ತುಂಬಿಕೊಳ್ಳುತ್ತಿದ್ದರು.

ಮುಕ್ಕಾಲು ಶತಮಾನ ಹೀಗೆ ಕುಂಟುತ್ತ ಸಾಗಿದ್ದ ಆದಿಲ್‌ಶಾಹಿ ರಾಜ್ಯದ ದೈವ ತೆರೆದದ್ದು ಕ್ರಿ.ಶ. ೧೫೬೫ ರ ರಕ್ಕಸಗಿ ತಂಗಡಗಿ ಕಾಳಗದಲ್ಲಿ ! ಶಾಹಿರಾಜರು ಒಗ್ಗಟ್ಟಾಗಿ ವಿಜಯನಗರ ರಾಜನನ್ನು ಸೋಲಿಸಿದರು. ಅಳಿಯ ರಾಮರಾಯನನ್ನು ಕಾಳಗದಲ್ಲಿಯೇ ಕೊಂದರು. ಈ ಕಾಳಗದ ರೂವಾರಿ ಬಿಜಾಪುರದ ಆದಿಲ್‌ಶಾಹಿ ರಾಜ್ಯದ ನಾಲ್ಕನೆಯ ಭಾಗಶ: ಮೊದಲ ಅಲಿ ಆದಿಲ್‌ಶಹನೇ ಆಗಿದ್ದ. ಆತನ ಕಾಲ ಕ್ರಿ.ಶ. ೧೫೫೭–೧೫೮೦. ಆದಿಲ್‌ಶಾಹಿ ರಾಜ್ಯದ ಉಚ್ಛ್ರಾಯ ಕಾಲ ಆವಾಗ ಪ್ರಾರಂಭವಾಯಿತು. ಇಲ್ಲಿಯ ವರೆಗೆ ಕೃಷ್ಣಾ, ಭೀಮಾ ನದಿಗಳ ಮಧ್ಯಕ್ಕೆ ಸೀಮಿತವಾಗಿದ್ದ ಆದಿಲ್‌ಶಾಹಿ ರಾಜ್ಯ ಈ ಕಾಳಗದಿಂದಾಗಿ ಒಮ್ಮೆಲೆ ಪಶ್ಚಿಮ ಪೂರ್ವಗಳಲ್ಲಿ ಕೊಂಕಣದಿಂದ ಕೃಷ್ಣಾ ತುಂಗ ಭದ್ರೆಯರ ಸಂಗಮ ಪ್ರದೇಶದವರೆಗೂ ವಿಸ್ತಾರವಾಯಿತು[೭]. ಹೀಗೆ ದೊರೆತ ಫಲವತ್ತಾದ ಪ್ರದೇಶ ಹಾಗೂ ಕೊಳ್ಳೆ ಹೊಡೆದು ತಂದ ವಿಜಯನಗರದ ಅಗಣಿತ ಸಂಪತ್ತು ಮುಂದಿನ ದಿನಗಳಲ್ಲಿ ಬಿಜಾಪುರ ನಗರ ಹಾಗೂ ರಾಜ್ಯದ ಅದ್ಭುತ ಪ್ರಗತಿಗೆ ದಾರಿಯಾಯಿತು.

ಮುಂದಿನ ಸುಮಾರು ನೂರಾ ಇಪ್ಪತ್ತು ವರುಷಗಳಲ್ಲಿ ಬಿಜಾಪುರವನ್ನು ಆಳಿದವರು ನಾಲ್ವರು ಆದಿಲ್‌ಶಾಹಿ ರಾಜರು ಅವರಲ್ಲಿ ಎರಡನೆಯ ಇಬ್ರಾಹಿಮ್ ಆದಿಲ್‌ಶಹ (ಕ್ರಿ.ಶ. ೧೫೮೦–೧೬೨೬) ಅವನ ಮಗ ಮಹ್ಮದ್ ಅದಿಲ್‌ಶಹ (ಕ್ರಿ.ಶ.೧೬೨೬–೧೬೫೬) ಅವರುಗಳ ಕಾಲದಲ್ಲಿ ಅದಿಲ್‌ಶಾಹಿ ರಾಜ್ಯವು ಸಾಮ್ರಾಜ್ಯವಾಗಿ ವೈಭವದ ತುತ್ತ ತುದಿಯನ್ನು ಮುಟ್ಟಿತು. ಕ್ರಿ ಶ. ೧೬೫೬ ರಲ್ಲಿ ಮಹ್ಮದ್ ಅದಿಲ್‌ಶಹನು ಮರಣಹೊಂದಿದಾಗ ದಕ್ಷಿಣೋತ್ತರವಾಗಿ ತಂಜಾವೂರಿನಿಂದ ಮುಂಬಯಿ ಹಾಗೂ ಪೂರ್ವ–ಪಶ್ಚಿಮವಾಗಿ ಗೋವೆಯಿಂದ ಕೃಷ್ಣೆ–ತುಂಗೆಯರ ಸಂಗಮದವರೆಗೂ ಆದಿಲ್‌ಶಾಹಿ ರಾಜ್ಯ ಹಬ್ಬಿ ಕೊಂಡಿತ್ತು. ಮಹ್ಮದ್‌ನ ಮಗ ಎರಡನೆಯ ಅಲಿಯ ಕಾಲದಲ್ಲಿ (ಕ್ರಿ ಶ. ೧೬೫೬–೧೬೭೨) ಆದಿಲ್ ಶಾಹಿ ರಾಜ್ಯದ ಅವನತಿ ಪ್ರಾರಂಭವಾಗಿ ಅವನ ಮಗ ಸಿಕಂದರ್ (ಕ್ರಿ. ಶ. ೧೬೭೨–೧೬೮೬) ನ ಕಾಲದಲ್ಲಿ

೬ ಸದಾನಂದ ಕನವಳ್ಳಿ (ಅನು) : ಮರೆತು ಹೋದ ಮಹಾ ಸಾಮ್ರಾಜ್ಯ : ಪುಟ–೪೭.
೭ ಡಾ. ಕೃಷ್ಣಕೋಲಾರ ಕುಲಕರ್ಣಿ : ವಿಸ್ಮಯ ಇದು ವಿಜಾಪುರ : ಪುಟ–೨೫.

ಕ್ರಿ. ಶ. ೧೬೮೬ ರಲ್ಲಿ ಬಿಜಾಪುರವು ಔರಂಗಜೇಬನ ವಶವಾಗಿ[೮] ದೆಹಲಿಯ ಮೊಗಲ್ ಸಾಮ್ರಾಜ್ಯದಲ್ಲಿ ಸೇರಿಕೊಂಡಿತು.

ಕ್ರಿ. ಶ. ೧೬೮೬ ರಲ್ಲಿ ಬಿಜಾಪುರವು ಮೊಗಲರ ವಶವಾದ ನಂತರ ಔರಂಗಜೇಬನು ಮೂರು ವರುಷ ಇಲ್ಲಿಯೇ ಇದ್ದನು. ಆ ಸಮಯದಲ್ಲಿ ಬಂದ ಪ್ಲೇಗ್ ಮಾರಿ ಬೇನೆಯಿಂದ ಸುಮಾರು ಒಂದು ಲಕ್ಷದಷ್ಟು ಜನರು ಸತ್ತರು ರಾಜಕೀಯ ಸ್ಥಿತ್ಯಂತರದಿಂದ ಅದೆಷ್ಟೋ ಜನ ವಲಸೆ ಹೋದರು. ಕ್ರಿ. ಶ. ೧೭೨೪ರ ವರೆಗೆ ಮೊಗಲರ ವಶದಲ್ಲಿದ್ದು ವಿಜಾಪುರ ನಂತರದಲ್ಲಿ ಹೈದರಾಬಾದ್ ಆಡಳಿತಕ್ಕೆ ಒಳಪಟ್ಟಿತು. ಆ ವರುಷ ನಿಜಾಮನು ತನ್ನ ಸ್ವಾತಂತ್ರ್ಯವನ್ನು ಸಾರಿದಾಗ ಆತನ ಆಡಳಿತದಲ್ಲಿತ್ತು. ಕ್ರಿ. ಶ. ೧೭೬೦ ರಲ್ಲಿ ಬಾಳಾಜಿ ಪೇಶ್ವೆಯ ವಶವಾದಾಗ ಮರಾಠರು ಇಲ್ಲಿಗೆ ರಾಜ್ಯಪಾಲನನ್ನು ನೇಮಿಸಿದರು.

ಕ್ರಿ.ಶ.೧೮೧೮ ರಲ್ಲಿ ಪೇಶ್ವೆಗಳ ಅವನತಿಯಿಂದಾಗಿ ಸಾತಾರಾದ ರಾಜನ ಆಧೀನವಾಯಿತು. ಸಾತಾರಾದ ರಾಜ ಛತ್ರಪತಿ ಶಾಹಜಿಯು ಗಂಡು ಸಂತತಿ ಇಲ್ಲದೆ ಕ್ರಿ. ಶ. ೧೮೪೮ ರಲ್ಲಿ ಸತ್ತಾಗ ಈ ಪ್ರದೇಶವೆಲ್ಲ ಬ್ರಿಟಿಷರ ವಶವಾಯಿತು. ಹಾಗೂ ಸಾತಾರಾ ಜಿಲ್ಲೆಯು ಒಂದುಹಳ್ಳಿ ಎನಿಸಿತು. ಮುಂದೆ ಬಿಜಾಪುರವು ಕ್ರಿ. ಶ. ೧೮೬೩ ರಲ್ಲಿ ಸೊಲ್ಲಾಪುರ ಜಿಲ್ಲೆಗೆ ವರ್ಗಾವಣೆಯಾಯಿತು[೯]. ಮರುವರುಷ ಕಲಾದಗಿ ಜಿಲ್ಲೆ ನಿರ್ಮಾಣವಾದಾಗ ಬಿಜಾಪುರವು ತಾಲ್ಲೂಕು ಸ್ಥಳವಾಗಿ ಕಲಾದಗಿ ಜಿಲ್ಲೆಗೆ ಸೇರಿತು.

ಇಲ್ಲಿಯ ಹಾಳು ಬಿದ್ದ ವಿಶಾಲ ಕಟ್ಟಡಗಳನ್ನು ಗಮನಿಸಿದ ಅಂದಿನ ದಕ್ಷಿಣ ವಿಭಾಗದ ಸುಪರಿಟೆಂಡೆಂಟ್ ಇಂಜಿನೀಯರ್ ಕರ್ನಲ್ ಸೇಂಟ್ ಕ್ಲೇರ್ ವಿಲ್ಕಿನ್ಸ್ ಎಂಬುವನು ಕ್ರಿ. ಶ. ೧೮೭೬ ರಲ್ಲಿ ಬಿಜಾಪುರ ನಗರವನ್ನು ಜಿಲ್ಲಾ ಸ್ಥಳಕ್ಕಾಗಿ ಶಿಫಾರಸು ಮಾಡಿದನು. ಮೇಲಾಧಿಕಾರಿಗಳು ಅದನ್ನು ಒಪ್ಪಿ ಇಲ್ಲಿಯ ಹಳೆಯ ಕಟ್ಟಡಗಳನ್ನು ದುರಸ್ತಿ ಮಾಡಿ ಜಿಲ್ಲಾ ಸ್ಥಳವೆಂದು ವರ್ಗಾಯಿಸಲು ಮತ್ತೆ ಒಂಭತ್ತು ವರುಷಗಳೇ ಹಿಡಿದವು. ಕೊನೆಗೆ ಕ್ರಿ. ಶ. ೧೮೮೫ ರಲ್ಲಿ ಬಿಜಾಪುರವು ಜಿಲ್ಲಾ ಸ್ಥಳವಾಯಿತು. ಬಹುತೇಕ ಕಟ್ಟಡಗಳು ಜಿಲ್ಲೆಯ ಆಡಳಿತ ಕಛೇರಿಗಳಾದವು. ಅದರಿಂದಾಗಿ ಅವುಗಳು ಮತ್ತೆ ಸುಣ್ಣ ಬಣ್ಣವನ್ನು ಕಂಡವಲ್ಲದೆ, ಅಲ್ಲಿರುವವರ ಮನಸ್ಸಿನಂತೆ ರೂಪುಗೊಂಡವು.

---

೮. ಡಾ. ಯಾಥಪ್ಪ ಪರದೇಶಿ. : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಪುಟ-೭೮.
೯ ಡಾ. ಕೃಷ್ಣಕೋಲಾರ ಕುಲಕರ್ಣಿ : ವಿಸ್ಮಯ ಇದು ವಿಜಾಪುರ : ಪುಟ-೨೨.

ಮೊಹ್ಮದ್ ಆದಿಲ್‌ಶಹ ಕಟ್ಟಿದ ಅದಾಲತ್ ಮಹಲು ಜಿಲ್ಲಾಧಿಕಾರಿಗಳ ವಾಸಸ್ಥಾನವಾದರೆ ಆತನ ಮಗ ಕಟ್ಟಿದ ಅರ್ಶಮಹಲು ಸಿವ್ಹಿಲ್ ಸರ್ಜನರ ವಾಸಸ್ಥಾನವಾಯಿತು. ಆನಂದ ಮಹಲ್ ಉಪ ಜಿಲ್ಲಾಧಿಕಾರಿಯ ಮನೆಯಾದದ್ದು ಇಂದು ಜಿಲ್ಲಾ ಪಂಚಾಯಿತಿ ಕಾರ್ಯಾಲಯವಾಗಿದೆ. ಅರಕಿಲ್ಲೆಯ ಫಾರೂಕ್ ಮಹಲ್ ಕಟ್ಟಡ ಸಮುಚ್ಚಯದಲ್ಲಿ ಉಗ್ರಾಣ ಅಥವಾ ಚೈನಾಮಹಲ್ ಎಂದು ಕರೆಯುವ ನೈರುತ್ಯ ಭಾಗವು ಜಿಲ್ಲಾಧಿಕಾರಿಗಳ ಕಾರ್ಯಾಲಯ, ನ್ಯಾಯಾಲಯ ಹಾಗೂ ಜಿಲ್ಲಾ ಪೋಲೀಸ್ ವರಿಷ್ಠರ ಕಾರ್ಯಾಲಯವಾದವು. ಅರಕಿಲ್ಲೆಯ ದಕ್ಷಿಣಕ್ಕೆ ಇರುವ ಮತ್ತೊಂದು ಚೈನಾಮಹಲ್‌ನ್ನು ಜಿಲ್ಲಾ ಪೋಲೀಸ ವರಿಷ್ಠರ ಮನೆಯಾಗಿ ಪರಿವರ್ತಿಸಲಾಯಿತು. ಉಳಿದಂತೆ ಸುಸ್ಥಿತಿಯಲ್ಲಿದ್ದ ಸರದಾರ ಸುಬೇದಾರರ ಮನೆಗಳು ಅಧಿಕಾರಿಗಳ ವಾಸಸ್ಥಾನಗಳಾದವು. ಔರಂಗಜೇಬನ ಈದ್ಗಾ ಜಿಲ್ಲಾ ಪೋಲೀಸ್ ಹೆಡ್ ಕ್ವಾಟರ್ಸ್ ಆದರೆ ಮುಸ್ತಾಫ್ ಖಾನ್‌ನ ವಿಶ್ರಾಂತಿ ಧಾಮವು ಜಿಲ್ಲಾ ಜೈಲಾಗಿ ಪರಿವರ್ತಿತವಾಗಿ 'ದರ್ಗಾ ಜೈಲು' ಎಂದು ಹೆಸರು ಪಡೆದಿದೆ. ಯಾಕುತ ದಾಬೂಲಿ ಎಂಬ ಆದಿಲ್ ಶಾಹಿ ಕಾಲದ ಇಂಜಿನೀಯರ್‌ನ ಮನೆಯು ಇಂದು ಪ್ರವಾಸಿಗಳ ತಂಗುದಾಣವಾಗಿದೆ. (ಹಳೆಯ ಆಯ್. ಬಿ.) ಹೀಗೆ ಪರಿವರ್ತಿತಗೊಂಡ ಬಿಜಾಪುರ ನಗರವು ಜಿಲ್ಲಾ ಮುಖ್ಯ ಸ್ಥಳವಾಗುವ ಮೊದಲೆ ಕ್ರಿ.ಶ. ೧೮೫೪ ರಲ್ಲಿ ನಗರ ಸಭೆಯನ್ನು ಪಡೆದಿತು. ಅದೇ ವರುಷ ಬಂದ ಸೊಲ್ಲಾಪುರ-ಹುಬ್ಬಳ್ಳಿ ರೈಲು ದಾರಿಯಿಂದಾಗಿ ಬಿಜಾಪುರವು ರೈಲು ಮಾರ್ಗದಲ್ಲಿ ಬಂದು ಉತ್ತರ-ದಕ್ಷಿಣ ಭಾರತಗಳ ಸಂಪರ್ಕವನ್ನು ಪಡೆಯಿತು. ಬ್ರಿಟಿಷ್ ಮುಂಬೈ ರಾಜ್ಯದ ಭಾಗವಾಗಿದ್ದ ಜಿಲ್ಲೆ ೧೯೫೬ ರಲ್ಲಿ ಭಾಷಾವಾರು ಪ್ರಾಂತಗಳ ರಚನೆಯಿಂದಾಗಿ ಮೈಸೂರು-ಕರ್ನಾಟಕ ರಾಜ್ಯದಲ್ಲಿ ಸೇರಿತು. ಹನ್ನೊಂದು ತಾಲ್ಲೂಕುಗಳನ್ನೊಳಗೊಂಡ ಬಿಜಾಪುರ ಜಿಲ್ಲೆ ರಾಜ್ಯದಲ್ಲಿಯೇ ಅತಿ ದೊಡ್ಡ ಜಿಲ್ಲೆಗಳಲ್ಲೊಂದಾಗಿದ್ದುದು ೧೯೯೭ ರಲ್ಲಿ ಇಬ್ಭಾಗವಾಗಿ ಬಿಜಾಪುರ-ಬಾಗಲಕೋಟೆ ಎಂಬ ಎರಡು ಜಿಲ್ಲೆಗಳಾದವು. ಇಂದು ಬಿಜಾಪುರ, ಸಿಂದಗಿ, ಇಂಡಿ, ಮುದ್ದೇಬಿಹಾಳ, ಹಾಗೂ ಬಸವನಬಾಗೇವಾಡಿ ಐದು ತಾಲ್ಲೂಕುಗಳನ್ನೊಳಗೊಂಡ ಜಿಲ್ಲಾ ಸ್ಥಳವಾಗಿದೆ.

ವಿಜಾಪುರ ಜಿಲ್ಲೆಯಲ್ಲಿ ಇತಿಹಾಸ ಪೂರ್ವ ಕಾಲದ ಇಬ್ರಾಹಿಂ ರೋಜ, ಗೋಲಗುಂಬಜ್, ಜಾಮಿಯಾ ಮಸೀದಿಗಳನ್ನು ಉಲ್ಲೇಖಿಸಬಹುದು. ಊರಿನ ಒಳ ಹಾಗೂ ಹೊರ ಆವರಣದಲ್ಲಿರುವ ಕೋಟೆಯ ಭಾಗ ಸಾಕಷ್ಟು ಪ್ರಮಾಣದಲ್ಲಿ ಉಳಿದು ಬಂದಿದೆ.

ಕೂಡಿದ ಪವಿತ್ರ ಗ್ರಂಥಗಳ ವಾಕ್ಯಗಳನ್ನು ಅಲ್ಲಲ್ಲಿ ಅಲಂಕಾರಯುತ ಅಕ್ಷರಗಳಿಂದ (ಕ್ಯಾಲಿಗ್ರಫಿ) ರಚಿಸಿರುವ ಅದರದೇ ಶೈಲಿಯಲ್ಲಿ ಗುಮ್ಮಟ ಹೊಂದಿರುವ ಇಬ್ರಾಹಿಂ ರೋಜ ಕಟ್ಟಡವು ಎರಡನೇ ಇಬ್ರಾಹಿಂನ ಸಮಾಧಿ ಮಂದಿರವಾಗಿದ್ದು ಆಗ್ರದ ತಾಜಮಹಲ್‌ಗಿಂತ ಮುನ್ನಿನ ರಚನೆಯಾಗಿದೆ. ಇಡೀ ಕಟ್ಟಡ ಕಲ್ಲಿನಲ್ಲಿ ಕಟ್ಟಿದೆ. ರಾಷ್ಟ್ರದಲ್ಲೇ ಅತ್ಯಂತ ಹಿರಿದಾದ ಗೊಮ್ಮಟ ಹೊಂದಿರುವುದಲ್ಲದೆ ಅನೇಕ ಬಾರಿ ಪ್ರತಿಧ್ವನಿಸುವಂತೆ ತಾಂತ್ರಿಕ ವಿಸ್ಮಯತೆಯಿಂದ ರಚಿಸಿರುವ ಗೋಲಗುಮಟ್ಟದ ವಾಸ್ತು ಶಿಲ್ಪ ಆಕರ್ಷಣೀಯವಾಗಿದೆ. ಜಾಮಿಯ ಮಸೀದಿ ತನ್ನ ವಿಶಾಲವಾದ ರಚನೆಯಿಂದಾಗಿ ಹಾಗು ಆಕರ್ಷಕವಾದ ಬಣ್ಣಗಳಿಂದ ಪ್ರಖ್ಯಾತವಾಗಿದೆ. ಕುಮಟಗಿಯ ಈಜುಕೊಳ, ಅದಕ್ಕೆ ಪೂರಕವಾದ ನೀರಿನ ವ್ಯವಸ್ಥೆ, ಕಾರಂಜಿ ವರ್ಣಚಿತ್ರಗಳಿಂದ ಕೂಡಿದ ವಿಶ್ರಾಂತಿ ಕೋಣೆಗಳು[೧೦], ನವರಸಪುರದ ಕಮಾನು ಬಾಗಿಲುಗಳು ಸೇರಿದಂತೆ ಇಡೀ ಜಿಲ್ಲೆಯಲ್ಲಿ ಮುಸ್ಲಿಮ್ ಶೈಲಿಯ ನೂರಾರು ಧಾರ್ಮಿಕ ಮಂದಿಗರಳನ್ನು ಕಾಣಬಹುದು.

ಆದಿಲ್ ಶಾಹಿಗಳ ಪತನವಾಗಿ ಈ ಪ್ರದೇಶ ಪೇಶ್ವೆಗಳು ಆಡಳಿತಕ್ಕೆ ಬಂದ ಮೇಲೆ ಮರ ಹಾಗೂ ಗಾರೆಗಳಿಂದ ಕೂಡಿದ ವಾಡೆಗಳು, ಅರಮನೆಗಳು ರಚಿತವಾದವು ಬ್ರಿಟಿಷರ ಕಾಲದಲ್ಲಿ ವಿಜಾಪುರದ ಹಳೆಯ ಕಟ್ಟಡಗಳನ್ನೇ ಕಾರ್ಯಾಲಯಗಳಾಗಿ ಪರಿವರ್ತಿಸ ಬಹುದೆಂದು ಹೇಳಿದ ಮೆಡೋಸ್‌ಟೇಲರನ ಸೂಚನೆಯಂತೆ ಕಲಾದಗಿಯಿಂದ ವಿಜಾಪುರಕ್ಕೆ ರಾಜದಾನಿಯನ್ನು ಬದಲಾಯಿಸಲಾಯಿತು. ಇಂದು ಜಿಲ್ಲಾಧಿಕಾರಿಗಳ ಕಛೇರಿ ಸೇರಿದಂತೆ ಬಹುತೇಕ ಸರ್ಕಾರಿ ಕಾರ್ಯಾಲಯಗಳು ಈ ಬಗೆಯ ದುರಸ್ಥಿ ಮಾಡಿದ ಹಳೆಯ ಕಟ್ಟಡಗಳಲ್ಲಿಯೇ ಇವೆ.

ಜುಮ್ಮಾ ಮಸೀದಿ :

ಜುಮ್ಮಾ ಮಸೀದಿಯ ಒಂದು ಸುಂದರ ಸಮಭುಜ ಚೌಕೋನಾಕೃತಿಯ ಕಟ್ಟಡ ಉತ್ತರ-ದಕ್ಷಿಣ ೨೨೫ ಅಡಿ ಹಾಗೂ ಪೂರ್ವ ಪಶ್ಚಿಮ ೪೫೦ ಅಡಿ ಉದ್ದದವಾಗಿದೆ. ಕಟ್ಟಡ ಪೂರ್ವದ ಬಾಗಿಲಿನಿಂದ ಒಳ ಬಂದರೆ ನಡು ಮಧ್ಯದಲ್ಲಿ ೧೫೫ ಚದರ ಅಡಿಯ ಕಾರಂಜಿ ಕೊಳವಿದೆ. ಉತ್ತರ ದಕ್ಷಿಣಗಳ ಎರಡೂ ಬದಿಯಲ್ಲಿ ೨೮ ಅಡಿ ಅಗಲ ೨೫ ಅಡಿ ಎತ್ತರದ ಏಳು ಕಮಾನುಗಳಿವೆ. ಪಶ್ಚಿಮದಲ್ಲೂ ಏಳು ಕಮಾನುಗಳಿವೆ. ಮಧ್ಯ ಹಬ್ಬಿದ-ಬಳ್ಳಿಯಾಕಾರದ

೧೦. ಡಾ. ಯಾಧಪ್ಪ ಪರದೇಶಿ. : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಪುಟ-೩೮೫.

ಅಲಂಕರಣೆ ಇನ್ನಷ್ಟು ಶೋಭೆ ತಂದಿದೆ. ಗೋಡೆಯ ತುಂಬ ಮಿದುವಾದ ನಸುಗೆಂಪು ಬಣ್ಣದ ಕಮಾನುಗಳು, ಅವುಗಳ ಒಳಗೆ ಉಬ್ಬಿದ ಮೇಲ್ಛಾವಣಿಯ ಚಿಕ್ಕ-ಚಿಕ್ಕ ಕಿಡಿಕಿಗಳು, ಅವುಗಳೊಂದಿಗೆ ಜಾಲಂಧ್ರಗಳಿಂದೊಡಗೂಡಿದ ಕಲ್ಲುಗಳಲ್ಲಿ ಜಾಮಿತಿಯ ಸುಂದರ ನಕ್ಷೆಗಳಿವೆ.

'ಸಾತ್‌ಮಂಜಿಲ್' ಏಳು ಅಂತಸ್ತುಗಳ ಕಟ್ಟಡದಲ್ಲಿ ಇಂದು ಐದು ಮಹಡಿಗಳಷ್ಟೆ ಉಳಿದಿವೆ. ಭೂಮಿಯಿಂದ ಸುಮಾರು ೯೭ ಅಡಿ ಎತ್ತರ ಕಾಣುವ ಒಳಬದಿಯಲ್ಲಿ ಎರಡು ಪದರುಗಳ ಗೋಡೆಯ ಮಧ್ಯ ನೀರಿನ ಕೊಳವೆ ಮಾರ್ಗಗಳು ಹೋಗಿವೆ. ವಾತಾನುಕೂಲತೆಗಾಗಿ ಮಾಡಿದ ವ್ಯವಸ್ಥೆ ಇದು. ಪ್ರತಿಯೊಂದು ಕೋಣೆಗಳೂ ಒಂದು ಕಾಲದಲ್ಲಿ ಅಪರೂಪದ ಬಣ್ಣದ ಚಿತ್ರಗಳನ್ನು ಹೊಂದಿದ್ದವು ಎಂಬುದನ್ನು ಇಂದಿಗೂ ಮಸುಕು-ಮಸಕಾಗಿ ಕಾಣುವ ಬಣ್ಣದಿಂದ ಊಹಿಸಬಹುದು. ಕ್ರಿ. ಶ. ೧೮೫೪ ರಲ್ಲಿ ಭೇಟಿ ಕೊಟ್ಟ ಜೇಮ್ಸ್ ಬರ್ಡ ಹೇಳುವಂತೆ ಬಹುತೇಕ ಚಿತ್ರಗಳು ಅಸ್ಪಷ್ಟವಾಗಿದ್ದರೂ ಒಂದೆಡೆ ಮಹ್ಮದ ಆದಿಲಶಹನ ಚಿತ್ರ ಅವನ ಹತ್ತಿರ ಸಿತಾರ ವಾದನ ಎದುರಿಗೆ ಬುಟ್ಟಿ ತುಂಬಿದ ಹೂವುಗಳು ಮಗ್ಗುಲಲ್ಲಿ ಅವನ ಪ್ರೇಯಸಿ ರಂಭೆಯನ್ನು ಸ್ಪಷ್ಟವಾಗಿ ಗುರುತಿಸಿದ್ದನಂತೆ.

ಗಗನಮಹಲ್ ೧೦೧೬೮ ಚದರು ಅಡಿಯ ಪ್ರದೇಶದಲ್ಲಿ ನಿಂತ ಭವ್ಯ ಕಟ್ಟಡವು ರಾಜನ ಪರಿವಾರಕ್ಕೆ ಇರಲು ಹಾಗೂ ದರ್ಬಾರ್ ನಡೆಸಲು ರಚಿತವಾದ ಕಟ್ಟಡ ೮೦ ಅಡಿ ಅಗಲದ ಎತ್ತರವಾದ ವಿಶಾಲ ಕಟ್ಟೆಯ ಎದುರಿಗೆ ೬೧ ಅಡಿ ಅಗಲದ ಭವ್ಯ ಕಮಾನಿನ ಎರಡೂ ಬದಿಗಳಲ್ಲಿ ಇನ್ನೆರಡು ಚಿಕ್ಕ ಕಮಾನುಗಳಿವೆ. ಎರಡು ಅಂತಸ್ತಿನ ಕಟ್ಟಡದ ಮೇಲ್ಛಾವಣಿ ಹಾಳಾಗಿದ್ದು ಈಗ ಕಟ್ಟೆಯ ಎಡ ಬಲದಲ್ಲಿ ಹತ್ತಿ ಇಳಿಯಲು ಮೆಟ್ಟಿಲುಗಳು, ಚಿಕ್ಕ ಕೋಣೆಗಳು ಮಾತ್ರ ನಿಂತಿವೆ. ಎದುರಿಗೆ ಹತ್ತೆಂಟು ಸಾವಿರ ಜನ ಕುಳಿತುಕೊಳ್ಳಬಹುದಾದ ಸ್ಥಳದಲ್ಲಿ ಇಂದು ನಗರ ಸಭೆಯ ಉದ್ಯಾನವನವಿದೆ. ಇಲ್ಲಿ ಈ ಕಟ್ಟೆಯ ಮೇಲೆಯೇ ಒಂದೊಮ್ಮೆ ಧಿರೋದಾತ್ತ ರಾಣಿ ಚಾಂದಬೀಬಿ ಕುಳಿತು ರಾಜ್ಯವಾಳಿದಳು. ಎರಡನೆಯ ಇಬ್ರಾಹಿಮ ಅವನ ಮಗ ಮಹ್ಮದ, ಮೊಮ್ಮಗ ಇಮ್ಮಡಿ ಅಲಿ ರಾಜ್ಯವಾಳಿ ಕೊನೆಗೆ ಸಿಕಂದರನ ಕೈಗೆ ಮೊಗಲ್ ದೊರೆ ಔರಂಗಜೇಬ್ ಬೇಡಿಗಳನ್ನು ತೊಡಿಸಿದ್ದು ಇಲ್ಲಿಯೆ. ಗಗನ ಮಹಲ್‌ದ ಹತ್ತಿರ ಇನ್ನೊಂದು ಸುಂದರ ಕಟ್ಟಡ ಎರಡನೆಯ ಎಬ್ರಾಹಿಮ್ ಅದಿಲಶಹ ಕಟ್ಟಿದ 'ಆನಂದ ಮಹಲ್' ಇಂದು ಜಿಲ್ಲಾ ಪಂಚಾಯತಿ ಕಾರ್ಯಾಲಯವಾಗಿದೆ. ಗಗನ ಮಹಲದಂತೆಯೇ ಭವ್ಯ ಕಮಾನಿನ ಮಹಾದ್ವಾರದ ಎರಡಂತಸ್ತಿನ ಕಟ್ಟಡ ಇದಾಗಿದೆ.

ಅಸರ್‌ಮಹಲ್ ಹದಿನೈದು ಸಾವಿರ ಚದರಡಿಯ ಕ್ಷೇತ್ರದ ಇನ್ನೊಂದು ಭವ್ಯ ಕಟ್ಟಡ 'ಆಸಾರ್ ಮಹಲ್'ನ್ನು ಸುಲ್ತಾನ್ ಮಹ್ಮದ ಆದಿಲಶಹ ಕಟ್ಟಿಸಿದನು. ನ್ಯಾಯಾಲಯಕ್ಕಾಗಿ ಆ ಮೊದಲೆ ಅರಕಿಲ್ಲೆಯ ಒಳಗಡೆ ಕಟ್ಟಿದ ಅದಾಲತ್ ಮಹಲ್ ಇಂದು ಜಿಲ್ಲಾಧಿಕಾರಿಗಳ ನಿವಾಸ, ಬಹುಶಃ ಚಿಕ್ಕದಾಯಿತೆಂದು ಕೋಟೆಯ ಹೊರಗಡೆ ಅಸಾರ ಮಹಲನ್ನು ಕಟ್ಟಿರಬೇಕು. ವಿಶಾಲ ಅಂಗಳದ ಮಧ್ಯ ಪುಷ್ಕರಣಿ ಇದೆ. ಕಟ್ಟಡದ ಮುಂಭಾಗದಲ್ಲಿ ಭವ್ಯವಾದ ೩೦ ಅಡಿ ಎತ್ತರದ. ಸಾಗವಾನಿ ಕಂಬಗಳ ಮೇಲೆ ಬಣ್ಣದ ಚಿತ್ತಾರಗಳಿಂದ ಕೂಡಿದ ಕಟ್ಟಿಗೆಯ ತೊಲೆಗಳನ್ನು ಕಾಣುತ್ತೇವೆ. ಮೊದಲ ಅಂತಸ್ತಿನ ಮೊಗಸಾಲೆಯಿಂದಲೇ ಬಾದಶಹನ ದರ್ಶನ ಕೆಳಗಿನ ಜನರಿಗೆ ಆಗುತ್ತಿರಬೇಕು. ಈ ಮೊದಲ ಅಂತಸ್ತಿನ ಕೋಣೆಗಳ ಗೋಡೆಯ ಮೇಲೆ ಆ ಕಾಲದ ವರ್ಣ ಚಿತ್ರಗಳನ್ನು ಕಾಣಬಹುದು ದಕ್ಷಿಣ ತುದಿಯ ಕೋಣೆಯಲ್ಲಿ ಸಂತ ಮಹ್ಮದರ ಅವಶೇಷಗಳಿವೆಯೆಂದೂ ವರುಷಕ್ಕೊಮ್ಮೆ ಆಗುವ ಉತ್ಸವದಲ್ಲಿ ಅದರ ದರ್ಶನವನ್ನು ಭಕ್ತರು ಪಡೆಯುತ್ತಾರೆಂದು ಹೇಳಲಾಗುತ್ತದೆ.

ಸಮಾಧಿಗಳು :

ಸಮಾಧಿಗಳು ಅಥವ ಗೋರಿಗಳು ಸಾಮಾನ್ಯವಾಗಿ ಭವ್ಯ ಕಟ್ಟಡಗಳಾಗಿವೆ. ಆದಿಲಶಾಹಿ ವಂಶದ ಮೂವರು ಬಾದಶಹರು ಪ್ರಪಂಚದಲ್ಲಿಯೆ ಪ್ರಸಿದ್ಧವಾಗಿರುವ ಸಮಾದಿ ಕಟ್ಟಡಗಳನ್ನು ತಮಗಾಗಿ ಕಟ್ಟಿಕೊಂಡಿದ್ದಾರೆ. ಅವುಗಳಲ್ಲಿ ಪ್ರಮುಖವಾದ ಈ ಕೆಳಗಿನಂತಿವೆ.

ಇಬ್ರಾಹಿಮ್ ರೋಜಾ :

ಎರಡನೆಯ ಇಬ್ರಾಹಿಮ್ ಆದಿಲಶಹನು ತನ್ನ ಸಮಾಧಿಗಾಗಿ ಕಟ್ಟಿಸಿಕೊಂಡ ಈ ಕಟ್ಟಡ ಸಮುಚ್ಚಯದಲ್ಲಿ ಎರಡು ಮುಖ್ಯ ಕಟ್ಟಡಗಳಿವೆ. ಒಂದು ಸಮಾದಿ ಇನ್ನೊಂದು ಮಸೀದಿ ೪೦೦೦ ಚದರಡಿಯ ಕಟ್ಟೆಯ ಮೇಲೆ ೧೨೦೦ ಚದರಡಿ ಚೌಕಾದ ಕಟ್ಟಡ ಅದ್ಭುತ ಅಲಂಕಾರದ ಕೆಲಸದಿಂದ ತುಂಬಿದೆ. ಸುತ್ತಲೂ ಎರಡೂ ಸಾಲು ಕಂಬಗಳಿದ್ದು ಎರಡೆರಡು ಕಂಬಗಳ ಮೇಲೆ ಕಮಾನುಗಳನ್ನು ಕಟ್ಟಲಾಗಿದೆ. ಕಂಬಗಳ ಈ ಕಟ್ಟೋಣ ಹಿಂದು ಶೈಲಿಯದಾಗಿದ್ದು ಮುಸ್ಲಿಂ ವಾಸ್ತು ಶಿಲ್ಪಶೈಲಿ ಪ್ರಪ್ರಥಮ ಬಾರಿಗೆ ಇಲ್ಲಿ ಕಾಣಿಸಿಕೊಂಡಿದೆ. ಗೋಡೆಗಳ ಹೊರಮೈಗೆ ಹೊಂದಿ . ಒಂದು ಕಮಾನುದಾರಿ ಮತ್ತು ಅದಕ್ಕೆ ಹೊಂದಿ ಇನ್ನೊಂದು ಕಮಾನು ಇರುತ್ತದೆ. ಕಟ್ಟಡದ ಹೊರಮೈ ಮೇಲೆ ಪವಿತ್ರ ಕುರಾನಿನ ವಾಕ್ಯಗಳು ಚಿತ್ರ ವಿಚಿತ್ರವಾದ ಸುಂದರವಾದ ಕೆತ್ತನೆಯ ಅಲಂಕಾರಗಳು ಕಾಣಿಸುತ್ತವೆ.

ಗೋಳಗುಮ್ಮಟ :

ವಿಜಾಪುರ ಎಂದಾಕ್ಷಣ ಮೊದಲು ನೆನಪಾಗುವುದು ಗೋಳಗುಮ್ಮಟ, ನಗರಕ್ಕೆ ಬರುವ ಪ್ರವಾಸಿಗ ಯಾವುದೇ ದಿಕ್ಕಿನಿಂದ ಬರಲಿ ಮೊದಲು ಕಾಣುವುದು ಗೋಳಗುಮ್ಮಟವೆ ದೂರದಿಂದ ಚಿಕ್ಕ ಗುಮ್ಮಟ ಕಾಣುತ್ತಿದ್ದದು ನಗರ ಸಮೀಪವಾಗುತ್ತಿದ್ದಂತೆ ಭೂಮಿ-ಆಕಾಶಗಳನ್ನೆಲ್ಲ ವ್ಯಾಪಿಸಿಕೊಂಡ ಹಾಗೆ ಕಾಣುವ ಭವ್ಯ ಗುಮ್ಮಟ ಪ್ರಪಂಚದ ಅದ್ಭುತಗಳಲ್ಲೊಂದಾಗಿದೆ.

ಎರಡನೆಯ ಇಬ್ರಾಹಿಮ್ ಆದಿಲಶಹನ ಮಗ ಮಹ್ಮದ ಆದಿಲಶಹನು ತನ್ನ ಸಮಾಧಿಗಾಗಿ ಕಟ್ಟಿಸಿದ ಬೃಹತ ಕಟ್ಟಡ ಗೋಳಗುಮ್ಮಟವು ೨೦೫ ಅಡಿ ಉದ್ದ ೨೦೫ ಅಡಿ ಅಗಲ ೨೦೦ ಅಡಿ ಎತ್ತರವಿದೆ. ಪ್ರಪಂಚದಲ್ಲಿಯೆ ಅತಿ ದೊಡ್ಡ ಗುಮ್ಮಟಾಚ್ಛಾದಿತ ಹಜಾರವು ಗೋಳಗುಮ್ಮಟದಲ್ಲಿದೆ. ವಿಶಿಷ್ಟ ತಂತ್ರಜ್ಞಾನವನ್ನು ಅಳವಡಿಸಿ ಪರಸ್ಪರ ಛೇದಿಸುವ ಎಂಟು ಕಮಾನುಗಳ ಮೇಲೆ ನೆಲದಿಂದ ೯೦ ಅಡಿಗಳ ಎತ್ತರದಲ್ಲಿಒಂದು ಅಷ್ಟಕೋನವನ್ನು ನಿರ್ಮಿಸಲಾಗಿದೆ. ಅದರ ಮೇಲೆ ಗುಮ್ಮಟವನ್ನು ನಿರ್ಮಿಸಿದ್ದಾರೆ. ಗುಮ್ಮಟದ ವ್ಯಾಸ ೧೨೫ ಅಡಿಗಳು ಇದು ಪ್ರಪಂಚದಲ್ಲಿಯೆ ಬಹು ದೊಡ್ಡ ಗುಮ್ಮಟಗಳಲ್ಲಿ ಒಂದಾಗಿದೆ. ಗುಮ್ಮಟದ ಕೆಳಗೆ ಅದರ ಒಳಗೋಡೆಗೆ ಹೊಂದಿಕೊಂಡು ೨೧ ಅಡಿ ಅಗಲದ ವರ್ತುಲಾಕಾರದ ಮೊಗಸಾಲೆ ಇದೆ. ಗುಮ್ಮಟದ ಹೊರಮೈ ವ್ಯಾಸವು ೧೪೪ ಅಡಿ ಇದೆ. ಗೋಡೆಯ ದಪ್ಪ ೧೦ ಅಡಿಗಳು ಪರಸ್ಪರ ವಿರುದ್ಧ ದಿಕ್ಕಿನಲ್ಲೆ ಒಂದು ಪಿಸು ಮಾತು ಗಡಿಯಾರದ ಟಿಕ್-ಟಿಕ್ ಕೂಡ ಇನ್ನೊಂದು ಬದಿಗೆ ಸ್ಪಷ್ಟವಾಗಿ ಕೇಳಿಸುತ್ತದೆ. ಇಲ್ಲಿಯ ಪ್ರತಿ ಶಬ್ದವೂ ಏಳೆಂಟು ಬಾರಿ ಪ್ರತಿ ಧ್ವನಿಸುತ್ತದೆ ಗೋಳಗುಮ್ಮಟವು ತನ್ನ ಬೃಹದಾಕಾರ ಮಿತ ಅಲಂಕರಣ ಚತುರ ರಚನಾ ತಂತ್ರ, ವೈಶಿಷ್ಟ ಪೂರ್ಣವಾದ ವಾಸ್ತು ಶಿಲ್ಪ ವಿನ್ಯಾಸ ಇವುಗಳಿಂದಾಗಿ ಭಾರತೀಯ ವಾಸ್ತುಶಿಲ್ಪದ ಇತಿಹಾಸದಲ್ಲಿ ಸರಿಸಾಟಿ ಇಲ್ಲದ ಕೃತಿಯಾಗಿ ಪರಿಣಮಿಸಿದೆ. ಜಾಗತಿಕ ವಾಸ್ತು ಶಿಲ್ಪದ ಅಗಸದಲ್ಲಿ ಸ್ಥಾನವನ್ನು ದೊರಕಿಸಿಕೊಂಡಿದೆ.

ಬಾರಾಕಮಾನ್ :

ಈ ವಾಸ್ತು ಶಿಲ್ಪವು ಗೋಳಗುಮ್ಮಟದಂತೆ ಆಶ್ಚರ್ಯ ಉಂಟುಮಾಡುವ ತಂತ್ರಜ್ಞಾನವನ್ನು ಹೊಂದಿದ್ದರೂ ಅದರ ರಚನಾ ಕಾರ್ಯ ಪೂರ್ಣಗೊಂಡಿಲ್ಲ. ಚೌಕಾಕಾರದ ಪಾಯದ ಮೇಲೆ ಹನ್ನೆರಡು ಕಮಾನುಗಳ ಕಟ್ಟುವಿಕೆಯನ್ನು ಇಲ್ಲಿ ಕಾಣಬಹುದು. ಎಡ, ಬಲ, ಮೇಲೆ, ಕೆಳಗೆ, ಯಾವುದೇ ಕಡೆಯಿಂದ ನೋಡಿದರೂ ಹನ್ನೆರಡು ಕಮಾನುಗಳಿರುವಂತೆ

ಇದನ್ನು ಯೋಜಿಸಲಾಗಿದೆ. ಇದರ ರಚನಾಕಾರ್ಯ ಪೂರ್ಣಗೊಂಡಿದ್ದರೆ ಗೋಳಗುಮ್ಮಟವನ್ನು ಮೀರಿಸುವ ಕಲಾಕೃತಿ ಇದಾಗುತ್ತಿತ್ತು ಎಂದು ಹೇಳಬಹುದು. ಇಂತಹ ಪ್ರಮುಖ ರಚನೆಗಳಲ್ಲದೆ ಬಿಜಾಪುರದಲ್ಲಿ ಇನ್ನು ಸಾಕಷ್ಟು ಮಸೀದಿಗಳು, ಮಿನಾರುಗಳು, ಬುರುಜುಗಳು, ಕಮಾನುಗಳು ಕಂಡುಬರುತ್ತವೆ.

ಸಂಗೀತ :

ದಕ್ಷಿಣ ಭಾರತದಲ್ಲಿ ಮೊದಲಿನಿಂದಲೂ ಸಂಗೀತ ನೃತ್ಯಗಳಿಗೆ ಸಾಕಷ್ಟು ಪ್ರೋತ್ಸಾಹ ದೊರಕಿರುವುದನ್ನು ಕಾಣಬಹುದು ಅಂತೆಯೇ ವಿಜಾಪುರ ಜಿಲ್ಲೆಯ ಪ್ರದೇಶದಲ್ಲಿ ಆಡಳಿತ ನಡೆಸುತ್ತಿದ್ದ ಚಾಳುಕ್ಯ ರಾಷ್ಟ್ರ ಕೂಟಾದ ರಾಜ ಮನೆತನಗಳ ಸಾಹಿತ್ಯ, ಕೃತಿಗಳಲ್ಲಿ ಶಾಸ್ತ್ರ ಗ್ರಂಥಗಳಲ್ಲಿ ಸಂಗೀತ, ನೃತ್ಯಗಳಿಗೆ ಸಂಬಂಧಿಸಿದಂತೆ ಅನೇಕ ಪ್ರಸಂಗಗಳು ಉಲ್ಲೇಖವಾಗಿವೆ. ಈ ಕಾಲದ ಶಿಲ್ಪ ಚಿತ್ರಕಲೆಯಲ್ಲೂ ಸಂಗೀತ ನೃತ್ಯಾದಿಗಳಲ್ಲಿ ನಿರತರಾದ ಪ್ರತಿಮೆಗಳನ್ನು ಕಾಣಬಹುದು. ಬದಾಮಿಯ ಚಿತ್ರಕಲೆಯಲ್ಲಿ ಕೊಳಲು, ಮೃದಂಗ ಇತ್ಯಾದಿ ವಾದ್ಯಗಳನ್ನು ನುಡಿಸುತ್ತಿರುವವರ ಚಿತ್ರಗಳಿವೆ. ಅಲ್ಲಿಯ ಶಿಲ್ಪಗಳಲ್ಲಿ ಕುಬ್ಜ ಯಕ್ಷರುಗಳು ತಾಳ, ಕೊಂಬು, ಕಹಳೆ, ಮೃದಂಗ ಇತ್ಯಾದಿ ಹಲವಾರು ವಾದ್ಯಗಳನ್ನು ನಡುಸುತ್ತಿದ್ದಾರೆ. ಮಧ್ಯ ಯುಗದಲ್ಲಿ ವಿಜಾಪುರದ ಮಹಮದೀಯ ಅರಸರು ಸಂಗೀತಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು. ಅದಿಲ್‌ಶಾಹಿ ರಾಜ್ಯ ಸ್ಥಾಪಕನಾದ ಯುಸೂಫ ಆದಿಲ್‌ಖಾನ್ ಸ್ವತಃ ಸಂಗೀತಗಾರನೂ ಆಗಿದ್ದನು. ಕವಿಯಾಗಿದ್ದ ಈತ ಕೆಲವು ಕೃತಿಗಳನ್ನು ರಚಿಸಿದ್ದಾನೆ ಪರ್ಶಿಯಾದಿಂದ ಹೆಸರಾತ ಕವಿಗಳನ್ನು ಸಾಹಿತಿಗಳನ್ನು ಕರೆಸಿಕೊಂಡಿದ್ದ. ಇತಿಹಾಸಕಾರ ಫೆರಿಸ್ತ ಯುಸುಫ ಬಗ್ಗೆ ಹೇಳುತ್ತಾ ಸಂಗೀತದಲ್ಲಿ ಈತನ ಅಭಿರುಚಿ ಹಾಗೂ ಪರಿಣತಿಗಳು ಸಮಕಾಲಿನ ಸಂಗೀತಗಾರರಿಗಿಂತ ಶ್ರೇಷ್ಠವಾಗಿದ್ದವು. ಸ್ವತಃ ಈತ ಎರಡು ಮೂರು ಬೇರೆ ಬೇರೆ ತೆರನಾದ ವಾದ್ಯಗಳನ್ನು ನುಡಿಸುತ್ತಿದ್ದನು. ಈತ ತನ್ನ ಕೃತಿಗಳನ್ನು ಸ್ವತಃ ಹಾಡುತ್ತಿದ್ದನು. ಎಂದಿದ್ದಾನೆ. ಇನ್ನೊಬ್ಬ ಇತಿಹಾಸಕಾರ ಬಶೀರುದ್ದೀನ್ ಅಹ್ಮದ್ ಈತ ತಂಬೂರಿ ಮತ್ತು ಉಡ ಎಂಬ ವಾದ್ಯಗಳಲ್ಲಿ ಪರಿಣತನಿದ್ದನೆಂದು ತಿಳಿಸುತ್ತಾನೆ. ಯಸುಫ್‌ನ ಅಸ್ಥಾನದಲ್ಲಿದ್ದ ಉಸ್ತಾದ ಗಿಲಾನಿ ಹಾಗೂ ಹುಸೇನ ಕಾಜಿವಿನಿ ಎಂಬ ಖ್ಯಾತ ಗಾಯಕರು ಅರಸನೊಂದಿಗೆ ಇದ್ದು ಗಜಲ್‌ಗಳನ್ನು ಹಾಡುತ್ತಿದ್ದರೆಂದು ಅದಕ್ಕಾಗಿ ಅರಸ ಆರು ಸಾವಿರ ಹೊನ್ನು ನೀಡಿದನೆಂದೂ, 'ಕಾಜಿ ವಿನಿಯು' 'ಕಾನೂನ್' ಎಂಬ ವಾದ್ಯ ನುಡುಸುತ್ತಿದ್ದನೆಂದೂ ಹೇಳಿಕೆಗಳಿವೆ*. ಯೂಸಫ್‌ನ ಮಗ ಇಸ್ಮಾಯಿಲ್ ಸಂಗೀತಗಾರನಾಗಿದ್ದು ಈತ ಸಿತಾರ್ ನುಡಿಸುತ್ತ ಕುಳಿತಿರುವ ದಖ್ಖನಿ

ಚಿತ್ರಗಳಿವೆ. ಈತನಿಗೆ ತುರ್ಕಿ ಸಂಗೀತದಲ್ಲಿ ಬಹಳ ಆಸಕ್ತಿ ಇದ್ದಿತು. ಒಂದನೆ ಅಲಿಯ ಕಾಲದಲ್ಲಿ 'ಜವಾರಹ್ ಆಲ್ ಮುಸ್ ಇ ಮಹಮ್ಮದಿ' ಎಂಬ ಸಂಗೀತ ಶಾಸ್ತ್ರ ಕುರಿತು ಗ್ರಂಥ ರಚಿತವಾಗಿದ್ದು, ಇವುಗಳಲ್ಲಿ ಪ್ರತಿಯೊಂದು ರಾಗವನ್ನು ವಿವಿಧ ದೃಶ್ಯಗಳಿಂದ ಸಾಂಕೇತಕವಾಗಿ ತೋರಿಸಿದೆ. ಅಲಿ ಆದಿಲ್ ಶಹಾನ ಮಡದಿ ಚಾಂದಬೀಬಿ ಚಿತ್ರ ಕಲಾವಿದೆಯಲ್ಲದೆ ಕವಯತ್ರಿಯೂ ಆಗಿದ್ದಳು.

ವಿಜಾಪುರದಲ್ಲಿ ಎರಡನೆಯ ಇಬ್ರಾಹಿಂ ಆದಿಲ್‌ಶಾಹಿಯ ಕಾಲದಲ್ಲಿ (೧೫೮೦-೧೬೨೭) ಚಿತ್ರಕಲೆಯಂತೆ ಸಂಗೀತದವೂ ತನ್ನ ಉನ್ನತಿಯನ್ನು ಕಂಡುಕೊಂಡಿತು. ಈತನ ಕಾಲದಲ್ಲಿ ರಚಿತವಾದ ಸಂಗೀತ ಗ್ರಂಥ 'ಕಿತಾಬ್-ಎ-ನೌರಸ್' ಈ ಬಗೆಯ ಗ್ರಂಥಗಳಲ್ಲೇ ಮೇರು ಕೃತಿ ಎಂದು ಹೇಳಬಹುದು ನೌರಸ್, ಕಿತಾಬೆ ನೌರಸ್, ಎಂದೆಲ್ಲಾ ಕರೆದಿರುವ ಈ ಸಂಗೀತ ಗೀತೆಗಳ ಸಂಗ್ರಹದ ರಚನಕಾರ ಸ್ವಯಂ ಇಮ್ಮಡಿ ಇಬ್ರಾಹಿಂ ಆದಿಲ್ ಶಹಾನೆ ಆಗಿದ್ದಾನೆ. ಇಬ್ರಾಹಿಂನಿಗೆ ನೌರಸ್ (ನವರಸ) ಎಂಬ ಪದ ಪ್ರಿಯವಾಗಿದ್ದು, ಈ ಕವಿತಾ ಗುಚ್ಛವೂ ನವರಸ ಭರಿತವಾಗಿದೆ ಎಂದೇ ಈ ರೀತಿ ಹೆಸರಿಸಿದ್ದ. ಇಲ್ಲಿರುವ ಗೀತೆಗಳನ್ನು ಇಬ್ರಾಹಿಂ ಆಗಾಗ್ಗೆ ಬಿಡಿಯಾಗಿ ರಚಿಸಿದ್ದು, ೧೫೯೬ ರಲ್ಲಿ ಪರ್ಷಿಯಾದಿಂದ ಖ್ಯಾತ ವಿದ್ವಾಂಸ ಜುಹೂರಿ ವಿಜಾಪುರಕ್ಕೆ ಬಂದ ಮೇಲೆ ವ್ಯವಸ್ಥಿತವಾಗಿ ಸಂಕಲನಗೊಳಿಸುವ ಕಾರ್ಯ ಆರಂಭವಾಗಿರಬಹುದು. ಈ ಗ್ರಂಥಕ್ಕೆ ಜುಹುರಿಯೇ ಮುನ್ನುಡಿ ರೂಪದ 'ಖ್ವಾನೆ ಖಲೀಲ್' ಎಂಬ ಹೆಸರಿನಲ್ಲಿ ಲೇಖನವೊಂದನ್ನು ಬರೆದಿದ್ದು ಅದು ೧೫೯೯ರ ಸಂಕಲನದಲ್ಲಿ ಸೇರಿಸಲ್ಪಟ್ಟಿತು.

ಫಕೀರಮಹಮದ್ ಝುಬೇರಿ ರಚಿಸಿದ 'ಬಸಾತಿನೆ ಸಲಾತಿನ' ಗ್ರಂಥದಲ್ಲಿ ಇಬ್ರಾಹಿಂನ ವ್ಯಕ್ತಿತ್ವದ ಪರಿಚಯವಿದ್ದು, ಆತ ಸಂಗೀತ, ನೃತ್ಯ ಕಲೆಗೆ ನೀಡಿದ ಪ್ರೋತ್ಸಾಹದ ಬಗ್ಗೆ ವಿವರಗಳಿವೆ. ಅದರಂತೆ ವಿಜಾಪುರದಲ್ಲಿ ವಿಶೇಷ ದಿನಗಳಲ್ಲಿ ಈದ-ಎ-ನೌರಸ್ ಹಬ್ಬವನ್ನು ಆಚರಿಸುತ್ತಿದ್ದರು. ಅದರಲ್ಲಿ ಹಾಡುವವರು, ವಾದ್ಯಗಾರರು, ನೃತ್ಯಗಾರರು ಪಾಲುಗೊಳ್ಳುತ್ತಿದ್ದರು. ಹೊರಗಿನಿಂದಲೂ ಕಲಾವಿದರು ಬರುತ್ತಿದ್ದರು ಎಂಬಿತ್ಯಾದಿ ಸಂಗತಿಗಳು ತಿಳಿದುಬರುತ್ತದೆ. ಮೊದಲಿಗ ವಿಜಾಪುರದ (ದಧಿ) ಹಾಗೂ ಕೊನೆ ಶ್ರೇಣಿಯವರು (ಗಣಿಜನ) ಎಂದು ವರ್ಗೀಕೃತರಾಗಿದ್ದರು. ನಂತರ ಇಬ್ರಾಹಿಂ ತನ್ನದೇ ಬೇರೆಯದಾದ ವರ್ಗವನ್ನು ಮಾಡಿದ. ಅದರಂತೆ ಸುಲ್ತಾನ್‌ನ ಬಳಿ ಯಾವಾಗಲೂ ಸಂಗೀತದ ವಿದ್ವತ್ತಿನಲ್ಲಿ ಹೆಚ್ಚಿನ ಜ್ಞಾನ ಸಂಪಾದನೆ

ಮಾಡಿದ ವಿದ್ವಾಂಸರಿರುತ್ತಿದ್ದರು. ಇವರನ್ನು ಹುಜೂರಿಗಳೆಂದು ಕರೆಯಲಾಗುತ್ತಿತ್ತು. ಇವರು ಇಬ್ರಾಹಿಂ ರಚಿಸಿದ ಗೀತೆಗಳನ್ನು ಸ್ವತ: ಅರಸನಿಂದಲೇ ಮೊದಲ ಬಾರಿಗೆ ಕೇಳಿ, ಕಂಠಪಾಠ ಮಾಡಿ ತಮಗಿಂತ ಕೆಳಗಿನ ದರ್ಜೆಯವರಿಗೆ ಕಲಿಸುತ್ತಿದ್ದರು. ಎರಡನೆಯ ವರ್ಗದವರು ದರ್ಬಾರಿಗಳು ಇವರು ದರ್ಬಾರು ಸಂಗೀತ ಕ್ಷೇತ್ರದಲ್ಲಿ ವಿಶಿಷ್ಠರೆನಿಸಿದವರಾಗಿದ್ದರು. ರಾಗಮಾಲ ಚಿತ್ರಗಳು ಮೊಘಲರ ಕಾಲದಲ್ಲಿ ಉತ್ತರ ಭಾರದಲ್ಲಿ ರಚನೆಗೊಂಡು ಜನಪ್ರಿಯವಾದಂತೆ, ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿಯೂ ಇವು ರಚನೆಗೊಂಡವು*. ರಾಗಗಳಿಗೆ ರೂಪ ಲಾವಣ್ಯಗಳು, ಗುಣ ಲಕ್ಷಣಗಳು, ಬಣ್ಣ ಭಾವಗಳು ಇತ್ಯಾದಿಗಳ ವರ್ಣನೆಯೂ ಇದ್ದು, ಅವುಗಳನ್ನು ಅನುಸರಿಸಿ ಕಲಾಕೃತಿಗಳು ರಚಿತವಾಗುತ್ತಿದ್ದವು. ಅಂತೆಯೇ ವಿವಿಧ ಗೀತೆಗಳ ಹಾಡುವಿಕೆಗೆ ಪೂರಕವಾಗಿ ರಾಗಗಳನ್ನು ಸೂಚಿಸಲಾಗುತ್ತಿತ್ತು. ಈ ಎರಡೂ ಅಂಶಗಳನ್ನು ಆದಿಲ್‌ಶಾಹಿಗಳ ಕಾಲದ ಚಿತ್ರ ಸಂಗೀತಗಳಲ್ಲಿ ಕಾಣಬಹುದು. ಕೆಲವು ರಾಗ ಮತ್ತು ರಾಗಿಣಿಗಳಿಗೆ ಸಂಬಂಧಿಸಿದ ಚಿತ್ರಾತ್ಮಕ ಅಂತರ ಭಾವಗಳನ್ನು ಪ್ರತಿನಿಧೀಕರಿಸುವ ಆಲೋಚನೆಯನ್ನು ಹೊಂದಿದ ಇಬ್ರಾಹಿಂ ಆದಿಲ್‌ಶಹನು ಕೈಗಳಲ್ಲಿ ವಾದ್ಯಗಳನ್ನು ಹಿಡಿದುಕೊಂಡು ತನ್ನ ಭಾವ ಚಿತ್ರವನ್ನು ರಚಿಸಿಕೊಂಡಿದ್ದಾನೆ.

ಇಬ್ರಾಹಿಂಗೆ ಭಾರತೀಯ ತತ್ವಗಳಲ್ಲಿ ಆಸಕ್ತಿಯಿದ್ದು ತನ್ನ ಅನೇಕ ಗೀತೆಗಳಲ್ಲಿ ಹಿಂದೂ ದೇವ ದೇವತೆಯರನ್ನು ಸ್ತುತಿಸಿದ್ದಾನೆ. ಆರಂಭಿಕ ಗೀತೆಯೇ ಸರಸ್ವತಿ ಮತ್ತು ಗಣಪತಿಯರ ಸ್ತುತಿಯಿಂದ ಪ್ರಾರಂಭವಾಗುತ್ತದೆ. ಇಲ್ಲಿಯ ಒಟ್ಟು ಗೀತೆ ಹಾಗೂ ದ್ವಿಪದಿಗಳನ್ನು ಐದು ವಿಭಾಗಗಳಾಗಿ ವಿಂಗಡಿಸಿದೆ. (೧) ಹಿಂದು ದೇವ ದೇವತೆಗಳ ಸ್ತುತಿ (೨) ಗುಲಬರ್ಗಾದ ಸಂತ ಬಂದೇ ನವಾಜರ ಸ್ತುತಿ (೩) ತಾನು, ತನ್ನ ಸಂಗೀತ ವಾದ್ಯ ಮೋತಿ ಖಾನ, ಆನೆ ಅತಿಶ್‌ಖಾನ ಹಾಗೂ ತನ್ನ ಮಡದಿ ಚಾಂದ್ ಸುಲ್ತಾನಳ ಕುರಿತು ಗೀತೆಗಳು, (೪) ಕಾಲ್ಪನಿಕ ಶೃಂಗಾರ ಹಾಗೂ ವಿರಹ ಗೀತೆಗಳು, ಹಾಗೂ (೫) ರಾಮಾಲಿಕೆಗಳು ಆದಿಲ್ ಶಾಹಿಗಳು ನೀಡಿದ ಮತ ಸಹಿಷ್ಣತೆಯಿಂದಾಗಿ ದೇಶಿಯ ಧರ್ಮ, ಕಲೆ ಸಂಸ್ಕೃತಿಗಳು ಜೊತೆ ಜೊತೆಯಾಗಿಯೇ ಬೆಳೆದವು. ಹರಿದಾಸ ಪರಂಪರೆ ಜಿಲ್ಲೆಯಲ್ಲಿಯೂ ಪ್ರಮುಖವಾಗಿ ಮುಂದುವರದಿತ್ತು.

ಈಗಾಗಲೇ ಪ್ರಸಿದ್ಧವಿದ್ದ ವಚನ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಲಾಗಿತ್ತು. ದಾಸ ಸಾಹಿತ್ಯ ಹಾಗೂ ವಚನ ಸಾಹಿತ್ಯಗಳು ಅನೇಕ ವೇಳೆಯಲ್ಲಿ ಶಾಸ್ತ್ರೀಯ ಸಂಗೀತದ ರೀತಿಯಲ್ಲಿ ಹಾಡಲಾಗುತ್ತಿತ್ತು. ದಾಸ ಸಾಹಿತ್ಯಕ್ಕೆ ಹಾಡು ಮೂಲ ನೆಲೆಯಾಗಿದ್ದು ಹರಿದಾಸರು ರಚಿಸಿದ

ಸಾಹಿತ್ಯಕ್ಕೆ ಕೀರ್ತನ ಸಾಹಿತ್ಯವೆಂದು ಕರೆಯಾಗುತ್ತದೆ. ಅಂತೆಯೇ ೧೭ನೇ ಶತಮಾನದಲ್ಲಿ ಪ್ರಮುಖ ಕೀರ್ತನಕಾರರಾಗಿದ್ದ ಮಹಿಪತಿದಾಸರ ರಚನೆಗಳು ಕೆಲವೊಮ್ಮೆ ರಾಗತಾಳಗಳಿಂದ ನಿರ್ದೇಶಿತವಾಗಿದ್ದು ಸಂಗೀತದೋಪಾದಿಯಲ್ಲಿ ಹಾಡುತ್ತಿದ್ದಿರಬಹುದು. ದಾಸ ಕೂಟ, ವ್ಯಾಸ ಕೂಟಗಳು ಜಿಲ್ಲೆಯಲ್ಲಿಯೂ ಇದ್ದು ದಾಸ ಸಾಹಿತ್ಯವನ್ನು ಕೀರ್ತನೆಗಳ ಮೂಲಕ ನಿಯಮಿತವಾಗಿ ಮುಂದುವರಿಸಿಕೊಂಡು ಬರುತ್ತಿತ್ತು.

ಇನ್ನೊಂದೆಡೆ ಆದಿಲ್ ಶಾಹಿಗಳ ಪ್ರೋತ್ಸಾಹದಿಂದಾಗಿ ಹಿಂದೂಸ್ತಾನಿ ಶೈಲಿಯ ಸಂಗೀತ ಪರಂಪರೆ ಅವರ ರಾಜ್ಯ ಸುಸ್ಥಿಯಲ್ಲಿ ಇರುವವರೆಗೆ ಮುಂದುವರೆದಿದ್ದು ಅದು ಅಳಿದ ನಂತರ ರಾಜ್ಯ ಮರಾಠರ ವಶವಾಯಿತು. ಇಲ್ಲಿನ ಸಂಗೀತ ಕಲಾವಿದರೂ ಸಹಿತ ಬೇರೆ ಪ್ರದೇಶಗಳಿಗೆ ಚದುರಿ ಹೋಗಿರಬಹುದು.

ಆಧುನಿಕ ಕಾಲ :

ಈ ಶತಮಾನದ ಮೊದಲ ಭಾಗದಿಂದ ಜಿಲ್ಲೆಯ ಆಧುನಿಕ ಸಂಗೀತದ ಸ್ಥಿತಿಯನ್ನು ಗಮನಿಸಬಹುದು. ಡಿ.ಆರ್. ಪರ್ವತೀಕರ ಸ್ವಾಮಿಯವರು ೧೯೧೬ ರಲ್ಲಿ ಹೈದರಬಾದಿನಲ್ಲಿ ಜನಿಸಿದರಾದರೂ ತಂದೆಯವರಾದ ಸಿತಾರವಾದಕ ರಾಮರಾವ್ ಪರ್ವತೀಕರ ಅವರು ಗುಳೇದಗುಡ್ಡದಲ್ಲಿದ್ದರು. ಕೆಲಕಾಲ ಇವರು ವಿಜಾಪುರ ಜಿಲ್ಲೆಯನ್ನು ತಮ್ಮ ಸಂಗೀತದ ನೆಲೆಯನ್ನಾಗಿ ಮಾಡಿಕೊಂಡಿದ್ದರು. ಪದವೀಧರರು (ಬಿ.ಎಸ್.ಸಿ.) ಆಗಿದ್ದ ಡಿ. ಆರ್. ಪರ್ವತೀಕರಸ್ವಾಮಿ ಅವರು ರುದ್ರವೀಣೆ, ಕ್ಲಾರಿಯೋನೆಟ್ ಹಾಗೂ ಸಿತಾರ್ ವಾದಕರಾಗಿದ್ದಲ್ಲದೆ ಅವರಿಗೆ ಗಾಯನದಲ್ಲೂ ಪರಿಶ್ರಮವಿತ್ತು. ಪರ್ವತೀಕರ ಅವರೇ ದತ್ತಾತ್ರೇಯ ವೀಣೆಯೊಂದನ್ನು ರೂಪಿಸಿದ್ದು ಅದನ್ನು ವಿಶೇಷವಾಗಿ ಪ್ರಚುರ ಪಡಿಸಿದ್ದರು. ತಮ್ಮ ಹದಿನೇಳನೇ ವಯಸ್ಸಿನಿಂದಲೇ ಕಛೇರಿಗಳನ್ನು ನೀಡುತ್ತಿದ್ದು ಭಾರತಾದ್ಯಂತ ಕಾರ್ಯಕ್ರಮ ನೀಡಿದ್ದಾರೆ. ೧೯೫೦ ರಿಂದ ಆಕಾಶವಾಣಿ ನಿಲಯ ಕಲಾವಿದರಾಗಿದ್ದು ನಂತರ ದೂರದರ್ಶನದಲ್ಲೂ ಕಾರ್ಯಕ್ರಮಗಳನ್ನು ನೀಡಿದ್ದರು. ಇವರ ಹಾಡುಗಾರಿಕೆ ಧ್ವನಿ ಮುದ್ರಣ ರೂಪದಲ್ಲೂ ಹೊರಬಂದಿದೆ*. ಮೂಲಧಾರ ಸಂಗೀತ ಶಿಕ್ಷಣ, ನಾದಸುಧಾ, ರಾಗಸುಧಾ ಇತ್ಯಾದಿ ಹಲವಾರು ಸಂಗೀತ ಕುರಿತು ಪುಸ್ತಕಗಳನ್ನು ರಚಿಸಿದ್ದಾರೆ. ಪರ್ವತೀಕರ ಅವರು ವೃದ್ಧಾಪ್ಯದಲ್ಲಿ ಬೆಂಗಳೂರಿನಲ್ಲಿ ನೆಲೆಸಿದ್ದು ಅವರ ನಿಧನಾನಂತರ ಅವರ ಸ್ಮರಣಾರ್ಥ ಸಂಗೀತ ಕಛೇರಿಗಳು ಆಗಾಗ್ಗೆ ನಡೆಯುತ್ತಿವೆ.

ಕಮಲಾಬಾಯಿ ತಾಳಿಕೋಟೆ ಅವರು ವಿಜಾಪುರದಲ್ಲಿರುವ ಹಿರಿಯ ಸಂಗೀತಗಾರ್ತಿ ಮೊದಲಿಗೆ ರಂಗಭೂಮಿಯಲ್ಲಿದ್ದವರು ಶಾಸ್ತ್ರೀಯ ಸಂಗೀತದಲ್ಲಿ ಪದವಿ ಪಡೆದಿದ್ದಾರೆ. ಬೆಳಗಾವಿಯ ರಾಮಕೃಷ್ಣ ವಜೆ ಇವರ ಗುರುಗಳು ಸೊಲ್ಲಾಪುರದ ದಿನಕರರಾವ್ ಪಾಠಕ್ ಅವರಲ್ಲೂ ಕಲಿತಿದ್ದಾರೆ. ಗ್ವಾಲಿಯರ್ ಘರಾನದಲ್ಲಿ ಪರಿಶ್ರಮವಿರುವ ಇವರು ಪುಣೆ, ಮುಂಬಯಿ, ಔರಂಗಾಬಾದ ಮುಂತಾದ ಕಡೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಇವರ ಮುಧುರ ಗಾಯನಕ್ಕೆ ಪ್ರಶಸ್ತಿ ಬಂದಿದೆ. ಶಿಷ್ಯ ವರ್ಗದವರಲ್ಲಿ ಮಾಣಿಕ್ಯ ವರ್ಮ, ಲತಾ ಜಾಗೀರ್ದಾರ, ಅವರುಗಳು ಕಛೇರಿ ಸಹ ನೀಡುತ್ತಿದ್ದಾರೆ. ಉಳಿದಂತೆ ಪ್ರಸ್ತುತ ಹತ್ತು ಮಂದಿ ವಿದ್ಯಾರ್ಥಿಗಳಿದ್ದರು.

ಶಾಂತಾಚಲ್ಲ ಅವರು ಇನ್ನೊಬ್ಬ ವಯೋವೃದ್ಧ ಸಂಗೀತಗಾರ್ತಿ, ಭಜನಾ ಮಂಡಳಿಯೊಂದನ್ನು ಸ್ಥಾಪಿಸಿ ಆ ಮೂಲಕ ಸಾಮಾಜಿಕ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾರೆ. ಬಡಕಲಾವಿದರ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ. ಜಿಲ್ಲೆಯ ಹಿರಿಯ ಕಲಾವಿದರಲ್ಲಿ ಬಾಪು. ಮ. ಥೋರಾತ್. ಹಲವಾರು ಆಸಕ್ತರಿಗೆ ಸಂಗೀತಾಭ್ಯಾಸ ನೀಡಿದ್ದಾರೆ ವಿಜಾಪುರದಲ್ಲಿ ಭೋಜರಾಜ ಬೀಳಗಿ ಅವರಿಂದ ಸ್ಥಾಪಿತವಾದ 'ಸುರಸಿಂಗಾರ' ಸಂಸ್ಥೆಯ ಸಂಗೀತ ಕಾರ್ಯಕ್ರಮದಲ್ಲಿ ಪ್ರಥಮ ಸಂಗೀತಗಾರರಾಗಿದ್ದು. ಖ್ಯಾತ ಹಿನ್ನೆಲೆಗಾಯಕಿ ಮತ್ತು ನಟಿ ಅಮೀರ್ ಜಾನ್ ಅವರ ಮೊಮ್ಮಗಳಾದ ಮಾಲಾಬಾಯಿ ಬೀಳಗಿ[೧೯೫೮] ಅವರು ಶ್ರೀ ರಂಗಾಚಾರ್ಯ ಹಾಗೂ ಶ್ರೀನಿವಾಸಚಾರ್ಯ ಅವರಲ್ಲಿ ಸಂಗೀತ ಕಲಿತ್ತಿದ್ದಾರೆ ಆಕಾಶವಾಣಿ ಹಾಗೂ ದೂರದರ್ಶನಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಇವರಿಗೆ ರಾಜ್ಯ ಪ್ರಶಸ್ತಿಯೂ ಸೇರಿದಂತೆ ಹಲವಾರು ಗೌರವಗಳು ದೊರೆತಿವೆ. ಎಸ್. ಡಿ. ನಿಡಗುಂದಿ ಅವರ ಕೆಲವು ಭಾವ ಗೀತೆಗಳನ್ನು ಹಿಂದೆ ಮುಂಬಯಿಯ ಎಚ್. ಎಂ. ವಿ. ಅವರು ಧ್ವನಿ ಮುದ್ರಣ ಮಾಡಿ ರೆಕಾರ್ಡ ರೂಪದಲ್ಲಿ ಹೊರತಂದಿದ್ದು. ಅವು ಜನಪ್ರಿಯವಾಗಿದ್ದವು, ನಿಡಗುಂದಿಯವರು ಇಂದೂ ಆಸಕ್ತರಿಗೆ ಸಂಗೀತ ಶಿಕ್ಷಣ ನೀಡುತ್ತಿದ್ದಾರೆ. ಭೀಮರಾವ್ ಬುವಾ ನಿಡಗುಂದಿ ಅವರು ಗರುಡ ಸದಾ ಶಿವರಾಯರ ಕಂಪನಿಯಲ್ಲಿದ್ದು ನಂತರ ಲಕ್ಷ್ಮಣ ಸಿಂಗರಲ್ಲಿ ಹತ್ತಾರು ವರ್ಷ ಸಂಗೀತಾಭ್ಯಾಸ ಮಾಡಿ ತಾವು ಕಲಿತಿದ್ದನ್ನು ವಿಧ್ಯಾರ್ಥಿಗಳಿಗೆ ದಾನ ಮಾಡಿದವರು, ಆಕಾಶವಾಣಿ ಕಲಾವಿದರೂ ಆಗಿದ್ದರು. ಇವರ ಶಿಷ್ಯರಾದ ಎಸ್. ಟಿ. ಅಂಕಲಿಕರ್ ಅವರೂ ಸಂಗೀತದಲ್ಲಿ ಸಾಕಷ್ಟು ಪರಿಶ್ರಮ ಹೊಂದಿದ್ದಾರೆ ಅಬ್ದುಲ್ ರಜಾಕ್ ಮೊಲಾ ಸಾಹೇಬ ಅವರು ತಬಲಾ ವಾದಕರಿದ್ದು ಅನೇಕ ಪ್ರಸಿದ್ಧರಿಗೆ ಪಕ್ಕವಾದ್ಯ ನುಡಿಸಿದ್ದಾರೆ, ಸಿದ್ದರಾಮ ಕೊರವಾರ

ಅವರು ಗದಗಿನ ಪುಟ್ಟರಾಜಗವಾಯಿ ಅವರ ಬಳಿ ಕಲಿತು ಮಧ್ಯ ಪ್ರದೇಶದ ಆಕಾಶವಾಣಿಯಲ್ಲಿ ನೌಕರಿಗೆ ಸೇರಿದ್ದು, ಭೂಪಾಲ ಆಕಾಶವಾಣಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಸಧ್ಯ ವಿಜಾಪುರದಲ್ಲಿ ಗುರು ಸಿದ್ದೇಶ್ವರ ಸಂಗೀತ ಶಾಲೆ ನಡೆಸುತ್ತಿದ್ದಾರೆ. ಅಪ್ರಚಲಿತವಾದ ಹಲವಾರು ರಾಗಗಳನ್ನು ಪ್ರಚಲಿತಗೊಳಿಸಿದ್ದಾರಲ್ಲದೆ ಹಿಂದಿಯಲ್ಲಿ ಚೀಜುಗಳನ್ನು ರಚಿಸಿದ್ದಾರೆ. ಬಿ.ಎಲ್.ಡಿ.ಇ. ಫ್ರೌಢ ಶಾಲೆಯಲ್ಲಿ ಸಂಗೀತ ಅಧ್ಯಾಪಕರಾಗಿರುವ ಬಸವರಾಜ ಹಿರೇಮಠ, ಅವರು ಆಕಾಶವಾಣಿ ಕಲಾವಿದರೂ ಆಗಿದ್ದಾರೆ. ಭೀಮೇಶಪ್ಪ. ಮಲ್ಲಪ್ಪ. ಬ್ಯಾಲಾಳ ಅವರು ನಿಡಗುಂದಿ ಬುವಾ, ಅವರ ಶಿಷ್ಯರು ನಾಟಕಗಳಲ್ಲಿ ಶಾಸ್ತ್ರೀಯ ಸಂಗೀತಗಾರರಾಗಿದ್ದರು. ಚನ್ನಪ್ಪ ಆರ್. ಬನ್ನೂರ್ ಅವರು ಪುಟ್ಟರಾಜ ಗವಾಯಿ ಅವರ ಬಳಿ ಕಲಿತು ವಿಜಾಪುರದಲ್ಲಿ ಗುರು ಪಂಚಾಕ್ಷರ ಸಂಗೀತ ಪಾಠಶಾಲೆ ಸ್ಥಾಪಿಸಿ ಅನೇಕ ಕಲಾವಿದರನ್ನು ರೂಪಸಿದ್ದಾರೆ. ನಾಡಿನ ಅನೇಕ ಕಡೆಗಳಲ್ಲಿ ಇವರ ಕಾರ್ಯಕ್ರಮಗಳು ಜರುಗಿವೆ.

ಅಮೀರಜಾನ್ ಕರ್ನಾಟಕಿ (೧೯೧೧-೬೫) ಅವರು ಅಪರೂಪದ ಪ್ರತಿಭಾನ್ವಿತ ಕಲಾವಿದೆ. ಚಿಕ್ಕಂದಿನಲ್ಲೇ ಮುಂಬಯಿಗೆ ಹೋಗಿದ್ದು ಎಚ್. ಎಂ.ವಿ. ಅವರಿಂದ ಇವರ ಸಂಗೀತಗಳ ಧ್ವನಿ ಮುದ್ರಣ ರೆಕಾರ್ಡಗಳು ಹೊರಬಂದವು. ಹಿಂದಿ ಚಿತ್ರ ರಂಗಕ್ಕಾಗಿ ೧೩೫ ಚಿತ್ರಗಳಲ್ಲಿ ಸುಮಾರು ೪೦೦ ಹಾಡುಗಳನ್ನು ಹಾಡಿದ ಕೀರ್ತಿ ಇವರದು. ಇವರು ನಾಟಕ ಸಿನಿಮಾಗಳ ಅಭಿನಯದಲ್ಲಿಯೂ ಅಷ್ಟೇ ಯಶಸ್ವಿಯಾಗಿ ಜನಪ್ರಿಯರೆನಿಸಿದ್ದರು. ತಿಕೋಟದ ವಿಷ್ಣುಪಂತ ಛತ್ರೆ ಅವರು ಸಂಗೀತಾಭ್ಯಾಸಕ್ಕಗಿ ಗ್ವಾಲಿಯರ್‌ಗೆ ಹೋಗಿದ್ದು ಈ ಪದ್ದತಿಯ ಘರಾನದಲ್ಲಿ ಪ್ರಥಮರೆನಿಸಿಕೊಂಡರು.

ಹೀಗೆ ಬಿಜಾಪುರ ಜಿಲ್ಲೆಯ ಸಾಂಸ್ಕೃತಿಕ ಪರಿಸರವು ಚಿತ್ರಕಲೆ, ಸಂಗೀತಕಲೆ, ಲಲಿತಕಲೆಗಳಿಗೆ ಪ್ರೋತ್ಸಾಹ ನೀಡುತ್ತಾ ಅವು ಶ್ರೇಷ್ಠವಾಗಿ ಮತ್ತು ವೈವಿಧ್ಯಮಯವಾಗಿ ಬೆಳವಣಿಗೆ ಹೊಂದಿರುವುದು ಕಂಡುಬರುತ್ತದೆ. ಈ ಪ್ರದೇಶದಲ್ಲಿ ಹಿಂದೂ ಶೈಲಿಯ ವಾಸ್ತು ಶಿಲ್ಪ ರಚನೆಯು ಪ್ರಖ್ಯಾತಿಯನ್ನು ಪಡೆದಂತೆ, ಮುಸ್ಲಿಮ ಪಂಥದ ಇಂಡೋ ಸಾರ್ಸೆನಿಕ ಪದ್ಧತಿಯ ಕಟ್ಟಡಗಳು ಸಹಿತ ಮನಸೂರೆಗೊಳ್ಳುವಂತೆ ರಚನೆಗೊಂಡಿವೆ. ಸಂಗೀತ ಕ್ಷೇತ್ರದಲ್ಲಿ ಈ ಭಾಗದ ಹಿಂದೂ ಮತ್ತು ಮುಸ್ಲಿಮ್ ಅರಸರು ವಿಶಿಷ್ಟ ಕೊಡುಗೆ ನೀಡಿದ್ದಾರೆ. ಆದಿಲ್‌ಶಾಹಿಗಳು ಸಂಗೀತಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದಲ್ಲದೆ, ಕೆಲವು ಸುಲ್ತಾನರು ಸ್ವತಹ ಸಂಗೀತಗಾರರಾಗಿದ್ದರು. ಅಲ್ಲದೆ ಸಂಗೀತ ಮತ್ತು ಚಿತ್ರಕಲಾ ಕ್ಷೇತ್ರಗಳನ್ನು ಸಂಗಮಗೊಳಿಸುವ ರಾಗಮಾಲಾ ಚಿತ್ರಕಲಾ ಕೃತಿಗಳು ಈ ಪ್ರದೇಶದಲ್ಲಿ ರಚನೆಯಾಗಿರುವುದು ಒಂದು ಮಹತ್ವದ


ಗೋಲಗುಂಬಜ


ಪಸಾರಿ ಕಮಾನ


ಸಾತ ಮಂಜಿಲ


ಆದಿಲಶಾಹಿ ಪೂರ್ವದ ಹಿಂದು ಅವಶೇಷಗಳು


ಇಬ್ರಾಹಿಂ ರೋಜಾ


ಗಗನ ಮಹಲ



ಸಂಗೀತ ಮಹಲ ನವರಸಪುರ



ಅಲೀ ರೋಜಾ - ಬಾರಾಕಮಾನ



ವಸ್ತು ಸಂಗ್ರಹಾಲಯ



ಆನಂದ ಮಹಲ




ಅಸರ ಮಹಲ



ಮುಲ್ಕ ಮೈದಾನ ತೋಫು



ಮಲಿಕಾ ಜಹಾನ ಮಸೀದಿ



ಅಂಡೂ ಮಸೀದಿ



ಮುಬಾರಕಖಾನ ಮಹಲ



ತಾಜ ಬಾವಡಿ


ಕರೀಮುದ್ದೀನ ಮಸೀದಿ


ಜುಮ್ಮಾ ಮಸೀದಿ


ಕೋಟೆ


ಹೈದರ ಬುರುಜ-ಉಪಲಿ ಬುರುಜ


ಮೆಹತರ ಮಹಲ


ಜಲಮಂಜಿಲ್

ಸಂಗತಿಯಾಗಿದೆ. ಹೀಗೆ ಸಂಸ್ಕೃತಿ ಮತ್ತು ಲಲಿತ ಕಲೆಗಳಿಗೆ ಈ ಪ್ರದೇಶವು ವಿಶಿಷ್ಟ ಕೊಡುಗೆ ನೀಡಿರುವುದನ್ನು ಗಮನಿಸಬಹುದಾಗಿದೆ.

♣♣♣♣♣

ಅಧ್ಯಾಯ : ಮೂರು

ವಿಜಾಪುರ ಜಿಲ್ಲೆಯ ಭಿತ್ತಿಚಿತ್ರಕಲೆ ಮತ್ತು ಹಸ್ತಪ್ರತಿ ಚಿತ್ರಕಲೆ

ವಿಜಾಪುರ ಜಿಲ್ಲೆಯು ಪ್ರಾಚೀನ ಭಿತ್ತಿ ಚಿತ್ರಕಲೆ ಮತ್ತು ಹಸ್ತಪ್ರತಿ ಚಿತ್ರಕಲೆಗಳನ್ನು ಒಳಗೊಂಡ ಶ್ರೀಮಂತ ಪ್ರದೇಶವಾಗಿದೆ ಆದಿಲ್ ಶಾಹಿ ದೊರೆಗಳು ವಿಜಾಪುರ ಪ್ರದೇಶದಲ್ಲಿ ಭಿತ್ತಿ ಚಿತ್ರಕಲೆ ಮತ್ತು ಹಸ್ತ ಪ್ರತಿ ಚಿತ್ರಕಲೆಗಳನ್ನು ವೈವಿಧ್ಯಮಯವಾಗಿ ರಚನೆ ಮಾಡಿದ್ದಾರೆ. ಭಿತ್ತಿ ಚಿತ್ರಗಳು ಈ ಜಿಲ್ಲೆಯ ಅನೇಕ ಕಡೆಗಳಲ್ಲಿ ಕಂಡು ಬಂದಿದ್ದು ಹಸ್ತ ಪ್ರತಿ ಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ರಚನೆಯಾಗಿವೆ. ಭಿತ್ತಿ ಚಿತ್ರಗಳು ವಿಜಾಪುರದ ಅಸರ ಮಹಲ್, ಜಾಮಿಯಾ ಮಸೀದಿ, ಸಿ. ಎಸ್. ಐ. ಚರ್ಚ ಮತ್ತು ಸಮೀಪದ ಕುಮಟಗಿ ಎಂಬಲ್ಲಿನ ಬೇಸಿಗೆ ಅರಮನೆಯಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಅಸರ ಮಹಲ್ ಮತ್ತು ಕುಮಟಗಿಯಲ್ಲಿ ವ್ಯಕ್ತಿ ಚಿತ್ರಗಳಿದ್ದರೆ. ಉಳಿದ ಸ್ಥಳಗಲ್ಲಿ ಕೇವಲ ಹೂಬಳ್ಳಿಯ ವಿನ್ಯಾಸಗಳು ಮತ್ತು ಜಾಮತಿಕ ನಕ್ಷಾ ಮಾದರಿಗಳು ಕಂಡುಬರುತ್ತವೆ. ಈ ಪ್ರಕಾರ ವಿಜಾಪುರ ಜಿಲ್ಲೆಯಲ್ಲಿ ಕಂಡುಬರುವ ಭಿತ್ತಿ ಚಿತ್ರಕಲೆ ಮತ್ತು ಹಸ್ತ ಪ್ರತಿ ಚಿತ್ರಕಲೆಗಳನ್ನು ಒಂದೊಂದಾಗಿ ಈ ಕೆಳಗಿನಂತೆ ವಿಶ್ಲೇಷಿಸಬಹುದಾಗಿದೆ.

ಭಿತ್ತಿ ಚಿತ್ರಕಲೆ :

ವಿಜಾಪುರ ಪರಿಸರದಲ್ಲಿ ಈಗಾಗಲೇ ಹೇಳಿರುವಂತೆ ಅಸರ್ ಮಹಲ್ ಸಿ. ಎಸ್. ಐ. ಚರ್ಚ, ಜಾಮಿಯ ಮಸೀದಿ, ಹಾಗೂ ವಿಜಾಪುರಕ್ಕೆ ೩೦ ಕಿಲೋ ಮೀಟರ ದೂರ ವಿರುವ ಕುಮಟಗಿ ಎಂಬಲ್ಲಿನ ಅರಮನೆಯಲ್ಲಿ ಭಿತ್ತಿ ಚಿತ್ರಗಳಿದ್ದು ಅವುಗಳನ್ನು ಈ ಕೆಳಗಿನಂತೆ ವಿವೇಚಿಸಲಾಗಿದೆ.

ಅಸರ್ ಮಹಲ್ ವಿಜಾಪುರ:

ವಿಜಾಪುರ ನಗರದಲ್ಲಿರುವ ಅಸರ್ ಮಹಲ್ ಕಟ್ಟಡವು ಸುಲ್ತಾನ್ ಮಹ್ಮದ್ ಆದಿಲ್‌ಷಾನಿಂದ ಕ್ರಿ.ಶ. ೧೬೪೬ ರಲ್ಲಿ ನಿರ್ಮಿಸಿದೆ, ಅದರಲ್ಲಿ ಭಿತ್ತಿ ಚಿತ್ರಗಳನ್ನು ಬರೆಸಲಾಗಿದೆ. ಮೊದಲಿಗೆ ಇದು ಸುಲ್ತಾನರ ದರ್ಬಾರ್ ಹಾಲ್ ಆಗಿದ್ದು, ಮೆಕ್ಕಾದಿಂದ ಪ್ರವಾದಿ ಮಹಮ್ಮದರ ಕೂದಲನ್ನು ಇಲ್ಲಿ ತಂದಿರಿಸಿದ ನಂತರ ಇದೊಂದು ಪವಿತ್ರ ಸ್ಥಳವೆಂದು ಪರಿಭಾವಿಸಲಾಯಿತು. ಅಸರ್ ಮಹಲ್ ಎರಡು ಅಂತಸ್ತುಗಳುಳ್ಳ ವಿಶಾಲವಾದ ಕಟ್ಟವಾಗಿದ್ದು ಮೇಲಿನ ಮಹಡಿಯಲ್ಲಿನ ಎರಡು ಕೋಣೆಗಳಲ್ಲಿ ಮತ್ತು ಹಜಾರದಲ್ಲಿ ಭಿತ್ತಿ ಚಿತ್ರಗಳು ರಚನೆಯಾಗಿವೆ. ಇಲ್ಲಿನ ಭಿತ್ತಿ ಚಿತ್ರಗಳನ್ನು ಈಗಾಗಲೇ ಕೆಳಗಿನಂತೆ ಮೂರು ರೀತಿಯಲ್ಲಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ [೧].

೧.ಗೋಡೆಯ ಮೇಲ್ಭಾಗದ ಚಿತ್ರಗಳು.

೨.ಗೋಡೆಯ ಕೆಳಭಾಗದ ಚಿತ್ರಗಳು.

೩.ಮಾಡುಗಳಲ್ಲಿನ ಚಿತ್ರಗಳು.

---

೧. ಅಸರ್ ಮಹಲ್ ಭಿತ್ತಿಚಿತ್ರಗಳ ಹೆಚ್ಚಿನ ವಿವರಗಳಿಗೆ ನೋಡಿರಿ : ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಪುಟ:೩೧೫ ರಿಂದ ೩೪೦.

೧. ಗೋಡೆಯ ಮೇಲ್ಭಾಗದ ಚಿತ್ರಗಳು :

ಕೋಣೆಗಳ ನಾಲ್ಕೂ ಬದಿಯ ಗೋಡೆಗಳಲ್ಲಿಯೂ ನೆಲದಿಂದ ಸುಮಾರು ೪ ಫೂಟುಗಳ ಅಂತರವನ್ನು ಬಿಟ್ಟು ಮೇಲ್ಭಾಗದ ಇಡೀ ಗೋಡೆಯನ್ನು ಒಂದೇ ಹಿನ್ನೆಲೆ ಬಣ್ಣದಿಂದ ಲೇಪನಮಾಡಿ ಹೂ, ಎಲೆ, ಹಣ್ಣು ಕಾಯಿಗಳಿಂದ ತುಂಬಿದ ಬಳ್ಳಿಯ ನಕ್ಷೆಯನ್ನು ರಚನೆ ಮಾಡಲಾಗಿದೆ. ಈ ಬಳ್ಳಿಯು ನೀಲಿ ವರ್ಣದಲ್ಲಿದೆ. ಅಲ್ಪ ಸ್ವಲ್ಪ ಭಿನ್ನತೆಯಿದ್ದರೂ ಎಲ್ಲ ಬದಿಯ ಗೋಡೆಗಳಲ್ಲೂ ಒಂದೇ ಶೈಲಿಯ ಬಳ್ಳಿಯ ಚಿತ್ರಣವೇ ಇದೆ. ಹೆಚ್ಚಿನ ವೈವಿಧ್ಯತೆ ಕಂಡುಬರುವುದಿಲ್ಲ.

೨. ಗೋಡೆಯ ಕೆಳಭಾಗದ ಚಿತ್ರಗಳು :

ಇಲ್ಲಿನ ಪ್ರತಿಯೊಂದು ಗೋಡೆಯಲ್ಲಿಯೂ ಕೆಳಭಾಗದಲ್ಲಿ ಸುಮಾರು ೪ ಫೂಟು ಸ್ಥಳ ಬಿಟ್ಟು ಮೇಲೆ ಹೂಬಳ್ಳಿ ನಕ್ಷೆ ರಚಿಸಿದ್ದಾರೆ. ಕೆಳಭಾಗದಲ್ಲಿ ಸುಮಾರು ೪ ಫೂಟು ಸ್ಥಳದಲ್ಲಿ ಸಾಲಾಗಿ ವ್ಯಕ್ತಿ ಚಿತ್ರಗಳನ್ನು ರಚಿಸಲಾಗಿದೆ. ಈ ವ್ಯಕ್ತಿ ಚಿತ್ರಗಳು ಕೆಳಭಾಗದಲ್ಲಿದ್ದು ಸಹಜವಾಗಿ ಕೈಗೆ ಸಿಗುವುದರಿಂದ ಅತ್ಯಂತ ಹೆಚ್ಚಿನ ಹಾನಿ ಸಂಭವಿಸಿದೆ. ಚಿತ್ರಗಳಿಗೆ ಬಂಗಾರದ ವರ್ಣ ಬಳಸಿರುವುದರಿಂದ ಅವುಗಳನ್ನು ಅಳಿಸುವ ಪ್ರಯತ್ನ ಇನ್ನೂ ತೀವ್ರವಾಗಿದೆ. ಈ ಚಿತ್ರಗಳನ್ನು ಗುರುತಿಸಲು ಅಗದಷ್ಟು ಹಾನಿಗೊಳಗಾಗಿದ್ದು ಒಂದೆರಡು ಅಸ್ಪಷ್ಟ ಚಿತ್ರಗಳು ಮಾತ್ರ ಉಳಿದುಕೊಂಡಿವೆ. ಅವುಗಳನ್ನು ಹೀಗೆ ವಿವರಿಸಬಹುದು. ಇಲ್ಲಿನ ಒಂದು ಚಿತ್ರವು ಮಹಮ್ಮದ್ ಆದಿಲ್‌ಷಾ ಮತ್ತು ಅವನ ಪ್ರೇಯಸಿ ರಂಭಾ ಎಂಬುವವಳದಾಗಿದೆ ಚಿತ್ರದ ಮುಖವನ್ನೆಲ್ಲ ಕೆರೆದು ತೆಗೆಯಲಾಗಿದೆ. ಅದರಂತೆಯೇ ಅವಳ ಪಕ್ಕದಲ್ಲಿರುವ ಮಹಮ್ಮದನ ಚಿತ್ರದ ಮುಖವನ್ನು ಕೆರೆದಿದ್ದಾರಲ್ಲದೇ ಅಸರ್ ಮಹಲಿನಲ್ಲಿರುವ ಎಲ್ಲ ವ್ಯಕ್ತಿ ಚಿತ್ರಗಳ ಮುಖಗಳನ್ನು ಅಳಿಸಲಾಗಿದೆ. ಆದರೆ ಹೂ ಬಳ್ಳಿಯ ಚಿತ್ರಗಳಿಗಾಗಲಿ ಅಥವಾ ವ್ಯಕ್ತಿಗಳ ಮುಖವನ್ನುಳಿದ ಇನ್ನಾವುದೇ ಭಾಗಕ್ಕಾಲಿ ಯಾವುದೇ ಹಾನಿಯಾಗಿಲ್ಲ ಇಲ್ಲಿನ ಇನ್ನೊಂದು ಚಿತ್ರದಲ್ಲಿ ಮಗುವನ್ನು ತೂಗುತ್ತಿರುವ, ಮತ್ತು ನಾಮಕರಣದಲ್ಲಿ ತೊಡಗಿರುವ ಮಹಿಳೆಯರ ಚಿತ್ರವೊಂದಿದೆ. ಮಹಿಳೆಯರ ಬೆಲೆ ಬಾಳುವ ವಸ್ತ್ರಾಭರಣಗಳನ್ನು ಧರಿಸಿ ಉನ್ನತ ವರ್ಗಕ್ಕೆ ಸೇರಿದ ಸ್ತ್ರೀಯರಂತೆ ಕಾಣುತ್ತಾರೆ. ಮಗುವಿಗೆ ಕಾಲಲ್ಲಿ ಗೆಜ್ಜೆ, ಕೈಯಲ್ಲಿ ಕಂಕಣ ಮುಂತಾದ ಆಭರಣಗಳನ್ನು ಚಿತ್ರಿಸಲಾಗಿದೆ. ಬಟ್ಟೆಯ ನೀರಿಗೆಗಳು, ಚಿತ್ರದ ನೆರಳು ಬೆಳಕು ವಿಧಾನ ಒಟ್ಟು ಚಿತ್ರ ಶೈಲಿ ಗಮನಿಸಿದಾಗ ಯುರೋಪಿನ ಚಿತ್ರಕಾರರಿಂದ ರಚನೆಯಾಗಿರಬೇಕೆಂದು

ಹೇಳಬಹುದು ಕಾರಣ ಆ ಹೊತ್ತಿಗಾಗಲೇ ವಿಜಾಪುರ ಸುಲ್ತಾನರಿಗೆ ಗೋವಾ ಮೂಲಕ ಯೂರೋಪಿಯನ್ನರ ಸಂಪರ್ಕ ಹೆಚ್ಚಾಗಿ ದೊರೆಯುತ್ತಲಿತ್ತು.

ಇವುಗಳಲ್ಲದೇ ತೆಳುವಾದ ಪಾರದರ್ಶಕವೆನಿಸುವಂತಹ ಉಡುಪನ್ನು ಧರಿಸಿದ ವ್ಯಕ್ತಿಯೊಬ್ಬ ಕುಳಿತು ಏನೋ ಕೆಲಸದಲ್ಲಿ ಮಗ್ನನಾಗಿರುವಂತಿದೆ. ಇನ್ನಿಬ್ಬರು ವ್ಯಕ್ತಿಗಳು ಚಿಕ್ಕದಾದ ಅಸನ ಒಂದರ ಮೇಲೆ ಕುಳಿತಿದ್ದಾರೆ, ಮತ್ತೊಂದರಲ್ಲಿ ವ್ಯಕ್ತಿಯೋರ್ವ ಕೊಳಲನ್ನು ನುಡಿಸುತ್ತಿದ್ದಾನೆ. ಹೀಗೆ ವ್ಯಕ್ತಿ ಚಿತ್ರಗಳಲ್ಲಿ ಧಾರ್ಮಿಕ, ಲೌಕಿಕ, ಮತ್ತು ಐತಿಹಾಸಿಕ ಘಟನೆಗಳಿಗೆ ಸಂಬಂಧಪಟ್ಟಂತೆ ಚಿತ್ರಗಳಿರುವುದನ್ನು ಗಮನಿಸಬಹುದು. ಆದರೆ ಚಿತ್ರದ ಮುಖ ಅಂಗಾಂಗಳನ್ನು ಕರೆದು ತೆಗೆದಿದ್ದರಿಂದ ಯಾರು ಯಾವ ಕೆಲಸದಲ್ಲಿ ನಿರತರಾಗಿದ್ದಾರೆ, ಯಾವ ಚಿತ್ರ ಯಾವ ಘಟನೆಗೆ ಸಂಬಂಧಿಸಿದ್ದು ಎಂದು ತಿಳಿಯುವಲ್ಲಿ ತೊಂದರೆಯಾಗುತ್ತದೆ. ವ್ಯಕ್ತಿ ಚಿತ್ರಗಳು ಹೂಬಳ್ಳಿಯ ಅಲಂಕಾರಿಕ ಚಿತ್ರಗಳಲ್ಲದೇ ಅಲ್ಲಲ್ಲಿ ವಿವಿಧ ವರ್ಣ ನಮೂನೆಗಳನ್ನು ಸಂಯೋಜನೆಗೊಳಿಸಲಾಗಿದೆ. ಇಲ್ಲಿನ ಚಿತ್ರಗಳಲ್ಲಿ ನೀಲಿ ವರ್ಣವೇ ಅಧಿಕವಾಗಿ ಬಳಕೆಗೊಂಡಿದೆ. ಇಲ್ಲಿ ಬಳಕೆಗೊಂಡ ಮುಖ್ಯ ವರ್ಣಗಳೆಂದರೆ ನೀಲಿ, ಕೆಂಪು, ಹಳದಿ, ದೀಪದ ಕಪ್ಪು ಮುಖ್ಯವಾಗಿವೆ. ಈ ಚಿತ್ರಗಳು ಟೆಂಪರಾ ವಿಧಾನದಿಂದ ರಚಿಸಿದ್ದು. ದಪ್ಪನಾದ ಗಾರೆಯ ಭಿತ್ತಿಯ ಮೇಲೆ ಸುಣ್ಣದ ಹಿನ್ನೆಲೆ ಲೇಪನ ಬಳಿದು ಚಿತ್ರಿಸಲಾಗಿದೆ. ವ್ಯಕ್ತಿ ಚಿತ್ರಗಳಲ್ಲಿ ಯುರೋಪಿಯನ್ ಪ್ರಭಾವ ಗುರುತಿಸಿದರೂ ಸೂಕ್ಷ್ಮವಾಗಿ ಗಮನಿಸಿದಾಗ ಸ್ಥಳೀಯ ಕಿರುರೂಪ ಚಿತ್ರಗಳ ಲಕ್ಷಣಗಳನ್ನು ನೋಡಬಹುದಾಗಿದೆ. ಭಾರತೀಯ ಕಲಾವಿದರ ಕೃತಿಗಳಲ್ಲಿರುವ ಚಿತ್ರಗಳ ಅಂತರಿಕ ಅಭಿವ್ಯಕ್ತಿ ಚಿತ್ರಗಳನ್ನು ನೋಡಿದಾಗ ಉಂಟಾಗುವ ಭಾವನಾತ್ಮಕ ತಾದ್ಯಾತ್ಮತೆ, ಶಕ್ತಿಶಾಲಿ ಜೀವಂತ ರೇಖೆಗಳು, ನೈಜರೂಪವನ್ನು ಅಲ್ಲಗಳೆಯುವ ಪ್ರವೃತ್ತಿ ಮುಂತಾದ ಲಕ್ಷಣಗಳು ಅಸರ್ ಮಹಲ್ ಚಿತ್ರಗಳಲ್ಲಿ ಕಂಡುಬರುವುದಿಲ್ಲವಾದ ಕಾರಣ ವಿದೇಶಿ ಚಿತ್ರಗಾರನೊಬ್ಬ ಇವುಗಳನ್ನು ರಚಿಸಿರಬಹುದು.

೩. ಮಾಡುಗಳಲ್ಲಿನ ಚಿತ್ರಗಳು :

ಗೋಡೆಯಲ್ಲಿ ಅಲ್ಲಲ್ಲಿ ಇರುವ ಮಾಡುಗಳಲ್ಲಿ ಹೂ ಕುಂಡಗಳನ್ನು ರಚಿಸಲಾಗಿದೆ. ಇಲ್ಲಿನ ಚಿತ್ರಗಳಲ್ಲೇ ಇವು ಉತ್ತಮವೆನಿಸುತ್ತವೆ. ಪ್ರತಿಯೊಂದು ಮಾಡುಗಳಲ್ಲಿ ಭಿನ್ನ ಭಿನ್ನ ಶೈಲಿಯ ಹೂ ಕುಂಡಗಳನ್ನು ಚಿತ್ರಿಸಿದ್ದು ಈ ಕುಂಡಗಳು ಸುಳುವುಗಳು, ಜ್ಯಾಮಿತಿ ರೂಪಗಳಿಂದ ಅಲಂಕರಿಸಿವೆ. ಕುಂಡದಲ್ಲಿನ ಗಿಡಗಳಲ್ಲಿ ಎಲೆಗಳು, ವಿವಿಧ ಬಗೆಯ ಹೂಗಳು ತುಂಬಿಕೊಂಡಿದ್ದು ವರ್ಣ ಲೇಪನದಲ್ಲಿಯೂ ವೈವಿದ್ಯತೆ ಇದೆ. ಮಾಡುಗಳಲ್ಲಿನ ಚಿತ್ರಗಳಲ್ಲದೇ



ಅಸರ್ ಮಹಲ್ ಭಿತ್ತಿ ಚಿತ್ರ, ವಿಜಾಪೂರ



ಅಸರ್ ಮಹಲ್ ಭಿತ್ತಿ ಚಿತ್ರ, ವಿಜಾಪೂರ



ಅಸರ್ ಮಹಲ್ ಭಿತ್ತಿ ಚಿತ್ರ, ವಿಜಾಪೂರ



ಮಗುವಿನ ನಾಮಕರಣದ ಭಿತ್ತಿ ಚಿತ್ರ, ವಿಜಾಪೂರ



ಅಸರ್ ಮಹಲ್ ಭಿತ್ತಿ ಚಿತ್ರ, ವಿಜಾಪೂರ



ಅಸರ್ ಮಹಲ್ ಭಿತ್ತಿ ಚಿತ್ರ, ವಿಜಾಪೂರ

ಮಾಡುಗಳ ಅಂಚಿಗೆ ನಕ್ಷಾ ಚಿತ್ರಣವಿದೆ. ಮಾಡುಗಳ ಚಿತ್ರಣದಲ್ಲಿ ಹೂ ಕುಂಡಗಳಿಗೆ, ಅಂಚಿನ ನಕ್ಷೆಗಳಿಗೆ, ಕೆಲವು ಹೂಗಳಿಗೆ ಎಲೆಗಳಿಗೆ ಬಂಗಾರ ಮತ್ತು ಬೆಳ್ಳಿಯ ವರ್ಣಗಳನ್ನು ಬಳಸಲಾಗಿದೆ. ಗೋಡೆಯ ಮಧ್ಯಭಾಗದಲ್ಲಿನ ಮಾಡುಗಳಲ್ಲದೇ ಮೇಲ್ಛಾವಣಿಗೆ ಹೊಂದಿಕೊಂಡಿರುವ ಗೋಡೆಯ ಭಾಗದಲ್ಲಿ ಸಾಲಾಗಿ ಕಮಾನಿನಂತೆ ಮಾಡುಗಳನ್ನು ರಚಿಸಲಾಗಿದ್ದು, ಅಲ್ಲಿಯೂ ಹೂ ಕುಂಡುಗಳ ಚಿತ್ರ ರಚಿಸಲಾಗಿದೆ.

ಚಿತ್ರಗಳ ಪ್ರಮುಖ ಲಕ್ಷಣಗಳು:

- ಹೂಬಳ್ಳಿಯ ಚಿತ್ರಗಳಲ್ಲಿ ನೀಲಿವರ್ಣವನ್ನು ಅಧಿಕವಾಗಿ ಬಳಸಿದ್ದರೆ ವ್ಯಕ್ತಿ ಚಿತ್ರಗಳಲ್ಲಿ ಕೆಂಪು ವರ್ಣವನ್ನು ಹೆಚ್ಚಾಗಿ ಬಳಸಲಾಗಿದೆ.
- ಪ್ರತಿ ಗೋಡೆಯಲ್ಲಿ ನೆಲದಿಂದ ೪ ಅಥವಾ ೫ ಫೂಟು ಅಂತರದ ಒಳಗೆ ವ್ಯಕ್ತಿ ಚಿತ್ರಗಳನ್ನು ರಚಿಸಲಾಗಿದೆ.
- ವ್ಯಕ್ತಿ ಚಿತ್ರಗಳು ದಷ್ಟ ಪುಷ್ಟವಾದ ದುಂಡಾದ ಮೈ ಕಟ್ಟನ್ನು ಹೊಂದಿವೆಯಲ್ಲದೇ ಪಾರದರ್ಶಕವಾದ ವಿವಿಧ ನಕ್ಷೆಗಳಿಂದ ಕೂಡಿದ ಸುಂದರ ಉಡುಪುಗಳನ್ನು ರಚಿಸಲಾಗಿದೆ.
- ಹೂಗಿಡಗಳುಳ್ಳ ಕುಂಡಗಳನ್ನು ಮಾಡುಗಳಲ್ಲಿ ರಚಿಸಿ ಹೂ ಬಳ್ಳಿಯನ್ನು ಗೋಡೆಯ ಮೇಲೆ ರಚಿಸಲಾಗಿದೆ.

ಬೇಸಿಗೆ ಅರಮನೆ ಕುಮಟಗಿ :

ವಿಜಾಪುರ ನಗರದಿಂದ ಸುಮಾರು ೨೫ ಕಿ.ಮೀ ದೂರದಲ್ಲಿ ಪೂರ್ವಕ್ಕೆ ಸಿಂದಗಿ ಮಾರ್ಗದಲ್ಲಿರುವ ಕುಮಟಗಿಯು ಒಂದು ಸಣ್ಣಹಳ್ಳಿಯಾಗಿದೆ. ಈ ಸ್ಥಳವು ವಿಜಾಪುರ ಸುಲ್ತಾನರ ಬೇಸಿಗೆಯ ತಂಗುದಾಣವಾಗಿತ್ತಲ್ಲದೇ ಯುರೋಪಿಯನ್ ಗಣ್ಯ ವ್ಯಕ್ತಿಗಳು ರಾಜಧಾನಿಗೆ ಭೆಟ್ಟಿಕೊಟ್ಟಾಗ ಇಲ್ಲಯೇ ತಂಗುವ ವ್ಯವಸ್ಥೆ ಮಾಡಲಾಗುತ್ತಿತ್ತು. ಹಾಗಾಗಿ ಇಲ್ಲಿ ಸುಂದರ ಕೊಳಗಳು ಮಂಟಪಗಳು, ಭವನಗಳು, ಬುರುಜುಗಳು ಮುಂತಾದ ಕಟ್ಟಡಗಳನ್ನು ಕಟ್ಟಲಾಗಿತ್ತು. ಇವುಗಳಲ್ಲಿ ಕೆಲವು ಕಟ್ಟಡಗಳನ್ನು ವರ್ಣ ಚಿತ್ರಗಳಿಂದ ಅಲಂಕರಿಸಲಾಗಿದೆ. ೧೬ ನೇ ಶತಮಾನದಲ್ಲಿ ಇಬ್ರಾಹಿಂ ಆದಿಲ್ ಶಾಹನಿಂದ ರಚಿತವಾದ ಇಲ್ಲಿನ ಒಂದು ಕಮಾನುಗಳುಳ್ಳ ಮಹಲಿನಲ್ಲಿ ವರ್ಣ ಭಿತ್ತಿ ಚಿತ್ರಗಳು ಕಂಡುಬಂದಿವೆ.[೨] ಈ ಮಹಲು ಒಳಭಾಗದಲ್ಲಿ ಕಮಾನಿನಂತಿರುವ ಗೋಡೆಗಳನ್ನು ಹೊಂದಿದ್ದು, ಕಮಾನುಗಳ ಮೇಲೆಯೇ

೨. ಕುಮಟಗಿಯ ಭಿತ್ತಿಚಿತ್ರಗಳ ಹೆಚ್ಚಿನ ವಿವರಗಳಿಗೆ ನೋಡಿರಿ : ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಪುಟ– ೩೬೦ ರಿಂದ ೩೭೫.

ಮೇಲ್ಭಾವಣಿ ನಿರ್ಮಿಸಿದೆ. ಈ ಕಟ್ಟಡದ ಒಳಗಿನ ಕಮಾನು ಗೋಡೆಗಳಿಗೆಲ್ಲ ಮತ್ತು ಮೇಲ್ಭಾವಣಿಯ ಎಲ್ಲ ಭಾಗದಲ್ಲಿ ವರ್ಣ ಚಿತ್ರಗಳಿಂದ ಅಲಂಕರಿಸಲಾಗಿದೆ. ಒಳಭಾಗದ ಯಾವುದೇ ಚಿಕ್ಕ ಸ್ಥಳವನ್ನು ಬಿಡದೇ ವರ್ಣ ಚಿತ್ರಗಳಿಂದ ಅಲಂಕರಿಸಲಾಗಿದೆ. ಈ ಮಹಲಿನಲ್ಲಿ ಇಂದು ಎಲ್ಲ ಚಿತ್ರಗಳೂ ನಾಶವಾಗಿ ಕೇವಲ ಸಂತನೊಬ್ಬ ರಾಜನೊಡನೆ ವಿಚಾರ ವಿನಿಮಯ ನಡೆಸುತ್ತಿರುವ ಚಿತ್ರಮಾತ್ರ ಮಸುಕಾಗಿ ಉಳಿದೆ. ಇದು ಬಿಟ್ಟರೆ ಅಲ್ಲಲ್ಲಿ ಪ್ರಾಣಿ, ಪಕಕ್ಷಿಗಳು, ಹೂಬಳ್ಳಿ ಮತ್ತು ಅಲಂಕಾರಿಕ ನಕ್ಷೆಗಳು ಅಲ್ಪ ಸ್ವಲ್ಪ ಉಳಿದುಕೊಂಡಿವೆ. ಈ ಮಹಲು ಸಾರ್ಸೆನಿಕ್ ಪದ್ಧತಿಯಲ್ಲಿ ಕಟ್ಟಿದ ಕಟ್ಟಡವಾಗಿದ್ದು, ಪಕ್ಕದಲ್ಲಿ ನಿರ್ಮಿಸಿದ ಸರೋವರದಿಂದ ಕಾಲುವೆ ಮೂಲಕ ನೀರು ಹರಿದು ಬಂದು ಈ ಮಹಲಿನ ಸುತ್ತಲೂ ನಿರ್ಮಿಸಿರುವ ಅಳವಾದ ಕಾಲುವೆಯಲ್ಲಿ ನಿಲ್ಲುತ್ತದೆ. ಇದರಿಂದ ಗಾಳಿಯು ನೀರಿನ ಮುಖಾಂತರ ಬೀಸಿ, ಬೇಸಿಗೆಯಲ್ಲಿ ಸಹಜವಾಗಿ ಮಹಲಿನ ಒಳಗಿನ ವಾತಾವರಣ ತಂಪಾಗಿರುತ್ತದೆ. ಇಲ್ಲಿ ಉಳಿದು ಬಂದಿರುವ ಚಿತ್ರ ಒಂದರಲ್ಲಿ ಸುಲ್ತಾನನು ಯಾವುದೋ ವಿಷಯಕ್ಕಾಗಿ ಮುಸ್ಲಿಂ ಸಂತನ ಸಲಹೆಯನ್ನು ಕೇಳುತ್ತಿರುವಂತಿದೆ. ಸಂತನು ರಾಜನ ಸಮಸ್ಯೆಗೆ ಗ್ರಂಥ ನೋಡಿ ಏನೋ ಸಮಾಧಾನ ಹೇಳುತ್ತಿದ್ದಾನೆ. ಸುಲ್ತಾನನ ಹಿಂದುಗಡೆ ಚಿಕ್ಕ ಆಕೃತಿಯೊಂದು ಕಾಣುತ್ತಿದ್ದು ಅದು ಪರಿಚಾರಕನಾಗಿರಬಹುದು. ಇಡೀ ಚಿತ್ರದ ಹಿನ್ನೆಲೆಯಲ್ಲಿ ಹೂಬಳ್ಳಿಯನ್ನು ಚಿತ್ರಿಸಿದ್ದು, ಚಿಕ್ಕ ಚಿಕ್ಕ ಹೂಗಳು ನೈಜವಾಗಿ ಚಿತ್ರಣಗೊಂಡಿವೆ. ವರ್ಣ ವಿನ್ಯಾಸ ರಚನಾ ಶೈಲಿ ಸಂಪೂರ್ಣವಾಗಿ ಯುರೋಪ್ ಪ್ರಭಾವಕ್ಕೆ ಒಳಗಾದದ್ದು ಕಾಣುವುದು. ಈ ಚಿತ್ರದಲ್ಲಿ ನಸುಕೆಂದು, ಕಪ್ಪು ಬೂದುವರ್ಣಗಳ ಛಾಯೆ ಹೆಚ್ಚಾಗಿ ಕಂಡುಬರುತ್ತವೆ.

ಇನ್ನೊಂದು ಅಸ್ಪಷ್ಟವಾದ ಚಿತ್ರದಲ್ಲಿ ಕುದುರೆ ಮೇಲೆ ಕುಳಿತ ಸವಾರರು ಚಂಡಾಟದಲ್ಲಿ ನಿರತರಾಗಿದ್ದಾರೆ. ಸುತ್ತಲೂ ಹೂಬಳ್ಳಿಗಳು ವಿವಿಧ ಪಕ್ಷಿ ಸಂಕುಲಗಳು ನೆರೆದಿದೆ ಇದೊಂದು ಸುಂದರ ಹೊರಾಂಗಣವನ್ನು ಸೂಚಿಸುತ್ತಿದ್ದು, ಪೋಲೋ ಆಟಗಾರರು ಎಂದು,[೧] ಇದನ್ನು ಗುರುತಿಸಲಾಗಿದೆ.

ಮತ್ತೊಂದು ಚಿತ್ರದಲ್ಲಿ ರಾಜಕುಮಾರಿಯೊಬ್ಬಳು ಸುಂದರ ರೂಪಿನಿಂದ ಕಂಗೊಳಿಸುತ್ತಿದ್ದು, ಅವಳ ಹಿಂದೆ ಸಖಿಯೊಬ್ಬಳು ನಿಂತಿದ್ದಾಳೆ, ಚಿತ್ರದ ಹಿನ್ನೆಲೆಯಲ್ಲಿ ಹೂ

---

೧. ಶಿವರಾಮ ಕಾರಂತ : ಕರ್ನಾಟಕದ ಚಿತ್ರಕಲೆ : ಪುಟ- ೩೭.

ಬಿಟ್ಟ ಗಿಡ ಬಳ್ಳಿಗಳು ಚಿತ್ರಿಸಲಾಗಿದೆ. ಪಕ್ಕದಲ್ಲಿಯೇ ಎರಡು ಜಿಂಕೆಗಳು ಚಿಗುರೆಲೆ ತಿನ್ನುತ್ತಿವೆ. ಆದಿಲ್ ಶಾಹಿ ದರ್ಬಾರಿಗೆ ಬರತೊಡಗಿದ ಐರೋಪ್ಯ ಚಿತ್ರಕಾರನಿಂದ ಈ ಚಿತ್ರವನ್ನು ಬರೆಸಿರಬಹುದೆಂದು ತರ್ಕಿಸಿದ್ದಾರೆ.[೯]

ಈ ಮಹಲಿನ ಒಂದು ಕಮಾನು ಗೋಡೆಯಲ್ಲಿ ಪೋರ್ಚುಗೀಸ್ ಪ್ರವಾಸಿಯೊಬ್ಬನ ಚಿತ್ರವಿದ್ದು ಅದು ಸಾಕಷ್ಟು ಹಾನಿಗೊಳಗಾಗಿದೆ. ಅಲ್ಲಲ್ಲಿ ವರ್ಣದ ತುಣುಕುಗಳು ಮಾತ್ರ ಉಳಿದಿವೆ. ಇವುಗಳಲ್ಲದೇ ಅರ್ಧ ವೃತ್ತಾಕಾರದ ಕಮಾನಿನ ಮೇಲ್ಭಾಗದಲ್ಲಿ ಹಲವಾರು ಪ್ರಾಣಿಗಳು ಪಕ್ಷಿಗಳು ಆನೆ, ಕುದರೆ, ಸವಾರರು, ನೃತ್ಯದಲ್ಲಿ ನಿರತ ಸ್ತ್ರೀಯರು ವಾದ್ಯಗಾರರು, ವೈವಿಧ್ಯಮಯ ಅಲಂಕಾರಿಕ ನಕ್ಷೆ ಮುಂತಾದವುಗಳನ್ನು ತಕ್ಕ ಮಟ್ಟಿಗೆ ಗುರುತಿಸಬಹುದು.

ಕುಮಟಗಿಯ ಭಿತ್ತಿ ಚಿತ್ರಗಳ ಲಕ್ಷಣಗಳು :

- ❖ ಚಿತ್ರಗಳಲ್ಲಿ ನಸುಗೆಂಪು ಕಪ್ಪು ಬೂದು ವರ್ಣಗಳ ಬಳಕೆ ಅಧಿಕವಾಗಿದೆ.
- ❖ ಚಿತ್ರಗಳು ನೈಜರೂಪಣಕ್ಕೆ ಹತ್ತಿರವಿದ್ದು ಯುರೋಪಿಯನ್ ಪ್ರಭಾವವನ್ನು ತೋರಿಸುತ್ತವೆ.
- ❖ ಪ್ರಾಣಿ, ಪಕ್ಷಿಗಳು, ಹೂಬಳ್ಳಿಯ ನಕ್ಷೆಗಳಲ್ಲಿ ಅತೀ ಅಲಂಕರಣ ರೂಪ ಚಿತ್ರಿಸದೇ ಆಯಾ ವಸ್ತುಗಳ ನೈಜರೂಪವನ್ನೇ ಚಿತ್ರಿಸಲು ಪ್ರಯತ್ನಿಸಿದ್ದಾರೆ.
- ❖ ಚಿತ್ರಗಳ ಶೈಲಿ ವರ್ಣ ಲೇಪನ ವಿಧಾನ ಮುಂತಾದವುಗಳನ್ನು ಗಮನಿಸಿದಾಗ ಇಡೀ ಮಹಲಿನ ಚಿತ್ರಗಳೆಲ್ಲ ಒಬ್ಬ ಕಲಾವಿದನ ನೇತೃತ್ವದ ತಂಡದಿಂದ ಒಂದೇ ಸಲಕ್ಕೆ ರಚನೆಯಾದಂತೆ ತೋರತ್ತದೆ.

ಜಾಮಿಯಾ ಮಸೀದಿ:

ವಿಜಾಪುರ ಪಟ್ಟಣದ ಕೋಟೆಯಿಂದ ಪೂರ್ವಕ್ಕೆ ೧೨೦೦ ಗಜಗಳ ದೂರದಲ್ಲಿ ಪ್ರಸಿದ್ಧ ಜಾಮಿಯಾ ಮಸೀದಿಯಿದ್ದು, ಶುಕ್ರವಾರದ ಪ್ರಾರ್ಥನೆ ಈಗಲೂ ನಡೆಯುತ್ತದೆ. ಈ ಸ್ಥಳದಲ್ಲಿ ಸುಂದರ ಮಸೀದಿ ಕಟ್ಟಲು ಆಲಿ ಆದಿಲ್ ಶಹನು ಆರಂಭಿಸಿದನು. ಇದೊಂದು ಸುಂದರ ಸಮ ಭುಜ ಚೌಕಾಕಾರದ ಕಟ್ಟಡವಾಗಿದ್ದು, ಉತ್ತರ-ದಕ್ಷಿಣ ೨೨೫ ಅಡಿ ಹಾಗೂ ಪೂರ್ವ-ಪಶ್ಚಿಮ ೪೫೦ ಅಡಿ ಉದ್ದದ ಕಟ್ಟಡವಾಗಿದೆ. ಪೂರ್ವ ದಿಕ್ಕಿನಲ್ಲಿ ಪ್ರವೇಶದ್ವಾರವಿದೆ.

---

೯. ಡಾ. ಅ. ಲ. ನರಸಿಂಹನ್ : ಕರ್ನಾಟಕದ ಚಿತ್ರ ಪರಂಪರೆ : ಪುಟ-೯೫.



ಅಸರ್ ಮಹಲ್ ಭಿತ್ತಿಚಿತ್ರ, ವಿಜಾಪೂರ




ಕುಮಟಗಿಯ ಭಿತ್ತಿ ಚಿತ್ರ, ವಿಜಾಪೂರ



ಕುಮಟಗಿಯ ಭಿತ್ತಿ ಚಿತ್ರ, ವಿಜಾಪೂರ



ಅಸರ್ ಮಹಲ್ ಭಿತ್ತಿಚಿತ್ರ, ವಿಜಾಪೂರ



ಕುಮಟಗಿಯ ಭಿತ್ತಿ ಚಿತ್ರ, ವಿಜಾಪೂರ

ಇದರ ಮೂಲಕ ಒಳಗೆ ಹೋದರೆ ಕಟ್ಟಡದ ಮಧ್ಯದಲ್ಲಿ ೧೫೫ ಚದುರ ಅಡಿಯ ಕಾರಂಜಿ ಸಹಿತ ಕೊಳವಿದೆ. ಉತ್ತರ-ದಕ್ಷಿಣ ಎರಡೂ ಬದಿಯಲ್ಲಿ ೨೮ ಅಡಿ ಅಗಲ ೨೫ ಅಡಿ ಎತ್ತರದ ಕಮಾನುಗಳಿವೆ. ಪಶ್ಚಿಮದಲ್ಲೂ ಏಳು ಕಮಾನುಗಳಿದ್ದು, ಅವುಗಳ ಮೇಲಿನ ಹೂಬಳ್ಳಿಯ ಅಲಂಕಾರಿಕ ಕೆತ್ತನೆಗಳು ಬಹಳ ಆಕರ್ಷಕವಾಗಿವೆ. ಇದರ ಗೋಡೆಯ ತುಂಬಾ ಮೆದುವಾದ ಕೆನೆ ನಸುಬಣ್ಣದ ಕಮಾನುಗಳು ಇದ್ದು, ಅವುಗಳ ಒಳಗೆ ಉಬ್ಬಿರುವ ಭಾಗದಲ್ಲಿ ಚಿಕ್ಕ ಚಿಕ್ಕ ಕಿಡಕಿಗಳು ಕಂಡು ಬರುತ್ತವೆ. ಅವುಗಳೊಂದಿಗೆ ಜಾಲಂಧ್ರಗಳಿಂದ ಕೂಡಿದ ಕಲ್ಲುಗಳ ಜೋಡಣೆ ಇದರ ಸೌಂದರ್ಯಕ್ಕೆ ಮೆರಗು ಕೊಟ್ಟಿದೆ. ಈ ಜಾಲಂಧ್ರಗಳಿಂದ ಬೆಳಕು ಹಾಗೂ ಗಾಳೀ ಸಹ ಬರುವಂತೆ ಯೋಜಿಸಲಾಗಿದೆ. ಈ ಮಸೀದಿಯ ಒಟ್ಟು ಕ್ಷೇತ್ರ ೧,೧೬,೦೦೦ ಚದರಡಿಗಳಷ್ಟಿದ್ದು, ಬಿಜಾಪುರದ ವಾಸ್ತು ಕಟ್ಟಡಗಳಲ್ಲಿಯೇ ಅಧಿಕ ಸ್ಥಳವನ್ನು ಆಕ್ರಮಿಸಿರುವ ಕಟ್ಟಡವಾಗಿದೆ.

ಸಭಾಂಗಣದ ಭವ್ಯ ಕಟ್ಟಡ ಮೂರು ಭಾಗಗಳನ್ನು ಹೊಂದಿದ್ದು, ಪ್ರತಿಯೊಂದಕ್ಕು ಅರ್ಧ ಗೋಳಾಕಾರದ ಛಾವಣಿಯಿದೆ, ಪಶ್ಚಿಮ ದಿಕ್ಕಿನ ಗೋಡೆಯಲ್ಲಿ ಮೆಹ್ರಬ್ ಎಂದು ಕರೆಯಲಾಗುವ ಸ್ಥಳದಲ್ಲಿ ಸುಂದರ ನಕ್ಷೆಗಳು, ಪವಿತ್ರ ಕುರಾನಿನ ವಾಕ್ಯಗಳನ್ನು ಕಲಾತ್ಮಕ ಅಕ್ಷರಗಳಿಂದ ಕೊರೆಯಲಾಗಿದೆ. ಒಂದು ಕಾಲದಲ್ಲಿ ಅವುಗಳಿಗೆ ಬಂಗಾರದ ನೀರು ಲೇಪಿಸಿರುವದು ವ್ಯಕ್ತವಾಗುತ್ತದೆ. ಇಲ್ಲಿಯ ಬಣ್ಣ ಬಣ್ಣದ ಚಿತ್ತಾರಗಳ ಅಲಂಕರಣೆಗಳನ್ನು ಕ್ರಿ. ಶ. ೧೬೩೬ ರಲ್ಲಿ ಮಹಮ್ಮದ್ ಆದಿಲಷಾಹನ ಆಜ್ಞೆಯ ಮೇರೆಗೆ ಮಲಿಕ್ ಯಾಖೂತನೆಂಬ ಅಧಿಕಾರಿಯು ಮಾಡಿದನೆಂದು ವ್ಯಕ್ತವಾಗುತ್ತದೆ. ಈ ಕಟ್ಟಡದ ಮಧ್ಯದ ಗುಮ್ಮಟವು ೭೫ ಚದರ ಅಡಿ ಅಗಲವಾಗಿದ್ದು, ಭೂಮಿಯಿಂದ ೧೫೫ ಅಡಿ ಎತ್ತದಲ್ಲಿದೆ. ಬಿಜಾಪುರದ ಗುಮ್ಮಟಗಳಲ್ಲಿಯೇ ಸುಂದರವಾದ ಗುಮ್ಮಟ ಇದಾಗಿದ್ದು. ನಗರದ ನಾಲ್ಕ ದಿಕ್ಕುಗಳಲ್ಲೂ ಹೊರ ವಲಯದಿಂದ ಎದ್ದು ಕಾಣುತ್ತದೆ. ಕಟ್ಟಡದ ಹೊರ ಹಾಗೂ ಒಳ ಬದಿಯಲ್ಲಿ ಸುಂದರವಾಗಿ ಕಟ್ಟಲ್ಪಟ್ಟಿರುವ ಇದು ಇಂಡೋ-ಸಾರ್ಸೆನಿಕ್ ಶೈಲಿಯ ಸುಂದರ ಉದಾಹರಣೆಗಳಲೊಂದಾಗಿದೆ. ಉತ್ತರ ದಿಕ್ಕಿನ ಬಾಗಿಲಿನಿಂದ ಪ್ರವೇಶಿಸಲು ಅಗಲವಾದ ಮೆಟ್ಟಿಲುಗಳಿದ್ದು, ಮೇಲಿನ ೪೦ ಅಡಿ ಎತ್ತರದ ಗುಮ್ಮಟ ಒಳಬಂದವರಿಗೆ ಎದ್ದು ಕಾಣುತ್ತದೆ. ಇದರ ವಾಸ್ತು ಶಿಲ್ಪದ ಸರಳತೆಯು ಇಡೀ ಕಟ್ಟಡವನ್ನು ಆವರಿಸಿದೆ.

ಈ ಜಾಮಿಯಾ ಮಸೀದಿಯ ಒಳಭಾಗದಲ್ಲಿ ಅಲಂಕಾರಿಕ ಚಿತ್ರಕಲೆ ಕಂಡುಬರುತ್ತದೆ.[೫] ಒಳಭಾಗದ, ಕಮಾನುಗಳು, ದ್ವಾರಗಳು, ಮೇಲ್ಛಾವಣಿ ಮತ್ತು ಮಾಡುಗಳಿಗೆ ಭಿತ್ತಿ ಚಿತ್ರಕಲೆಯಿಂದ ಅಲಂಕರಣ ಮಾಡಲಾಗಿದೆ. ಇಲ್ಲಿನ ಚಿತ್ರಗಳಲ್ಲಿ ಯಾವುದೇ ವ್ಯಕ್ತಿ ಚಿತ್ರ ಇಲ್ಲವೆ ಪ್ರಾಣಿ ಪಕ್ಷಿಗಳ ಆಕಾರಗಲೂ ರಚನೆಯಾಗಿರದೆ ಕೇವಲ ಹೂಬಳ್ಳಿಯ ಚಿತ್ರಗಳು ಜಾಮತಿಕ ವಿನ್ಯಾಸದ ನಕ್ಷಾ ಮಾದರಿಗಳು ಹೂವಿನ ಕುಂಡಗಳು ಮತ್ತು ಕುರಾನಿನ ವಾಕ್ಯಗಳನ್ನು ಅಲಂಕಾರಿಕವಾಗಿ ಬರೆಯಲಾಗಿದೆ. ಈ ಚಿತ್ರಗಳಲ್ಲಿ ಕೆಲವು ಹೂಬಳ್ಳಿಯ ನಕ್ಷೆಗಳು ನೈಜ ಆಕಾರದಲ್ಲಿದ್ದರೆ ಮತ್ತೇ ಕೆಲವು ಅಲಂಕಾರಿಕ ಸ್ವರೂಪದಲ್ಲಿವೆ. ಸೂಕ್ಷ್ಮವಿನ್ಯಾಸದ ನಕ್ಷಾ ಮಾದರಿಗಳು ನೋಡುಗರನ್ನು ಬೆರಗುಗೊಳ್ಳಿಸುತ್ತವೆ. ಕಮಾನಿನ ಮೇಲ್ಭಾಗದಲ್ಲಿ ವೃತ್ತಾಕಾರದ ದೊಡ್ಡ ನಕ್ಷೆಗಳು ಬಾಗಿಲು ಮತ್ತು ಕಿಟಕಿಗಳ ಮೇಲಭಾಗದಲ್ಲಿ ಇದೇ ರೀತಿಯ ವೃತ್ತಾಕಾರದ ನಕ್ಷೆಗಳು ಕಂಡುಬರುತ್ತವೆ. ಈ ಚಿತ್ರಗಳು ಪರ್ಶಿಯನ್ ಶೈಲಿಯಿಂದ ಪ್ರೇರಣೆಗೊಂಡಿದ್ದು, ವರ್ಣಗಾರಿಕೆಯಲ್ಲಿ ಮೊಗಲ್ ಪ್ರಭಾವಕ್ಕೆ ಒಳಗಾಗಿದೆ. ಇಲ್ಲಿ ಹೆಚ್ಚಾಗಿ ನೀಲಿ, ಹಸಿರು, ತಿಳಿ ಕೆಂಪು, ಹಳದಿ, ಬಣ್ಣಗಳನ್ನು ಬಳಸಲಾಗಿದೆ. ಈ ಮಸೀದಿಯಲ್ಲಿ ನೆಲ ಭಾಗಕ್ಕೂ ಸಹಿತ ಅಲ್ಲಲ್ಲಿ ನಕ್ಷಾ ವಿನ್ಯಾಸದಿಂದ ಅಲಂಕರಣ ಮಾಡಲಾಗಿದೆ. ಈ ಚಿತ್ರಗಳ ಶೈಲಿಯು ಇದೇ ಊರಿನ ಅಸರ್ ಮಹಲ್ ಚಿತ್ರಗಳಿಗೆ ಹೋಲಿಕೆಯಾಗುತ್ತಿದ್ದು, ಎರಡು ಕಡೆಯ ಚಿತ್ರಗಳು ಒಂದೇ ಮಾದರಿಯಲ್ಲಿ ಕಂಡುಬರುತ್ತದೆ.

ಸಿ.ಎಸ್.ಐ.ಚರ್ಚ:

ಕ್ರಿ.ಶ.೧೮ ನೇ ಶತಮಾನದಲ್ಲಿ ರಚನೆಯಾದ ಈ ಚರ್ಚನ ಒಳಭಾಗ ವರ್ಣ ಚಿತ್ರಕಲೆಯಿಂದ ಅಲಂಕರಣಗೊಂಡಿದೆ. ಒಳಭಾಗದ ಮೇಲ್ಛಾವಣಿ ಕುಮಾನುಗಳು ಗೋಡೆಗಳು, ಮಾಡುಗಳು, ಕಿಟಕಿಗಳು, ಚಿತ್ರಕಲೆಯಿಂದ ಕಂಗೊಳ್ಳಿಸುತ್ತವೆ.[೬] ಇಲ್ಲಿಯೂ ಸಹಿತ ಯಾವುದೇ ವ್ಯಕ್ತಿ ಚಿತ್ರಗಳಿರದೆ ಕೇವಲ ಹೂಬಳ್ಳಿಯ ನಕ್ಷಾ ವಿನ್ಯಾಸಗಳು ಜಾಮತಿಕ ಅಲಂಕರಣ ರೂಪಗಳು ಕಂಡುಬರುತ್ತವೆ. ಇಲ್ಲಿನ ಚಿತ್ರಗಳಲ್ಲಿ ದೊಡ್ಡ ದೊಡ್ಡ ಹೂವುಗಳನ್ನು ಮಧ್ಯದಲ್ಲಿ ರಚನೆ ಮಾಡಿ ಅದರ ಸುತ್ತಲು ಚದುರಿದಂತೆ ಎಲೆ ಬಳ್ಳಿಯನ್ನು ರಚನೆ ಮಾಡಲಾಗಿದೆ. ಎಲೆ ಮತ್ತು ಹೂವುಗಳ ವಿನ್ಯಾಸದಲ್ಲಿ ವೈವಿಧ್ಯತೆ ಕಂಡು ಬರುತ್ತದೆ ಈ ಚಿತ್ರಗಳು ಪ್ರಖರ ವರ್ಣದಿಂದ ಕೂಡಿದ್ದು. ಆಕರ್ಷಕವಾಗಿ ಕಂಡು ಬರುತ್ತವೆ. ಮೊದಲಿಗೆ

---

೫. ಡಾ. ಕೃಷ್ಣಕೋಲಾರ ಕುಲಕರ್ಣಿ : ವಿಸ್ಮಯ ಇದು ವಿಜಾಪುರ : ಪುಟ-೪೨.
೬ ಡಾ. ಆರ್. ಮುನಿಸ್ವಾಮಿ (ಸಂ) : ವಿಜಾಪುರ ಜಿಲ್ಲಾ ಗೆಝಿಟೀಯರ್ : ಪುಟ-೪೧೦.

ನೀಲಿ ಬಣ್ಣದ ಹಿನ್ನೆಲೆಯನ್ನು ಲೇಪನ ಮಾಡಿಕೊಂಡು ಅದರ ಮೇಲೆ ಕೆಂಪು, ಹಳದಿ, ನಸುಗೆಂಪು, ಮತ್ತು ಕಪ್ಪು ಬಣ್ಣದ ನಕ್ಷಾ ವಿನ್ಯಾಸಗಳನ್ನು ರಚಿಸಲಾಗಿದೆ. ಕಮಾನುಗಳಲ್ಲಿ ಹೂಬಳ್ಳಿಯ ಅಲಂಕರಣ ಹೆಚ್ಚಾಗಿ ಕಂಡು ಬಂದರೆ ಮೇಲ್ಭಾವಣಿಯಲ್ಲಿ ಎಲೆ ಬಳ್ಳಿಯ ನಕ್ಷೆಯು ಗೋಚರಿಸುತ್ತದೆ. ಕಿಟಕಿಗಳ ಮೇಲೆ ಜಾಮತಿಕ ಅಲಂಕರಣದ ವಿವಿಧ ರೂಪಗಳು ಕಂಡುಬರುತ್ತವೆ. ಯುರೋಪಿಯನ್ ಶೈಲಿಯಿಂದ ಪ್ರಭಾವಿತಗೊಂಡ ಈ ನಕ್ಷಾ ಚಿತ್ರಗಳು ಅಷ್ಟೊಂದು ಪ್ರಬುದ್ಧವಾಗಿ ಕಂಡುಬರುವುದಿಲ್ಲ. ಇಲ್ಲಿ ಮುಖ್ಯವಾಗಿ ನೀಲಿ, ಹಳದಿ, ಕೆಂಪು, ನಸುಗೆಂಪು, ಕಪ್ಪು, ಹಸಿರು, ವರ್ಣಗಳನ್ನು ಬಳಸಲಾಗಿದೆ.

ಸಾತ ಮಂಜಿಲ್ :


ವಿಜಾಪುರದ ಅರಸು ಪರಿವಾರದ ಇನ್ನೊಂದು ನಿವಾಸ ಸ್ಥಳ ಸಾತ ಮಂಜಿಲ್ ಆಗಿದೆ. ಇಲ್ಲಿಯ ಕೋಣೆಗಳಲ್ಲಿ ವರ್ಣ ಲೇಪನವಿದ್ದು, ಮಸುಕಾಗಿ ಚಿತ್ರಗಳು ಗೋಚರಿಸುತ್ತವೆ. ಕ್ರಿ. ಶ. ೧೮೫೪ ರಲ್ಲಿ ಜೇಮ್ಸ ಬರ್ಡ ಎಂಬುವನು ಇಲ್ಲಿಗೆ ಬೆಟ್ಟಿಕೊಟ್ಟು ಇಲ್ಲಿನ ಚಿತ್ರಗಳ ಬಗ್ಗೆ ತಿಳಿಸಿದ್ದಾನೆ.[೭] ಅವನ ಪ್ರಕಾರ ಆಗ ಬಹುತೇಕ ಚಿತ್ರಗಳು ನಾಶವಾಗಿದ್ದು, ಮಹಮ್ಮದ ಆದಿಲ್‌ಶಾಹನು ಸಿತಾರ ಬಾರಿಸುವ ಚಿತ್ರ ಒಂದಿದ್ದು, ಅವನ ಎದುರಿಗೆ ಹೂವಿನ ಬುಟ್ಟಿಯನ್ನು ಚಿತ್ರಿಸಲಾಗಿದೆ ಎಂದು ಹೇಳುತ್ತಾನೆ. ಆದರೆ ಇಂದು ಅಲ್ಲಿ ಯಾವ ಚಿತ್ರಗಳು ಇರದೇ ಕೇವಲ ಬಣ್ಣದ ಲೇಪನ ಮಾತ್ರ ಕಂಡುಬರುತ್ತದೆ.

ಹಸ್ತ ಪ್ರತಿ ಚಿತ್ರಕಲೆ :

ಭಾರತೀಯ ಚಿತ್ರಕಲೆ ಬೇರೆ ಬೇರೆ ಸಮಯ ಸಂದರ್ಭದ ಹಿನ್ನೆಲೆಯಲ್ಲಿ ಅವಶ್ಯಕತೆಗನುಗುಣವಾಗಿ ವಿವಿಧ ಮಾಧ್ಯಮಗಳಲ್ಲಿ ಅಭಿವ್ಯಕ್ತವಾಗಿದೆ, ಶಿಲೆ, ಮಣ್ಣು, ಮರ (ಕಟ್ಟಿಗೆ) ಗಾರೆ, ಲೋಹ, ಗಾಜು ಮುಂತಾದ ಮಾಧ್ಯಮಗಳಲ್ಲದೆ, ತಾಳೆಗರಿ, ಭೂರ್ಜ್ವ ಪತ್ರ, ಕಡತ, ಚರ್ಮ ಕಾಗದದ ಹಗುರವಾದ ಸ್ಥಳಾಂತರಿಸಲು ಅನುಕೂಲವಾದ ಮಾಧ್ಯಮಗಳಲ್ಲೂ ರೂಪುತಾಳಿದೆ.[೮] ಮುದ್ರಣ ಯಂತ್ರ ಬರುವುದಕ್ಕಿಂತ ಪೂರ್ವದಲ್ಲಿ ಬರವಣಿಗೆ ಸಾಧನವಾಗಿ ಹಸ್ತಪ್ರತಿಗಳು ನಿರ್ವಹಿಸಿದ ಪಾತ್ರ ಅನನ್ಯವಾದದು.

ಹಸ್ತಪ್ರತಿ ಎಂಬ ಪದ ಕನ್ನಡಲ್ಲಿ ಬಳಕೆಗೊಳ್ಳಲಾರಂಭಿಸಿದ್ದು ಈ ಶತಮಾನದಲ್ಲಾದ ಗ್ರಂಥ ಸಂಪಾದನಾ ಶಾಸ್ತ್ರದ ಪರಿಚಯದೊಂದಿಗೆ ಆಂಗ್ಲ ಭಾಷೆಯಲ್ಲಿನ 'Manuscript'

೭ ಡಾ. ಕೃಷ್ಣಕೋಲಾರ ಕುಲಕರ್ಣಿ : ವಿಸ್ಮಯ ಇದು ವಿಜಾಪುರ : ಪುಟ-೩೯.
೮. ಡಾ. ಎಸ್. ಸಿ.ಪಾಟೀಲ : ವರ್ಣ ಸಂಚಯ : ಪುಟ-೨೪.



ಜಾಮಿಯಾ ಮಸೀದಿ ಭಿತ್ತಿ ಚಿತ್ರ, ವಿಜಾಪೂರ



ಜಾಮಿಯಾ ಮಸೀದಿ ಭಿತ್ತಿ ಚಿತ್ರ, ವಿಜಾಪೂರ



ಜಾಮಿಯಾ ಮಸೀದಿಯ ಒಳಾಂಗಣ ಭಿತ್ತಿ ಚಿತ್ರ, ವಿಜಾಪೂರ



ಕೆಥೋಲಿಕ್ ಚರ್ಚನ್ ಭಿತ್ತಿ ಚಿತ್ರ, ವಿಜಾಪೂರ

ಎಂಬುದಕ್ಕೆ ಪರ್ಯಾಯವಾಗಿ ಬಳಸುತ್ತ ಬಂದಿರುವ ಪದವಿದು. ಈ ಪದ ನಮಗೆ ಪರಿಚಯವಾಗುವ ಮೊದಲೇ ಓಲೆ ಕಟ್ಟು, ಹೊತ್ತಿಗೆ, ಗ್ರಂಥ, ಶಾಸ್ತ್ರ, ನೀಲಿ ಹೊತ್ತಿಗೆ ಎಂಬ ಪದಗಳು ಬಳಕೆಯಲ್ಲಿದ್ದವು. ಅವನ್ನೇ ಸೌಲಭ್ಯಾಕಾಂಕ್ಷೆಯಿಂದ ಮೊಟುಕುಗೊಳಿಸಿ ಕಟ್ಟು, ಹೊತ್ತಿಗೆ, ಶಾಸ್ತ್ರ ಮುಂತಾಗಿ ಕರೆಯಲಾಗುತ್ತಿತ್ತು. ಕನ್ನಡದ ಪ್ರಾಚೀನ ಗ್ರಂಥಗಳಲ್ಲಿಯೂ ಪೊತ್ತಗೆ, ಕವಳಿಗೆ, ಪುಸ್ತಕ, ಕಟ್ಟು, ವಹಿ, ಗ್ರಂಥ ಮಂತಾಗಿ ಹಸ್ತ ಪ್ರತಿಗಳನ್ನು ಗುರುತಿಸಿದ್ದುಂಟು ಎಂದು ಹೇಳುತ್ತ ಡಾ. ಬಿ.ಕೆ. ಹಿರೇಮಠ. ಅವರು ಹಸ್ತಪ್ರತಿಯನ್ನು ತಮ್ಮದೇ ಆದ ರೀತಿಯಲ್ಲಿ "ಭಾರವಲ್ಲದ ಲೇಖ್ಯವಸ್ತುವಿನ ಮೇಲೆ ಕೈಯಿಂದ ಬರೆದ ಜೀವನಾವಶ್ಯಕ ಜ್ಞಾನ ಪ್ರಧಾನವಾದ ಕೃತಿ ಮತ್ತು ಅದರ ಪ್ರತಿಕೃತಿಗಳು ಹಸ್ತಪ್ರತಿಗಳು" ಎಂದು ಸರಿಯಾಗಿಯೇ ವ್ಯಾಖ್ಯಾನಿಸಿದ್ದಾರೆ. ಇನ್ನು ಹಸ್ತಪ್ರತಿ ಚಿತ್ರಕಲೆಯೆಂದರೆ ಕೈಯಿಂದ ಬರದಣಿಗೆಗಾಗಿ ಸಿದ್ಧಗೊಂಡ ವಸ್ತ್ರಪಟ, ವೃಕ್ಷ (ತಾಡೋಲೆ, ಭೂರ್ಜ್ವ ಪತ್ರ) ಕಾಗದ, ಚರ್ಮದಂತಹ ಹಗುರವಾದ ವಸ್ತು ಅಥವಾ ಕಟ್ಟುಗಳ ರಕ್ಷಾಕವಚದ ಮೇಲೆ ಮತ್ತು ಒಳಗಡೆ ಅಲಂಕಾರಕ್ಕಾಗಿ ಬರವಣಿಗೆಯ ವಿಷಯದ ಹಿನ್ನೆಲೆಯಲ್ಲಿ ಆಯಾ ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಚಿತ್ರಿಸಿದ ರೇಖಾ ವರ್ಣ ಚಿತ್ರವಿನ್ಯಾಸವನ್ನೆಲ್ಲ ಹಸ್ತ ಪ್ರತಿಯ ಚಿತ್ರಕಲೆ ಎಂದು ಕರೆಯಬಹುದಾಗಿದೆ.[೯]

ವಿಜಾಪುರದ ಪರಿಸರದಲ್ಲಿ ಹಸ್ತಪ್ರತಿ ಚಿತ್ರಕಲೆಯು ಮುಖ್ಯವಾಗಿ ಕಂಡುಬರುವುದು ಆದಿಲ್ ಶಾಹಿಗಳ ಕಾಲದಲ್ಲಿ ಇವರ ಕಾಲದಲ್ಲಿ ಅನೇಕ ರೀತಿಯ ಗ್ರಂಥಗಳನ್ನು ರಚನೆ ಮಾಡಿ ಅವುಗಳಲ್ಲಿ ಸಾಂದರ್ಭಿಕವಾಗಿ ಹಸ್ತಪ್ರತಿ ಚಿತ್ರಗಳನ್ನು ರಚನೆ ಮಾಡಲಾಗಿದೆ. ಇವರ ಕಾಲದಲ್ಲಿ ಸಂಗೀತ ಶಾಸ್ತ್ರ, ವಾಸ್ತು ಶಾಸ್ತ್ರ, ಧಾರ್ಮಿಕ ಶಾಸ್ತ್ರ, ರಾಜನೀತಿ, ಸಾಮಾಜಿಕ ಜೀವನ, ಜೋತಿಷ್ಯ ಶಾಸ್ತ್ರ, ವೈಧ್ಯ ಶಾಸ್ತ್ರ, ಮುಂತಾದವುಗಳ ಬಗ್ಗೆ ಗ್ರಂಥಗಳನ್ನು ರಚನೆ ಮಾಡಿ ಅವುಗಳಲ್ಲಿ ಹಸ್ತಪ್ರತಿ ಚಿತ್ರಗಳನ್ನು ರಚಿಸಲಾಗಿದೆ.[೧೦] ವಿಜಾಪುರದ ಆದಿಲ್ ಶಾಹಿ ದೊರೆಗಳ ಕಾಲದಲ್ಲಿ ರಚನೆಯಾದ ಹಸ್ತಪ್ರತಿ ಚಿತ್ರಗಳ ಹರವು ವಿಸ್ತಾರವಾಗಿದ್ದು ಅಧ್ಯಯನದ ಸೀಮಿತ ವ್ಯಾಪ್ತಿಯೊಳಗೆ ಕೆಲವು ಪ್ರಮುಖ ಹಸ್ತಪ್ರತಿ ಚಿತ್ರಗಳನ್ನು ಪರಿಗಣಿಸಲಾಗಿದ್ದು, ಅವು ಈ ಕೆಳಗಿನಂತಿವೆ.

---

೯. ಡಾ. ಬಿ.ಕೆ.ಹಿರೇಮಠ : ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ : ಪುಟ-೨೮
೧೦. ಡಾ. ವಜೀರಬಾಷಾ ಬಾಗಾಯತ : ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಪುಟ-೧೨೫.

ಕರ್ನಾಟಕದಲ್ಲಿ ಆದಿಲ್ ಶಾಹಿ ಹೆಸರಿನ ಈ ಆಡಳಿತದಲ್ಲಿ ಬಹುಮುಖ್ಯವಾದ ಹಸ್ತಪ್ರತಿ ಚಿತ್ರಕಲೆಗಳನ್ನು ಇಲ್ಲಿಯವರೆಗೂ ವಿದ್ವಾಂಸರು ಈ ಕೆಳಗಿನಂತೆ ಯಾದಿಯನ್ನು ಮಾಡಿದ್ದಾರೆ.[೧೧] ಅವುಗಳು ಈ ರೀತಿಯಾಗಿವೆ.

೧. ನಜಮ್-ಉಲ್-ಉಲೂಮ್. ೨. ರತನ್ ಕಲಿಯಾ. ೩. ನಿಮತ್ ನಾಮಾ. ೪. ಕಿತಾಬ್-ಇ-ನವರಸ್ ೫. ಖವ್ವರ್ ನಾಮಾ. ೬. ದಿವಾನ್-ಇ-ಉರ್ಫ. ೭. ಜವಾಹರ್-ಆಲ್-ಮುಶಿಕತ್-ಇ-ಮಹಮ್ಮದಿ. ೮. ಸಂಗೀತ ರತ್ನಾಕರ. ೯. ಮುಧು ಮಾಲತಿ. ೧೦. ಅಜಾ-ಇಬೂಲ್-ಮುಖಾಲಕತ್. ೧೧. ಮತನವಿ. ೧೨. ಜ್ಯೋತಿಷ್ಯ.

೧. ನಜಮ್-ಉಲ್-ಉಲೂಮ್ (ಕ್ರಿ. ಶ. ೧೫೭೦) :

ಮೊದಲನೇ ಅಲಿ ಆದಿಲ್‌ಶಾಹನ ಕಾಲದಲ್ಲಿ ಕ್ರಿ.ಶ. ೧೫೭೦ ರಲ್ಲಿ ಈ ಕೃತಿಯನ್ನು ರಚಿಸಲಾಗಿದೆ. ಈ ಕೃತಿಯಲ್ಲಿ ನಕ್ಷತ್ರ ಶಾಸ್ತ್ರ ಜ್ಯೋತಿಷ್ಯ, ಮಾಂತ್ರಿಕತೆಯ ವಿವರವನ್ನು ನೀಡಲಾಗಿದೆ. ಈ ಕೃತಿಯಲ್ಲಿ ೮೭೬ ಕಿರು ರೂಪದ ಚಿತ್ರಗಳಿವೆ. ಈ ಗ್ರಂಥದ ಚಿತ್ರಗಳ ಶೈಲಿಯನ್ನು ಗಮನಿಸಿದ ವಿದ್ವಾಂಸರು ಇದರ ಕಾಲ ಮಾನವನ್ನು ೧೫೭೦ ಎಂದು ಗುರುತಿಸಿದ್ದಾರೆ. ಸಾಮಾನ್ಯವಾಗಿ ಎಲ್ಲ ದಖ್ಖನಿ ಚಿತ್ರಗಳಲ್ಲಿ ಕಾಣುವಂತೆ ಪಾರ್ಶ್ವಮುಖ, ಭಾರತೀಯ ನಾರಿಯರು, ಭಾರತೀಯ ಉಡುಪುಗಳಲ್ಲಿ ಅಲಂಕೃತವಾಗಿರುವದನ್ನು ಕಾಣುತ್ತೇವೆ. ಸಮಕಾಲೀನ ವಿಜಯನಗರ ಮತ್ತು ಉತ್ತರದ ರಜಪೂತ ಕಾಂಗ್ರಾ ಬೂಂದಿ ಚಿತ್ರಗಳ ಪ್ರಭಾವಗಳನ್ನು ಈ ಚಿತ್ರಗಳಲ್ಲಿ ನಾವು ಗಮನಿಸಬಹುದು.

೨. ರತನ್‌ಕಲಿಯಾ (ಕ್ರಿ ಶ. ೧೬೫೨):

ಈ ಹಸ್ತಪ್ರತಿ ಚಿತ್ರಕಲೆಯು ೨ನೇ ಇಬ್ರಾಹಿಂ ಆದಿಲ್‌ಷಾಹಾನ ಕಾಲದ ಕೃತಿಯಾಗಿದೆ. ಈಗ ಬ್ರಿಟೀಷ ವಸ್ತು ಸಂಗ್ರಹಾಲಯದಲ್ಲಿದೆ. ಬಿಜಾಪುರದ ಸ್ಥಳೀಯ ಕಲಾವಿದರು ರಚಿಸಿರಬಹುದಾದ ೩೬ ಕಿರುರೂಪದ ಚಿತ್ರಗಳು ಈ ಕೃತಿಯಲ್ಲಿವೆ ಅಂದಿನ ಜನರ ಬದುಕು, ರೀತಿ-ನೀತಿ, ಹಬ್ಬಗಳ ಆಚರಣೆ ಮತ್ತು ಸಾಮಾನ್ಯ ಕ್ರೀಡೆಗಳ ಬಗ್ಗೆ ಇದರಲ್ಲಿ ವಿವರಣೆಯನ್ನು ನೀಡಲಾಗಿದೆ.

೩. ನಿಮತ್ ನಾಮಾ (ಕ್ರಿ. ಶ. ೧೬೫೫) :

ಆದಿಲ್ ಶಾಹಿ ೨ನೇ ಇಬ್ರಾಹಿಂ ದೊರೆಯ ಕಾಲದಲ್ಲಿಯೇ ರೂಪಗೊಂಡ ಈ ಹಸ್ತಪ್ರತಿಯು ಹೈದರಾಬಾದಿನ ಸಾಲದ ಜಂಗ್ ಸಂಗ್ರಹಾಲಯದಲ್ಲಿ ಇತ್ತು.ಗೀಗ ದೆಹಲಿಯ

೧೧. ಡಾ. ಎಚ್. ಎನ್. ಚಿತ್ರಾರ : ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ : ಪುಟ- ೨೧೦.

ರಾಷ್ಟ್ರೀಯ ಸಂಗ್ರಹಾಲಯಲ್ಲಿ ಕಾಯ್ದಿಡಲಾಗಿದೆ. ಇದರಲ್ಲಿ ಅರಸರು ಮತ್ತು ಅಂಥಪುರದ ಅನೇಕ ಜನರ ಚಿತ್ರಗಳು ಇದ್ದು ೨ನೇ ಇಬ್ರಾಹಿಂ ಸಮಕಾಲೀನನಾದ ಫಾರುಕ್ ಹುಸೇನನು ಇವುಗಳನ್ನು ಚಿತ್ರಿಸಿದ್ದಾನೆ. ಅಂದಿನ ಅದ್ವಿತಿಯ ಚಿತ್ರಕಲಾವಿದನಾಗಿದ್ದ. ಈತನು ಅಕ್ಬರನ ಆಸ್ಥಾನದಲ್ಲಿದ್ದ ಫಾರುಕ್ ಬೇಗನ ವಂಶಸ್ಥನಾಗಿರಬೇಕೆಂದು ಅಭಿಪ್ರಾಯಪಡಲಾಗಿದೆ.

೪. ಕಿತಾಬ್-ಇ-ನವರಸ (ಕ್ರಿ. ಶ. ೧೫೫೮) :

ಇಮ್ಮಡಿ ಇಬ್ರಾಹಿಂ ದೊರೆಯ ಸಂಗೀತ ಮತ್ತು ಧಾರ್ಮಿಕ ಸೌಹರ್ದತೆಯನ್ನು ಒಳಗೊಂಡ ಗ್ರಂಥವಾಗಿದೆ. ಇದರಲ್ಲಿ ರಾಗಮಾಲಾ ಚಿತ್ರಗಳು, ಅರಸರ ಚಿತ್ರಗಳು ಜನ-ಜೀವನದ ಚಿತ್ರಗಳಿವೆ. ಆದಿಲ್-ಷಾಹಿ ಅರಸು ಮನೆತನದ ಕೊಡುಗೆಯಾದ ಇದರಲ್ಲಿ ಹಿಂದು ದೇವತೆಗಳ ಸ್ತುತಿ ಕಲ್ಬುರ್ಗಿ ಒಂದೇನವಾಜರ ಸ್ತುತಿ, ಇಬ್ರಾಹಿಂನ ತಂಬೂರಿ ಸ್ತುತಿ, ಆತನ ಹೆಂಡತಿ ಚಾಂದಸುಲ್ತಾನಳ ಸ್ತುತಿ, ತಾಯಿ ಬಡೇ ಸಾಹೇಬಳ ಸ್ತುತಿ, ವಿರಹ ಶೃಂಗಾರ ಗೀತೆಗಳು, ರಾಗ ಮಾಲಿಕೆಗಳನ್ನೊಳಗೊಂಡ ವಿಷಯಗಳಿದ್ದು, ಅವುಗಳಿಗೆ ಅನುಸಾರವಾಗಿ ಚಿತ್ರಗಳನ್ನು ರಚಿಸಲಾಗಿದೆ.

೫. ಖವ್ವರ ನಾಮ (ಕ್ರಿ.ಶ.೧೬೪೯) :

ಮಹಮ್ಮದ ಆದಿಲ್-ಷಾಹನ ಆಡಳಿತದಲ್ಲಿ ಕವಿ ರುಸ್ತುಂನಿಂದ ರಚಿತವಾದ ಈ ಗ್ರಂಥವು ಆಸ್ಥಾನ ಕಲಾವಿದರು ರಚಿಸಿದ, ದಖ್ಖನಿ ಚಿತ್ರಗಳನ್ನೊಳಗೊಂಡ ಕೃತಿಯಾಗಿದೆ. ಈ ಕೃತಿಯಲ್ಲಿ ಮೊಗಲ್ ಶೈಲಿಯ ನೀಲಿ, ಕೆಂಪು, ಹಳದಿ, ಯಂತಹ ಉಜ್ವಲ ವರ್ಣಗಳ ಬಳಕೆಯಾಗಿದ್ದು, ಕಲಾವಿದರ ಕೈಚಳಕವು ಈ ಕೃತಿಯಲ್ಲಿದೆ. ಉತ್ತಮ ರೇಖಾಚಿತ್ರ ಮತ್ತು ಸಂಯೋಜನೆಗಳಿಂದ ಕೂಡಿದ ಈ ಚಿತ್ರಗಳುವರ್ಣ ಲೇಪನದಲ್ಲಿ ನೆರಳು ಬಳಕಿನ ಪರಿಣಾಮ ಹೊಂದಿವೆ.

೬. ದಿವಾನ್-ಇ-ಉರ್ಫ (ಕ್ರಿ.ಶ. ೧೬೩೬) :

ಈ ಹಸ್ತಪ್ರತಿಯು ಆಕಾರದಲ್ಲಿ ಚಿಕ್ಕದಾಗಿದ್ದು ಈಗ ಅಮೇರಿಕಾದ ಫ್ರಾಗಆರ್ಟ ವಸ್ತು ಸಂಗ್ರಹಾಲಯದಲ್ಲಿದೆ. ಅದರಲ್ಲಿ ೬ ಚಿತ್ರಗಳಿದ್ದು. ೩ ಕಿರುರೂಪ ಚಿತ್ರಗಳಿವೆ, ಮಹಮದ್-ಆದಿಲ್-ಷಾಹಿ ಮತ್ತು ಆತನೊಂದಿಗೆ ಸಂತರು ಮತ್ತು ತತ್ವ ಜ್ಞಾನಿಗಳ ಭಾವಚಿತ್ರಗಳು ಇದರಲ್ಲಿವೆ. ಕಲಾತ್ಮಕ ದೃಷ್ಟೆಯಿಂದ ಉತ್ತಮ ಕೃತಿ ಇದಾಗಿದೆ.

೭. ಜವಹೀರ್-ಅಲ್-ಮುಶಿಕತ್-ಇ-ಮಹಮ್ಮದಿ :

ಇದು ಸಂಗೀತ ಶಾಸ್ತ್ರ ಆಧರಿಸಿದ ಗ್ರಂಥವಾಗಿದ್ದು, ಇದನ್ನು ಮಹಮ್ಮದ ಆದಿಲ್‌ಶಾಹನಿಗೆ ಅರ್ಪಿಸಲಾಗಿದೆ. ಈ ಗ್ರಂಥದಲ್ಲಿ ೨೧೪ ಪುಟಗಳಿದ್ದು, ಅದರಲ್ಲಿ ೪೮ ಕಿರುರೂಪ ಚಿತ್ರಗಳಿವೆ. ಸಂಪೂರ್ಣವಾಗಿ ಸಂಗೀತಕ್ಕೆ ಮೀಸಲಾದ ಈ ಗ್ರಂಥದಲ್ಲಿ ಮೂರು ಭಾಗಗಳಿದ್ದು. ಒಂದನೇ ಭಾಗದಲ್ಲಿ ಸರಸ್ವತಿಯು ವೀಣೆ ನುಡಿಸುವ ಕಿರುರೂಪದ ಚಿತ್ರದಿಂದ ಪ್ರಾರಂಭವಾಗುತ್ತದೆ. ಇದರಲ್ಲಿ ಏಳು ಸ್ವರಗಳಿವೆ. ಎರಡನೇ ಭಾಗದಲ್ಲಿ ರಾಗ ರಾಗಿಣಿಯರ ೨೫ ಚಿತ್ರಗಳಿವೆ. ಈ ಚಿತ್ರದಲ್ಲಿ ರಾಗಕ್ಕೆ ಅನುಸಾರವಾಗಿ ಪುರುಷರನ್ನು ಸ್ತ್ರೀಯರನ್ನು ಪ್ರತಿಮಾ ಲಕ್ಷಣಗಳಿಗನುಸಾರವಾಗಿ ಚಿತ್ರಿಸಲಾಗಿದೆ. ಮೂರನೇ ಭಾಗದಲ್ಲಿ ೧೫ ಚಿತ್ರಗಳಿದ್ದು ಇದರಲ್ಲಿ ಭರತನನಾಟ್ಯ ಶಾಸ್ತ್ರದ ಭಂಗಿಯ ೨೪ ವರ್ಣ ಚಿತ್ರಗಳಿವೆ. ಹಾವಭಾವ, ಭಂಗಿ ಚಿತ್ರಗಳಲ್ಲಿ ಗಮನಾರ್ಹವಾಗಿದೆ.

೮. ಸಂಗೀತ ರತ್ನಾಕರ :

ಹೆಸರೇ ಸೂಚಿಸುವಂತೆ ಇದು ಸಂಗೀತ ಆಧಾರಿತ ಕೃತಿಯಾಗಿದ್ದು, ಮಾರಾಠಿ ಭಾಷೆಯಲ್ಲಿದೆ. ಇದನ್ನು ವಿಜಾಪುರ ಅಲಿ ಆದಿಲ ಶಾಹನ ಕಾಲದ್ದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆಸ್ಥಾನದಲ್ಲಿಯ ನೃತ್ಯಗಾತಿಯರು. ಸಭಾ ಸದಸ್ಯರು, ಸರದಾರರು, ವಿವಿಧ ವೇಷ ಪೋಷಾಕುಗಳಲ್ಲಿ ಇರುವ ಜನರ ಚಿತ್ರಗಳು ಇದರಲ್ಲಿವೆ. ಸಾಮಾನ್ಯವಾಗಿ ನಜಮ್-ಉಲ್-ಉಲೂಮ ಕೃತಿಯನ್ನೇ ಈ ಚಿತ್ರಗಳು ಹೋಲುವದರಿಂದ ಬಹುಶ: ಈ ಕೃತಿಯು ಅದರ ಸಮಕಾಲೀನ ಕೃತಿಯಾಗಿರಬಹುದು ಎಂದು ವಿದ್ವಾಂಸರು ಊಹಿಸಿದ್ದಾರೆ.

೯. ಮತನವಿ :

ಇದು ಮುಶ್ರತಿ ಕವಿ ಬರೆದ ಗ್ರಂಥವಾಗಿದೆ. ಇಲ್ಲಿನ ಚಿತ್ರಗಳು ಮೋಹಕವಾಗಿದ್ದು, ವರ್ಣಗಾರಿಕೆ, ರೇಖಾವಿನ್ಯಾಸದಲ್ಲಿ ಉತ್ತಮ ಮಟ್ಟದಲ್ಲಿವೆ. ಬಂಗಾರದ ಹಳದಿ, ಕೆಂಪು, ನೀಲಿ ವರ್ಣಗಳಿಂದ ರಚಿಸಿದ ಕೆಲವು ಬುರಾಣದ ಕೆಲವು ಕೈಬರಹಗಳು ಇದರಲ್ಲಿವೆ. ಐತಿಹಾಸಿಕ ಮಹತ್ವವುಳ್ಳ ಗಧ್ಯ ಪಧ್ಯಗಳು ಶೃಂಗಾರ ಕಾವ್ಯಗಳು, ರಾಜಮುದ್ರೆ ಇರುವ ಸನದುಗಳು, ಫರ್ಮಾನಗಳು ಈ ಗ್ರಂಥದಲ್ಲಿ ವರ್ಣಗಳಿಂದ ಚಿತ್ರಣಗೊಂಡಿವೆ.

೧೦. ಜ್ಯೋತಿಷ್ಯ ಹಸ್ತಪ್ರತಿ :

ಇದು ೨ನೇ ಇಬ್ರಾಹಿಂ ದೊರೆಯ ಕಾಲದ್ದಾಗಿದ್ದು, ಇದರಲ್ಲಿ ಆದಿಲ್ ಶಾಹಿ ಅರಸರ ಮನೆತನಕ್ಕೆ ಸಂಬಂಧಿಸಿದ ಭವಿಷ್ಯದ ಚಿತ್ರಗಳಿವೆ. ಜ್ಯೋತಿಷ್ಯ ಬರವಣಿಗೆಗಳು ಸಂಸ್ಕೃತ ಹಾಗೂ

ಮಾರಾಠಿ ಭಾಷೆಯಲ್ಲಿವೆ. ಇದರಲ್ಲಿ ೧೫ ಚಿತ್ರಗಳಿದ್ದು, ಅವೆಲ್ಲವೂ ಜನಪದ ಶೈಲಿಯಲ್ಲಿವೆ. ಅಲ್ಲದೇ ವಿವಿಧ ಮಾದರಿಯ ಜ್ಯೋತಿಷ್ಯ ಶಾಸ್ತ್ರದ ನಕ್ಷೆಗಳು ಸವಾರರು ಆನೆ, ಒಂಟೆ, ಕುದುರೆ, ಪಲ್ಲಕ್ಕಿಗಳು ಈ ಕೃತಿಯಲ್ಲಿವೆ. ಈ ಕೃತಿಯಲ್ಲಿನ ಚಿತ್ರಗಳಲ್ಲಿ ಪ್ರಬರ ವರ್ಣಗಳಾದ ಕೆಂಪು, ಹಳದಿ, ನೀಲಿಗಳೊಂದಿಗೆ ಹಸಿರು, ನಸುಕೆಂಪು, ಕಪ್ಪು ವರ್ಣಗಳನ್ನು ಹೆಚ್ಚಾಗಿ ಬಳಸಲಾಗಿದೆ. ರೇಖಾ ವಿನ್ಯಾಸವು ದಪ್ಪನಾಗಿದೆ.

೧೧ ಮಧು ಮಾಲತಿ :

ಈ ಗ್ರಂಥವು ಉರ್ದು ಭಾಷೆಯಲ್ಲಿದ್ದು ಇದರಲ್ಲಿ ೪೮ ಉತ್ತಮ ಮಟ್ಟದ ದಕ್ಷಿಣ ಶೈಲಿಯ ಚಿತ್ರಗಳಿವೆ. ಇದರಲ್ಲಿ ರಾಜ, ರಾಣಿಯರ ಚಿತ್ರಗಳ ಜೊತೆಗೆ ಸೇವಕ ಸೇವಕಿಯರ ಚಿತ್ರಗಳು ರಚನೆಯಾಗಿವೆ. ಅರಸನ ಕಣ್ಣುಗಳು, ಹಸ್ತಗಳು, ಉಡುಪುಗಳು, ಸ್ತ್ರೀಯರ ಆಭರಣಗಳು, ಅರಮನೆಯ ವಾಸ್ತು ವಿಧಾನವು ಇದರಲ್ಲಿ ಸುಂದರವಾಗಿ ರಚನೆಯಾಗಿದೆ. ಹಿನ್ನೆಲೆಯಲ್ಲಿ ಹೂದೋಟ, ಹೂಗುಚ್ಚ, ಇಸ್ಲಾಂ ಮಾದರಿಯ ನಕ್ಷಾ ಚಿತ್ರಗಳು ರಚಿಸಲ್ಪಟ್ಟಿವೆ.

೧೨. ಅಜಾ-ಇಬೂಲ್-ಮುಖಾಲಕತ್ :

ಅದಿಲ್ ಶಾಹಿ ಅರಸು ಮನೆತನದ ಹಸ್ತಪ್ರತಿ ಚಿತ್ರಕಲೆ ಒಳಗೊಂಡ ಮತ್ತೊಂದು ಗ್ರಂಥ ಇದಾಗಿದೆ. ಇದರಲ್ಲಿ ಕೂಡಾ ಇಸ್ಲಾಂ ಪ್ರಭಾವದ ಚಿತ್ರಗಳು, ನಿಸರ್ಗದ ದೃಶ್ಯಗಳು ಅರಮನೆಗಳು, ಅಲ್ಲಲ್ಲಿ ಅಲಂಕಾರಿಕವಾಗಿರುವ ಪ್ರಾರ್ಥನಾ ಮಂದಿರಗಳು ರಚನೆಯಾಗಿವೆ. ಕತಾತ್ಮಕ ದೃಷ್ಟಿಯಿಂದ ಮತ್ತು ಸಂಯೋಜನಾ ದೃಷ್ಟಿಯಿಂದ ಇದು ಅದಿಲ್ ಶಾಹಿ ಮನೆತನದ ಘನತೆಯನ್ನು ತೋರಿಸುವ ಅಮೋಘ ಕೃತಿಯಾಗಿದೆ. ಈ ಕೃತಿಯ ಮೇಲೆ ಉತ್ತರದ ಮೊಘಲ್ ಶೈಲಿಯ ಪ್ರಭಾವವು ದಕ್ಷಿಣದ ವಿಜಯನಗರದ ಅರಸರ ಪ್ರಭಾವವೂ ದಟ್ಟವಾಗಿ ಕಾಣುವುದು ಹೀಗೆ ಅನೇಕ ಹಸ್ತ ಪ್ರತಿ ಚಿತ್ರಕಲೆಗಳನ್ನೊಳಗೊಂಡ ಅನೇಕ ಗ್ರಂಥಗಳು ಬಿಜಾಪುರ ಪ್ರದೇಶದಲ್ಲಿ ಲಭ್ಯವಿದ್ದು, ಕೆಲವು ಕೃತಿಗಳನ್ನುಮಾತ್ರ ಇಲ್ಲಿ ಪರಿಗಣಿಸಲಾಗಿದೆ.

ವಿಜಾಪೂರದ ಭಿತ್ತಿ ಚಿತ್ರ ಮತ್ತು ಹಸ್ತಪ್ರತಿ ಚಿತ್ರಗಳನ್ನು ಅಧ್ಯಯನಕ್ಕೊಳಪಡಿಸಿದಾಗ ಕೆಳಗಿನ ಕೆಲವು ಅಂಶಗಳು ಪ್ರಮುಖವಾಗಿ ಕಂಡುಬರುತ್ತವೆ. ಅದರಲ್ಲಿ ಮೊದಲಿಗೆ ಭಿತ್ತಿ ಚಿತ್ರಕಲೆಯ ಲಕ್ಷಣಗಳನ್ನು ಕೆಳಗಿನಂತೆ ಸ್ಥೂಲವಾಗಿ ಹೇಳಬಹುದು.

ವಿಜಾಪೂರದ ಪರಿಸರದಲ್ಲಿ ಐದಾರು ಕಡೆಗೆ ಭಿತ್ತಿ ಚಿತ್ರಗಳು ಕಂಡುಬರುತ್ತಿದ್ದು ಅವುಗಳಲ್ಲಿ ಅಸರ ಮಹಲಿನ ಚಿತ್ರಗಳು ಮಾತ್ರ ಉತ್ತಮ ಮಟ್ಟದವುಗಳಾಗಿವೆ. ಇಂದಿನವರೆಗೂ ಚನ್ನಾಗಿ ಉಳಿದುಕೊಂಡಿವೆ. ಆದರೆ ವಿಜಾಪುರಕ್ಕೆ ೩೦ ಕಿಲೋ ಮೀಟರ ದೂರವಿರುವ








ಹಸ್ತ ಪ್ರತಿ ಚಿತ್ರಕಲೆ, ವಿಜಾಪೂರ







ಹಸ್ತ ಪ್ರತಿ ಚಿತ್ರಕಲೆ, ವಿಜಾಪೂರ

ಕುಮಟಗಿಯ ಚಿತ್ರಗಳು ಹೆಚ್ಚಿನ ಪ್ರಮಾಣದಲ್ಲಿ ನಾಶವಾಗಿದ್ದು, ಚಿತ್ರದ ಹೊರ ರೇಖೆಗಳು, ಅಲ್ಲಲ್ಲಿ ಬಣ್ಣದ ಲೇಪನ ಮಾತ್ರ ಕಂಡುಬರುತ್ತದೆ. ಜಾಮಿಯಾ ಮಸೀದಿ, ಸಿ. ಎಸ್. ಐ. ಚರ್ಚ ಮತ್ತು ಸಾತ್ ಮಂಜಿಲ್ ಇವುಗಳಲ್ಲಿರುವ ನಕ್ಷಾ ಚಿತ್ರಗಳು ಚನ್ನಾಗಿದ್ದು ಸಾತ್ ಮಂಜಿಲ್‌ದ ಚಿತ್ರಗಳು ಅಲ್ಲಲ್ಲಿ ಉದುರಿಹೋಗಿವೆ. ವಿಜಾಪುರ ಪರಿಸರದ ಭಿತ್ತಿ ಚಿತ್ರಗಳನ್ನು ಗಮನಿಸಿದಾಗ, ವ್ಯಕ್ತಿ ಚಿತ್ರಗಳು ಕೇವಲ ಅಸರ್ ಮಹಲಿನಲ್ಲಿ ಮಾತ್ರ ಕಂಡುಬಂದಿದ್ದು ವಿಶೇಷವಾಗಿದೆ. ಇಲ್ಲಿನ ಚಿತ್ರಗಳಲ್ಲಿ ರಾಜ ರಾಣಿಯರು, ಅಧಿಕಾರಿಗಳು, ರಾಜ ಪರಿವಾರದವರು, ಇಂತಹ ಚಿತ್ರಗಳಲ್ಲದೆ ಮಗುವಿಗೆ ನಾಮಕರಣ ಮಾಡುತ್ತಿರುವ ದೃಶ್ಯ, ಚಾಂದಬೀಬಿಯ ಚಿತ್ರ, ಆದಿಲ್ ಶಾಹಿ ದೊರೆಯ ಚಿತ್ರ ಇಲ್ಲಿ ಕಂಡುಬರುತ್ತವೆ. ಆದರೆ ದುರಾದೃಷ್ಟವಶಾತ ಇಲ್ಲಿ ಎಲ್ಲ ಚಿತ್ರಗಳ ಮುಖದ ಭಾಗಗಳನ್ನು ನಾಶಮಾಡಲಾಗಿದೆ. ವ್ಯಕ್ತಿ ಚಿತ್ರಗಳು ಭಾರತೀಯ ಶೈಲಿಯನ್ನು ಹೋಲುತ್ತಿದ್ದು, ನಕ್ಷಾ ಮಾದರಿಗಳು ಯುರೋಪಿಯನ್ ಶೈಲಿಯಿಂದ ಪ್ರೇರಿತಗೊಂಡಿವೆ.

ಸಿ.ಎಸ್.ಐ.ಚರ್ಚನ ನಕ್ಷಾ ಚಿತ್ರಗಳು ಪಾಶ್ಚಾತ್ಯ ಪದ್ಧತಿಯಿಂದ ಪ್ರಭಾವಗೊಂಡಿದ್ದು, ನೋಡಿದರೆ, ಬಿಜಾಪುರ ಪ್ರದೇಶದಲ್ಲಿ ಅನೇಕ ಬಾಹ್ಯ ಶೈಲಿಗಳ ಪ್ರಭಾವ ಉಂಟಾಗಿದ್ದನ್ನು ಗಮನಿಸಬಹುದಾಗಿದೆ. ಇಲ್ಲಿಯ ಭಿತ್ತಿ ಚಿತ್ರ ರಚನೆಯ ಹಿನ್ನೆಲೆಯನ್ನು ಗಮನಿಸಿದಾಗ ಅದರ ಪ್ರಾರಂಭಿಕ ಹಂತವು ಪ್ರಾಗಿತಿಹಾಸ ಕಾಲದಿಂದ ಆರಂಭಗೊಂಡು ಬದಾಮಿ ಚಾಳುಕ್ಯರ ಕಾಲದಲ್ಲಿ ಮೊಳಕೆಯೊಡೆದು ಆದಿಲ್ ಷಾಹಿಗಳ ಕಾಲದಲ್ಲಿ ಹೆಮ್ಮರವಾಗಿ ಹರಡಿ ಕೊಂಡಿರುವುದನ್ನು ಗಮನಿಸಬಹುದು.

ಬಿಜಾಪುರ ಪರಿಸರದ ಹಸ್ತಪ್ರತಿ ಚಿತ್ರಗಳನ್ನು ಗಮನಿಸಿದ್ದಾಗ, ಕೆಲವು ವಿಶಿಷ್ಟ ಅಂಶಗಳು ಗೋಚರಿಸುತ್ತವೆ. ಈ ಪರಿಸರದಲ್ಲಿ ಹಸ್ತಪ್ರತಿ ಚಿತ್ರಗಳ ಜೊತೆಗೆ ಕಿರುರೂಪ ಚಿತ್ರಕಲೆ ಹೆಚ್ಚಾಗಿ ರಚನೆಗೊಂಡಿರುವುದು ಕಂಡು ಬರುತ್ತದೆ. ಈ ಪ್ರದೇಶದ ಕಿರುರೂಪ ಚಿತ್ರಕಲೆಯು ದಖನ್ ಶೈಲಿಯಿಂದ ಪ್ರಭಾವಿತಗೊಂಡಿರುವಂತೆಯೆ ಇಲ್ಲಿನ ಹಸ್ತಪ್ರತಿ ಚಿತ್ರಕಲೆ ಸಹಿತ ದಖನ್ ಶೈಲಿಯಿಂದ ಪ್ರೇರಣೆಗೊಂಡಿದೆ. ಬಿಜಾಪುರ ಪರಿಸರದಲ್ಲಿ ಕಂಡುಬರುವ ಹಸ್ತಪ್ರತಿ ಚಿತ್ರಗಳು ವಿವಿಧ ಬಗೆಯ ಗ್ರಂಥಗಳಲ್ಲಿ ರಚನೆಯಾಗಿವೆ. ಧಾರ್ಮಿಕ ಶಾಸ್ತ್ರಗಳು, ರಾಜನೀತಿ ಶಾಸ್ತ್ರಗಳು, ವೈದ್ಯಕಿಯ ಶಾಸ್ತ್ರಗಳು, ಖಗೋಳ ಶಾಸ್ತ್ರಗಳು, ಮತ್ತು ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಸಿದ ಗ್ರಂಥಗಳಲ್ಲದೆ. ಸಾಮಾಜಿಕ ವಿಷಯಗಳಿಗೆ ಸಂಬಂಧಪಟ್ಟ ಕೃತಿಗಳಲ್ಲಿ ಸಹಿತ ಹಸ್ತಪ್ರತಿ ಚಿತ್ರಗಳನ್ನು ರಚನೆ ಮಾಡಲಾಗಿದೆ. ಈ ಚಿತ್ರಗಳಲ್ಲಿ ವೈವಿಧ್ಯಮಯ ವಿಷಯಗಳು

ಕಂಡುಬರುತ್ತವೆ. ಬೇರೆ ಬೇರೆ ಕಾಲದಲ್ಲಿ ಅಳ್ವಿಕೆ ಮಾಡಿದ ಸುಲ್ತಾನರು ರಾಜಕುಮಾರರು, ರಾಣಿಯರು ಅಧಿಕಾರಿ ವರ್ಗದವರು ಶ್ರೀಮಂತ ವ್ಯಕ್ತಿಗಳು ರಾಜ ಪರಿವಾರದ ಇನ್ನಿತರ ಸದಸ್ಯರ ಚಿತ್ರಗಳು, ಬೇಟೆಯ ದೃಶ್ಯಗಳು ಪ್ರಾಣಿಪಕ್ಷಿಗಳ ಚಿತ್ರಗಳು, ನಿಸರ್ಗ ದೃಶ್ಯಗಳು, ಯೋಗಿನಿಯರ ಚಿತ್ರಗಳು, ಸಂತರ ಚಿತ್ರಗಳು ಇಲ್ಲಿ ಕಂಡು ಬರುತ್ತವೆ. ಇವುಗಳಲ್ಲಿ ಕೆಲವು ಚಿತ್ರಗಳು ನೈಜ ಶೈಲಿಯಲ್ಲಿದ್ದರೆ ಮತ್ತೆ ಕೆಲವು ಚಿತ್ರಗಳು ಅಲಂಕಾರಿಕ ವಿನ್ಯಾಸದಲ್ಲಿ ಪರಿವರ್ತನೆ ಮಾಡಲಾಗಿದೆ. ವರ್ಣ ವಿನ್ಯಾಸದಲ್ಲಿ ಉಜ್ವಲತೆ ಕಂಡುಬರುತ್ತದೆ. ವಿಜಾಪುರ ಪರಿಸರದ ಹಸ್ತಪ್ರತಿ ಚಿತ್ರಗಳು ಮೊಗಲ ಶೈಲಿಯಿಂದ ಪ್ರಭಾವಿತಗೊಂಡಿದ್ದರು ಸಹಿತ ಬಣ್ಣದ ಲೇಪನದಲ್ಲಿ ಭಿನ್ನತೆ ಕಂಡುಬರುತ್ತದೆ. ಮೊಗಲ್ ಚಿತ್ರಗಳಲ್ಲಿ ಪ್ರಖರ ವರ್ಣಗಳನ್ನು ಹೆಚ್ಚಾಗಿ ಬಳಸಿದ್ದರೆ. ಬಿಜಾಪುರದ ಚಿತ್ರಗಳಲ್ಲಿ ಸೌಮ್ಯ ವರ್ಣಗಳನ್ನು ಹೆಚ್ಚಾಗಿ ಬಳಸಲಾಗಿದೆ. ಚಿತ್ರ ಸಂಯೋಜನೆಯಲ್ಲಿ ಸಹಿತ ವ್ಯತ್ಯಾಸ ಕಂಡುಬರುತ್ತದೆ. ಮೊಗಲ್ ಹಸ್ತಪ್ರತಿ ಚಿತ್ರಗಳಲ್ಲಿ ಆಕಾರಗಳನ್ನು ಒಟ್ಟೊಟ್ಟಾಗಿ ಕಿಕ್ಕಿರಿದಂತೆ ರಚನೆ ಮಾಡಲಾಗಿದೆ, ಪ್ರಾಣಿಗಳ ರಚನಾ ಹಂತದಲ್ಲಿ ಮೊಗಲರು ನೈಜ ರೂಪವನ್ನು ಹೆಚ್ಚಿನ ಪ್ರಮಾಣದಲ್ಲಿ ಅನುಸರಣೆ ಮಾಡಿದರೆ, ಬಿಜಾಪುರದವರು ಅವುಗಳ ನೈಜ ಆಕಾರಕ್ಕಿಂತ ಸರಳ ರೂಪಗಳನ್ನು ಚಿತ್ರಿಸುವಲ್ಲಿ ಆಸಕ್ತಿ ಹೊಂದಿದಂತೆ ಕಂಡುಬರುತ್ತದೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಾಗ ವಿಜಾಪುರ ಪ್ರದೇಶದ ಹಸ್ತಪ್ರತಿ ಚಿತ್ರಕಲೆಯು ದಖನ್ ಶೈಲಿಯಿಂದ ಪ್ರೇರಿತಗೊಂಡಿದ್ದರೂ ಸಹಿತ ಹಿಂದೂ ಶೈಲಿ, ಮೊಗಲ್ ಶೈಲಿ, ಸ್ಥಳೀಯವಾದ ಜನಪದ ಶೈಲಿಗಳು ಸೂಕ್ಷ್ಮವಾಗಿ ಗೋಚರಿಸುತ್ತವೆ.

♣♣♣♣♣

ಅಧ್ಯಾಯ : ನಾಲ್ಕು

ವಿಜಾಪುರ ವಸ್ತು ಸಂಗ್ರಹಾಲಯದ ವರ್ಣಚಿತ್ರಗಳು

ಒಂದು ನೂರು ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿದ ಬಿಜಾಪೂರದ ಪ್ರಾಚ್ಯ ವಸ್ತು ಸಂಗ್ರಹಾಲಯ ಭಾರತಕ್ಕೆ ಕರ್ನಾಟಕ ಕೊಟ್ಟ ಕೊಡುಗೆ. ನೂರು ವರ್ಷಗಳ ಅವಧಿಯಲ್ಲಿ ಹಲವಾರು ಏಳು-ಬೀಳುಗಳನ್ನು ಇದು ಕಂಡಿದೆ. ಒಂದು ಶತಮಾನದ ಹಿಂದೆ ಸಣ್ಣ ಪ್ರಮಾಣದಲ್ಲಿ ಹುಟ್ಟಿಕೊಂಡ ಈ ಪ್ರಾಚ್ಯ ವಸ್ತು ಸಂಗ್ರಹಾಲಯ ಇಂದು ದೇಶದಲ್ಲಿ ಪ್ರಾದೇಶಿಕವಾಗಿ ಪ್ರಾರಂಭವಾದ ವಸ್ತು ಸಂಗ್ರಹಾಲಯಗಳೆಲ್ಲೆಲ್ಲ ಅತ್ಯಂತ ಹಳೆಯದು ಮತ್ತು ವಿಶಿಷ್ಟ ಕಲಾ ವಸ್ತುಗಳ ಸಂಗ್ರಹಗಳಿಂದ ಅತ್ಯಂತ ಮಹತ್ವ ಪಡೆದುಕೊಂಡಿದೆ.

೧೮೮೫ ರಲ್ಲಿ ಬಿಜಾಪೂರವು ಜಿಲ್ಲಾ ಸ್ಥಳವಾದ ನಂತರ ಸರಕಾರಿ ಕಛೇರಿಗಳಿಗೆ ಅಗತ್ಯವಾದ ಕಟ್ಟಡಗಳ ನಿರ್ಮಾಣ ಇತ್ಯಾದಿಗಳಿಗಾಗಿ ಬ್ರಿಟಿಷ ಸರಕಾರ ಅದಿಲಶಾಹಿ ಕಾಲದ ಬಿಜಾಪುರವನ್ನು ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಂಡಿತು. ಹಲವಾರು ನೂರು ವರ್ಷಗಳ ಹಳೆಯ ಕಟ್ಟಡಗಳನ್ನು ಇದಕ್ಕಾಗಿ ಒಡೆದು ಕೆಡವಲಾಯಿತು. ಕೋಟೆಯ ಕೆಲವು ಬುರುಜುಗಳು ಗೋಡೆಗಳು ಆಧುನಿಕ ಕಟ್ಟಡಗಳಿಗಾಗಿ ಉರುಳಿದವು ಈ ನೆಲವನ್ನು ಅಗೆದಾಗ ಅಮೂಲ್ಯವೆನಿಸಬಹುದಾದ ಕಲಾತ್ಮಕ ವಸ್ತುಗಳು ದೊರಕಿದುವು. ದೊರೆತ ಇಂಥ ಕೆಲವು ವಸ್ತುಗಳನ್ನು ಒಂದೆಡೆ ಓರಣವಾಗಿ ಜೋಡಿಸುವ ಯೋಚನೆ ಬಂದಾಗ ಹಿಂದೆಲ್ಲ ಇಂಥ ಯೋಜನೆಗಳ ಪ್ರೇರಕ ಶಕ್ತಿಯಾಗಿದ್ದ. ಡಾ. ಜೇಮ್ಸ್ ಬರ್ಗಸ್, ಹೆನ್ರಿಕಸಿನ ಮೊದಲಾದವರು ಸಕ್ರೀಯವಾಗಿ ಕಾರ್ಯ ಪ್ರವೃತ್ತರಾದರು. ಪರಿಣಾಮ ಕೆಲವು ದಿನಗಳಲ್ಲಿ ಆನಂದ ಮಹಲ ಕಟ್ಟಡದ ಹಿಂದುಗಡೆ ಇದ್ದ ಚಿಕ್ಕ ಹೊರಮನೆಯಲ್ಲಿ ೧೮೯೨ ರಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯ

ಜನ್ಮತಾಳಿತು. ಮುಂದಿನ ದಿನಗಳಲ್ಲಿ ಸಂಗ್ರಹವಾದ ವಸ್ತುಗಳು ಜಾಸ್ತಿಯಾಗಿ ಸ್ಥಳಾವಕಾಶದ ಕೊರತೆ ಕಂಡುಬಂದಿತು. ಈ ಸ್ಥಿತಿಯಲ್ಲಿ ಸಂಗ್ರಹಗಳು ಒಡೆದು ಮುರಿದು ಹಾಳಾಗತೊಡಗಿದವು. ಈ ತೊಂದರೆಯನ್ನು ಮನಗಂಡು ಅಂತಿಮವಾಗಿ ಸಾಕಷ್ಟು ಬೆಳೆದಿದ್ದ ಪ್ರಾಚ್ಯ ಸಂಗ್ರಹಾಲಯವನ್ನು ಈಗಿರುವ ವಿಶಾಲವಾದ ಕಟ್ಟಡಕ್ಕೆ ಸ್ಥಳಾಂತರಿಸಬೇಕಾಯಿತು.[೧]

ಈಗಿನ ಕಟ್ಟಡವನ್ನು ಆದಿಲಶಾಹಿ ಅರಸರ ಕಾಲದಿಂದ 'ನಖ್ಖರ್'ಖಾನ / ನಗರಖಾನ ಎಂದು ಕರೆಯಲಾಗುತ್ತಿದೆ. ಒಂದು ನೆಲ ಮಾಳಿಗೆಯನ್ನು ಹೊಂದಿರುವ ಈ ಕಲ್ಲಿನ ಕಟ್ಟಡಕ್ಕೆ ನೆಲ ಅಂತಸ್ತೂ ಸೇರಿ ಒಂದು ಮಹಡಿಯಿದೆ. ವಿಶ್ವ ವಿಖ್ಯಾತ ಗೋಳಗುಮ್ಮಟದಿಂದ ದಕ್ಷಿಣಕ್ಕೆ ಸುಮಾರು ನಾನೂರು ಅಡಿಗಳಷ್ಟು ದೂರದಲ್ಲಿ ಸುಂದರವಾದ ನಗರ ಖಾನ ನಿಂತಿದೆ. ಗೋಳ ಗುಮ್ಮಟ ಎದುರಿನ ಸ್ಟೇಷನ ರಸ್ತೆಯಿಂದ ನೋಡಿದರೆ ನಗರ ಖಾನಾ ಗೋಳಗುಮ್ಮಟನೊಳಗೆ ಹುದುಗಿ ಹೋಗಿರುವಂತೆ ಭಾಸವಾಗತ್ತದೆ. ಆದರೆ ಸುಂದರವಾಗಿ ಜಗದ ವಾಸ್ತು ಶಿಲ್ಪದ ಆಚ್ಚರಿಗಳಲ್ಲಿ ಒಂದಾದ ಗೋಳಗುಮ್ಮಟಕ್ಕೆ ದೃಷ್ಠಿ ತಾಕದಿರಲೆಂದು ಈ ರೀತಿ ಕಟ್ಟಲಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ. ಗೋಳಗುಮ್ಮಟ ಕಟ್ಟುವಾಗ ಅಲ್ಲಿಗೆ ಉಸ್ತುವಾರಿಗಾಗಿ ಬರುತ್ತಿದ್ದ ಅರಸನ ವಿಶ್ರಾಂತಿಗೆಂದು ಈ ಕಟ್ಟಡವನ್ನು ಕಟ್ಟಲಾಯಿತೆಂದೂ ಇದರಲ್ಲಿ ಅರಸನ ಆಗಮನದ ಸೂಚಕವಾಗಿ ನಗಾರಿಯನ್ನು ಬಾರಿಸಲಾಗುತ್ತಿತ್ತೆಂದು ಇತಿಹಾಸದ ಅಧಿಕೃತ ಮೂಲಗಳು ತಿಳಿಸುತ್ತವೆ.

ನಗರ ಖಾನಾ ಸಂಪೂರ್ಣ ವಾದಂತಿಲ್ಲ ಪ್ರಾಯಶ: ಇದು ಪೂರ್ಣವಾಗುವುದರ ಒಳಗೆ ಯಾವ ಅಡ್ಡಿ ಒದಗಿ ಬಂತೋ ಗೊತ್ತಿಲ್ಲ ಈ ಕಟ್ಟಡದ ಮೇಲ್ಭಾಗ ಇಂದಿಗೂ ಅಪೂರ್ಣವಾಗಿದೆ. ಮುಂಚಾಚಿಕೊಂಡು ಕಲಾತ್ಮಕ ಮೂಲೆ ಸೂರುಗಳ ಮೇಲೆ ಅದಿಲ ಶಾಹಿ ವಾಸ್ತು ಶಿಲ್ಪಗಳ ಸಹಜ ಧರ್ಮದಂತೆ ನಾಲ್ಕ ದಿಕ್ಕಿಗೂ ಗಗನ ಚುಂಬಿ ಮಿನಾರುಗಳನ್ನು ನಿರ್ಮಾಣ ಮಾಡುವ ಉದ್ದೇಶವಿದ್ದಂತಿದೆ ಅದು ಈಡೇರಿಲ್ಲ.

ನಸು ಕಂದು-ಕೆಂಪು ಬಣ್ಣಗಳ. ಕಲ್ಲಿನ ಈ ಸುಂದರವಾದ ಕಟ್ಟಡವನ್ನು ವಸ್ತು ಸಂಗ್ರಹಾಲಯವಾಗಿ ಮಾರ್ಪಡಿಸುವ ಸಮಯದಲ್ಲಿ ಮಹಡಿಯಲ್ಲಿದ್ದ ಬೃಹತ್ ಗಾತ್ರದ ಗೋಡೆ ಕಿಟಕಿಗಳಿಗೆ ಬಾಗಿಲುಗಳನ್ನು ಅಳವಡಿಸಬೇಕಾಗಿ ಬಂದಾಗಲೂ ಸಹ ಬ್ರಿಟಿಷ ಸರಕಾರ ಏನೋ ಒಂದನ್ನು ಮಾಡಿ ಕೈ ತೊಳೆದು ಕೊಳ್ಳಲಿಲ್ಲ ತುಂಬಾ ಮುತವರ್ಜಿಯಿಂದ ಇದರ

೧. ಡಾ. ಕೃಷ್ಣಕೋಲಾರ ಕುಲಕರ್ಣಿ : ವಿಸ್ಮಯ ಇದು ವಿಜಾಪುರ : ಪುಟ-೨೪.

ಕಿಟಕಿಗಳ ವಿನ್ಯಾಸ ಮಾಡಿತ್ತು ಬಿಜಾಪುರದಲ್ಲಿ ಇದ್ದ ಇನ್ನೊಂದು ಪ್ರಸಿದ್ಧ ಕಟ್ಟಡ ಅಸಾರ್ ಮಹಲ್ ಕಿಟಕಿಗಳ ಸುಂದರ ವಿನ್ಯಾಸವನ್ನು ಇದಕ್ಕಾಗಿ ನಕಲು ಮಾಡಲಾಯಿತು ಪರಿಣಾಮವಾಗಿ ಉದಯಿಸುವ ಸೂರ್ಯನ ವಿನ್ಯಾಸದ ಈ ಕಿಟಕಿಗಳು ಇಂದಿಗೂ ನಿಂತು ನೋಡುವಂತಿವೆ. ಆಕರ್ಷಕ ಜಾಲಂಧ್ರಗಳಿಂದ ಮನ ಸೆಳೆಯುತ್ತವೆ.

ವಸ್ತು ಸಂಗ್ರಹಾಲಯದ ನೆಲ ಮಾಳಿಗೆಯಲ್ಲಿ ಹೆಚ್ಚುವರಿಯಾದ ಸಂಗ್ರಹವನ್ನು ಇಡಲಾಗಿದೆ. ಮೊದಲು ಸಿಗುವ ನೆಲ ಮಹಡಿಯನ್ನು ಪ್ರವೇಶಿಸುತ್ತಿದ್ದಂತೆ ಉತ್ತರ ಕರ್ನಾಟಕದ ವಿವಿಧ ಭಾಗಗಳಿಂದ ಮುಖ್ಯವಾಗಿ ಬಿಜಾಪುರದ ಸುತ್ತ ಮುತ್ತ ದೊರಕಿದ ಅಮೂಲ್ಯ ಮತ್ತು ಅಪರೂಪದ ವಸ್ತುಗಳನ್ನು ಪ್ರದರ್ಶಿಸಲಾಗಿದೆ.

ಎರಡನೇ ಶತಮಾನದ ಅಷ್ಟಭುಜದ ನಟರಾಜನ ಪ್ರತಿಮೆ ಭಗ್ನವಾಗಿದ್ದರೂ ತನ್ನ ಚೆಲುವಿಕೆಯಿಂದ ಗಮನ ಸೆಳೆಯುತ್ತದೆ. ಶಿವ ತನ್ನ ಗಣಗಳ ಜೊತೆ ನರ್ತಿಸುವ ಕಲ್ಲಿನ ಬಾಗಿಲು ತೋರಣ, ಕಹಳೆ ಊದುವಮಧ್ಯಲೆ, ಬಾರಿಸುವ ಉಬ್ಬು ಶಿಲ್ಪಗಳು ಕರ್ನಾಟಕ ಶಿಲ್ಪಿಗಳ ಪರಿಣತಿ ಮತ್ತು ಪರಂಪರೆಗಳ ಪ್ರತೀಕವಾಗಿವೆ. ಏಳು-ಎಂಟನೆಯ ಶತಮಾನದ ವೀರಗಲ್ಲುಗಳು ಮತ್ತು ಶಾಸನಗಳು ಕನ್ನಡಿಗರ ಪೌರಷವನ್ನು ಸಾರಿ ಹೇಳುತ್ತವೆ. ಸಮ ಭಂಗಿಯಲ್ಲಿರುವ ಅಪರೂಪದ ಕೇಶವ ಶಿಲ್ಪ ವೀರಭದ್ರನ ಮುದ್ದಾದ ಪ್ರತಿಮೆ, ೧೪ನೇ ಶತಮಾನದಲ್ಲಿ ಕೆತ್ತಲಾದ ಪಾರ್ಶ್ವನಾಥನ ಕರಿಕಲ್ಲು ವಿಗ್ರಹ ಇವು ವಸ್ತು ಸಂಗ್ರಹಾಲಯದ ಮೌಲ್ಯವನ್ನು ಹೆಚ್ಚಿಸಿವೆ. ಇದರ ಹಿಂದುಗಡೆಯಲ್ಲಿಯೆ ಕ್ರಿ. ಶ. ಆರನೆಯ ಶತಮಾನದಲ್ಲಿ ಮಂಗಳೇಶ ನಿರ್ಮಿಸಿದ ಅಪರೂಪದ ವಿಜಯ ಸ್ತಂಭವಿದೆ. ನೆಲದಿಂದ ಮೇಲು ಛಾವಣಿಯವರೆಗೆ ದೈತ್ಯವಾಗಿ ಎದ್ದು ನಿಂತಿರುವ ಈ ವಿಜಯ ಸ್ತಂಭವನ್ನು ಬಾದಾಮಿಯ ಹತ್ತಿರದ ಮಹಾಕೂಟದಿಂದ ಇಲ್ಲಿಗೆ ತರಲಾಯಿತು. ಇತಿಹಾಸದ ದೃಷ್ಟಿಯಿಂದ ಇದರ ಮೇಲಿರುವ ಶಾಸನ ಅಮೂಲ್ಯವಾದದು.

ಈ ಸಂಗ್ರಹಾಲಯದ ವಸ್ತುಗಳ ಹಲವಾರು ದೃಷ್ಟಿಯಿಂದ ಮಹತ್ವದ್ದಾಗಿವೆ. ಕ್ರಿ. ಶ. ೧೧೦೭ ರಲ್ಲಿ ವಿಜಾಪುರದ ಸ್ವಯಂಭೂ ಸಿದ್ದೇಶ್ವರನ ದೇವಾಲಯಕ್ಕೆ ಚಾಲುಕ್ಯ ವಿಕ್ರಮಾದಿತ್ಯ ಕೊಟ್ಟ ದಾನ-ದತ್ತಿಗಳ ವಿವರದ ಶಾಸನವನ್ನು ಇಂದಿಗೂ ಅಷ್ಟೇ ಜತನದಿಂದ ಕಾಪಾಡಲಾಗಿದೆ. ಅಗ್ರಹಾರದ ಇತಿಹಾಸದಲ್ಲಿ ಪ್ರಮುಖವಾದ ಸಾಲೋಟಗಿ ಅಗ್ರಹಾರಕ್ಕೆ ದಾನಕೊಟ್ಟ ಸ್ತಂಭ ಶಾಸನವು ಇದೆ. ತಳದಲ್ಲಿ ಚೌಕಾಕಾರವಾಗಿದ್ದು ಮೇಲಕ್ಕೆ ಹೋಗುತ್ತ

ಚೂಪಾಗಿರುವ ಈ ದಾನ ಶಾಸನದ ಮೂರು ದಿಕ್ಕುಗಳಲ್ಲಿ ಸಂಸ್ಕೃತ ಲಿಪಿಯಿದ್ದು ಕೆಳಭಾಗದಲ್ಲಿ ಕನ್ನಡದ ಲಿಪಿಯಿದೆ.

ಕ್ರಿ.ಶ. ೧೭ನೆಯ ಶತಮಾನದ ಅರೆಬಿಕ-ಪರ್ಶಿಯನ್ ಲಿಪಿಗಳ ಕರಿಕಲ್ಲ ಬರಹಗಳನ್ನು ಕ್ಯಾಲಿ ಗ್ರಫಿ ವಿಧಾನದಿಂದ ಅದ್ಭುತವಾಗಿ ಇಲ್ಲಿ ಮೂಡಿಸಲಾಗಿದೆ. ಇಂದಿಗೂ ಬಳಸಬಹುದಾದ ಕಲ್ಲಿನ ಬೃಹತ್ ಸರಪಳಿ, ಇವೆಲ್ಲ ಈ ನೆಲ ಮಹಡಿಯ ಹೆಮ್ಮೆಯ ಸಂಗ್ರಹಗಳು. ಮೂವತ್ತೆರಡು ಕಿರಿದಾದ ಮೆಟ್ಟಿಲುಗಳನ್ನು ಹತ್ತಿ ಮೇಲಕ್ಕೆ ಹೋದ ಪ್ರವಾಸಿಗರಿಗೆ ಮೊದಲ ಮಹಡಿಯಲ್ಲಿ 'ಆದಿಲಶಾಹಿ ಕಾಲದ ದರ್ಶನ ವಾಗುತ್ತದೆ. ಕಲಾತ್ಮಕ ಆಸಕ್ತಿಯಿಂದ ಮತ್ತು ಚತುರತೆಯಿಂದ ಅಪರೂಪದ ಐತಿಹಾಸಿಕ ವಸ್ತುಗಳನ್ನು ಇಲ್ಲಿ ಓರಣವಾಗಿ ಇರಿಸಲಾಗಿದೆ. ವಸ್ತು ಸಂಗ್ರಾಹಕರ ದೃಷ್ಟಿಯಲ್ಲಿ ಕೋಟಿಗಟ್ಟಲೆ ಬೆಲೆಬಾಳಬಹುದಾದ ವಿವಿಧ ಸಂಗ್ರಹಗಳು ಇಲ್ಲಿ ಆದಿಲಶಾಹಿಗಳ ಕಾಲದ ಶ್ರೀಮಂತ ಸಾಂಸ್ಕೃತಿಕ ಪರಂಪರೆಗಳ ಕತೆ ಹೇಳುತ್ತವೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಬರೆಯಲಾದ ವಿಜಾಪುರ ಕೋಟೆಯ ನಗರ ನಕ್ಷೆಯೊಂದು ಇಲ್ಲಿ ಅದ್ಭುತವಾಗಿದೆ. ಐದು ಅಡಿ ಉದ್ದದ ಈ ನಕಾಶೆಯಲ್ಲಿ ಕೆಂಪು, ಹಳದಿ, ನೀಲಿ, ಕಪ್ಪು, ಇತ್ಯಾದಿ ಕೆಲವೇ ಉಜ್ವಲ ವರ್ಣಗಳನ್ನು ಬಳಸಿ ರಾಜಧಾನಿಯಾಗಿದ್ದ ವಿಜಾಪುರದ ಭೂಪಟವನ್ನು ತಯಾರಿಸಲಾಗಿದೆ.

ಎಂಟು ಜನ ಆದಿಲ ಶಾಹಿ ರಾಜರ ಕಪ್ಪು ಬಿಳುಪಿನ ಭಾವ ಚಿತ್ರಗಳು, ಬಿಜಾಪುರದಲ್ಲಿ ಆಗ ಆಳುತ್ತಿದ್ದ ಅರಸೊತ್ತಿಗೆಯ ಜೀವನವನ್ನು ತೋರಿಸುವ ಚೀನೀ ಮಣ್ಣಿನ ತಟ್ಟೆ ಬಟ್ಟಲು, ಹೂಜಿಗಳು, ಚಿನ್ನದ ಲೇಪನವಿರುವ ೧೭ ನೇ ಶತಮಾನದ ವರ್ಣ ಚಿತ್ರಗಳು ತೆರೆಯ ಹಿಂದಿದ್ದ ರಾಣಿವಾಸದವರ ಬದುಕನ್ನು ನಮ್ಮೆದುರು ಮೊದಲಬಾರಿಗೆ ತೆರೆಯುತ್ತವೆ. ದಖನೀ ಶೈಲಿಯ ಈ ಉತ್ತಮ ಚಿಕಣಿ ಚಿತ್ರಗಳಲ್ಲಿ ಚಾಂದಬೀಬಿ, ರಂಭಾವತಿ ಮೊದಲಾದ ಮಹಿಳೆಯರ ಆಕರ್ಷಕ ಚಿತ್ರಗಳಿವೆ.

ಚಿನ್ನ, ಕೆಂಪು, ನೀಲಿ, ವರ್ಣಗಳಲ್ಲಿರುವ ಕೆಲವು ಹಸ್ತ ಪ್ರತಿಗಳು ಕ್ರಿ.ಶ.೧೬೦೪ ರ ಕಾಲಕ್ಕೆ ಸೇರಿವೆ. ಇವಕ್ಕೆ ಸುಂದರವಾದ ಚರ್ಮದ ಹೊದಿಕೆಯನ್ನು ಹಾಕಲಾಗಿದೆ. ಐತಿಹಾಸಿಕ ಮಹತ್ವವನ್ನುಳ್ಳ ಗದ್ಯ-ಪದ್ಯಗಳ ಗ್ರಂಥಗಳು, ಶೃಂಗಾರ ಕಾವ್ಯಗಳು, ರಾಜಮುದ್ರೆಯಿರುವ ಸನದುಗಳು ಮತ್ತು ಫರ್ಮಾನುಗಳನ್ನು ಭದ್ರವಾದ ಗಾಜಿನ ಕಪಾಟುಗಳಲ್ಲಿ ಅಚ್ಚುಕಟ್ಟಾಗಿ ಪ್ರದರ್ಶಿಸಲಾಗಿದೆ. ಈ ವಸ್ತು ಸಂಗ್ರಹಾಲಯಕ್ಕೆ ಭೇಟಿಯಿತ್ತ ಪ್ರವಾಸಿಗರು ದಂಗುಬಡಿದು ನಿಲ್ಲವುದು ಭಾರತದಲ್ಲೇ ತಯಾರಾದ ಹಂಡೆಗಳ ಎದುರಿಗೆ ಹದಿನೈದು-ಹದಿನಾರನೇ

ಶತಮಾನದಲ್ಲಿ ತಯಾರಾದ ಇವು ಚೀನೀ ಮಣ್ಣಿನ ಹಂಡೆಗಳನ್ನು ಹೋಲುತ್ತವೆ. ಎಣ್ಣೆ, ಉಪ್ಪಿನಕಾಯಿ ಇತ್ಯಾದಿಗಳನ್ನು ಸಂಗ್ರಹಿಸಲು ಇವನ್ನು ಬಳಸಲಾಗುತ್ತಿತ್ತು, ಜಿಲ್ಲಾಧಿಕಾರಿಗಳ ಕಛೇರಿಯನ್ನಾಗಿ ಪರಿವರ್ತಿಸುವಾಗ ಫಾರೂಕ ಮಹಲ ಹಾಗೂ ಇಂದಿನ ಪೋಲಿಸ್ ವರಿಷ್ಠರ ವಾಸಸ್ಥಳಗಳಿಂದ ಈ ವಸ್ತುಗಳು ದೊರೆತಿವೆಂದೇ ಅವುಗಳಿಗೆ ಚೀನೀ ಮಹಲು ಎಂದು ಹೆಸರು ಬಂದಿತು.

ಬಿದ್ರಿ ಕಲೆಯ ಹಳೆಯ ಪ್ರಯೋಗಗಳನ್ನು ಇಲ್ಲಿ ಜೀವಂತವಾಗಿ ಕಾಣುತ್ತೇವೆ. ಊಟದ ನಂತರ ಕೈತೊಳೆವ ಪಾತ್ರೆ ಹೂದಾನಿಗಳು, ಪೀಕದಾನಿ, ಶ್ರೀಮಂತ ಮಹಿಳೆಯರು ಬಳಸುತ್ತಿರಬಹುದಾದಂತಹ ಅಲಂಕರಣವಿರುವ ಆಭರಣಗಳ ಪೆಟ್ಟಿಗೆ, ಬಣ್ಣದ ಚಿತ್ರಗಳಿಂದ ಅಲಂಕೃತವಾದ ತಾಳೆಗರಿಯ ಬೀಸಣಿಗೆಗಳು ಇಂದಿಗೂ ಉಪಯೋಗಕ್ಕೆ ಬರುವಂತಿವೆ.

ಯುದ್ಧಕ್ಕೆ ಸಂಬಂಧಿಸಿದ ವಸ್ತುಗಳ ಸಂಗ್ರಹದಲ್ಲಿ ಅಂದಿನ ಸರದಾರರು, ರಾಜರು ಯದ್ಧದಲ್ಲಿ ಬಳಸುತ್ತಿದ್ದಿರಬಹುದಾದ ರಕ್ಷಣಾ ಕವಚಗಳು, ಫಿರಂಗಿಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ವಿಶಾಲವಾದ ಗಾಜಿನ ಕಪಾಟುಗಳಲ್ಲಿರುವ ಪರ್ಶಿಯಾ ದೇಶದ ರತ್ನ ಗಂಬಳಿಗಳನ್ನು ಉಣ್ಣೆಯ ಜಮಖಾನಗಳ ಸಂಗಡ ಚಿಕ್ಕ ಪುಟ್ಟ ರಿಪೇರಿ ಮಾಡಿ ಪ್ರದರ್ಶಿಸಲಾಗಿದೆ. ಇಡಿ ವಸ್ತು ಸಂಗ್ರಹಾಲಯ ತುಂಬೆಲ್ಲ ವಿಜಾಪುರ ನಗರದ ವಿವಿಧ ಸ್ಮಾರಕಗಳ ಕಪ್ಪು-ಬಿಳುಪು ಛಾಯ ಚಿತ್ರಗಳನ್ನು ನೇತುಹಾಕಿದ್ದಾರೆ.

ಈ ರೀತಿಯಲ್ಲಿ ಅತ್ಯಂತ ವ್ಯವಸ್ಥಿತವಾಗಿ ಮತ್ತು ಅಲಂಕಾರಿಕವಾಗಿ ಮನಸೆಳೆಯುವಂತೆ ವ್ಯವಸ್ಥೆಗೊಳಿಸಲಾದ ವಸ್ತು ಸಂಗ್ರಹಾಲಯದಲ್ಲಿ ಅನೇಕ ಅಮೂಲ್ಯ ಚಿತ್ರಕಲಾ ಕೃತಿಗಳಿವೆ. ಇಲ್ಲಿ ಸಂಗ್ರಹಿಸಲಾದ ಚಿತ್ರಗಳು ವಿಜಾಪುರ ಸುಲ್ತಾನರ ಕಾಲದಲ್ಲಿ ರಚನೆಯಾಗಿದ್ದು. ಅನೇಕ ಮಾಧ್ಯಮಗಳಲ್ಲಿ ಕಂಡುಬರುತ್ತವೆ. ಕಾಗದ ಮಣ್ಣು, ರಟ್ಟು, ಶಿಲೆ, ಲೋಹ, ಮರ ಮುಂತಾದ ಮಾಧ್ಯಮಗಳಲ್ಲಿ ರಚನೆಯಾದ ಚಿತ್ರಗಳು ಇಲ್ಲಿ ಸಂಗ್ರಹ ಗೊಂಡಿದ್ದು, ಇದರಲ್ಲಿ ಅತಿ ಹೆಚ್ಚಿನ ಚಿತ್ರಗಳು ಕಾಗದದ ಮೇಲೆ ರಚನೆಯಾಗಿವೆ. ಅಧ್ಯಯನದ ಅನುಕೂಲದ ದೃಷ್ಟಿಯಿಂದ ಇಲ್ಲಿನ ಚಿತ್ರಗಳನ್ನು ಕಾಗದ ಮೇಲಿನ ಚಿತ್ರಗಳು ಲೋಹದ ಮೇಲಿನ ಚಿತ್ರಗಳು ಶೀಲೆಯ ಮೇಲಿನ ಚಿತ್ರಗಳು ಮತ್ತು ಮಣ್ಣು ಮಾಧ್ಯಮಗಳ ಮೇಲಿನ ಚಿತ್ರಗಳೆಂಬುದಾಗಿ ವಿಂಗಡಿಸಿಕೊಂಡು ವಿವರಿಸಬಹುದಾಗಿದೆ.ಮೊದಲನೆಯದಾಗಿ ಕಾಗದದ ಮೇಲಿನ ಚಿತ್ರಗಳ ಬಗ್ಗೆ ನೋಡಬಹುದು.

ಕಾಗದದ ಮೇಲೆ ಅನೇಕ ರೀತಿಯ ಚಿತ್ರಕಲಾ ಕೃತಿಗಳನ್ನು ಸುಲ್ತಾನರ ಕಾಲದಲ್ಲಿ ರಚನೆ ಮಾಡಲಾಗಿದೆ. ಭಾವಚಿತ್ರಗಳು, ವ್ಯಕ್ತಿ ಚಿತ್ರಗಳು, ರಾಜ ರಾಣಿಯರ ಚಿತ್ರಗಳು, ರಾಜ ರಾಣಿಯರ ಸರಸದಲ್ಲಿ ತೊಡಗಿರುವುದು, ಸೇವಕ ಸೇವಕಿಯರ ಚಿತ್ರಗಳು, ಸಂಗೀತ ವಾದ್ಯ ನುಡಿಸುತ್ತಿರುವ ಸ್ತ್ರೀ, ಪುರಷರು, ಧರ್ಮ ಚರ್ಚೆಯಲ್ಲಿ ತೊಡಗಿರುವ ವ್ಯಕ್ತಿಗಳು, ಯೋಗಿನಿಯರ ಚಿತ್ರಗಳು, ರಾಜ ಪರಿವಾರದವರ ಚಿತ್ರಗಳು, ಸಂತರು ಮತ್ತು ಮಹಾತ್ಮರ ಚಿತ್ರಗಳು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ರಾಗಮಾಲಾ ಚಿತ್ರಗಳು ರಚನೆಯಾಗಿವೆ. ಇಂಥಹ ಅನೇಕ ವಸ್ತು ವಿಷಯಗಳಿಗೆ ಸಂಬಂಧಿಸಿದ ಚಿತ್ರಕಲಾ ಕೃತಿಗಳಲ್ಲಿ ಕೆಲವು ಕಲಾಕೃತಿಗಳನ್ನು ಈ ಸಂಗ್ರಹಾಲಯದಲ್ಲಿ ಕಾಯ್ದಿಡಲಾಗಿದೆ. ಇಲ್ಲಿ ಸಂಗ್ರಹಿಸಲಾದ ಚಿತ್ರಗಳಲ್ಲಿ ಪ್ರಮುಖವಾದ ಕೆಲವು ಚಿತ್ರಗಳನ್ನು ಈ ಕೆಳಗಿನಂತೆ ವಿವೇಚಿಸಬಹುದು.

ಇಬ್ರಾಹಿಮ್ ಆದಿಲ್‌ಶಹನ ಚಿತ್ರ :

ಈ ಕಲಾಕೃತಿಯಲ್ಲಿ ಯುವಕನಾದ ಎರಡನೆಯ ಇಬ್ರಾಹಿಮ್ ಅದಿಲ್‌ಶಾಹಿಯ ಭಾವ ಚಿತ್ರವನ್ನು ರಚನೆ ಮಾಡಲಾಗಿದೆ. ಕುತ್ತಿಗೆಯ ಮಟ್ಟದಲ್ಲಿ ಮಾತ್ರ ಇರುವ ಈ ಕಲಾಕೃತಿಯ ನಗು ಮುಖದಿಂದ ಕೂಡಿದೆ, ವಿಶಾಲವಾದ ಕಣ್ಣುಗಳು, ಚೂಪಾದ ಮೂಗು, ಚಿಗುರು ಮೀಸೆ, ಆತನ ಯವ್ವನವನ್ನು ಸೂಚಿಸುತ್ತವೆ. ಕುತ್ತಿಗೆಯ ಕೆಳಭಾಗವು ಸ್ವಲ್ಪ ಉಬ್ಬಿದ್ದು ಕಲಾವಿದನ ಕೌಶಲ್ಯವನ್ನು ಪರೀಕ್ಷಿಸುವಂತಿದೆ. ತಲೆಗೆ ಕೊಳುವೆಯಾಕಾರದ ಕಿರೀಟ, ಕೊರಳಲ್ಲಿ ಆಭರಣ ಧರಿಸಿಕೊಂಡಿರುವ ಇಬ್ರಾಹಿಮನು ಕೆಂಪು ಅಂಗಿಯನ್ನು ತೊಟ್ಟಿರುವಂತೆ ಚಿತ್ರಿಸಲಾಗಿದೆ. ಹಳದಿ ವರ್ಣದ ಛಾಯೆ ಈ ಚಿತ್ರದಲ್ಲಿ ಹೆಚ್ಚಾಗಿದ್ದು ನೆರಳು ಬೆಳಕಿನ ವಿನ್ಯಾಸವು ಕಲಾ ದೃಷ್ಟಿಯಿಂದ ಅಷ್ಟೊಂದು ಪರಿಣಾಮಕಾರಿ ಅನಿಸುವುದಿಲ್ಲ.

ಮೊಹಮ್ಮದ ಆದಿಲಶಹನ ಪತ್ನಿಯ ಚಿತ್ರ :

ಆದಿಲ್ ಶಹನ ಪತ್ನಿ ಮಂಟಪ ಒಂದರಲ್ಲಿ ಕುಳಿತುಕೊಂಡು ಸಂಗೀತ ಅಲಿಸುತ್ತಿದ್ದಾಳೆ, ನಾಲ್ಕು ಕಂಬದ ಮಂಟಪದ ಮೇಲ್ಭಾಗದಲ್ಲಿ ಮತ್ತೊಂದು ಅಂತಸ್ತನ್ನು ನಿರ್ಮಿಸಲಾಗಿದೆ. ಮಂಟಪದ ಒಳಗೆ ಕುಳಿತ ಆದಿಲ್ ಶಹನ ಪತ್ನಿ ಕೈಯಲ್ಲಿ ಹೂ ಮಾಲೆಯನ್ನು ಹಿಡಿದುಕೊಂಡು ಒರಗಿದ್ದಾಳೆ. ಎಡ ಭಾಗದಲ್ಲಿರುವ ಕೊಳದಲ್ಲಿ ಕಮಲದ ಹೂಗಳು ಅರಳಿ ನಿಂತಿವೆ. ಬಾತು ಕೋಳಿಗಳು ವಿಹರಿಸುತ್ತಿರುವ ಈ ಕೊಳದಲ್ಲಿ ಕಾರಂಜಿ ನಿರ್ಮಿಸಲಾಗಿದೆ. ಎದುರು ಭಾಗದಲ್ಲಿ ಮಹಿಳೆಯೊಬ್ಬಳು ತಂಬೂರಿ ನುಡುಸುತ್ತಿದ್ದು ರಾಣಿಯು ತನ್ಮಯತೆಯಿಂದ ಆಲಿಸುತ್ತಿದ್ದಾಳೆ, ಮುಂಭಾಗದಲ್ಲಿ ಅಲಂಕಾರಿಕ ವಸ್ತುಗಳು ಹೂದಾನಿಗಳು ರಚನೆಯಾಗಿದೆ.

ಹಿಂಭಾಗದಲ್ಲಿ ವಿವಿಧ ರೀತಿಯ ಹೂವಿನ ಗಿಡಗಳು, ಅಲಂಕಾರಿಕ ನಕ್ಷೆಗಳು ರಚನೆಗೊಂಡಿವೆ ಆದಿಲಶಹನ ಪತ್ನಿ ಧರಿಸಿರುವ ಕುಪ್ಪಸವು ಅತ್ಯಂತ ಕಿರಿದಾಗಿದ್ದು ಇದು ರಾಜಸ್ಥಾನಿ ಚಿತ್ರ ಶೈಲಿಯ ಪ್ರಭಾವಕ್ಕೆ ಒಳಗಾಗಿದೆ. ಇಲ್ಲಿ ಕೆಂಪು, ಹಸಿರು, ನೀಲಿ, ಹಳದಿ, ವರ್ಣಗಳು ಹೆಚ್ಚಾಗಿ ಬಳಕೆಗೊಂಡಿವೆ.

ಹಿಂಡೋಲಾ ರಾಗದ ಚಿತ್ರ :

ಈ ಚಿತ್ರದಲ್ಲಿ ಹಿಂಡೋಲ್ ರಾಗಕ್ಕೆ ಸಂಬಂಧಿಸಿದ ಭಾವನೆಗಳು ಉದ್ದೀಪನವಾಗುವಂತೆ ಆಕಾರಗಳನ್ನು ಸಂಯೋಜಿಸಲಾಗಿದೆ. ಈ ರಾಗ ಮಾಲಾ ಚಿತ್ರದಲ್ಲಿ ರಾಜನೊಬ್ಬ ತೂಗುವ ಮಂಚದ ಮೇಲೆ ತನ್ನ ರಾಣಿಯೊಂದಿಗೆ ಕುಳಿತಿದ್ದು ಸರಸದಲ್ಲಿ ತೊಡಗಿದ್ದಾನೆ. ಬಲ ಭಾಗದಲ್ಲಿ ಇಬ್ಬರು ಸ್ತ್ರೀಯರು ನಿಂತಿದ್ದು ಒಬ್ಬಳು ತಂಬೂರಿ ನುಡಿಸುತ್ತಿದ್ದಾಳೆ. ಎಡ ಭಾಗಕ್ಕೆ ನಿಂತಿರುವ ಮತ್ತೊಬ್ಬ ಸ್ತ್ರೀ ರಾಜ ರಾಣಿಯರಿಗೆ ಗಾಳಿಯನ್ನು ಹಾಕುತ್ತಿದ್ದಾಳೆ. ಅಲಂಕಾರಿಕವಾಗಿರುವ ಉಯ್ಯಾಲೆಯು ಕೆಂಪು ಬಣ್ಣದಿಂದ ಚಿತ್ರಸಲ್ಪಟ್ಟಿದೆ, ರಾಜನ ವೇಷ ಭೂಷಣವು ಮರಾಠಾ ಪೇಶ್ವೆಗಳ ರೀತಿಯಲ್ಲಿದ್ದು, ಈ ಚಿತ್ರವು ಮಾರಾಠಾ ಚಿತ್ರ ಶೈಲಿಗೆ ಒಳಗಾಗಿದೆ. ಇಲ್ಲಿಯ ಎಲ್ಲ ಮಹಿಳೆಯರ ಕುಪ್ಪಸಗಳು ಅತ್ಯಂತ ಕಿರಿದಾಗಿದ್ದು, ಈ ಅಂಶವು ರಾಜಸ್ಥಾನಿ ಶೈಲಿಯ ಪ್ರತಿಬಿಂಬವೇ ಆಗಿದೆ. ಈ ಚಿತ್ರದ ಹಿನ್ನೆಲೆಯಲ್ಲಿ ಬಣ್ಣ ಬಣ್ಣದ ಹೂಗಳಿಂದ ತುಂಬಿಕೊಂಡಿರುವ ಗಿಡ ಮರಗಳು ಕಪ್ಪು ಮೊಡಗಳನ್ನು ಹೊಂದಿದ ದಟ್ಟ ಆಕಾಶ ಚಿತ್ರದ ಅಂದವನ್ನು ಹೆಚ್ಚಿಸಿವೆ. ಇಲ್ಲಿ ಮುಖ್ಯವಾಗಿ ಕೆಂಪು, ನೀಲಿ, ಹಳದಿ, ಹಸಿರು, ಕಪ್ಪು, ನಸು ಕಂದು ಜೊತೆಗೆ ಬಿಳಿ ವರ್ಣವು ಬಳಕೆಯಾಗಿದೆ.

ರಂಭಾವತಿಯ ಚಿತ್ರ :

ಇಬ್ರಾಹಿಮ್ ಆದಿಲ್‌ಶಹನ ಪ್ರೇಯಸಿಯಾದ ರಂಭಾವತಿಯ ಚಿತ್ರವು ಇದ್ದಾಗಿದು ನಿಂತ ಭಂಗಿಯಲ್ಲಿದೆ ಈ ಚಿತ್ರದಲ್ಲಿ ರಂಭಾವತಿ ಒಂದು ಪೀಠದ ಮೇಲೆ ನಿಂತಿದ್ದು, ಮೈತುಂಬ ಸೀರೆಯನ್ನು ಹೊದ್ದುಕೊಂಡಿರುವಂತೆ ಚಿತ್ರಿಸಲಾಗಿದೆ. ಪಕ್ಕದಲ್ಲಿ ನೀರಿನ ಕೊಳ, ಕೊಕ್ಕರೆ, ನೀರಿನ ಕೊಡಗಳು, ಇವುಗಳನ್ನು ಗಮನಿಸಿದರೆ ಈ ಚತ್ರವು ಬಹುಶ: ಕೊಳದಲ್ಲಿ ಸ್ನಾನ ಮಾಡಿ ಬಟ್ಟೆ ಬದಲಾಯಿಸುತ್ತಿರುವ ಚಿತ್ರವಾಗಿರಬಹುದು. ಚಿತ್ರದ ಹಿನ್ನೆಲೆ ಮತ್ತು ಮುನ್ನೆಲೆಯಲ್ಲಿ ಯಾವುದೇ ರೀತಿಯ ಗಿಡಮರಗಳು ಅಥವಾ ಕಟ್ಟಡಗಳ ಚಿತ್ರಗಳು ಇಲ್ಲಿ ಕಂಡುಬರುವುದಿಲ್ಲ, ಚಿತ್ರದ ಹಿನ್ನೆಲೆ ನೀರಿನಂತೆ ರಚನೆ ಮಾಡಿದ್ದು, ಕೊಳ ಅಥವಾ ನದಿಯ ಸಂಕೇತವಾಗಿದೆ. ಚಿತ್ರದ ಹೊರ ಅಂಚುಗಳಿಗೆ ಹೂ ಬಳ್ಳಿಯ ನಕ್ಷೆಯನ್ನು ಚಿತ್ರಿಸಲಾಗಿದೆ. ಇಲ್ಲಿ



ಯುವಕ ೨ನೇ ಇಬ್ರಾಹಿಮ್ ಆದಿಲ್ ಶಾಹಿ



ಮೊಹಮ್ಮದ ಆದಿಲ್‌ಶಾನ ಪತ್ನಿ



ರಾಗ ಹಿಂಡೋಲಾ (ದಖನಿ, ವಿಜಾಪೂರ)



ಯುವ ರಾಜಕುಮಾರಿ ರಂಭಾವತಿ

ಮುಖ್ಯವಾಗಿ ಕೆಂಪು, ನೀಲಿ, ಹಳದಿ, ಹಸಿರು, ಮತ್ತು ಬಿಳಿ ವರ್ಣಗಳು ಬಳಕೆಗೊಂಡಿವೆ. ಬಣ್ಣಗಳ ಮಿಶ್ರಣದ ದೃಷ್ಟಿಯಿಂದ ಈ ಚಿತ್ರವು ಉತ್ಕೃಷ್ಟವಾಗಿದೆ.

ಸರದಾರನ ಚಿತ್ರ :

ಈ ಚಿತ್ರದಲ್ಲಿ ಮುಸ್ಲಿಮ್ ಸರದಾರನೊಬ್ಬ ಸಾಂಪ್ರದಾಯಕ ವೇಷಭೂಷಣಗಳನ್ನು ತೊಟ್ಟುಕೊಂಡು ನಡೆದುಹೋಗುತ್ತಿದ್ದಾನೆ. ಪಾದದವರೆಗಿರುವ ಉದ್ದವಾದ ನಿಲುವಂಗಿ ಹೆಗಲಮೇಲೆ ಹಾಕಿಕೊಂಡಿರುವ ಅಲಂಕಾರಿಕ ವಸ್ತು ಮತ್ತು ತಲೆಗೆ ಸುತ್ತಿಕೊಂಡಿರುವ ಅಲಂಕಾರಿಕ ಮುಂಡಾಸು ಆಕರ್ಷಕವಾಗಿದೆ. ಸೊಂಟಕ್ಕೆ ಇಳಿಬಿಟ್ಟಿರುವ ಚೀಲದಂತಹ ವಸ್ತ್ರವು ಕಲಾತ್ಮಕವಾಗಿದೆ. ಬಲಗೈ ದೊಡ್ಡದಾಗಿದ್ದು, ಎಡಗೈಯನ್ನು ಚಿಕ್ಕದಾಗಿ ರಚನೆ ಮಾಡಲಾಗಿದೆ. ಇದು ಕಲಾವಿದನ ಯಥಾದರ್ಶನ ಜ್ಞಾನದ ಕೊರತೆಯನ್ನು ತೋರಿಸುತ್ತದೆ. ಮೇಲ್ಭಾಗದಲ್ಲಿ ಅಸ್ಪಷ್ಟವಾಗಿ ಆನೆಯ ಚಿತ್ರ ಒಂದಿದ್ದು ಅದರ ಬಹು ಭಾಗವು ಹಾಳಾಗಿದೆ. ಬಣ್ಣ ಲೇಪನದ ವಿನ್ಯಾಸವು ತಿಳಿಯದಂತೆ ಸಂಪೂರ್ಣವಾಗಿ ಈ ಚಿತ್ರದ ವರ್ಣವು ಉದುರಿ ಹೋಗಿದೆ.

ಪುತ್ರ ರಾಗದ ಚಿತ್ರ :

ಈ ರಾಗಮಾಲಾ ಚಿತ್ರವು ದಖನಿ ಶೈಲಿಯಲ್ಲಿ ರಚನೆಯಾಗಿದೆ ಇದರಲ್ಲಿ ಯೋಗಿಯೊಬ್ಬನು ವೀಣೆ ನುಡಿಸುತ್ತ ಕುಳಿತ್ತಿದ್ದಾನೆ, ಆತನ ಎದುರಿನಲ್ಲಿ ರಾಜನೊಬ್ಬನು ಮೈಮರೆತು ಕೇಳುತ್ತಿದ್ದಾನೆ. ಯೋಗಿಯು ಕೆಂಪು ವಸ್ತ್ರವನ್ನು ಧರಿಸಿದ್ದು, ತಲೆಯ ಮೇಲೆ ಜಟಾಮುಕುಟ ಧರಿಸಿಕೊಂಡಿದ್ದಾನೆ. ಕೊರಳಲ್ಲಿ ಮತ್ತು ತೋಳುಗಳಲ್ಲಿ ರುದ್ರಾಕ್ಷಿ ಮಾಲೆಗಳು ಕಂಗೊಳಿಸುತ್ತಿವೆ. ಆತನ ಎಡ ಭಾಗದಲ್ಲಿ ದಂಡ ಮತ್ತು ಕಮಂಡಲಗಳು ಚಿತ್ರಸಲ್ಪಟ್ಟಿವೆ. ಎದುರಿಗೆ ಕುಳಿತಿರುವ ಗಡ್ಡಧಾರಿ ರಾಜನು ಕೆಂಪು ಬಣ್ಣದ ವಸ್ತ್ರಗಳನ್ನು ಮತ್ತು ಶಿರಸ್ತ್ರಾಣವನ್ನು ಧರಿಸಿದ್ದಾನೆ. ಇವರಿಬ್ಬರು ಕುಳಿತ ಸ್ಥಳದ ಮುಂದುಗಡೆ ನೀರಿನ ಕೊಳವಿದ್ದು, ಬಾತು ಕೋಳಿಗಳು ಮತ್ತು ಹೂಗಳನ್ನು ಅದರಲ್ಲಿ ರಚನೆ ಮಾಡಲಾಗಿದೆ ಯೋಗಿ ಕುಳಿತ ಹಿಂಭಾಗದಲ್ಲಿರುವ ಮಂಟಪದಂತಹ ಕಟ್ಟಡಕ್ಕೆ ರಚಿಸಲಾಗಿರುವ ಗುಮ್ಮಟವು ಮುಸ್ಲಿಮ್ ವಾಸ್ತು ಶಿಲ್ಪವನ್ನು ಪ್ರತಿನಿಧಿಸುತ್ತದೆ. ಈ ಕಟ್ಟಡದ ಮಾಳಿಗೆಯ ಮೇಲೆ ನವಿಲು ವಿಹರಿಸುತ್ತಿದೆ. ಚಿತ್ರದ ಹಿಂಭಾಗದಲ್ಲಿ ವಿವಿಧ ಬಗೆಯ ಹೂವಿನ ಗಿಡಗಳು, ಬಾಳೆಯ ಗಿಡಗಳು ಮತ್ತು ನೀಲಾಕಾಶ ರಚನೆಯಾಗಿದೆ. ಚಿತ್ರದ ಮೇಲಿನ ಭಾಗದಲ್ಲಿ ಪುತ್ರ ರಾಗಕ್ಕೆ ಸಂಬಂಧಿಸಿದಂತೆ ಅಕ್ಷರಗಳನ್ನು ಬರೆಯಲಾಗಿದೆ. ಈ ಚಿತ್ರದಲ್ಲಿ ಕೆಂಪು, ಹಳದಿ, ನೀಲಿ, ಹಸಿರು, ಕಪ್ಪು, ಮತ್ತು ನಸು ಗೆಂಪು ವರ್ಣಗಳನ್ನು ಮುಖ್ಯವಾಗಿ ಬಳಸಾಗಿದೆ.

ಕುಸುಮ ರಾಗದ ಚಿತ್ರ :

ಈ ಚಿತ್ರವು ವಿಜಾಪುರ ಸುಲ್ತಾನರ ಕಾಲದಲ್ಲಿ ರಚನೆಗೊಂಡಿದ್ದು ದಖನಿ ಶೈಲಿಯಲ್ಲಿದೆ ಈ ಚಿತ್ರದಲ್ಲಿ ರಾಜನೊಬ್ಬ ಅಲಂಕಾರಿಕ ವಿನ್ಯಾಸದ ಹೂವಿನ ಪೀಠದ ಮೇಲೆ ಕುಳಿತು ಕೊಂಡಿದ್ದು, ಬಲಗೈಯಲ್ಲಿ ಕಮಲದ ಹೂವನ್ನು ಹಿಡಿದು ಕೊಂಡಿದ್ದಾನೆ. ಆತನ ಎದುರಿಗೆ ಕೆಂಪು ವಸ್ತ್ರ ಧರಿಸಿದ ವ್ಯಕ್ತಿಯೊಬ್ಬನು ನಿಂತುಕೊಂಡಿದ್ದಾನೆ. ಹಿಂಭಾಗದಲ್ಲಿ ಮತ್ತೊಬ್ಬ ವ್ಯಕ್ತಿ ನಿಂತುಕೊಂಡಿದ್ದು, ಈತನ ಮೈ ಮೇಲಿನ ವಸ್ತ್ರವು ಹೂವಿನ ಅಲಂಕಾರದಿಂದ ಕೂಡಿದೆ. ಚಿತ್ರದ ಮುಂಭಾಗದಲ್ಲಿ ನೀರಿನ ಕೊಳ ಅದರಲ್ಲಿ ಹೂವಿನ ಬಳ್ಳಿಗಳು, ಕೆಂಪು ಬಣ್ಣದ ಕಲ್ಲಿನ ಮಾದರಿಗಳು ರಚನೆ ಗೊಂಡಿವೆ. ಹಿಂಭಾಗದಲ್ಲಿ ಅಲಂಕಾರಿಕ ಗಿಡಗಳು ಫಲ ಪುಷ್ಪಗಳಿಂದ ತುಂಬಿವೆ. ಮೇಲಿನ ಭಾಗದಲ್ಲಿರುವ ನೈಜವಾದ ಆಕಾಶದ ರಚನೆಯು ಕಲಾವಿದನ ಪರಿಪಕ್ವತೆಯನ್ನು ತೋರಿಸುತ್ತದೆ. ಈ ಚಿತ್ರದ ಮಧ್ಯದಲ್ಲಿ ಕುಳಿತಿರುವ ರಾಜನು ತಲೆಯ ಮೇಲೆ ಧರಿಸಿರುವ ಕಿರಿಟ ಮತ್ತು ಇನ್ನಿಬ್ಬರು ಧರಿಸಿರುವ ವೇಷ ಭೂಷಣಗಳು ಮರಾಠಾ ಶೈಲಿಯನ್ನು ಪ್ರತಿ ನಿಧಿಸುತ್ತದೆ. ಈ ಚಿತ್ರದಲ್ಲಿ ಮುಖ್ಯವಾಗಿ ಕೆಂಪು, ನೀಲಿ, ಹಳದಿ, ಹಸಿರು, ಕಪ್ಪು ಮತ್ತು ಬಿಳಿ ಬಣ್ಣಗಳು ಬಳಕೆಗೊಂಡಿವೆ.

ಪಂಚಮರಾಗದ ಚಿತ್ರ :

ಈ ಚಿತ್ರದಲ್ಲಿ ರಾಜ ಮತ್ತು ರಾಣಿ ಪ್ರೇಮ ಸಲ್ಲಾಪದಲ್ಲಿ ತೊಡಗಿಕೊಂಡಿದ್ದಾರೆ. ಆಕರ್ಷಕವಾದ ವರ್ಣ ವೈವಿಧ್ಯತೆಯನ್ನು ಹೊಂದಿದ ಈ ಚಿತ್ರದ ಮಧ್ಯದಲ್ಲಿ ಆಕಾರಗಳನ್ನು ಸಂಯೋಜಿಸಲಾಗಿದೆ. ರಾಜ ಮತ್ತು ರಾಣಿ ಇಬ್ಬರು ಅಪ್ಪಿಕೊಂಡು ನಿಂತಿರುವ ಭಂಗಿಯು ಪಂಚಮ ಸೌಂದರ್ಯದ ಅನುಭೂತಿಯನ್ನು ಬಿಂಬಿಸುತ್ತದೆ. ಹಿಂಭಾಗದಲ್ಲಿ ಸುಂದರವಾದ ಅರಮನೆ, ಹೂ, ಹಣ್ಣು ಕಾಯಿಗಳಿಂದ ತುಂಬಿದ ಗಿಡಗಳು ರಚನೆಯಾಗಿವೆ. ಕೆಳಭಾಗದಲ್ಲಿ ರಾಜ ವೈಭೋಗದ ವಸ್ತುಗಳು ಚಿತ್ರಿಸಲ್ಪಟ್ಟಿವೆ. ರಾಜನ ಪಾನಪಾತ್ರೆ, ನೀರಿನ ಪಾತ್ರೆಗಳು, ಮದುವಿನ ಬಟ್ಟಲು, ಅಲಂಕಾರಿಕ ಪೀಠ ಮತ್ತು ಹಿನ್ನೆಲೆಯಲ್ಲಿ ಆಸರೆಗಳು ರಚನೆಯಾಗಿವೆ. ಇವರಿಬ್ಬರ ಶೃಂಗಾರಕ್ಕೆ ಸಂಕೇತವಾಗಿ ನೆಲದ ಮೇಲೆ ಹೂಗಳನ್ನು ಚಿತ್ರಿಸಲಾಗಿದೆ. ರಾಜ ರಾಣಿಯರ ವೇಷ ಭೂಷಣಗಳು ಪೇಶ್ವೆ ಶೈಲಿಯನ್ನು ಪ್ರತಿ ಬಿಂಬಿಸುತ್ತಿದ್ದು, ಮರಾಠಾ ಶೈಲಿಯಿಂದ ಈ ಚಿತ್ರವು ಪ್ರಭಾವಿತಗೊಂಡಿದೆ, ಇದರಲ್ಲಿ ಕೆಂಪು, ಹಳದಿ, ನೀಲಿ, ಹಸಿರು, ಕಪ್ಪು ಮತ್ತು ನಸುಗೆಂಪು ಬಣ್ಣಗಳನ್ನು ಹೆಚ್ಚಾಗಿ ಬಳಸಲಾಗಿದೆ.



ವಿಜಾಪೂರ ಸರದಾರ



ಪುತ್ರರಾಗ ಚಿತ್ರ (ದಖನಿ, ವಿಜಾಪೂರ)



ಕುಸುಮರಾಗ ಚಿತ್ರ (ದಖನಿ, ವಿಜಾಪೂರ)



ಪಂಚಮರಾಗ ಚಿತ್ರ (ದಖನಿ, ವಿಜಾಪೂರ)

ಮಾಳ್ವಾ ರಾಗಾದ ಚಿತ್ರ :

ಈ ಚಿತ್ರದಲ್ಲಿ ನಾಲ್ಕು ಕೈಗಳನ್ನು ಹೊಂದಿದ ವಿಷ್ಣುವಿನ ಚಿತ್ರವನ್ನು ರಚನೆ ಮಾಡಲಾಗಿದೆ. ಅಲಂಕಾರಿಕ ಪೀಠದ ಮೇಲೆ ಕುಳಿತ ಈ ದೇವತೆ ಪ್ರತಿಯೊಂದು ಕೈಗಳಲ್ಲಿ ಬೇರೆ ಬೇರೆ ಪರಿಕರಗಳನ್ನು ಹಿಡಿದು ಕೊಂಡಂತೆ ಚಿತ್ರಿಸಲಾಗಿದೆ. ಆಕರ್ಷಕವಾದ ಕಿರೀಟ, ಹಳದಿ ಬಣ್ಣದ ಪಂಚೆ, ಕೊರಳಲ್ಲಿ ಧರಿಸಿದ ಹೂಮಾಲೆಗಳು ಆಕರ್ಷಕವಾಗಿವೆ. ಹಿಂಭಾಗದಲ್ಲಿ ಸುಂದರವಾದ ಮಂಟಪಗಳನ್ನು ಹೊಂದಿದ ಅರಮನೆಯ ಗೋಡೆಯ ಭಾಗದಲ್ಲಿ ಹೂಜಿಗಳು ಹೂವಿನ ಕುಂಡಗಳು ನಕ್ಷಾ ವಿನ್ಯಾಸದ ಮಾದರಿಗಳು ಮತ್ತು ಕಮಾನುಗಳನ್ನು ರಚಿಸಲಾಗಿದೆ. ಕೆಳಭಾಗದಲ್ಲಿ ನೆಲದ ಮೇಲೆ ಹೂಬಳ್ಳಿಯ ನಕ್ಷೆ ಕೆಂಪು ವರ್ಣದಿಂದ ರಚನೆಗೊಂಡಿದ್ದು, ತೀರಾ ಮೇಲ್ಭಾಗದಲ್ಲಿ ಹೂವಿನ ಗಿಡಗಳು ನೀಲಿ ಬಣ್ಣದ ಆಕಾಶ ರಚನೆಗೊಂಡಿದೆ. ಅರಮನೆಯ ವಾಸ್ತು ವಿನ್ಯಾಸ ದೇವತೆಯ ಆಕಾರ ಇವುಗಳನ್ನು ಗಮನಿಸಿದಾಗ ಈ ಚಿತ್ರವು ಪಹಾಡಿ ಶೈಲಿಯಿಂದ ಪ್ರಭಾವಿತಗೊಂಡಂತೆ ಕಂಡುಬರುತ್ತದೆ. ಈ ಚಿತ್ರದಲ್ಲಿ ಮುಖ್ಯವಾಗಿ ಕೆಂಪು, ಹಳದಿ, ನೀಲಿ, ಕೇಸರಿ, ಹಸಿರು, ಬಣ್ಣಗಳು ಬಳಕೆಗೊಂಡಿವೆ.

ಚಾಂದಬೀಬಿಯ ಚಿತ್ರ :

ಈ ಚಿತ್ರದಲ್ಲಿ ಚಾಂದಬೀಬಿಯ ವ್ಯಕ್ತಿ ಚಿತ್ರವನ್ನು ರಚನೆ ಮಾಡಲಾಗಿದೆ. ಲಂಗ ಮತ್ತು ದಾವಣಿಯನ್ನು ಧರಿಸಿದ ಚಾಂದಬೀಬಿ ಕೆಂಪು ವಸ್ತ್ರವನ್ನು ಮೈಮೇಲೆ ಹೊದ್ದುಕೊಂಡಿದ್ದಾಳೆ. ಕೈಗಳಿಗೆ ಮದರಂಗಿ ಹಚ್ಚಿಕೊಂಡಿರುವ ಸುಂದರ ವಿನ್ಯಾಸವು ಇಲ್ಲಿ ಗೋಚರಿಸುತ್ತದೆ. ತಲೆ ಮತ್ತು ಕಿವಿಗಳಲ್ಲಿರುವ ಅಲಂಕಾರಿಕ ಆಭರಣಗಳು, ಕೊರಳಲ್ಲಿರುವ ತಾಳಿ, ಕೈಬಳೆಗಳು ಅಂದಿನ ಕಾಲದ ಆಭರಣ ವಿನ್ಯಾಸವನ್ನು ಪರಿಚಯಿಸುತ್ತವೆ. ಈ ಚಿತ್ರದ ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ಲೇಪನ ಮಾಡಿ ಚಿತ್ರಕ್ಕೆ ಸಮತ್ವವನ್ನು ತಂದು ಕೊಡಲಾಗಿದೆ. ಅರೆ ತೆರೆದ ಕಣ್ಣುಗಳು ವಿಶಾಲವಾದ ಹುಬ್ಬುಗಳು ನೀಳವಾದ ನಾಸಿಕ ಇವುಗಳು ಮುಖದ ಅಂದವನ್ನು ಹೆಚ್ಚಿಸಿವೆ. ಒಂದು ಕೈ ಮೇಲೆ ಮಾಡಿ ಮತ್ತೊಂದು ಕೈಯನ್ನು ಕೆಳಗೆ ಇಳಿಬಿಟ್ಟ ವಿನ್ಯಾಸವು ಚಾಂದಬೀಬಿಯ ಆಕರ್ಷಕ ಭಾವನೆಯನ್ನು ಪ್ರತಿಬಿಂಬಿಸುತ್ತದೆ. ಇಲ್ಲಿ ಮುಖ್ಯವಾಗಿ ಕೆಂಪು, ನೀಲಿ, ಕಪ್ಪು ವರ್ಣಗಳು ಬಳಕೆಗೊಂಡಿವೆ.

ವಿಶ್ರಾಂತಿಯಲ್ಲಿ ತೊಡಗಿರುವ ರಾಜನ ಚಿತ್ರ :

ಈ ಚಿತ್ರದಲ್ಲಿ ರಾಜನೊಬ್ಬನು ಗಿಡದ ಕೆಳಗೆ ವಿಶ್ರಾಂತಿಗಾಗಿ ಕುಳಿತುಕೊಂಡಿದ್ದಾನೆ, ಮೂವರು ಸೇವಕರು ಆತನ ಸೇವೆಯಲ್ಲಿ ತೊಡಗಿದ್ದಾರೆ. ಇಬ್ಬರು ವ್ಯಕ್ತಿಗಳು ರಾಜನ ಕಾಲನ್ನು

ಒತ್ತುತ್ತಿದ್ದರೆ, ಮತ್ತೊಬ್ಬ ವ್ಯಕ್ತಿ ಗಾಳಿಯನ್ನು ಹಾಕುತ್ತಿದ್ದಾನೆ, ಬಲಭಾಗದಲ್ಲಿ ಮತ್ತು ಎಡ ಭಾಗದಲ್ಲಿ ನೀರಿನ ಪಾತ್ರೆ ಮತ್ತು ಮಧು ಪಾತ್ರೆಗಳು ರಚಿಸಲ್ಪಟ್ಟಿವೆ. ಹಿನ್ನೆಲೆಯಲ್ಲಿ ಹೂವು, ಎಲೆ, ಕಾಯಿಗಳಿಂದ ತುಂಬಿದ ಸುಂದರವಾದ ಗಿಡಗಳು ರಚನೆಯಾಗಿದ್ದರೆ, ಆಕಾಶದಲ್ಲಿ ಬಣ್ಣ-ಬಣ್ಣದ ಮೋಡಗಳನ್ನು ಚಿತ್ರಿಸಲಾಗಿದೆ. ಸೇವೆಯಲ್ಲಿ ತೊಡಗಿರುವ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬನು ಹಸಿರು ಬಣ್ಣದ ವಸ್ತ್ರ ಧರಿಸಿದರೆ ಮತ್ತೊಬ್ಬನು ಬಿಳಿ ಬಣ್ಣದ ವಸ್ತ್ರ ಧಾರಣೆ ಮಾಡಿದ್ದಾನೆ. ನಿಂತುಕೊಂಡಿರುವ ವ್ಯಕ್ತಿಯ ವಸ್ತ್ರವು ಕೆಂಪು ವರ್ಣದಲ್ಲಿದೆ. ರಾಜನ ಹಿಂದಿನ ಗಿಡದ ಬೊಡ್ಡೆಯ ಬಣ್ಣವು ಹಸಿರು ಬಣ್ಣದಲ್ಲಿ ರಚನೆಯಾಗಿದ್ದು, ಚಿತ್ರದ ಹಿನ್ನೆಲೆಯಲ್ಲಿ ತೆಳು ಹಳದಿ ಬಣ್ಣವನ್ನು ಲೇಪನ ಮಾಡಲಾಗಿದೆ. ಕೆಳಭಾಗದಲ್ಲಿ ಹೂಗಳನ್ನು ಹರಡಿದಂತೆ ಚಿತ್ರಿಸಲಾಗಿದೆ. ಇಲ್ಲಿ ಮುಖ್ಯವಾಗಿ ಕೆಂಪು, ಹಸಿರು, ಹಳದಿ, ಮತ್ತು ನೀಲಿ, ಕಪ್ಪು ವರ್ಣಗಳು ಬಳಕೆಗೊಂಡಿವೆ.

ಚಾಂದಬೀಬಿ ಭಾವ ಚಿತ್ರ :

ಈ ಚಿತ್ರದಲ್ಲಿ ಚಾಂದಬೀಬಿ ಎಡಗೈಯಲ್ಲಿ ಹೂವನ್ನು ಹಿಡಿದುಕೊಂಡು ಆಗ್ರಾಣಿಸುವಂತೆ ಚಿತ್ರಿಸಲಾಗಿದೆ. ತಲೆಯ ಮೇಲೆ ರಾಜ ವಿನ್ಯಾಸದ ಕಿರೀಟ, ಮೈಮೇಲೆ ಯುದ್ಧದ ಕವಚದ ಹಾಗಿರುವ ವೇಷಭೂಷಣ, ತೋಳುಗಳಿಗೆ ಧರಿಸಿರುವ ಪಟ್ಟಿ ಮುಂತಾದವುಗಳನ್ನು ಗಮನಿಸಿದಾಗ ರಾಜ ಪೋಷಾಕಿನಲ್ಲಿರುವಂತೆ ಚಿತ್ರಿಸಲಾಗಿದೆ. ಗೌರವ ವರ್ಣದ ಮೈಬಣ್ಣ, ಕೆಂಪು ಬಣ್ಣದ ವಸ್ತ್ರ, ಗುಲಾಬಿ ವರ್ಣದ ಪುಷ್ಪ, ಕೊರಳಲ್ಲಿನ ಅಲಂಕಾರಿಕ ಆಭರಣಗಳು ಚಿತ್ರದ ಅಂದವನ್ನು ಹೆಚ್ಚಿಸಿವೆ. ವಿಶಾಲವಾದ ಕಣ್ಣುಗಳು, ನೀಳವಾದ ಮೂಗು, ಹೆಗಲಮೇಲೆ ಹೊದ್ದುಕೊಂಡಿರುವ ವಸ್ತ್ರಗಳು ಈ ಚಿತ್ರಕ್ಕೆ ಗಂಭೀರತೆಯನ್ನು ತಂದುಕೊಟ್ಟಿವೆ. ಚಿತ್ರದ ಹಿನ್ನೆಲೆಯಲ್ಲಿ ದಟ್ಟ ವರ್ಣವನ್ನು ಲೇಪನ ಮಾಡಲಾಗಿದ್ದು, ಮೈಬಣ್ಣವನ್ನು ತಿಳಿಯಾಗಿ ಲೇಪಿಸಲಾಗಿದೆ. ಈ ಚಿತ್ರದಲ್ಲಿ ಮುಖ್ಯವಾಗಿ ಕೆಂಪು, ಹಳದಿ, ನೀಲಿ, ಹಸಿರು, ಕಪ್ಪು ಮತ್ತು ಬಿಳಿ ವರ್ಣಗಳು ಬಳಕೆಗೊಂಡಿವೆ.

ಇಬ್ರಾಹಿಮ್ ಆದಿಲ್‌ಶಹನ ಚಿತ್ರ :

ಈ ಚಿತ್ರದಲ್ಲಿ ರಾಜನು ಸರಳವಾಗಿ ನಿಂತುಕೊಂಡಿರುವಂತೆ ರಚನೆ ಮಾಡಲಾಗಿದೆ. ತಲೆಗೆ ಕೊಳವೆ ಆಕಾರದ ಟೊಪ್ಪಿಗೆಯನ್ನು ಧರಿಸಿರುವ ಬಿಳಿಯಾದ ಅಂಗಿಯನ್ನು ತೊಟ್ಟುಕೊಂಡಿದ್ದಾನೆ, ಹಳದಿ ಬಣ್ಣದ ವಸ್ತ್ರವನ್ನು ಮೈಮೇಲೆ ಹೊದ್ದುಕೊಂಡಿದ್ದು ಕೈಗಳನ್ನು ಮುಂದೆ ಜೋಡಿಸಿಕೊಂಡು ನಿಂತಿರುವಂತೆ ಚಿತ್ರಿಸಲಾಗಿದೆ. ಈತನ ಮುಖದಲ್ಲಿ ದಪ್ಪವಾಗಿರುವ



ಮಾಳ್ವಾರಾಗದ ಚಿತ್ರ (ದಖನಿ, ವಿಜಾಪೂರ)



ಚಾಂದಬೀಬಿ (ವಿಜಾಪೂರ ಚಿತ್ರಕಲೆ)



ವಿಶ್ರಾಂತಿಯಲ್ಲಿ ತೊಡಗಿರುವ ರಾಜನ ಚಿತ್ರ



ಚಾಂದಬೀಬಿ

ಗಡ್ಡ ಮೀಸೆಗಳು ರಚನೆಯಾಗಿದ್ದು, ಗಂಭೀರತೆಯನ್ನು ಸೂಚಿಸುತ್ತವೆ. ಹಿಂಭಾಗದಲ್ಲಿ ಕೆಂಪು ಮತ್ತು ಕಪ್ಪು ಮಿಶ್ರಿತ ದಪ್ಪ ಬಣ್ಣವನ್ನು ಲೇಪನೆ ಮಾಡಲಾಗಿದೆ. ಮೈಬಣ್ಣವು ಗೌರ ವರ್ಣದಲ್ಲಿದೆ, ಇಲ್ಲಿ ಪ್ರಮುಖವಾಗಿ ಹಳದಿ, ಕೆಂಪು, ಕಪ್ಪು, ಮತ್ತು ಬಿಳಿ ಪ್ರಧಾನವಾಗಿ ಬಳಕೆಗೊಂಡಿವೆ.

ಜೈಬುನ್ನೀಸಾಳ ಚಿತ್ರ :

ಔರಂಗಜೇಬನ ಮಗಳಾದ ಜೈಬುನ್ನೀಸಾಳ ಚಿತ್ರವನ್ನು ಇಲ್ಲಿ ರಚನೆ ಮಾಡಲಾಗಿದೆ, ಜೈಬುನ್ನೀಸಾ ಅಲಂಕಾರಿಕ ಕುರ್ಚಿಯ ಮೇಲೆ ಕುಳಿತಿದ್ದು, ಪಾನಿಯವನ್ನು ಸ್ವೀಕರಿಸುತ್ತಿದ್ದಾಳೆ. ಎದುರಿಗಿರುವ ಸೇವಕಿಯು ಪಾನಿಯ ಪಾತ್ರೆಯನ್ನು ಎತ್ತಿಕೊಟ್ಟು ಅವಳಿಗೆ ಸಹಾಯ ಮಾಡುತ್ತಿದ್ದಾಳೆ. ಹಿಂಭಾಗದಲ್ಲಿ ಮತ್ತೊಬ್ಬ ಸೇವಕಿಯು ನವಿಲು ಗರಿಗಳಿಂದ ಗಾಳಿ ಬೀಸುತ್ತಿದ್ದಾಳೆ. ಈ ಚಿತ್ರವು ಅಷ್ಟೊಂದು ಉತ್ಕೃಷ್ಟವಾಗಿರದೆ ಪ್ರಬುದ್ಧರಲ್ಲದವರಿಂದ ರಚನೆಗೊಂಡಂತೆ ತೋರುತ್ತದೆ. ಜೈಬುನ್ನೀಸಾ ಕುರ್ಚಿಯಲ್ಲಿ ಕುಳಿತುಕೊಂಡಿದ್ದರೂ ಸಹಿತ ಎದ್ದುನಿಂತಿರುವಂತೆ ಭಾಸವಾಗುತ್ತದೆ. ಕುಳಿತಿರುವ ವಿನ್ಯಾಸವು ಇಲ್ಲಿ ಕಂಡುಬರುವುದಿಲ್ಲ. ಅಲ್ಲದೆ ಅಲಂಕಾರಿದ್ದ ಪೀಠದ ಮುಂದೆ ಮತ್ತು ಹಿಂದೆ ನಿಂತ ಸೇವಕಿಯ ಚಿತ್ರಗಳಲ್ಲಿ ಯಥಾ ದರ್ಶನ ನಿಯಮವು ಸಂಪೂರ್ಣವಾಗಿ ಮರೆಯಾಗಿದೆ. ರಾಜಕುಮಾರಿಯು ಪಾರದರ್ಶಕವಾದ ಲಂಗ ಮತ್ತು ಮೇಲು ಉಡುಪುಗಳನ್ನು ಧರಿಸಿದ್ದಾಳೆ. ಎದುರಿಗಿರುವ ಸೇವಕಿಯು ಟೊಪ್ಪಿಗೆಯಂಥಹ ಶಿರಸ್ತ್ರಾಣವನ್ನು ತಲೆಯಮೇಲೆ ಹೊಂದಿದ್ದು ಹಿಂಭಾಗದ ಸೇವಕಿಯು ನವಿಲು ಗರಿಗಳಿಂದ ಗಾಳಿ ಬೀಸುತ್ತಿದ್ದಾಳೆ. ಚಿತ್ರದ ಹಿಂಭಾಗದಲ್ಲಿ ಮಂಟಪದ ಹಾಗಿರುವ ವಿನ್ಯಾಸ ಮತ್ತು ಮುಂಭಾಗದಲ್ಲಿ ಹೂವಿನ ಅಲಂಕರಣದಿಂದ ಕೂಡಿದ ಕೆಂಪು ಬಣ್ಣದ ನೆಲ ಹಾಸುಗಳು ಚಿತ್ರಕ್ಕೆ ಅಂದವನ್ನು ತಂದುಕೊಟ್ಟಿವೆ. ಈ ಚಿತ್ರದಲ್ಲಿ ಮುಖ್ಯವಾಗಿ ಕೆಂಪು, ಹಸಿರು, ನೀಲಿ ಕಪ್ಪು ವರ್ಣಗಳ ಬಳಕೆಗೊಂಡಿವೆ.

ಮಹಿಳೆಯರೊಂದಿಗೆ ರಾಜ ರಾಣಿ :

ಈ ಚಿತ್ರದಲ್ಲಿ ರಾಜ. ಮತ್ತು ರಾಣಿಯರು ಯಾವುದೊ ಸಂತೋಷ ಸಮಾರಂಭದಲ್ಲಿ ಪಾಲಗೊಂಡಿರುವಂತೆ ಚಿತ್ರಿಸಲಾಗಿದೆ. ಇವರ ಬಲಭಾಗದಲ್ಲಿ ಇಬ್ಬರು ಮಹಿಳೆಯರು ಮತ್ತು ಎಡಭಾಗದಲ್ಲಿ ಒಬ್ಬ ಮಹಿಳೆ ನಿಂತುಕೊಂಡಿದ್ದಾರೆ, ಅಲಂಕಾರಿಕ ಮಂಟಪದಲ್ಲಿ ನಡೆಯುತ್ತಿರುವ ಸಮಾರಂಭದಲ್ಲಿ ನಾಲ್ಕು ಜನರು ಪಾಲುಗೊಂಡಂತೆ ಚಿತ್ರಿಸಲಾಗಿದೆ. ಮಂಟಪದ ಮೇಲ್ಭಾಗದಲ್ಲಿ ಮತ್ತು ಎಡಭಾಗಗಳಲ್ಲಿ ತೂಗು ದೀಪಗಳನ್ನು ಚಿತ್ರಿಸಲಾಗಿದೆ. ಶುಭ

ಸಮಾರಂಭದ ಸಂಕೇತವಾಗಿ ಮಂಟಪದ ಮುಂಭಾಗದಲ್ಲಿ ಮದ್ದಿನ ಕುರುಳಿಯನ್ನು ಹಚ್ಚಿದಂತೆ ತೋರುತ್ತದೆ. ರಾಜ ರಾಣಿಯರು ಕೆಂಪು ವರ್ಣದ ವಸ್ತ್ರವನ್ನು ಧರಿಸಿದ್ದು, ದೊಡ್ಡ ದೊಡ್ಡ ಮುತ್ತುಗಳಿಂದ ಕೂಡಿದ ಸರವನ್ನು ಧರಿಸಿದ್ದಾರೆ, ಮಂಟಪದ ಕೆಳಭಾಗದಲ್ಲಿ ಹೂವಿನ ನಕ್ಷೆ ಮತ್ತು ಅದೇ ರೀತಿಯ ನಕ್ಷೆ ಎಡಭಾಗದಲ್ಲಿ ಕಂಡುಬರುತ್ತದೆ. ರಾಜನ ವೇಷ ಭೂಷಣ ಅಲಂಕಾರಿಕ ವಿನ್ಯಾಸ ಇವುಗಳನ್ನು ಗಮನಿಸಿದರೆ ಜೈಪುರ್ ಚಿತ್ರಶೈಲಿಯ ಪ್ರಭಾವಕ್ಕೆ ಒಳಗೊಂಡಂತೆ ಕಂಡುಬರುತ್ತದೆ. ಇಲ್ಲಿ ಮುಖ್ಯವಾಗಿ ಕೆಂಪು, ನೀಲಿ, ಹಸಿರು, ಕಪ್ಪು, ಬಿಳಿ, ಮತ್ತು ನಸುಗೆಂಪು ವರ್ಣಗಳು ಬಳಕೆಯಾಗಿವೆ.

ಯಸೂಫ್ ಆದಿಲಶಾಹನ ಚಿತ್ರ :

ಇಲ್ಲಿ ರಚನೆಯಾದ ಆದಿಲಶಾಹಿ ಚಿತ್ರಣವು ಸೊಗಸಾಗಿ ಮೂಡಿಬಂದಿದೆ. ಆದಿಲ್‌ಶಾಹಿಯ ಮುಂಭಾಗದಲ್ಲಿ ಕಲಾವಿದನು ಕುಶಲತೆಯನ್ನು ಮೆರೆದಿದ್ದಾನೆ. ಮಂದ ನೆರಳು ಬೆಳಕು ಚಿತ್ರಿಸುವುದರೊಂದಿಗೆ ಇಲ್ಲಿ ಕಲಾವಿದ ಪ್ರಬುದ್ಧತೆ ತೋರಿದ್ದಾನೆ ಮೀಸೆ, ಹುಬ್ಬುಗಳು, ಕಪ್ಪು ವರ್ಣದಲ್ಲಿ ಚಿತ್ರಿಸಿದರೆ, ಗಡ್ಡ ಮಾತ್ರ ಬಿಳಿ ವರ್ಣದಲ್ಲಿ ಮೂಡಿಬಂದಿರುವುದು. ಬಿಳಿ ಮಿಶ್ರಿತ ನೀಲಿ ವರ್ಣದ ನಿಲುವಂಗಿ ಧರಿಸಿದ ಆದಿಲಶಾಹಿ, ನಡುವಿನ ಕೆಳಭಾಗದಲ್ಲಿ ಹಸಿರು ವರ್ಣದಿಂದ ಕೂಡಿದ ಬಟ್ಟೆಯನ್ನು ಧರಿಸಿದ್ದಾನೆ. ಕೈಯಲ್ಲಿ ಬೀಗದ ಕೈಹಿಡಿದು ನಿಂತಿರುವ ಆದಿಲ್ ಶಾಹಿಯ ಮುಖವು ನಗುವಿನಿಂದ ಕೂಡಿದೆ. ತಲೆಯ ಮೇಲೆ ವೃತ್ತಾಕಾರದ ಕಿರೀಟ ಧರಿಸಿದ್ದಾನೆ. ಅಂಗಿಯ ಹೊಂದಿದ ಆದಿಲಶಾಹಿ ಎಡಗೈಯಲ್ಲಿ ಖಡ್ಗವನ್ನು ಹಿಡಿದಿರುವ ಚಿತ್ರ ಇದಾಗಿದೆ. ಈ ಚಿತ್ರದ ಹಿನ್ನೆಲೆ ಲೇಪನ ಕಪ್ಪು ಮಿಶ್ರಿತ ಹಳದಿಯಿಂದ ಕೂಡಿದೆ.

ಇಸ್ಮಾಯಿಲ್ ಆದಿಲ್‌ಶಹನ ಚಿತ್ರ :

ಇಸ್ಮಾಯಿಲ್ ಆದಿಲ್ ಶಾಹನ ಈ ಕಲಾಕೃತಿಯಲ್ಲಿ ಬಲಕ್ಕೆ ಮುಖ ಮಾಡಿ ನಿಂತಿರುವ ಚಿತ್ರಣವಾಗಿದೆ. ಇಲ್ಲಿ ಮುಖ ಹಾಗೂ ಕೈಗಳಿಗೆ ಕಂದು ಮಿಶ್ರಿತ ಹಳದಿ ವರ್ಣ ಲೇಪನ ಕಂಡುಬರುತ್ತದೆ. ಕಾಮನ ಬಿಲ್ಲಿನ ಹಾಗೆ ಬಾಗಿದ ಹುಬ್ಬು, ಚೂಪಾದ ಮೂಗು, ರಸತುಂಬಿದ ಕೆನ್ನೆ, ಅರಳಿನಿಂತ ತುಟಿಗಳು, ಕಪ್ಪು ವರ್ಣದಿಂದ ರಚನೆಯಾದ ಮೀಸೆ, ಗಡ್ಡಗಳು, ಮುಖಕ್ಕೆ ಅಂದವನ್ನು ಕೊಟ್ಟಿವೆ. ಕಿರೀಟದಲ್ಲಿ ಹಸಿರು ವರ್ಣದ ಎಲೆಯಾಕಾರದ ಹೂವನ್ನು ಚಿತ್ರಿಸಿ ಅದಕ್ಕೆ ಆಧಾರಸ್ಥಂಭವಾಗಿ ಬಂಗಾರದ ಪಟ್ಟಿಯನ್ನು ಬರೆಯಲಾಗಿದೆ. ಮೇಲ್ಭಾಗದಲ್ಲಿ ಕೆಂಪು ವರ್ಣದಿಂದ ಕೂಡಿದ ತುರಾಯಿ ಮಾಡಿರುವುದು ಕಂಡುಬರುತ್ತವೆ. ಕೊರಳಲ್ಲಿ ಯಾವುದೇ



ಇಬ್ರಾಹಿಮ್ ಆದಿಲಶಾಹ



ಔರಂಗಜೆಬನ ಮಗಳು ಜೈಬುನೀಸಾಳ ಚಿತ್ರ



ಮಹಿಳೆಯರೊಂದಿಗೆ ರಾಜಪುರುಷ



ಯುಸುಫ ಆದಿಲಶಾಹ ೨ನೇ (೧೪೮೯-೧೫೧೦)

ಆಭರಣ ಕಂಡುಬರುವುದಿಲ್ಲವಾದರೂ, ಧರಿಸಿದ ಅಂಗಿಯಲ್ಲಿ ರೇಖೆಗಳು, ಬಂಗಾರದ ಬಟನ್, ಕಾಲರ್‌ನಲ್ಲಿ ಹೂ ಮುತ್ತುಗಳಿಂದಾವರಿಸಿದ ನಕ್ಷಾ ವಿನ್ಯಾಸಗಳು ಕಂಡುಬರುತ್ತವೆ. ಎದೆಕವಚದಂತಿರುವ ಅಂಗಿಯಲ್ಲಿ ನೆರಳು, ಬೆಳಕು, ರೇಖೆ, ಹಾಗೂ ಚುಕ್ಕೆಯ ನಕ್ಷಾ ವಿನ್ಯಾಸಗಳಿರುತ್ತವೆ. ಚಿತ್ರದ ಹಿಂಭಾಗದಲ್ಲಿ ತೆಳು ನೀಲಿ, ಕಪ್ಪು, ಹಳದಿ ಬಣ್ಣವನ್ನು ಲೇಪಿಸಲಾಗಿದೆ.

ಇಬ್ರಾಹಿಮ್ ಆದಿಲಶಾಹನ ಚಿತ್ರ :

ಈ ಚಿತ್ರದಲ್ಲಿಯೂ ಸಹ ಬಲಕ್ಕೆ ಮುಖ ಮಾಡಿ ನಿಂತಿರುವ ಕಲಾಕೃತಿ ರಚಿಸಲಾಗಿದೆ. ಈ ಭಾವ ಚಿತ್ರದಲ್ಲಿ ನೈಜತೆ ಇದೆ. ಇಲ್ಲಿ ಮೂಗು ತುಂಬಾ ಚೂಪಾಗಿ ಚಿತ್ರಿಸಿರುವುದಲ್ಲದೆ. ರೇಖೆಯ ಹಾಗೆ ಕಾಣುವ, ಕಪ್ಪು ವರ್ಣದ ಮೀಸೆ, ದಟ್ಟ ಕಪ್ಪು ವರ್ಣದಿಂದ ಕೂಡಿದ ಗಡ್ಡ, ಹಾಗೂ ರೇಖೆಗಳು ಮೂಡಿಬಂದಿವೆ. ಕಿರೀಟದಲ್ಲಿ ಕೆಂಪು, ಹಳದಿ, ಹಸಿರು ವರ್ಣಗಳಿದ್ದು ಕಪ್ಪು ವರ್ಣದಿಂದ ಹೊರ ರೇಖೆಯನ್ನು ಎಳೆಯಲಾಗಿದೆ. ಕಿರೀಟದ ಒಳಭಾಗದಲ್ಲಿ ಚೌಕಾಕಾರ, ಅರ್ಧವೃತ್ತಾಕಾರದಂತಿರುವ ನಕ್ಷೆಗಳಿವೆ. ಕಿರೀಟದ ಮಧ್ಯ ತೆಳು ಗುಲಾಬಿ ವರ್ಣದ ವಸ್ತ್ರವನ್ನು ಹೊದಿಸಲಾಗಿದೆ. ಕೊರಳಲ್ಲಿ ಹೊಳೆಯುತ್ತಿರುವ ಹಾರವಿದ್ದು, ಮಧ್ಯದಲ್ಲಿ ಕೆಂಪು, ನೀಲಿ, ಹಸಿರು ಮುತ್ತುಗಳಿರುವುದು ಕಂಡುಬರುತ್ತವೆ. ಹಳದಿ ನಿಲುವಂಗಿ ಧರಿಸಿದ ಇಬ್ರಾಹಿಮ್ ಆದಿಲ್‌ಶಾಹಿ ಕೈಯನ್ನು ಮುಂದಕ್ಕೆ ಚಾಚಿದ್ದಾನೆ. ಸೊಂಟಪಟ್ಟಿಯನ್ನು ಹಸಿರು ಹಾಗೂ ಕೆಂಪು ವರ್ಣದ ವಿನ್ಯಾಸಗಳಿಂದ ಚಿತ್ರಿಸಲಾಗಿದೆ. ಹಿಂಭಾಗದಲ್ಲಿ ನೀಲಿ, ಹಾಗೂ ಕಪ್ಪನ್ನು ಉಪಯೋಗಿಸಲಾಗಿದೆ.

ಅಲಿ ಆದಿಲ್‌ಶಹನ ಚಿತ್ರ :

ಈ ಕಲಾಕೃತಿಯಲ್ಲಿ ಆದಿಲಶಾಹಿಗೆ ಕಪ್ಪು ವರ್ಣದ ಅಂಗಿಯನ್ನು ಚಿತ್ರಿಸಿ, ಅದರಲ್ಲಿ ಚುಕ್ಕಿಗಳ ಹಾಗೆ ವಿನ್ಯಾಸಮಾಡಿದೆ. ಎರಡೂ ಭುಜದ ಕೆಳಭಾಗದಲ್ಲಿ ವೃತ್ತಾಕಾರದ ವಸ್ತುಗಳಿದ್ದು, ಯುದ್ಧದ ಸಮಯದಲ್ಲಿ ಬಳಕೆಯಾಗುವ ಕವಚಗಳಾಗಿವೆ ಅಲ್ಲದೆ ಸಂಪೂರ್ಣ ಕೈಗಳಿಗೆ ರಕ್ಷಾ ಕವಚವನ್ನು ಧರಿಸಲಾಗಿದೆ. ಕೈಯಲ್ಲಿ ಬಿಲ್ಲು, ಹಿಂಭಾಗದಲ್ಲಿ ಕತ್ತಿ, ಸೊಂಟಕ್ಕೆ ಹಸಿರು ವರ್ಣದ ವಸ್ತ್ರವನ್ನು ಧರಿಸಿದ್ದಾನೆ. ಬಿಲ್ಲಿನಂತೆ ಬಾಗಿದ ಹುಬ್ಬು, ಗಾಂಭೀರ್ಯ ತುಂಬಿದ ಮುಖ, ಮೀಸೆ, ಗಡ್ಡ ಹೊಂದಿದ ಅಲಿ ಆದಿಲ್‌ಶಹ ಕಿರೀಟವನ್ನು ಧರಿಸಿದ್ದಾನೆ. ಇದಕ್ಕೆ ಸೂಕ್ಷ್ಮವಾದ ರೇಖೆಗಳನ್ನು ಬಳಸಲಾಗಿದೆ. ಹಳದಿ ವರ್ಣದಿಂದ ಕೂಡಿದ್ದಾಗಿದೆ, ಮುಂಭಾಗದಲ್ಲಿ ನಾಗರ ಹೆಡೆಯಾಕಾರದ ಪಟ್ಟಿಕೆ ಇದ್ದು, ಕಿರೀಟದ ಮೇಲ್ಭಾಗದಲ್ಲಿ ಕೆಂಪು

ವರ್ಣದ ಅರ್ಧ ಚಂದ್ರಾಕಾರದ ಹೊದಿಕೆ ಇರುವುದು ಕಂಡುಬರುತ್ತದೆ. ಚಿತ್ರದ ಹಿಂಭಾಗವು ಕಪ್ಪು, ತಿಳಿ ಗುಲಾಬಿ ಕಪ್ಪು ವರ್ಣದಿಂದ ಕೂಡಿದ್ದಾಗಿದೆ.

ಚಾಂದಬೀಬಿ :

ಈ ಕಲಾಕೃತಿಯಲ್ಲಿ ಚಾದಬೀಬಿ ಕೈಯಲ್ಲಿ ಹಕ್ಕಿಯನ್ನು ಹಿಡಿದುಕೊಂಡಂತೆ ಚಿತ್ರಿಸಲಾಗಿದೆ. ಪ್ರೇಮದ ಸಂಕೇತವಾಗಿ, ಅಥವಾ ಯುದ್ಧ ನಡೆಯಬಾರದೆಂಬ ಶಾಂತಿಯ ಸಂಕೇತದಂತೆ ಪಕ್ಷಿಯನ್ನು ಚಿತ್ರಿಸಲಾಗಿದೆ. ರಭಸದಿಂದ ತನ್ನ ಕುದುರೆಯನ್ನೇರಿ ಹೊರಟಿದ್ದಾಳೆ, ಇಲ್ಲಿ ಯಾವುದೇ ರೀತಿಯ ಆಯುಧಗಳು ಕಂಡುಬರುವುದಿಲ್ಲ, ಹಲವಾರು ಆಭರಣಗಳಿಂದ ಭೂಷಿತೆಯಾದ ಈಕೆ ತುಂಬಾ ಸುಂದರಾವಾಗಿ ಕಂಡುಬರುತ್ತಾಳೆ. ಚಿತ್ರ ಮುಸುಕಾಗಿ ಕಾಣುವುದರಿಂದ ಅದರ ಆಳಕ್ಕೆ ಇಳಿಯುವುದು ಕಷ್ಟ ಸಾಧ್ಯವಾಗಿದೆ. ಕುದುರೆಯನ್ನು ಸಿಂಗರಿಸಲಾಗಿದೆ. ಚಾಂದಬೀಬಿಯು ಕಾಲುಗಳಿಗೆ ಇತ್ತೀಚಿಗೆ ಯುವಕ ಯುವತಿಯರು ಧರಿಸಿರುವ ಕವಚಗಳು ಇಂದಿನ ಸಾಕ್ಸಗಳ ಕಲ್ಪನೆ ಕೊಡುತ್ತದೆ. ಕುದುರೆಯ ಚಲನೆಯನ್ನು ಗಮನಿಸಿದಾಗ ವೇಗವಾಗಿ ಓಡುತ್ತಿರುವಂತೆ ಚಿತ್ರಿಸಿದೆ. ಒಟ್ಟಾರೆ ಈ ಚಿತ್ರದಲ್ಲಿ ಹೆಚ್ಚಾಗಿ ಕಂದು ವರ್ಣ ಬಳಸಿರುವದು ಕಂಡುಬರುತ್ತದೆ. ಇದರ ಹಿನ್ನೆಲೆ ಮುನ್ನೆಲೆ ಒಂದೆ ವರ್ಣದ್ದಾಗಿದೆ.

ಇಬ್ರಾಹಿಮ್ ಆದಿಲಶಹನ ಚಿತ್ರ :

ಈ ಚಿತ್ರದಲ್ಲಿ ಇಬ್ರಾಹಿಮ ಆದಿಲಶಹ ಯಾವುದೊ ತೀಕ್ಷ್ಣ ವಿಚಾರದಲ್ಲಿ ಮಗ್ನನಾಗಿರುವ ಹಾಗೆ ಮೂಡಿಬಂದಿದೆ. ಕೈಯಲ್ಲಿ ಹೂವಿನ ಟೊಂಗೆಯನ್ನು ಹಿಡಿದು ಯೋಚನಾ ಮಗ್ನನಾಗಿದ್ದಾನೆ, ಬಿಳಿ ವರ್ಣದ ನಿಲುವಂಗಿ ಧರಿಸಿದ ಇಬ್ರಾಹಿಮ್ ಆದಿಲಶಾಹ ಗಡ್ಡದ ಮೇಲೆ ಬೆರಳನಿಟ್ಟುಕೊಂಡಿದ್ದಾನೆ. ಇಬ್ರಾಹಿಮ್ ಕೊರಳಲ್ಲಿ ಮುತ್ತಿನ ಹಾರ, ನಡುಪಟ್ಟಿ, ಹಸಿರು ಶೆಲ್ಯೆ, ಕೈಯಲ್ಲಿ ಮುತ್ತಿನ ಹಾರಗಳು, ಅದರ ಮಧ್ಯ ಪುಟ್ಟ ಪುಟ್ಟ ಹೂಗಳು ಮೂಡಿಬಂದಿವೆ, ಚೂಪಾದ ಮೂಗು, ತೆಳುವಾದ ತುಟಿ, ಸಣ್ಣದಾದ ಕಣ್ಣು, ಬಾಗಿದ ಹುಬ್ಬು, ಬಂಗಾರದ ವರ್ಣದ ಕಿರೀಟ ಧರಿಸಿದ್ದಾನೆ. ಇದರಲ್ಲಿ ಸರಳವಾದ ರೇಖೆಗಳನ್ನು ದಟ್ಟ ಹಳದಿ ವರ್ಣದಿಂದ ಎಳೆಯಲಾಗಿದೆ. ಕಿರೀಟದಲ್ಲಿ ಬಿಳಿ ಮತ್ತು ಕೆಂಪು, ವರ್ಣದ ಮುತ್ತುಗಳನ್ನು ಜೋಡಿಸಲಾಗಿದೆ. ಮೇಲ್ಭಾಗದಲ್ಲಿ ಕೆಂಪು ಹೊದಿಕೆ ಇದೆ. ಹಿಂಭಾಗದಲ್ಲಿ ಹೆಚ್ಚಾಗಿ ಹಸಿರು ವರ್ಣ ಕಂಡುಬರುತ್ತದೆ.

ಮಹಮ್ಮದ ಆದಿಲ್‌ಶಾಹನ ಚಿತ್ರ :

ಈ ಕಲಾಕೃತಿಯು ಮಹಮ್ಮದ ಆದಿಲಶಹನ ಬದಿಯ ನೋಟವನ್ನು ಹೊಂದಿದೆ. ಬಾಗಿದ ಕಪ್ಪು ಮೀಸೆ. ಬಿಲ್ಲಿನ ಹುಬ್ಬು, ಚೂಪಾದ ಮೂಗು, ಗಡ್ಡವನ್ನು ಚಿತ್ರಿಸಲಾಗಿದೆ.



ಇಸ್ಮಾಯಿಲ ಆದಿಲಶಾಹ ೧ನೇ (೧೫೧೦-೧೫೩೪)



ಇಬ್ರಾಹಿಮ್ ಆದಿಲಶಾಹ ೧ನೇ (೧೫೩೪-೧೫೫೭)



ಅಲಿ ಆದಿಲಶಾಹ ೧ನೇ (೧೫೫೭-೧೫೮೦)



ಚಾಂದಬೀಬಿ

ಮಹಮ್ಮದ ಆದಿಲಶಾಹ ಕಿರೀಟ ಧಾರಿಯಾಗಿದ್ದು, ಕೊರಳಲ್ಲಿ ಆಭರಣ ಹೂವಿನ ಹಾರಗಳು ಕಂಡುಬರುತ್ತವೆ. ಬಿಳಿ ವರ್ಣದ ಅಂಗಿಯ ಮೇಲೆ ದಟ್ಟ ನೀಲಿ ವರ್ಣದ ಜಾಕೇಟನ್ನು ಚಿತ್ರಿಸಲಾಗಿದೆ. ಅಂಗಿಯ ಮೇಲೆ ಕೆಂಪು ವರ್ಣದ ಹೂಗಳು ಮೂಡಿಬಂದಿವೆ, ನೀಲಿ ಜಾಕೇಟ್‌ನಲ್ಲಿ ಕೆಂಪು, ಹಳದಿ, ಹಸಿರು, ವರ್ಣದ ಚುಕ್ಕೆಗಳು ಚೌಕಾಕಾರಗಳು ಮೂಡಿಬಂದಿವೆ. ಕಿರೀಟದಲ್ಲಿ ರೇಖೆಯನ್ನೊಳಗೊಂಡು ಬಿಳಿ, ಹಾಗೂ ನೀಲಿ ವರ್ಣದ ವೃತ್ತಗಳನ್ನು ಬಿಡಿಸಲಾಗಿದೆ. ಮಧ್ಯದಲ್ಲಿ ಹಸಿರು ಬಿಳಿಯ ಗುಚ್ಚ ಕಂಡುಬರುತ್ತವೆ. ಕೆಳಭಾಗದಲ್ಲಿ ಮೂರು ಪಟ್ಟಿಕೆಗಳಿದ್ದು ವಿವಿಧ ವರ್ಣಗಳ ನಕ್ಷಾ ವಿನ್ಯಾಸಗಳಿವೆ. ಚಿತ್ರದ ಹಿಂಭಾಗ ಕಪ್ಪು ವರ್ಣದಿಂದ ಕೂಡಿದೆ.

ಅಲಿ ಆದಿಲ್‌ಶಾಹನ ಚಿತ್ರ :

ಈ ಕಲಾಕೃತಿಯಲ್ಲಿ ಸಂಯೋಜನೆ, ವರ್ಣಗಳ ಮಿಶ್ರಣ, ಹೊರರೇಖೆಗಳು, ಉತ್ತಮವಾಗಿವೆ. ಚುಕ್ಕೆಗಳು, ಹೂಗಳು ಚೌಕಾಕಾರಗಳಿಂದ ಕೂಡಿದ ನಕ್ಷೆಯ ಮಾದರಿಗಳಾಗಿವೆ. ಅಲಿ ಆದಿಲ್ ಶಾಹನು ಮಂದಸ್ಮಿತನಾಗಿರುವ ಹಾಗೆ ಮುಖಭಾವ ಮೂಡಿ ಬಂದಿದೆ ಅಗಲವಾದ ಬಟ್ಟಲು ಕಣ್ಣುಗಳು, ಕಾಮನ ಬಿಲ್ಲಿನ ಹಾಗೆ ಅರ್ಧ ಚಂದ್ರಾಕಾರದಲ್ಲಿ ಬಾಗಿದ ಕಪ್ಪು ವರ್ಣದ ಹುಬ್ಬು, ನಯ ನಾಜೂಕಾದ ಚೂಪಾದ ಮೂಗು, ಚಿಗುರೊಡೆದ ಮೀಸೆ, ಗಡ್ಡ, ತುಂಬಿದ ಗಲ್ಲ, ಕೆಂದುಟಿ, ಮುಂತಾದವುಗಳನ್ನು ನೈಜವಾಗಿ ಚಿತ್ರಿಸಲಾಗಿದೆ. ಬಿಳಿ ವರ್ಣದ ನಿಲುವಂಗಿ ಧರಿಸಿದ ಅಲಿ ಆದಿಲ್‌ಶಾಹ ಸೊಂಟಪಟ್ಟಿಯೊಂದಿಗೆ ಕೆಂಪು ವಸ್ತ್ರ ಧರಿಸಿದ್ದಾನೆ, ಹೆಗಲ ಮೇಲೆ ಹಸಿರು ಶೆಲ್ಯೆ, ಕೊರಳಲ್ಲಿ ಮುತ್ತಿನ ಹಾರ, ಭುಜದಿಂದ ಕೆಳ ಬಿದ್ದ ನೀಲಿ ಶೆಲ್ಯೆ ರಚನೆಗೊಂಡಿದೆ. ಜೊತೆಗೆ ತಲೆಯ ಕಿರೀಟವು ಮೂರು ವರ್ಣಗಳಿಂದ ಸುಂದರವಾಗಿ ಅಲಂಕೃತಗೊಂಡಿದೆ. ಮುತ್ತಿನ ಸರ, ಹೂಗಳು, ಚುಕ್ಕೆಗಳ ನಕ್ಷೆಗಳು ಇಲ್ಲಿಯೂ ಸಹ ರಚನೆಯಾಗಿವೆ. ಕೈಯಲ್ಲಿ ಕೆಂಪು ಪುಷ್ಪ ಹಿಡಿದ ಆಲಿ ಆದಿಲ್‌ಶಾಹ ಪ್ರೀತಿಯ ಸಂಕೇತ ತೋರಿಸುವ ಹಾಗೆ ಮೂಡಿಬಂದಿದೆ.

ಸಿಕಂದರ ಆದಿಲ್‌ಶಾಹನ ಚಿತ್ರ :

ಈ ಕಲಾಕೃತಿ ಬಣ್ಣಗಳ ಸಂಯೋಜನೆಯಿಂದ ಉತ್ತಮವಾಗಿ ಕಾಣಿಸುವುದಿಲ್ಲ. ಇಲ್ಲಯೂ ಸಹ ಚುಕ್ಕೆಗಳು, ಹೂಗಳು, ರೇಖೆಗಳ ನಕ್ಷೆಗಳು ಮಾತ್ರ ಕಂಡುಬರುತ್ತವೆ. ಈ



ಇಬ್ರಾಹಿಮ್ ಆದಿಲಶಾಹ ೨ನೇ (೧೫೮೦-೧೬೨೬)



ಮೊಹಮ್ಮದ ಆದಿಲಶಾಹ (೧೬೨೬-೧೬೫೬)



ಅಲಿ ಆದಿಲಶಾಹ ೨ನೇ (೧೬೫೬-೧೬೭೨)



ಸಿಕಂದರ ಆದಿಲಶಾಹ (೧೬೭೨-೧೬೮೯)

ಕಲಾಕೃತಿಯಲ್ಲಿ ಸಿಕಂದರ ಆದಿಲಶಾಹನು ಎಡಕ್ಕೆ ಮುಖಮಾಡಿ ನಿಂತಿದ್ದು, ಕೈಯಲ್ಲಿ ಚಾಕುವಿನಂತಹ ಆಯುಧವನ್ನು ಹಿಡಿದ್ದಿದ್ದಾನೆ. ಇಲ್ಲಿ ಮುಖವನ್ನು ದುಂಡಾಗಿ ಚಿತ್ರಿಸಲಾಗಿದೆ. ಬಿಳಿ ವರ್ಣದ ನಿಲುವಂಗಿ ಹೂಗಳನ್ನೊಳಗೊಂಡಿದೆ. ಹೆಗಲ ಮೇಲಿಂದ ಇಳಿಬಿದ್ದ ಬಿಳಿ ವರ್ಣದ ವಸ್ತ್ರವನ್ನು ಹೊರ ರೇಖೆಯಿಂದ ರಚಿಸಲಾಗಿದೆ ಸಿಕಂದರನು ತರುಣಾವಸ್ಥೆಯಲ್ಲಿರುವ ಹಾಗೆ ಚಿಗುರೊಡೆದ ಮೀಸೆ, ಗಡ್ಡಗಳು ಮೂಡಿಬಂದಿವೆ. ತಲೆಯಲ್ಲಿರುವ ಟೊಪ್ಪಿಗೆಯು ಹೂಗಳಿಂದ ಕೂಡಿದೆ.

ಚಾಂದಬೀಬಿ ಚಿತ್ರ :

ಇಲ್ಲಿ ಚೌಕಾಕಾರದಲ್ಲಿ ರಚನೆಯಾದ ರಾಣಿಯ ಚಿತ್ರಕ್ಕೆ ಬಿಳಿ ವರ್ಣವನ್ನು ಲೇಪನ ಮಾಡಲಾಗಿದೆ. ಕುಪ್ಪಸ ಹಾಗೂ ಲಂಗವನ್ನು ಕೇಸರಿ ಬಣ್ಣದಿಂದ ಲೇಪಿಸಿ ದಾವನಿಯನ್ನು ಪಾರದರ್ಶಕವಾಗಿ ಬಿಳಿಯ ವರ್ಣದಿಂದ ರಚಿಸಲಾಗಿದೆ. ಹಲವಾರು ಆಭರಣಧಾರಿಯಾದ ಈ ರಾಣಿಯು ಬಲಗೈಯನ್ನು ಸೊಂಟದ ಮೇಲಿರಿಸಿ, ಎಡಗೈಯನ್ನು ಕೆಳಗೆ ಬಿಡಲಾಗಿದೆ. ಕಾಲುಗಳನ್ನು ಮಡಚಿ ಕುಳಿತಿರುವ ಈ ರಾಣಿ ತಿಳಿಗುಲಾಬಿ ವರ್ಣದದಿಂದ ಕೂಡಿದ ಹಾಸಿಗೆಯ ಮೇಲೆ ಕುಳಿತಿದ್ದಾಳೆ. ಹಿಂಭಾಗದಲ್ಲಿ ಸೂಕ್ಷ್ಮವಾಗಿರುವ ತಂತಿಯ ಜಾಲಂದರವಿದ್ದು, ಇದು ಹಳದಿ ಬಣ್ಣದಿಂದ ಕೂಡಿದ್ದಾಗಿದೆ. ಈ ಕಲಾಕೃತಿಯ ಹಿಂಭಾಗದಲ್ಲಿ ದಟ್ಟ ನೀಲಿ ವರ್ಣ ಲೇಪನ ಕಂಡುಬರುತ್ತದೆ. ಇದು ಬಿಜಾಪುರದ ವಸ್ತು ಸಂಗ್ರಹಾಲಯದಲ್ಲಿ ಇಂದಿಗೂ ಸಹ ಕಾಣಬಹುದಾಗಿದೆ.

ಸಂತರ ಚಿತ್ರ :

ಈ ಕಲಾಕೃತಿಯಲ್ಲಿ ತುಂಬಾ ವಯಸ್ಸಾದವರ ಹಾಗೆ ಕಂಡುಬರುವ ಸಂತರನ್ನು ಚಿತ್ರಸಲಾಗಿದೆ. ತೆಳು ನೇರಳೆ ಬಣ್ಣ ಹೊಂದಿದ ಈ ಸಂತರು, ತಿಳಿಗುಲಾಬಿ ವಸ್ತ್ರವನ್ನು ಹೆಗಲ ಮೇಲಿಂದ ಮೊನಕಾಲಿನವರೆಗೂ ತೊಟ್ಟಿರುವುದು ಕಂಡುಬರುತ್ತದೆ. ಈ ವಸ್ತ್ರದಲ್ಲಿ ಸೂಕ್ಷ್ಮವಾದ ರೇಖೆಗಳು, ಹಾಗೂ ಬಿಳಿ ಮತ್ತು ಕಪ್ಪು ವರ್ಣದ ಪಟ್ಟಿಗಳಿದ್ದು ಕೈಯಲ್ಲಿ ಬಿಳಿ ವರ್ಣದ ಯಾವುದೊ ವಸ್ತುವನ್ನು ಹಿಡಿದಿರುವ ಹಾಗೇ ಕಂಡುಬರುತ್ತದೆ. ಕಣ್ಣು, ಹುಬ್ಬು, ಕಿವಿಗಳು ಕಪ್ಪು ರೇಖೆಯಿಂದ ರಚಿಸಿವೆ. ತಲೆಯ ಹಿಂಭಾಗವು ಹಳದಿ ವರ್ಣದ ವೃತ್ತಾಕಾರ, ಹಲವಾರು ಚುಕ್ಕೆ ಹಾಗೂ ವಿನ್ಯಾಸಗಳಿಂದ ಕೂಡಿದೆ. ಕೆಳಭಾಗದಲ್ಲಿ ಹಳದಿ ವರ್ಣದ ಸುಂದರ ವಿನ್ಯಾಸ ಹೊಂದಿದ, ಟೈಲ್ಸ್ ಮಾದರಿಯ ನಕ್ಷೆ ರಚಿಸಲಾಗಿದೆ. ಹಿಂಭಾಗದಲ್ಲಿ ಹಳದಿ ವಿನ್ಯಾಸದ ಪಟ್ಟಿಕೆ, ಅದರ ಮೇಲೆ ತೆಳು ನೀಲಿ ವರ್ಣ ಲೇಪಿಸಲಾಗಿದೆ. ಪರ್ಶಿಯನ್ ಭಾಷೆಯ ಲಿಪಿ ಬರವಣಿಗೆ

ಮೂಡಿಬಂದಿವೆ. ಈ ಚಿತ್ರದ ಹೊರಭಾಗಕ್ಕೆ ಸಂಯೋಜನೆ ದೃಷ್ಟಿಯಿಂದ ಕೇಸರಿ ವರ್ಣದ ಪಟ್ಟಿಕೆಯನ್ನು ಬರೆಯಲಾಗಿದೆ. ಇಲ್ಲಿ ಮುಖ್ಯವಾಗಿ ರೇಖೆಗಳೆ ಪ್ರಧಾನವಾಗಿವೆ.

ಅರಸರ ಚಿತ್ರ :

ಈ ಕಲಾಕೃತಿಯು ಸಹ ವಿಜಾಪುರ ವಸ್ತು ಸಂಗ್ರಾಲಯದಲ್ಲಿ ಕಂಡುಬರುತ್ತವೆ. ಇಲ್ಲಿ ಮುಖ್ಯವಾಗಿ ಕೇಸರಿ ವರ್ಣ ಲೇಪನ ಪ್ರಮುಖವಾಗಿ ಕಂಡು ಬರುತ್ತದೆ. ಇಲ್ಲಿ ಅರಸನು ವೀರಾವೇಶನಾಗಿ ಯುದ್ಧಕ್ಕೆ ತಯಾರಾಗಿ ನಿಂತಿರುವ ಕಲ್ಪನೆ ಕೊಡುತ್ತದೆ. ಇಲ್ಲಿ ಅರಸನ ಮುಖವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಸಿಟ್ಟಿನಿಂದಿರುವಂತೆ ಕಂಡುಬರುತ್ತದೆ. ಮೀನಿನಾಕಾರದ ಕಣ್ಣು, ಚಪ್ಪಟೆ ಮೂಗು, ಇಳಿಬಿದ್ದ ಮೀಸೆ, ಕೈಯಲ್ಲಿ ಕತ್ತಿ, ಹೆಗಲಮೇಲಿಂದ ಇಳಿಬಿದ್ದ ನೀಲಿ ವಸ್ತ್ರವು ಹಳದಿ ಪಟ್ಟಿಕೆಯನ್ನು ಹೊಂದಿವೆ. ಕೊರಳಲ್ಲಿ, ಕೈಯಲ್ಲಿ, ಅಂಗಿಯ ಮೇಲೆ ಬಿಳಿ ಮುತ್ತಿನ ಸರಗಳು ರಚನೆಗೊಂಡಿವೆ. ತಲೆಯ ಪೀಠವು ಕೆಂಪಾಗಿದ್ದು ರೇಖೆಯಿಂದ ಕೂಡಿದೆ. ಹಿಂಭಾಗದಲ್ಲಿ ದಟ್ಟ ನೀಲಿ ವರ್ಣ,ಹೊರ ಪಟ್ಟಿಕೆಯಲ್ಲಿ ಕೇಸರಿವರ್ಣ ಲೇಪನ ಮಾಡಲಾಗಿದೆ.

ಸೂಫಿ ಪಂಥದ ಸಂತರ ಚಿತ್ರ :

ಇಲ್ಲಿ ಸಂತರನ್ನು ಬರಡು ಭೂಮಿಯಲ್ಲಿರುವ ಒಣಗಿದ ಗಿಡದ ಟೊಂಗೆಗೆ ಮೊಣಕೈಯೂರಿ ಕುಳಿತಿರುವಂತೆ ಚಿತ್ರಿಸಲಾಗಿದೆ. ಕೆಳಭಾಗದಲ್ಲಿ ಬಿರುಕು ಬಿಟ್ಟಿರುವ ಭೂಮಿ ಕಂದು ವರ್ಣದಲ್ಲಿ ಮೂಡಿಬಂದರೆ, ಮರದ ಕಾಂಡವು ಒಣಗಿದ್ದು, ಕಂದು ವರ್ಣದಲ್ಲಿ ಚಿತ್ರಿಸಲಾಗಿದೆ. ಜನ ಸಾಮಾನ್ಯರ ಏಳ್ಗೆಗಾಗಿ ದೇವರನ್ನು ಪ್ರಾರ್ಥಿಸುತ್ತಿರುವ ಹಾಗೆ ಕಂಡುಬರುತ್ತದೆ. ಇಲ್ಲಿ ಸಂತನ ಮೈ ಬಣ್ಣ ತಿಳಿ ಗುಲಾಬಿ, ಗುಲಾಬಿ ಪಂಚೆ, ವಿವಿಧ ಬಣ್ಣದ ವಸ್ತುಗಳು ಮತ್ತು ಶೆಲ್ಯೆ ಕಂಡುಬರುತ್ತವೆ. ಸಂತನ ಕೇಶವು ಕಪ್ಪು ಬಣ್ಣದಿಂದ ಉದ್ದವಾಗಿ ರಚಿಸಿದ್ದು, ಚೂಪಾದ ಮೂಗು, ಮೀಸೆ, ಬಾಗಿದ ಹುಬ್ಬು ರಚನೆಗೊಂಡಿವೆ. ಈ ಚಿತ್ರದಲ್ಲಿ ರೇಖೆಗಳೆ ಪ್ರಧಾನವಾಗಿ ಕಂಡುಬರುತ್ತವೆ. ಸಂತನು ಕಾಲುಮೇಲೆ ಕಾಲು ಹಾಕಿ ಶಾಂತ ಚಿತ್ತನಾಗಿ ಕುಳಿತಿರುವಂತಿದೆ. ಹಿನ್ನೆಲೆ ತಿಳಿಗುಲಾಬಿ ಮಿಶ್ರಿತ ಕಪ್ಪು ವರ್ಣದಿಂದ ಕೂಡಿದ್ದಾಗಿದೆ.

ಸೂಫಿ ಪಂಥದ ಸಂತರ ಚಿತ್ರ :.

ವಿಜಾಪುರ ಮ್ಯುಸಿಯಂನಲ್ಲಿರುವ ಈ ಕಲಾಕೃತಿಯು ತುಂಬಾ ಸುಂದರವಾಗಿದೆ. ಇಲ್ಲಿ ಕಲಾವಿದನು ಹಲವಾರು ಪಟ್ಟಿಕೆಯನ್ನು ನಿರ್ಮಿಸಿಕೊಂಡು ಸಂಯೋಜನೆಗೆ ಪೂರಕವಾಗುವ ಹಾಗೆ ಮಧ್ಯದಲ್ಲಿ ಸೂಫಿ ಸಂತರನ್ನು ರಚಿಸಿರುವುದು ಮನೋಹರವಾಗಿದೆ, ಈ ಕಲಾಕೃತಿಯು ಮಸುಕಾಗಿರುವುದರಿಂದ ಅದರ ವರ್ಣ ಲೇಪನದ ಸ್ಪಷ್ಟ ಕಲ್ಪನೆ




ಚಾಂದಬೀಬಿ



ಸಂತರು



ಅರಸ



ಸೂಫಿ ಪಂಥದ ಸಂತರು

ಅಸಾಧ್ಯವಾಗಿದೆ. ಕೇಸರಿ ವರ್ಣದ ನಿಲುವಂಗಿ ಧರಿಸಿದ ಸಂತನು ಒಂದು ಕೈ ಹಿಂದೆ ಮತ್ತೊಂದುನ್ನು ಮುಂದೆ ಮಾಡಿರುವುದು ಕಂಡುಬರುತ್ತದೆ. ಮೈಬಣ್ಣ ತೆಳುಗುಲಾಬಿಯಿಂದ ಕೂಡಿದೆ. ಶೆಲ್ಯೆ ಹಾಗೂ ಟೊಪ್ಪಿಗೆ ಕೆಂಪು ವರ್ಣದಿಂದ ಕೂಡಿದ್ದಾಗಿದೆ. ಸಂತನ ಹಿಂಭಾಗದಲ್ಲಿ ವೃತ್ತಾಕಾರವಿದ್ದು , ಹಳದಿ, ಕೇಸರಿಯಿಂದ ಕೂಡಿದೆ. ಕುಳಿತ ಆಸನ ಹಳದಿ, ನೀಲಿ, ಹಸಿರು ವರ್ಣಗಳಿಂದ ಕೂಡಿದ ವಿವಿಧ ನಕ್ಷೆಗಳು ಹಾಗೂ ಚುಕ್ಕೆಗಳಿಂದ ರಚನೆಯಾಗಿದೆ. ಕೆಳಭಾಗದಲ್ಲಿ ನೇರವಾದ ರೇಖೆಗಳು, ಹಸಿರು ಪಟ್ಟಿಕೆ, ಬೂದು ವರ್ಣದ ಪಟ್ಟಿಕೆಯನ್ನು ರಚಿಸಿ ಹಿಂಭಾಗದಲ್ಲಿ ದಟ್ಟ ಕಪ್ಪು ವರ್ಣ ಬಳಸಲಾಗಿದೆ.

ಸೂಫಿ ಪಂಥದ ಸಂತರ ಚಿತ್ರ :

ಈ ಕಲಾಕೃತಿಯನ್ನು ಇಂದಿಗೂ ಸಹ ವಿಜಾಪುರದ ಮ್ಯೂಜಿಯಂನಲ್ಲಿ ನೋಡಬಹುದಾಗಿದೆ. ಇಲ್ಲಿ ಸಂತನು ಕೈಯಲ್ಲಿ ಕಪ್ಪು ವರ್ಣದ ರುದ್ರಾಕ್ಷಿಯನ್ನು ಹಿಡಿದಿದ್ದು ಎರಡೂ ಕಾಲು ಮಡಚಿರುವುದು ಕಂಡುಬರುತ್ತದೆ. ಎರಡೂ ಭುಜಗಳಿಂದ ಕೆಳ ಇಳಿದ ಹಸಿರು ಶೆಲ್ಯೆ ರೇಖೆಗಳಿಂದ ಕೂಡಿದೆ. ಮೈಬಣ್ಣಕ್ಕೆ ತಿಳಿಗುಲಾಬಿ ಲೇಪಿಸಲಾಗಿದೆ. ಟೊಪ್ಪಿಗೆ ಹಾಗೂ ಗಡ್ಡ, ಮೀಸೆಯನ್ನು ಬಿಳಿ ವರ್ಣದಿಂದ ರಚಿಸಲಾಗಿದೆ. ಪಲ್ಲಕ್ಕಿ ಮೇಲೆ ಕುಳಿತ ಈ ಸಂತರು ಬಿಳಿ ಅಂಗಿ ಧರಿಸಿದ್ದಾರೆ, ಪಲ್ಲಕ್ಕಿಯು ಕಡು ಹಳದಿಯಿಂದ ವಿವಿಧ ರೇಖೆ, ಹೂ, ಕಾಯಿ, ಹಣ್ಣು ಒಳ್ಳೆಯಿಂದ ನಿರ್ಮಾಣವಾಗಿದೆ. ಸಂತರ ಹಿಂಭಾಗದಲ್ಲಿ ಕೇಸರಿ ಬಣ್ಣದ ವೃತ್ತಾಕಾರವಿದ್ದು, ಚಿತ್ರದ ಹಿಂಭಾಗ ಬೂದು ವರ್ಣದಿಂದ ಲೇಪಿತಗೊಂಡಿದೆ. ಎಡಭಾಗದಲ್ಲಿ ಹೂಬಳ್ಳಿಯ ಪಟ್ಟಿಕೆಯೊಂದು ಕಂಡುಬರುತ್ತದೆ. ಸಂತರು ಇಳಿಯಲಿಕ್ಕೆ ಹತ್ತಲಿಕ್ಕೆ ಅನುವಾಗಲೆಂದು ಸಣ್ಣದಾದ ಮಂಚವನ್ನು ಈ ಚಿತ್ರದಲ್ಲಿ ಕಾಣಬಹುದು.

ಸೂಫಿ ಪಂಥದ ಸಂತರ ಚಿತ್ರ :

ಈ ಕಲಾಕೃತಿಯಲ್ಲಿ ಒಟ್ಟು ಐದು ಪಟ್ಟಿಕೆಗಳಿದ್ದು, ಮಧ್ಯದಲ್ಲಿ ಸೂಫಿ ಸಂತನನ್ನು ಚಿತ್ರಿಸಲಾಗಿದೆ. ತೆಳು ಗುಲಾಬಿ ಮುಖ ವರ್ಣ ಹೊಂದಿದ ಈ ಸಂತನು ದಟ್ಟ ಹಸಿರು ವರ್ಣದ ಶ್ಯಾಲು, ತೆಳು ಹಸಿರು ಪಂಚೆ, ಹಾಗೂ ಅಂಗಿಯನ್ನು ಧರಿಸಿರುವುದು ಕಂಡುಬರುತ್ತದೆ. ತೆಳು ಗೆಂಪಿನ ಆಸನದ ಮೇಲೆ ಕುಳಿತ ಸಂತನ ಹಿಂಭಾಗದಲ್ಲಿ ಗುಲಾಬಿ, ಮತ್ತು ಹಸಿರು ವರ್ಣದ ದಿಂಬನ್ನು ಇಟ್ಟಿರುವುದು ಕಂಡುಬರುತ್ತದೆ. ಹಸಿರು ಪೀಠದ ಹಿಂಭಾಗ ಹಳದಿ ವೃತ್ತಾಕಾರ ಚಿತ್ರವಿದೆ. ಮೇಲಿನ ಭಾಗದಲ್ಲಿ ಬೂದು ವರ್ಣದ ಪಟ್ಟಿಕೆ, ಮಧ್ಯ ಹಳದಿ ಪಟ್ಟಿಕೆ, ಕೆಳಭಾಗ ಕೆಂಪು ಹಾಗೂ ಹಸಿರು ಹೂಬಳ್ಳಿಯ ವಿನ್ಯಾಸಗಳು

ಮೂಡಿಬಂದಿವೆ. ಈ ಚಿತ್ರದ ಹಿಂಭಾಗದಲ್ಲಿ ಕಡು ನೀಲಿ ವರ್ಣದ ಹಿನ್ನೆಲೆ ಲೇಪನವಿದೆ. ಈ ಕಲಾಕೃತಿಗೆ ಕಪ್ಪು ವರ್ಣದ ಹೊರಚೌಕಟ್ಟು ಇದ್ದು ಅದರ ಹೊರಭಾಗ ಕಡು ಹಳದಿ ವರ್ಣದ ಮತ್ತೊಂದು ಪಟ್ಟಿಯು ರಚನೆಯಾಗಿದೆ.

ಶಿವ ಪಾರ್ವತಿ ಚಿತ್ರ :


ವಿಜಾಪುರದ ವಸ್ತು ಸಂಗ್ರಹಾಲಯದಲ್ಲಿರುವ ಈ ಚಿತ್ರವು ೧೭ನೇ ಶತಮಾನಕ್ಕೆ ಸೇರಿದ್ದಾಗಿದೆ. ಈ ಕಲಾಕೃತಿಯಲ್ಲಿ ತುಂಬಾ ಸೂಕ್ಷ್ಮವಾದ ರೇಖೆಗಳು ಪ್ರಧಾನ ಪಾತ್ರವಹಿಸಿವೆ. ಪ್ರಮಾಣಬದ್ಧವಾದ ಆಕೃತಿ, ಸರಳವಾದ ರೇಖೆಗಳು, ಅಗತ್ಯವೆನಿಸುವ ವಿನ್ಯಾಸಗಳನ್ನು ತುಂಬಾ ಸರಳವಾಗಿ ಈ ಚಿತ್ರದಲ್ಲಿ ರಚಿಸಲ್ಪಟ್ಟಿವೆ. ಇಲ್ಲಿ ಶಿವನು ಬೂದು ವರ್ಣ ಹೊಂದಿದ್ದು, ಸ್ವಲ್ಪ ಮುಂದೆ ಬಾಗಿ ಪಾರ್ವತಿಯು ಆಡಿದ ಮಾತುಗಳನ್ನು ಕೇಳುತ್ತಿರುವಂತಿದೆ. ಪಾರ್ವತಿಯು ಕೆಂಪು ಸೀರೆಯುಟ್ಟು ಎರಡೂ ಕೈಯನ್ನು ಜೋಡಿಸಿ ಪತಿಯಲ್ಲಿ ಯಾವುದೊ ವಿಚಾರದ ಕುರಿತು ಬೇಡಿಕೊಳ್ಳುತ್ತಿದ್ದಾಳೆ. ಹಳದಿ ವರ್ಣದ ಕುಪ್ಪಸ ತೊಟ್ಟ ಪಾರ್ವತಿಯು ಪಾರದರ್ಶಕವಾಗಿ ಕಾಣುವ ದಾವನಿಯನ್ನು ಹೊದ್ದುಕೊಂಡಿದ್ದಾಳೆ. ಕೆಳಗೆ ಹುಲಿ ಚರ್ಮವನ್ನು ಚಿತ್ರಿಸಿದ್ದು ಹುಲಿಯ ಮುಖ, ಕಾಲು, ಬಾಲ ಹಳದಿ ಬಣ್ಣದಲ್ಲಿ ರಚನೆಯಾಗಿವೆ. ಇಲ್ಲಿ ಶಿವನ ಕೊರಳಲ್ಲಿ ನಾಗಸರ್ಪವನ್ನು ರಚಿಸಲಾಗಿದೆ. ಬೂದು ವರ್ಣದ ವಸ್ತ್ರವನ್ನು ಹೊದ್ದುಕೊಂಡಿರುವ ಶಿವನು ಕೆಳಮುಖ ಮಾಡಿ ಕುಳಿತಿದ್ದಾನೆ. ಶಿವನ ಕಣ್ಣುಗಳು ಮೀನಿನಾಕಾರವಾಗಿ ಮೂಡಿ ಬಂದಿದೆ. ಡೊಂಕಾದ ಹುಬ್ಬು, ಅರಳಿದ ತುಟಿಯನ್ನು ರಚಿಸಿದ ಕಲಾವಿದ ಕಪ್ಪು ಬಣ್ಣದ ರೇಖೆಯನ್ನು ಎಳೆದಿದ್ದಾನೆ, ಶಿವನ ಕೇಶದ ಹಿಂಭಾಗದಲ್ಲಿ ಬಂಗಾರ ವರ್ಣದ ವೃತ್ತ, ಅದೇ ರೀತಿ ಪಾರ್ವತಿಯ ಹಿಂದೆಯೂ ರಚಿಸಲಾಗಿದೆ. ಪಾರ್ವತಿಯು ಅಲಂಕೃತಳಾಗಿ ಶಿವನ ಮುಂದೆ ಎರಡೂ ಕಾಲು ಮಡಚಿ ಕುಳಿತಿದ್ದಾಳೆ, ಹಿಂಭಾಗದಲ್ಲಿ ತೆಳುಗುಲಾಬಿ ವರ್ಣ ಲೇಪನ ಮಾಡಿ ಬೆಟ್ಟ ಗುಡ್ಡ, ಸಮುದ್ರವನ್ನು ರಚಿಸಲಾಗಿದೆ.

ಅಲಂಕಾರಿಕ ವಸ್ತುಗಳ ಮೇಲಿನ ಚಿತ್ರಗಳು :

ಈ ವಸ್ತು ಸಂಗ್ರಹಾಲಯದಲ್ಲಿ ಕಾಗದ ಮತ್ತು ರಟ್ಟುಗಳ ಮೇಲೆ ಚಿತ್ರಗಳು ಇರುವಂತೆ ಪಾತ್ರೆ ಮತ್ತು ಫಲಕಗಳ ಮೇಲೆ ಮತ್ತು ಇನ್ನಿತರ ಅಲಂಕಾರಿಕ ವಸ್ತುಗಳ ಮೇಲೆ ಚಿತ್ರಗಳನ್ನು ರಚನೆ ಮಾಡಲಾಗಿದೆ. ಇವು ಹೆಚ್ಚಾಗಿ ಜ್ಯಾಮಿತಿಕ ಮತ್ತು ಹೂಬಳ್ಳಿಯ ನಕ್ಷಾ ವಿನ್ಯಾಸಗಳನ್ನು ಒಳಗೊಂಡಿವೆ.



ಸೂಫಿ ಪಂಥದ ಸಂತರು



ಸೂಫಿ ಪಂಥದ ಸಂತರು



ಸೂಫಿ ಪಂಥದ ಸಂತರು



ಶಿವ ಪಾರ್ವತಿ

೧. ಈ ಚಿತ್ರದಲ್ಲಿ ಅಲಂಕಾರಿಕ ಪಾತ್ರೆಯೊಂದಿದ್ದು, ಅದರ ಮೇಲೆ ಜ್ಯಾಮತಿಕ ವಿನ್ಯಾಸದ ನಕ್ಷೆ ಮತ್ತು ಹೂಬಳ್ಳಿಯ ಅಲಂಕಾರಿಕ ಮಾದರಿಗಳನ್ನು ರೂಪಿಸಲಾಗಿದೆ. ಪಾತ್ರೆಯನ್ನು ವೃತ್ತಾಕಾರವಾಗಿರುವ ಪೀಠದ ಮೇಲೆ ಇಟ್ಟಿರುವಂತೆ ನಿರ್ಮಿಸಲಾಗಿದ್ದು, ಪಾತ್ರೆಯ ಸುತ್ತಲು ತಳದಿಂದ ಮೇಲಿನವರೆಗೆ ನಕ್ಷೆಗಳನ್ನು ರಚಿಸಲಾಗಿದೆ. ತಳಭಾಗದ ಪೀಠವು ಸಂಗಮೊರಿ ಕಲ್ಲಿನಿಂದ ರಚನೆಯಾಗಿದೆ. ಮೇಲ್ಭಾಗದ ಪಾತ್ರೆಯು ಪಿಂಗಾಣಿ ಮಣ್ಣಿನಿಂದ ರಚನೆಯಾಗಿದೆ. ನಕ್ಷೆಯ ಭಾಗವು ಬಂಗಾರದ ಹಾಗೆ ಹೊಳಪ್ಪುಳದಾಗಿದ್ದು, ಹಿನ್ನೆಲೆಯಲ್ಲಿ ಕಪ್ಪು ಬಣ್ಣವನ್ನು ಲೇಪನ ಮಾಡಲಾಗಿದೆ.

೨. ಈ ಚಿತ್ರದಲ್ಲಿ ಅಲಂಕಾರಿಕ ಹೂಜಿಯೊಂದಿದ್ದು, ಪಿಂಗಾಣಿ ಮಣ್ಣಿನಿಂದ ರಚನೆಯಾಗಿದೆ ತಳಭಾಗವನ್ನು ಕಿರಿದಾಗಿ ರಚನೆ ಮಾಡಿದ್ದು, ಮೇಲ್ಭಾಗಕ್ಕೆ ಹೋದಂತೆ ವಿಶಾಲವಾಗಿದೆ. ಈ ಹೂಜಿಗೆ ಮಚ್ಚಲಾಗಿರುವ ಮುಚ್ಚಳವು ಸಹಿತ ಅಲಂಕಾರಿಕ ವಿನ್ಯಾಸದಲ್ಲಿ ರಚನೆಯಾಗಿದೆ. ಈ ಹೂಜಿಯ ಮೈಮೇಲೆ ಸುತ್ತಲು ಬಣ್ಣ ಬಣ್ಣದ ಹೂಬಳ್ಳಿಯ ನಕ್ಷೆಗಳನ್ನು ಚಿತ್ರಿಸಲಾಗಿದೆ. ನೈಜ ಶೈಲಿಯಲ್ಲಿ ರಚನೆಯಾದ ಹೂಗಳ ಅಲಂಕರಣವು ಸುಂದರವಾಗಿದೆ. ಪಾತ್ರೆಯ ಮೇಲ್ಭಾಗದಲ್ಲಿ ಪ್ರಾಣಿಯ ಆಕಾರವೊಂದನ್ನು ಸಾಂಕೇತಿಕವಾಗಿ ರೂಪಿಸಲಾಗಿದೆ. ಇಲ್ಲಿ ಮುಖ್ಯವಾಗಿ ಕೆಂಪು, ನಸುಗೆಂಪು,ಮತ್ತು ಬಿಳಿ ವರ್ಣಗಳು ಪ್ರಮುಖವಾಗಿ ಬಳಕೆಗೊಂಡಿವೆ.

೩. ಈ ಅಲಂಕಾರಿಕ ಪಾತ್ರಯು ಪಿಂಗಾಣಿ ಮಣ್ಣಿನಿಂದ ರಚನೆಯಾಗಿದ್ದು, ಹೂವಿನ ಕುಂಡದ ವಿನ್ಯಾಸದಲ್ಲಿದೆ. ಪಾತ್ರೆಯ ಸುತ್ತಲು ಕಿವಿಗಳ ಹಾಗಿರುವ ಅಲಂಕಾರಿಕ ರಂಧ್ರಗಳನ್ನು ನಿಯಮಿತ ಅಂತರದಲ್ಲಿ ಕೊರೆಯಲಾಗಿದೆ ಮಧ್ಯದಲ್ಲಿ ಅಡ್ಡಲಾಗಿರುವಂತೆ ಸಲಾಕೆಯೊಂದನ್ನು ಒಳಭಾಗದಲ್ಲಿ ನಿರ್ಮಿಸಲಾಗಿದೆ. ಇದರ ಮೇಲೆ ಬಣ್ಣದಿಂದ ಬರೆದ ಯಾವುದೇ ಚಿತ್ರಗಳಿರದೆ ಕೇವಲ ಹಸಿರು ಬಣ್ಣವನ್ನು ಮಾತ್ರ ಲೇಪನ ಮಾಡಲಾಗಿದೆ.

೪. ಈ ಕಲಾಕೃತಿಯು ಬಿದರಿ ಕಲೆಯ ನಿರ್ಮಾಣವಾಗಿದ್ದು, ಹೂಬಳ್ಳಿಯ ನಕ್ಷಾ ವಿನ್ಯಾಸವನ್ನು ಹೊಂದಿರುವ ಸುಂದರವಾದ ತಟ್ಟೆಯಾಗಿದೆ, ವೃತ್ತಾಕಾರವಾಗಿರುವ ಈ ಬಿದರಿ ಕಲಾಕೃತಿಯ ಮೇಲ್ಭಾಗದಲ್ಲಿ ಜಾಮತಿಕ ವಿನ್ಯಾಸದ ನಕ್ಷೆಗಳು, ಹೂವಿನ ಅಲಂಕಾರಗಳು, ಅಲಂಕಾರಿಕ ಜಾಮತಿಕ ವಿನ್ಯಾಸಗಳು ಕೆತ್ತಲ್ಪಟ್ಟಿವೆ. ಈ ಕಲಾಕೃತಿಯಲ್ಲಿ ವರ್ಣ ವೈವಿಧ್ಯತೆ ಕಂಡುಬರುವುದಿಲ್ಲ.

ವಿಜಾಪೂರ ಜಿಲ್ಲೆಯ ವಸ್ತು ಸಂಗ್ರಹಾಲಯದಲ್ಲಿರುವ ಅಲಂಕಾರಿಕ ವಸ್ತುಗಳು




1



2



3



4

೫. ಈ ಕಲಾಕೃತಿಯು ತಾಮ್ರ ಲೋಹದಿಂದ ನಿರ್ಮಿಸಿದ ಅಲಂಕಾರಿಕ ಬುಟ್ಟಿಯಾಗಿದೆ, ಈ ಬುಟ್ಟಿಯನ್ನು ಮುಚ್ಚಲು ಬರುವಂತೆ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಕಲಾಕೃತಿಯು ಜಾಲರಿಯ ವಿನ್ಯಾಸದಲ್ಲಿ ರೂಪಗೊಂಡಿದ್ದು, ಹೂಬಳ್ಳಿಯ ಅಲಂಕರಣವನ್ನುಹೊಂದಿದೆ. ವಸ್ತುಗಳನ್ನು ಕಾಯ್ದಿಡಲು ಬಳಸುತ್ತಿರಬಹುದಾದ ಈ ಅಲಂಕಾರಿಕ ಪಾತ್ರೆಯು ವಾತಾನುಕೂಲದಿಂದ ಕೂಡಿದ್ದು, ವೈಜ್ಞಾನಿಕ ಹಿನ್ನೆಲೆ ಹೊಂದಿದೆ.

೬. ಈ ಕಲಾಕೃತಿಯು ಕೈತೊಳೆಯುವ ಅಲಂಕಾರಿಕ ಪಾತ್ರೆಯಾಗಿದೆ. ಲೋಹದಿಂದ ನಿರ್ಮಿಸಲಾದ ಈ ಪಾತ್ರೆಯು ನಕ್ಷಾ ವಿನ್ಯಾಸವನ್ನು ಹೊಂದಿದೆ. ತಳಭಾಗದಲ್ಲಿ ಚಿಕ್ಕದಾಗಿದ್ದು, ಮೇಲಿನ ಕಂಠ ಭಾಗವು ವಿಶಾಲವಾಗಿ ತೆರೆದುಕೊಂಡಿದೆ. ಪಾತ್ರೆಯ ಹೃದಯ ಭಾಗದಲ್ಲಿ ಹೂಬಳ್ಳಿಯ ನಕ್ಷಾ ವಿನ್ಯಾಸವನ್ನು ರಚನೆ ಮಾಡಲಾಗಿದ್ದರೆ ಕಂಠದ ಭಾಗದಲ್ಲಿ ಜಾಮತಿಕ ನಕ್ಷೆ ಮತ್ತು ರೇಖಾ ವಿನ್ಯಾಸವನ್ನು ರೂಪಿಸಲಾಗಿದೆ.

೭. ಈ ಕಲಾಕೃತಿಯು ಅಲಂಕಾರಿಕ ಹೂವಿನ ಕುಂಡವಾಗಿದೆ. ತಳಭಾಗದಲ್ಲಿ ಅಗಲವಾಗಿದ್ದು ಕಂಠಭಾಗವು ಕಿರಿದಾಗಿದೆ. ಪಾತ್ರೆಯ ತಳಭಾಗದಲ್ಲಿ ವೃತ್ತಾಕಾರವಾಗಿರುವ ಪೀಠಭಾಗವನ್ನು ರಚನೆಮಾಡಲಾಗಿದೆ. ಕೆಳಭಾಗವು ಹೂವಿನ ಅಲಂಕರಣದಿಂದ ಕೂಡಿದ್ದರೆ, ಅದರ ಮೇಲ್ಭಾಗವು ಬಳ್ಳಿಯ ವಿನ್ಯಾಸದಿಂದ ರೂಪಗೊಂಡಿದೆ. ಲೋಹದಿಂದ ರಚನೆಯಾದ ಈ ಹೂ ಕುಂಡದ ಮೇಲೆ ವಿವಿಧ ರೀತಿಯ ಹೂಗಳ ಅಲಂಕರಣ ಮತ್ತು ಜಾಮತಿಕ ವಿನ್ಯಾಸದ ನಕ್ಷೆಯ ಮಾದರಿಗಳು ಕಂಡುಬರತ್ತವೆ.

೮. ಈ ಕಲಾಕೃತಿಯು ಲೋಹದಿಂದ ನಿರ್ಮಿಸಿದ ಅಲಂಕಾರಿಕ ಪಕ್ಷಿಯ ಮೂರ್ತಿಯಾಗಿದೆ. ಸುಂದರವಾಗಿರುವ ಪೀಠಒಂದರ ಮೇಲೆ ಕುಳಿತಿರುವ ಪಕ್ಷಿಯು ತನ್ನ ಚುಂಚಿನಲ್ಲಿ ಯಾವುದೊ ವಸ್ತುವನ್ನು ಹಿಡಿದುಕೊಂಡಂತೆ ರೂಪಿಸಲಾಗಿದೆ. ಎತ್ತರವಾಗಿರುವ ಕುತ್ತಿಗೆ, ದೊಡ್ಡಗಾತ್ರದ ದೇಹ, ವಿಶಾಲವಾಗಿ ಮೇಲಕ್ಕೆ ಚಾಚಿಕೊಂಡಿರುವ ಪುಚ್ಚಗಳು, ಮತ್ತು ಚಿಕ್ಕದಾದ ರೆಕ್ಕೆಗಳು ಕಲಾಕೃತಿಗೆ ಅಂದವನ್ನು ತಂದುಕೊಟ್ಟಿವೆ. ಕುತ್ತಿಗೆಯ ಕೆಳಭಾಗದಲ್ಲಿ ಅಲ್ಲಲ್ಲಿ ಚಿಕ್ಕ ಚಿಕ್ಕ ರಂದ್ರಗಳನ್ನು ಕೊರೆದಿದ್ದು ಬಹುಶ: ಊದುಬತ್ತಿಯನ್ನು ಹಚ್ಚಲು ಇದನ್ನು ಬಳಸುತ್ತಿರಬಹುದಾದ ಸಾಧ್ಯತೆ ಇದೆ..

೯. ಈ ಕಲಾಕೃತಿಯು ಶಿಲೆಯಿಂದ 'ನಿರ್ಮಿಸಿದ ಫಲಕವಾಗಿದ್ದು, ಅದರ ಮೇಲೆ ನೈಜ ಶೈಲಿಯಲ್ಲಿ ಹೂಬಳ್ಳಿಯ ಚಿತ್ರವನ್ನು ರೂಪಿಸಲಾಗಿದೆ, ಜೊತೆಗೆ ಹೂಬಳ್ಳಿಯ ಸಂಯೋಜನೆಯಲ್ಲಿ ಒಂದೆತೆರನಾಗಿರುವಂತೆ ಉರ್ದು ಲಿಪಿಯನ್ನು ರೂಪಿಸಿರುವುದು

ಕಲಾವಿದನ ಜಾಣ್ಮೆಯನ್ನು ತೋರಿಸುತ್ತದೆ. ಅಯತಾಕಾರವಾಗಿರುವ ಈ ಫಲಕದ ಮೇಲೆ ದೊಡ್ಡ ಗಾತ್ರದ ಹೂಗಳು, ಉದ್ದವಾಗಿರುವ ಎಲೆಗಳನ್ನು ಚಿತ್ರಿಸಲಾಗಿದೆ.

೧೦. ಈ ಕಲಾಕೃತಿಯು ಪವಿತ್ರ ಕುರಾನ್ ಸುತ್ತಲು ರಚನೆಮಾಡಿರುವ ನಕ್ಷಾ ವಿನ್ಯಾಸದ ಮಾದರಿಯನ್ನು ಹೊಂದಿದೆ. ಈ ಕೃತಿಯಲ್ಲಿ ಪುಸ್ತಕದ ಪ್ರತಿಯೊಂದು ಪುಟದ ಮಧ್ಯ ಭಾಗದಲ್ಲಿ ಕುರಾನಿನ ವಾಕ್ಯಗಳನ್ನು ಬರೆಯಲಾಗಿದ್ದರೆ, ಪ್ರತಿಯೊಂದು ಪುಟದ ಸುತ್ತ ಹೂಬಳ್ಳಿಯ ಅಲಂಕರಣವನ್ನು ವಿವಿಧ ಬಣ್ಣಗಳಲ್ಲಿ ಚಿತ್ರಿಸಲಾಗಿದೆ. ಈ ನಕ್ಷೆಗಳಲ್ಲಿ ನೈಜ ಶೈಲಿಯ ಹೂಗಳಲ್ಲದೆ ಜಾಮತಿಕ ವಿನ್ಯಾಸದ ಅಲಂಕರಣಗಳು ರಚಿಸಲ್ಪಟ್ಟಿವೆ. ಇಲ್ಲಿನ ನಕ್ಷೆಯ ರಚನೆಗಾಗಿ ಹಳದಿ, ಕೆಂಪು, ನೀಲಿ, ಹಸಿರು, ಬಿಳಿ, ಮತ್ತು ಕಪ್ಪು ವರ್ಣಗಳನ್ನು ಬಳಸಲಾಗಿದೆ.

ವಿಜಾಪುರ ವಸ್ತು ಸಂಗ್ರಹಾಲಯದಲ್ಲಿರುವ ಚಿತ್ರಕಲಾ ಕೃತಿಗಳು ಹಲವಾರ ದೃಷ್ಟಿಕೋನಗಳಿಂದ ಮಹತ್ವ ಪಡೆದುಕೊಂಡಿವೆ. ಆದಿಲಶಾಹಿಗಳ ಕಾಲದ ಚಿತ್ರಕಲೆಯ ಬಗ್ಗೆ ವಿವಿಧ ಮಾಹಿತಿಗಳನ್ನು ಇವು ನೀಡುತ್ತವೆ. ಆ ಕಾಲದ ಕಲಾವಿದರು, ಕಲಾಕೃತಿಯ ರಚನೆ ವಿಧಾನ, ಪರಿಕರಗಳು, ಚಿತ್ರದ ವಸ್ತು ವಿಷಯಗಳು, ಮತ್ತು ತಂತ್ರಗಾರಿಕೆಯಂತಹ ಸಂಗತಿಗಳು ತಿಳಿದುಬರುತ್ತವೆ. ಅಲ್ಲದೆ ಆ ಕಾಲದ ಜನರ ಕಲಾಶಕ್ತಿ, ಜೀವನ ವಿಧಾನ, ನಂಬಿಕೆ, ಆಚರಣೆ, ಧಾರ್ಮಿಕತೆ, ಸಂಸ್ಕೃತಿಗಳು ಇವುಗಳಿಂದ ತಿಳಿದುಬರುತ್ತವೆ.

ಈ ವಸ್ತು ಸಂಗ್ರಹಾಲಯದಲ್ಲಿ ಕಾಯ್ದಿಡಲ್ಪಟ್ಟ ಚಿತ್ರಗಳು ಒಂದೇ ಕಾಲಮಾನದವುಗಳಾಗಿರದೆ ಬೇರೆ ಬೇರೆ ಕಾಲ ಮತ್ತು ಅರಸರ ಅವಧಿಯಲ್ಲಿ ರಚನೆಯಾಗಿವೆ. ಆದಿಲಶಾಹ, ಇಬ್ರಾಹಿಮ್ ಆದಿಲಶಾಹ, ಮಹಮ್ಮದ ಆದಿಲ್‌ಶಾಹ, ಇಸ್ಮಾಯಿಲ್ ಆದಿಲಶಾಹ, ಚಾಂದಬೀಬಿ, ಸಿಕಂದರ, ಮುಂತಾದವರ ಕಾಲದ ಚಿತ್ರ ರಚನೆಗಳು ಇಲ್ಲಿವೆ. ಇಲ್ಲಿರುವ ಕಲಾಕೃತಿಗಳಲ್ಲಿ ರಾಜರು, ರಾಜಕುಮಾರರು, ರಾಣಿಯರು, ರಾಜಪರಿವಾರದವರು, ಅಧಿಕಾರಿಗಳು, ಸಂತರು, ಮಹಾತ್ಮರು ಯೋಗಿನಿಯರು, ಪ್ರಾಣಿ ಪಕ್ಷಿಗಳು ಹೀಗೆ ಹಲವಾರು ಚಿತ್ರಗಳಿವೆ. ಇಲ್ಲಿನ ಮುಖ್ಯ ಚಿತ್ರಗಳಲ್ಲಿ ಇಬ್ರಾಹಿಮ್ ಆದಿಲಶಾಹ, ಮಹಮ್ಮದ ಆದಿಲಶಾಹ, ರಂಭಾವತಿ, ಸರದಾರರು, ಚಾಂದಬೀಬಿ, ಔರಂಗಜೇಬನ ಮಗಳು ಜೈಬುನ್ನೀಸಾ, ಯುಸೂಫ್ ಆದಿಲಶಾಹ, ಇಸ್ಮಾಯಿಲ್ ಆದಿಲಶಾಹ, ಸಿಕಂದರ ಆದಿಲಶಾಹ, ಸೂಫಿ ಸಂತರ ಚಿತ್ರಗಳು ಒಳಗೊಂಡಿವೆ. ಇದಲ್ಲದೆ ರಾಗಮಾಲಾ ಚಿತ್ರಗಳಲ್ಲಿ ಹಿಂಡೋಲಾ ರಾಗ, ಪುತ್ರ ರಾಗ, ಕುಸಮ ರಾಗ, ಪಂಚಮರಾಗ, ಮಾಳ್ವಾ ರಾಗದ ಚಿತ್ರಗಳಿವೆ. ಕಾಗದ, ಬಟ್ಟೆ, ಇವುಗಳ ಮೇಲಿನ ಚಿತ್ರಗಳಲ್ಲದೆ ಪಿಂಗಾಣಿ ಪಾತ್ರೆ, ಮರದ ಫಲಕ. ಲೋಹದ ಪಾತ್ರೆ, ಪ್ಲಾಸ್ಟರ್ ಫಲಕಗಳು,

ವಿಜಾಪೂರ ಜಿಲ್ಲೆಯ ವಸ್ತು ಸಂಗ್ರಹಾಲಯದಲ್ಲಿರುವ ಅಂಲಕಾರಿಕ ವಸ್ತುಗಳು



5



6




7



8



9



10

ಮರದ ಫಲಕಗಳ ಮೇಲೆ ಚಿತ್ರಗಳು ರಚನೆಯಾಗಿವೆ. ಅವುಗಳನ್ನು ಸಹಿತ ಇಲ್ಲಿ ಸಂಗ್ರಹಿಸಲಾಗಿದೆ. ಈ ಸಂಗ್ರಹಾಲಯದ ಚಿತ್ರ ಕೃತಿಗಳಲ್ಲಿ ವಿವಿಧ ಮಾಧ್ಯಮಗಳ ಮೇಲೆ ರಚನೆಯಾಗಿರುವ ಕೃತಿಗಳನ್ನು ಗಮನಿಸಿದಾಗ ಬೇರೆ ಬೇರೆ ಶೈಲಿ ಮತ್ತು ಪ್ರಾದೇಶಿಕತೆಯಿಂದ ಅವು ಪ್ರಭಾವಿತಗೊಂಡಂತೆ ಕಂಡುಬರುತ್ತವೆ. ಮೊಘಲ್, ಪರ್ಶಿಯನ್, ರಾಜಸ್ಥಾನಿ, ಪಹಾಡಿ, ಕಾಂಗ್ರಾ, ಡೆಕ್ಕನಿ, ಶೈಲಿಗಳಿಂದ ಇಲ್ಲಿನ ಚಿತ್ರಗಳು ಪ್ರೇರಣೆಗೊಂಡಿವೆ. ಈ ಸಂಗ್ರಹಾಲಯದ ಚಿತ್ರಗಳು ತಮ್ಮ ಮೌಲಿಕತೆಯಿಂದ ಬಿಜಾಪುರ ಜಿಲ್ಲೆಯ ಕಲಾಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿವೆ ಎನ್ನಬಹುದು.

♣♣♣♣♣

ಅಧ್ಯಾಯ : ಐದು

ವಿಜಾಪುರ ಜಿಲ್ಲೆಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳು

ಕರ್ನಾಟಕ ಕಲಾಕ್ಷೇತ್ರಕ್ಕೆ ಉತ್ತರ ಕರ್ನಾಟಕದ ಕೊಡುಗೆ ಅಪಾರವಾಗಿದೆ ಅದರಲ್ಲಿ ವಿಶೇಷವಾಗಿ ಈ ಭಾಗದ ಕಲಾ ಶಾಲೆಗಳು ಮತ್ತು ಶಿಕ್ಷಣ ಸಂಸ್ಥೆಗಳು ಚಿತ್ರಕಲೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಉತ್ತರ ಕರ್ನಾಟಕ ಭಾಗದಲ್ಲಿ ವಿಜಾಪುರ ಜಿಲ್ಲೆಯು ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಹೊಂದಿದ ಪ್ರದೇಶವಾಗಿದೆ. ಈ ಭಾಗದಲ್ಲಿ ಸ್ಥಾಪಿತವಾದ ಕಲಾ ಶಾಲೆಗಳು ಸಹಿತ ತಮ್ಮ ಕೊಡುಗೆಗಳಿಂದ ಬಿಜಾಪುರ ಜಿಲ್ಲೆಗೆ ಮಾತ್ರವಲ್ಲದೆ. ಸಮಗ್ರ ನಾಡಿಗೆ ವಿಶಿಷ್ಟ .ಕೊಡುಗೆಯನ್ನು ನೀಡುತ್ತಾ ಬಂದಿವೆ. ಬಿಜಾಪುರ ಜಿಲ್ಲೆಯ ಶಿಕ್ಷಣ ಸಂಸ್ಥೆಗಳು ಮತ್ತು ಕಲಾ ಶಾಲೆಗಳು ಸಾಂಪ್ರದಾಯಕ ಮತ್ತು ಆಧುನಿಕ ಕಲಾ ಪದ್ಧತಿಯನ್ನು ಒಟ್ಟಾಗಿ ಬೆಳೆಸುತ್ತ ಬಂದಿವೆ. ತಮ್ಮ ಕಲಾ ಶಿಕ್ಷಣದ ಜೊತೆಗೆ ಈ ಜಿಲ್ಲೆಯ ಜನರ ಕಲಾಭಿರುಚಿಗಳನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರವಹಿಸಿವೆ. ಹೀಗೆ ಕಲಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಜಿಲ್ಲೆಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳ ಕುರಿತು ಸ್ಥೂಲವಾದ ವಿವೇಚನೆಯನ್ನು ಇಲ್ಲಿ ಮಾಡಲಾಗಿದೆ.

ಬಿಜಾಪುರ ಜಿಲ್ಲೆಯಲ್ಲಿ ಚಿತ್ರಕಲೆಗಾಗಿ ಮತ್ತು ಕಲಾ ಶಿಕ್ಷಣಕ್ಕಾಗಿ ಮೊಟ್ಟ ಮೊದಲು ಆರಂಭಗೊಂಡ ಚಿತ್ರಕಲಾ ಶಾಲೆಯು ಬಿಜಾಪುರದ ಶ್ರೀ ಸಿದ್ದೇಶ್ವರ ಚಿತ್ರಕಲಾ ಮಹಾವಿಧ್ಯಾಲಯವಾಗಿದೆ, ಉತ್ತರ ಕರ್ನಾಟಕದಲ್ಲಿ ಗದಗ, ಹುಬ್ಬಳ್ಳಿ, ಮತ್ತು ಧಾರವಾಡಗಳನ್ನು ಹೊರತುಪಡಿಸಿ,. ಅತಿ .ಹೆಚ್ಚಿನ ಮಹತ್ವವನ್ನು ಪಡೆದುಕೊಂಡ ಕಲಾ ಶಾಲೆ ಇದಾಗಿದೆ. ಈ ಕಲಾ ಶಾಲೆಯು ತನ್ನ ಗಮನಾರ್ಹ ಕೊಡುಗೆಗಳಿಂದ ಜಿಲ್ಲೆಯ ಕಲಾ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನ ಗಳಿಸಿಕೊಂಡಿದೆ, ಅದರ ಸ್ಥೂಲನೋಟ ಈ ಕೆಳಗಿನಂತಿದೆ.

ಶ್ರೀ ಸಿದ್ದೇಶ್ವರ ಕಲಾಮಂದಿರ ವಿಜಾಪುರ :

ವಿಜಾಪುರ ಜಿಲ್ಲೆಯಲ್ಲಿ ಪ್ರಥಮವಾಗಿ ಪ್ರಾರಂಭವಾದ ಈ ಕಲಾ ಶಾಲೆಯು ಬಿ.ಎಲ್.ಡಿ.ಇ. ಸಂಸ್ಥೆಯ ಆಶ್ರಯದಲ್ಲಿ ಕ್ರಿ. ಶ. ೧೯೭೭ ರಲ್ಲಿ ಆರಂಭಗೊಂಡಿತು. ಶ್ರೀ ಸಿದ್ದೇಶ್ವರ ಕಲಾ ಮಂದಿರ ಎಂಬ ಹೆಸರಿನ ಈ ಸಂಸ್ಥೆಯನ್ನು ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳವರು ಶ್ರೀ ಸಿದ್ದೇಶ್ವರ ಡ್ರಾಯಿಂಗ್ ಹಾಲಿನಲ್ಲಿ ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಸಂಸ್ಥೆಯ ರೂವಾರಿಯಾದ ಪ್ರಧಾನ ಕಾರ್ಯದರ್ಶಿಗಳಾದ ದಿ: ಬಿ. ಎಂ. ಪಾಟೀಲ, ವಹಿಸಿದ್ದರು. ಇದೆ ಸಂದರ್ಭದಲ್ಲಿ ಪ್ರಾಚಾರ್ಯರಾದ ಶ್ರೀ. ಸಿ. ಬಿ. ಕಾಚಾಪುರ, ಅವರ ಕಲಾಕೃತಿಗಳ ಕಲಾ ಪ್ರದರ್ಶನ ಏರ್ಪಡಿಸಲಾಗಿತ್ತು.

ಪ್ರಾರಂಭದಿಂದ ೧೯೮೨ ನೇ ಸಾಲಿನವರೆಗೆ ಒಂದು ವರ್ಷದ (ಡಿ.ಟಿ.ಸಿ.) ಚಿತ್ರಕಲಾ ತರಬೇತಿ ವರ್ಗ ನಡೆಸಲಾಯಿತು. ೧೯೮೩ನೇ ಸಾಲಿನಿಂದ ರಾಜ್ಯ ಸರಕಾರ ಹೊಸ ಅಭ್ಯಾಸ ಪತ್ರಿಕೆ ತಯಾರಿಸಿ ಡಿ.ಟಿ.ಸಿ. ಬದಲು ಡಿ. ಎಂ. ಸಿ. (ಡ್ರಾಯಿಂಗ ಮಾಸ್ಟರ ಕೋರ್ಸ್) ಎಂಬ ಎರಡು ವರ್ಷದ ಕೋರ್ಸ ಪ್ರಾರಂಭಿಸಲಾಯಿತು. ವಿಧ್ಯಾರ್ಥಿಗಳಿಗೆ ಹೆಚ್ಚಿನ ಅಭ್ಯಾಸ ಮಾಡಲು ಅನುವಾಯಿತು. ಮುಂದೆ ೧೯೮೮-೮೯ನೇ ಸಾಲಿಗೆ ಮೂರನೇ ವರ್ಷದ ಡ್ರಾಯಿಂಗ ಮತ್ತು ಪೇಂಟಿಂಗ ವರ್ಗ ೧೯೮೯-೯೦ ನೇ ಸಾಲಿಗೆ ನಾಲ್ಕನೇ ವರ್ಷದ ಡ್ರಾಯಿಂಗ ಮತ್ತು ಪೇಂಟಿಂಗ ವರ್ಗ ೧೯೯೦-೯೧ನೇ ಸಾಲಿಗೆ ಐದನೇ ವರ್ಷದ ಆರ್ಟ ಮಾಸ್ಟರ ಡಿಪ್ಲೋಮಾ ಕೋರ್ಸ ೧೯೯೧-೯೨ನೇ ಸಾಲಿಗೆ ಡ್ರಾಯಿಂಗ ಮತ್ತು ಪೇಂಟಿಂಗ ವರ್ಗ ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಉನ್ನತಮಟ್ಟದ ಚಿತ್ರಕಲೆ ಅಭ್ಯಾಸ ಮಾಡಲು ಬಿ.ಎಲ್.ಡಿ.ಇ. ಸಂಸ್ಥೆ ಅನುವು ಮಾಡಿಕೊಟ್ಟಿತು.

ಆರಂಭದಲ್ಲಿ ಶ್ರೀ ಸಿ. ಬಿ. ಕಾಚಾಪುರ ಪ್ರಭಾರಿ ಪ್ರಾಚಾರ್ಯರು, ಸಿ. ಎನ್. ಪಾಟೀಲ ನಿರ್ದೇಶಕರು ಎಮ್.ಎಸ್. ಜತ್ತಿ, ಅರೆ ಅವಧಿ ಉಪನ್ಯಾಸಕರು ಪಿ.ಎಸ್. ಕಡೇಮನಿ ಅರೆ ಅವಧಿ ಉಪನ್ಯಾಸಕರು, ವಿ.. ಎಸ್. ಸಾಲಿ ಅರೆ ಅವಧಿ ಉಪನ್ಯಾಸಕರು, ಎಸ್. ಬಿ. ಚಂಡಕಿ, ದ್ವಿ. ದ. ಸಹಾಯಕರು. ಸಿ. ಎಂ. ಸೊನ್ನದ ಅರೆ ಅವಧಿ ಜವಾನರಾಗಿ ಕಾರ್ಯನಿರ್ವಹಿಸ ತೊಡಗಿದರು. ಮುಂದೆ ಈ ಕಲಾ ಶಾಲೆಯು ಸರಕಾರದ ಅನುದಾಕ್ಕೊಳ ಪಟ್ಟಿತು, ಆಗ ಶ್ರೀ ಸಿ. ಬಿ. ಕಾಚಾಪುರ ಪ್ರಾಚಾರ್ಯರು, ಪಿ. ಎಸ್. ಕಡೇಮನಿ, ಉಪನ್ಯಾಸಕರು, ವಿ. ವಿ. ಹಿರೇಮಠ, ಉಪನ್ಯಾಸಕರಾಗಿ ಕಾರ್ಯನಿರ್ವಹಿಸ ತೊಡಗಿದರು.

೨೦೦೧-೦೨ ನೇ ಸಾಲಿನಿಂದ ಹೊಸ ಅಭ್ಯಾಸ ಪತ್ರಿಕೆ ರಾಜ್ಯ ಸರಕಾರದಿಂದ ಹೊರ ಬಂದು ಹೊಸದಾಗಿ ಡಿ. ಎಂ. ಸಿ. ಬದಲಾಗಿ ಫೌಂಡೇಶನ್ ಪ್ರಥಮ ಹಾಗೂ ದ್ವಿತೀಯ, ಮೂರನೆಯ ವರ್ಷ ಪೇಂಟಿಂಗ ನಾಲ್ಕನೇ ವರ್ಷದ ಪೇಟಿಂಗ ಐದನೇ ವರ್ಷದ ಪೇಟಿಂಗ ಡಿಪ್ಲೋಮಾ ನಡೆದವು. ಇತ್ತೀಚೆಗೆ ರಾಜ್ಯಾದ್ಯಂತ ಒಂದೇ ಪಠ್ಯಕ್ರಮ ಜಾರಿಯಲ್ಲಿದ್ದು ಎರಡು ವರ್ಷದ ಕಲಾಮೂಲ ತರಗತಿ ಮತ್ತು ಮೂರು ವರ್ಷದ ಬಿ.ವಿ.ಎ. ಪದವಿ ತರಗತಿಗಳು ನಡೆಯುತ್ತಲಿವೆ.

ಈ ಕಲಾಶಾಲೆಯು ಬಿಜಾಪುರ ನಗರ, ತಾಲೂಕು ಹಾಗೂ ಜಿಲ್ಲಾ ಮಟ್ಟದ ಕಲಾ ಪ್ರದರ್ಶನ, ಕಲಾ ಶಿಬಿರ, ಚಿಕ್ಕ ಮಕ್ಕಳ ಚಿತ್ರ ಕಲಾ ಸ್ಪರ್ಧೆ ನಡೆಸಿ ವಿಧ್ಯಾರ್ಥಿಗಳಿಗೆ ಹಾಗೂ ಕಲಾ ಶಿಕ್ಷಕರಿಗೆ ಕಲಾವಿದರಿಗೆ ಸ್ಪೂರ್ತಿದಾಯಕ ಕಾರ್ಯ ಮಾಡಿದೆ. ಅಲ್ಲದೆ ರಾಜ್ಯ ಮಟ್ಟದ ಹಾಗೂ ರಾಷ್ಟ್ರ ಮಟ್ಟದ ಕಲಾ ಪ್ರದರ್ಶನ, ಕಲಾ ಶಿಬಿರ, ಗ್ರಾಫಿಕ ಕಾರ್ಯಾಗಾರ, ಲಲಿತ ಕಲೆ ಕುರಿತು ವಿಚಾರ ಸಂಕಿರಣ, ಪ್ರಾತ್ಯಕ್ಷಿಕೆ, ಸ್ಲಾಯಿಡ ಶೋ, ಚರ್ಚೆ ನಡೆಯಿಸಿ ಸರ್ವಾಂಗೀಣ ಪ್ರಗತಿಗೆ ಕಾರಣವಾಗಿದೆ. ಇದಕ್ಕೆ ಸಂಸ್ಥೆಯ ಹಾಗೂ ಕಲಾ ಶಾಲೆಯ ಸಿಬ್ಬಂದಿ, ಕಲಾ ಶಿಕ್ಷಕರು ಕಲಾವಿದರು ನೆರವಾಗಿದ್ದಾರೆ. ಸ್ಥಳೀಯ ಸಂಘ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶಿಕ್ಷಣ ಇಲಾಖೆಯ ಪ್ರೋತ್ಸಾಹದಿಂದ ಈ ಕಲಾಶಾಲೆ ಬೃಹತ್ ಆರ್ಟ ಗ್ಯಾಲರಿ, ಗ್ರಾಫಿಕ ಸ್ಟುಡಿಯೋ ವರ್ಗ ಕೋಣೆಗಳು ಹಾಗೂ ಕಛೇರಿ ಸಿಬ್ಬಂದಿ ವರ್ಗ ಕೋಣೆ ಒಳಗೊಂಡು ಶ್ರೀ ಸಿದ್ದೇಶ್ವರ ಕಲಾ ಮಂದಿರ ಸುಂದರವಾಗಿ ಕಂಗೊಳಿಸುತ್ತಿದೆ.

ಈ ಕಲಾ ಶಾಲೆ ಪ್ರಾರಂಭದಲ್ಲಿ ಎಸ್.ಎಸ್.ಪದವಿ ಪೂರ್ವ ವಿದ್ಯಾಲಯದ ಡ್ರಾಯಿಂಗ ಹಾಲಿನಲ್ಲಿ ಪ್ರಾರಂಭವಾಗಿ ಪ್ರಗತಿ ಹೊಂದುತ್ತಾ ಬಂದು ೧೯೮೮ ರಲ್ಲಿ ಮದ್ದಿನ ಖಣಿ ೫ ಎಕರೆ ವಿಸ್ತಾರವಾದ ಆವರಣಕ್ಕೆ ಬಂದಿತು. ಕಲಾಶಾಲೆಯಲ್ಲಿ ಆರ್ಟ ಗ್ಯಾಲರಿ ಕಟ್ಟಡ ಕಟ್ಟಲು ಬಿ. ಎಲ್. ಡಿ. ಇ. ಸಂಸ್ಥೆ ನಿರ್ಧರಿಸಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಜಿಲ್ಲಾ ಪರಿಷತ್ತು ವಿಜಾಪುರ ಇವರುಗಳ ಧನಸಹಾಯದಿಂದ ಬೃಹತ್ ಆರ್ಟ ಗ್ಯಾಲರಿ ಕಟ್ಟಡವು ಪೂರ್ಣಗೊಳ್ಳುವ ಹಂತದಲ್ಲಿ ಇದೆ. ಅಲ್ಲದೆ ಇಜೆಲ್ಸ್, ಡಾಂಕಿಸೀಟ, ಡ್ರಾಯಿಂಗ ಟೇಬಲ್, ಸ್ಟೂಲ, ಕುರ್ಚಿ, ಗ್ರಾಫಿಕ, ಲಿಥೋ ಹಾಗೂ ಎಚ್ಚಿಂಗ ಯಂತ್ರ ಇಂತಹ ಪಾಠೋಪಕರಣ ಮತ್ತು ಪೀಠೋಪಕರಣಗಳಂತಹ ಸಲಕರಣೆಗಳು ಕಲಾ ವಿದ್ಯಾಲಯದಲ್ಲಿದ್ದು, ಚಿತ್ರ ಕಲೆಯಲ್ಲಿ ಅಧ್ಯಯನಮಾಡಲು ಬೇಕಾದ ಎಲ್ಲ ರೀತಿಯ ಪಾಠೋಪಕರಣ ಪೀಠೋಪಕರಣಗಳು ಇರುತ್ತವೆ.



ಶ್ರೀ ಸಿದ್ದೇಶ್ವರ ಕಲಾ ಮಂದಿರ, ವಿಜಾಪೂರ



ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ, ವಿಜಾಪೂರ ಕಲಾಶಾಲೆ

ಈ ಕಲಾ ಶಾಲೆಯ ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಯಾಗಲು ಕಲಾ ಇತಿಹಾಸದ ಪುಸ್ತಕ ಹಾಗೂ ಕಲಾವಿದರ ಚಿತ್ರಗಳಿಂದ ಕೂಡಿದ ಗ್ರಂಥಗಳು, ಅಲ್ಬಮ್‌ಗಳು ಇಲ್ಲಿವೆ. ಅಲ್ಲದೆ ಹಿರಿಯ ಕಲಾವಿದರ ಕಲಾ ಕೃತಿಗಳ ಸಂಗ್ರಹವಿದ್ದು, ಕಲಾ ವಿಧ್ಯಾರ್ಥಿಗಳಿಗೆ ಆಧ್ಯಯನ ಮಾಡಲು ಉಪಯುಕ್ತವಾಗಿದೆ. ಇದರ ಜೊತೆಗೆ ಅಪ್ವಾನಿತ ಕಲಾವಿದರಿಂದ ಪ್ರಾತ್ಯಕ್ಷಿಕೆ, ಉಪನ್ಯಾಸ, ಸ್ಲೈಡಶೋ, ಹಾಗೂ ಚರ್ಚೆಗಳ ಮೂಲಕ ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ ಕಲಾಶಾಲೆಯು ಶ್ರಮಿಸುತ್ತಿದೆ.

ಚಿತ್ರಕಲಾ ಮಹಾವಿದ್ಯಾಲಯ ಹೂವಿನ-ಹಿಪ್ಪರಗಿ :

ಈ ಚಿತ್ರಕಲಾ ಮಹಾವಿದ್ಯಾಲಯವು ೧೯೮೩ರಲ್ಲಿ ಪ್ರಾರಂಭವಾಯಿತು, ಈ ಕಲಾ ಶಾಲೆಯನ್ನು ದಿವಂಗತ ಎಸ್. ಎಚ್. ವಗ್ಗರ ಎಂಬುವರು ಪ್ರಾರಂಭಿಸಿ ಅದಕ್ಕೊಂದು ಭದ್ರಬುನಾದಿಯನ್ನು ದೊರಕಿಸಿಕೊಟ್ಟರು. ಬಿಜಾಪುರ ಜಿಲ್ಲೆಯ ಗ್ರಾಮೀಣ ಭಾಗದ ವಿಧ್ಯಾರ್ಥಿಗಳು ಮತ್ತು ಬಿಜಾಪುರ ನಗರದಿಂದ ಅತ್ಯಂತ ದೂರವಿರುವ ವಿಧ್ಯಾರ್ಥಿಗಳಿಗೆ ಈ ಕಲಾಶಾಲೆಯು ಹೆಚ್ಚಿನ ಅನಕೂಲವನ್ನು ಒದಗಿಸಿಕೊಟ್ಟಿತ್ತು. ಕಲಾಶಾಲೆಯನ್ನು ಸ್ಥಾಪಿಸಿದ ಎಸ್. ಎಚ್. ವಗ್ಗರವರು ಅದರ ಸಂಸ್ಥಾಪಕ ಪ್ರಾಚಾರ್ಯರಾಗಿ ೨೫ ವರ್ಷಗಳವರೆಗೆ ಸೇವೇ ಸಲ್ಲಿಸಿದರು. ಈ ಕಲಾಶಾಲೆಯಲ್ಲಿ ವಿವಿಧ ತರಗತಿಗಳು ನಡೆಯುತ್ತಲಿವೆ. ಪ್ರಾರಂಭದಲ್ಲಿ ಎರಡು ವರ್ಷದ ಡಿ.ಎಮ್.ಸಿ. ಕೋರ್ಸ ಪ್ರಾರಂಭವಾಗಿ ಕೆಲವು ದಿನಗಳವೆರೆಗೆ ನಡೆಯಿತು. ಮುಂದೆ ೧೯೯೪-೯೫ ರಲ್ಲಿ ೩ನೇ ವರ್ಷದ ಡ್ರಾಯಿಂಗ, ಪೇಂಟಿಂಗ, ೪ನೇ ವರ್ಷದ ಪೇಂಟಿಂಗ, ಹಾಗೂ ಡಿಪ್ಲೋಮಾ ಆರ್ಟ ಮಾಸ್ಟರ ತರಗತಿಗಳು ಪ್ರಾರಂಭಗೊಂಡವು.

ಈ ಕಲಾಶಾಲೆಯಲ್ಲಿ ನಾಲ್ಕು ಜನ ಉಪನ್ಯಾಸಕರು, ಒಬ್ಬ ಪ್ರಾಚಾರ್ಯರು ಆಫಿಸ್ ಸಹಾಯಕರು ಹಾಗೂ ಒಬ್ಬ ಸಿಪಾಯಿ ಸೇವೆ ಸಲ್ಲಿಸುತ್ತಿದ್ದಾರೆ. ಇವರೆಲ್ಲರ ದಕ್ಷವಾದ ಸೇವೆಯಿಂದ ಕಲಾಶಾಲೆಯು ಪ್ರಗತಿಯನ್ನು ಸಾಧಿಸುತ್ತಿದೆ. ಇಲ್ಲಿನ ವಿಧ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ಇಲಿನ್ಲ ಅಧ್ಯಾಪಕ ವರ್ಗ ಪ್ರತಿಭಾವಂತವಾಗಿದ್ದು, ವಿಧ್ಯಾರ್ಥಿಗಳಿಗೆ ಪರಿಣಾಮಕಾರಿಯಾದ ಕಲಾ ಶಿಕ್ಷಣವನ್ನು ಕೊಡುತ್ತಲಿದೆ. ಕಲಾ ಶಾಲೆಯಲ್ಲಿ ಸೂಕ್ತವಾದ ಪಿಠೋಪಕರಣ ಮತ್ತು ಪಾಠೋಪಕರಣಗಳು ಸಂಗ್ರಹಿತಗೊಂಡಿವೆ. ಈ ಕಲಾ ಶಾಲೆಯ ಕಾರ್ಯ ಚಟುವಟಿಕೆಗಳು ವಿವಿಧ ರೀತಿಯಲ್ಲಿವೆ. ಕಲಿಕೆಯ ಜೊತೆಗೆ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ಕಲಾ ಪ್ರದರ್ಶನಗಳು, ಕಾರ್ಯಾಗಾರಗಳು, ವಿಚಾರ ಸಂಕಿರಣಗಳು ಇಂತಹ ಅನೇಕ



ಚಿತ್ರಕಲಾ ಮಹಾವಿದ್ಯಾಲಯ, ಹೂವಿನಹಿಪ್ಪರಗಿ



ಹೂವಿನಹಿಪ್ಪರಗಿ ಕಲಾಶಾಲೆಯಲ್ಲಿ ಪ್ರಾತ್ಯಕ್ಷಿಕೆ ನೀಡುತ್ತಿರುವ ವಿಜಾಪೂರದ ಪಿ.ಎಸ್. ಕಡೇಮನಿಯವರು

ಕಾರ್ಯಕ್ರಮಗಳನ್ನು ನಡೆಸುವದರ ಜೊತೆಗೆ ಕಲಾ ಪ್ರಾತ್ಯಕ್ಷಿಕೆಯನ್ನು ಆಗಾಗ ಹಮ್ಮಿಕೊಳ್ಳಲಾಗುತ್ತದೆ. ಈ ಕಲಾ ಶಾಲೆಯಲ್ಲಿ ನಾಡಿನ ಹೆಸರಾಂತ ಕಲಾವಿದರು ಪ್ರಾತ್ಯಕ್ಷಿಕೆ ಮತ್ತು ಉಪನ್ಯಾಸಗಳನ್ನು ನೀಡಿದ್ದಾರೆ. ಇಲ್ಲಿ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ ನೀಡಿದ ಕಲಾವಿದರಲ್ಲಿ ದಿವಂಗತ. ಎಮ್.ಎ. ಚೆಟ್ಟಿ, ವಿ. ಬಿ. ಹೀರೇಗೌಡರ, ಎಮ್. ಆರ್. ಬಾಳೀಕಾಯಿ, ಬಸವರಾಜ ಜಾನೆ. ಸಿ. ಬಿ. ಕಾಚಾಪುರ, ಪಿ. ಎಸ್. ಕಡೇಮನಿ, ಬಿ. ಎಸ್. ಪಾಟೀಲ, ಮುಂತಾದ ಕಲಾವಿದರು ಸೇರಿದ್ದಾರೆ.

ಈ ಕಲಾ ಶಾಲೆಯಲ್ಲಿ ಸಧ್ಯ ಎರಡು ವರ್ಷದ ಕಲಾ ಮೂಲ ತರಗತಿ ಮತ್ತು ಮೂರು ವರ್ಷದ ವಿಶೇಷ ಪರಿಣಿತಿ ತರಗತಿಗಳು ನಡೆಯುತ್ತಲಿವೆ. ಈ ಎಲ್ಲ ವಿಧ್ಯಾರ್ಥಿಗಳಿಗೆ ಇಲ್ಲಿನ ಶಿಕ್ಷಕರು ಕಲಾ ಶಿಕ್ಷಣವನ್ನು ನೀಡುತ್ತಲಿದ್ದಾರೆ. ಸಧ್ಯದ ಸಂದರ್ಭದಲ್ಲಿ ಶ್ರೀ ಎಸ್. ಎಸ್. ಬಿರಾದಾರ ಇವರು ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದು, ಆರ್. ಎಚ್. ಸಾಸನೂರ, ಎಸ್. ಎಸ್. ಮೆಳ್ಳಿ, ಕೆ. ಆರ್. ಲಮಾಣಿ, ಇವರು ಶಿಕ್ಷಕರಾಗಿದ್ದಾರೆ. ಈ ಕಲಾ ಶಾಲೆ ತನ್ನ ಸೀಮಿತ ವ್ಯಾಪ್ತಿಯಲ್ಲಿ ಪರಿಣಾಮಕಾರಿಯಾದ ಕಲಾ ಶಿಕ್ಷಣ ನೀಡುವ ಮೂಲಕ ಬಿಜಾಪುರ ಜಿಲ್ಲೆಯ ಕಲಾ ಕ್ಷೇತ್ರಕ್ಕೆ ತನ್ನ ಕೊಡುಗೆಯನ್ನು ನೀಡುತ್ತಲ್ಲಿದೆ.

ಆದರ್ಶ ಚಿತ್ರಕಲಾ ಮಹಾವಿದ್ಯಾಲಯ ಇಂಡಿ :

ವಿಜಾಪುರ ಜಿಲ್ಲೆ ಕರ್ನಾಟಕದ. ಇತಿಹಾಸದಲ್ಲಿ ಐತಿಹಾಸಿಕ ಹಿನ್ನೆಲೆಯುಳ್ಳ ಜಿಲ್ಲೆ. ಇಂತಹ ಐತಿಹಾಸಿಕ ಹಿನ್ನೆಲೆಯುಳ್ಳ ಈ ಜಿಲ್ಲೆ ಸಾಂಸ್ಕೃತಿಕವಾಗಿ ಲಲಿತ ಕಲೆಗಳ ವಾಸ್ತು ಶಿಲ್ಪಗಳ ತವರೂರಾಗಿದೆ. ವಿಜಾಪುರದ ಗೋಳಗುಮ್ಮಟ ವಿಶ್ವದಲ್ಲೆ ತನ್ನ ಖ್ಯಾತಿಯನ್ನು ಮೆರೆದಿದೆ. ಇಂತಹ ಜಿಲ್ಲೆಯಲ್ಲಿ ಹಲವಾರು ಕವಿ, ಸಾಹಿತಿಗಳು, ಕಲಾವಿಧರು, ತಮ್ಮ ಖ್ಯಾತಿಯನ್ನು ಮೆರೆದಿದ್ದಾರೆ. ಮಧುರಚೆನ್ನ, ಸಿಂಪಿಲಿಂಗಣ್ಣ, ಶ್ರೀರಂಗ, ಗುರುಲಿಂಗ ಕಾಪಸೆ, ಎ.ಎ.ಆಲಮೇಲಕರ, ಕಲ್ಲಣ್ಣ ಯಳಸಂಗಿ ಮುಂತಾದವರು ಇಂಡಿ ತಾಲೂಕಿನ ಕಲೆ ಸಾಹಿತ್ಯ ಕ್ಷೇತ್ರಗಳನ್ನು ಶ್ರೀಮಂತಗೊಳಿಸಿದ ಮಹಾನುಭಾವರು. ಇಂತಹ ಇಂಡಿ ತಾಲೂಕು ಭೀಮಾ ತೀರದ ಮಹಾರಾಷ್ಟ್ರದ ಗಡಿಯಾಚಿನಲ್ಲಿ ತನ್ನ ವಿಸ್ತಾರವನ್ನೊಳಗೊಂಡಂತೆ ಇತ್ತೀಚಿನ ದಿನಗಳಲ್ಲಿ ಕೃಷ್ಣಾ ತೀರದ ಕಾಲುವೆ ನೀರಿನಿಂದ ಸಂಪತ್ಭರಿತವಾಗುತ್ತಾ ಸಾಗಿದೆ. ಇಲ್ಲಿಯ ಸಾಲೋಟಗಿ ಗ್ರಾಮ ಅಂದಿನ ಕಾಲದಲ್ಲಿ ವಿಶ್ವವಿದ್ಯಾಲಯ ಹೊಂದಿತ್ತೆಂದು ಹೇಳಲಾಗಿದೆ. ಇಲ್ಲಿನ ಶಿವಯೋಗಿಶ್ವರ ದೇವಾಲಯ ಇದನ್ನು ಸಾಬೀತು ಪಡಿಸುತ್ತದೆ. ಈ ವಿಷಯದ ಮೇಲೆ

ಬೆಳಕು ಚೆಲ್ಲಿದ ಕೀರ್ತಿ ಡಾ: ಎಸ್.ಕೆ. ಕೊಪ್ಪ ಅವರಿಗೆ ಸಲ್ಲುತ್ತದೆ. ಇವರು ಮಂಡಿಸಿದ ತರ್ದವಾಡಿ ನಾಡು ಕೃತಿಗೆ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ನೀಡಿ ಗೌರವಿಸಿದೆ.

ಇನ್ನು ಕಲಾ ಲೋಕಕ್ಕೆ ಬರುವ ಇಲ್ಲಿಯ ಸಾಲೋಟಗಿಯ ಕಲ್ಲಣ್ಣ ಯಳಸಂಗಿ ಇವರು ತೊಗಲಗೊಂಬೆ ಆಟದ ಮೂಲ ಶೋಧಿಸಿ ಅದನ್ನು ಇಡೀ ದೇಶಕ್ಕೆ ಪರಿಚಯಿಸಿದರು.

ಸರ್ಕಾರ ಅವರನ್ನು ಜಾನಪದ ಅಕಾಡೆಮಿಯ ಸದಸ್ಯತ್ವ ನೀಡಿ ಗೌರವಿಸಿದೆ. ಇಂಡಿ ತಾಲೂಕಿನ ಗಡಿಯಾಚೆಗಿನ ಸೋಲಾಪುರದಲ್ಲಿ ಜನಿಸಿದ ಎಂ.ಎಫ್. ಹುಸೇನ ಈ ದೇಶ ಕಂಡ ಅಪ್ರತಿಮ ಪ್ರತಿಭೆ ಎಂಬುದು ನಿಮಗೆ ತಿಳಿದಿದೆ. ಇನ್ನು ಇಂಡಿ ತಾಲೂಕಿನಲ್ಲಿ ಹೊಂದಿಕೊಂಡಿರುವ ಆಲಮೇಲದಲ್ಲಿ ಜನಿಸಿದ ಎ.ಎ. ಆಲಮೇಲಕರ ಭಾರತದ ಶ್ರೇಷ್ಠ ಕಲಾವಿದರಲ್ಲೊಬ್ಬರು. ಇವರು ರಚಿಸಿದ ಕಲಾಕೃತಿಗಳು ದೇಶ ವಿದೇಶಗಳಲ್ಲಿ ಸಂಗ್ರಹಾಲಯಗಳಲ್ಲಿ ಸಂರಕ್ಷಿಸಲ್ಪಟ್ಟಿವೆ.

ಇಂತಹ ಗತಕಾಲದ ವೈಶಿಷ್ಟಗಳನ್ನು ಹೊಂದಿರುವ ಇಂಡಿ ತಾಲೂಕಿನ ಇಂಡಿ ಪಟ್ಟಣದಲ್ಲಿ ಸನ್ಮಾನ್ಯ ಶ್ರೀ ಎಂ. ಡಿ. ಶಿರೋಮಣಿ ಗೌರವ ಕಾರ್ಯದರ್ಶಿಗಳು ಆರ್.ಡಿ.ಈ. ಸಂಸ್ಥೆ ಇಂಡಿ ಇದರ ಆಶ್ರಯದಲ್ಲಿ ಕ್ರಿ. ಶ. ೧೯೮೬ ರಲ್ಲಿ ಆರ್.ಡಿ.ಈ. ಸಂಸ್ಥೆಯ ಅಡಿಯಲ್ಲಿ ಆದರ್ಶ ಚಿತ್ರಕಲಾ ಮಹಾವಿದ್ಯಾಲಯವನ್ನು ಸಂಸ್ಥಾಪಿಸಿದರು.

ಕ್ರಿ. ಶ. ೧೯೮೬ ಶ್ರೀ ವಿ. ಜಿ. ಪೊದ್ದಾರ ಇವರ ಮಾರ್ಗದರ್ಶನದಲ್ಲಿ ಎ. ಎಸ್. ಕಪಟಕರ ರಾನಡೆ ಆಶ್ರಮದ ಎಂ.ಎಸ್. ಗಣಿ, ಶ್ರೀ ಬಿ.ಡಿ. ಚಾದಕವಠೆಯವರ ಮಾರ್ಗದರ್ಶನದಲ್ಲಿ ಅಂದು ರೂಪು ತಳೆದು ಆದರ್ಶ ಚಿತ್ರಕಲಾ ವಿದ್ಯಾಲಯ ಇಂದು ಸಾಕಷ್ಟು ಪ್ರಗತಿ ಸಾಧಿಸಿದೆ.

ಪಟ್ಟಣದ ವಿಜಾಪುರ ರಸ್ತೆಯ ೩ ಕಿಲೋ ಮೀಟರ್ ಅಂತರದಲ್ಲಿ ಸ್ವಚ್ಛಂದ ಪರಿಸರದ ಮಧ್ಯದಲ್ಲಿ ವಿಶಾಲವಾದ ಬಯಲಿನಲ್ಲಿ ತನ್ನ ಭವ್ಯವಾದ ಸುಸಜ್ಜಿತವಾದ ಕಟ್ಟಡವನ್ನು ಹೊಂದಿರುವ ಚಿತ್ರಕಲಾ ಶಾಲೆಯು ಅತ್ಯಂತ ಕಲಾತ್ಮಕವಾಗಿದೆ.

೧೯೮೬ ರಿಂದ ಪ್ರಸಕ್ತ ಅಂದರೆ ೨೦೦೮ನೇ ಸಾಲಿನವರೆಗೆ ನಿರಂತರವಾಗಿ ಗಡಿಯಾಚೆಗಿನ ವಿದ್ಯಾರ್ಥಿಗಳಿಗೆ ಕಲೆಯ ಶಿಕ್ಷಣವನ್ನು ನೀಡುತ್ತಾ ಬಂದಿರುವ ಈ ಶಾಲೆಯಲ್ಲಿ ನೂರಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡಿರುತ್ತಾರೆ. ಕೆಲ ವಿದ್ಯಾರ್ಥಿಗಳು ನಾಡಿನ ಕಲಾ ಶಾಲೆಗಳಲ್ಲಿ, ಪ್ರೌಢ ಶಾಲೆಗಳಲ್ಲಿ, ಪ್ರಾಥಮಿಕ ಶಾಲೆಗಳಲ್ಲಿ ಉದ್ಯೋಗ ಪಡೆದು ಕಲಾ ಸೇವೆ ಮಾಡಿ ಜೀವನ ಸಾರ್ಥಕ ಮಾಡಿಕೊಂಡಿದ್ದಾರೆ.

ಇಲ್ಲಿ ವ್ಯಾಸಂಗ ಮಾಡಿದ ಮಾಡುತ್ತಿರುವ ವಿದ್ಯಾರ್ಥಿಗಳು ನಾಡಿನಲ್ಲಿ ನಡೆದ ಕಲಾ ಪ್ರದರ್ಶನ, ಕಲಾ ಶಿಬಿರ, ಸಮ್ಮೇಳನದಲ್ಲಿ ಭಾಗವಹಿಸಿ ಹಾಗೂ ಏಕವ್ಯಕ್ತಿ ಸಮೂಹ ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿ ವಿದ್ಯಾಲಯಕ್ಕೆ ಹಾಗೂ ಸಂಸ್ಥೆಗೆ ಕೀರ್ತಿ ತಂದಿರುತ್ತಾರೆ.

ಇನ್ನು ಇಲ್ಲಿ ಸೇವೆಗೈದ, ಸೇವೆ ಗೈಯುತ್ತಿರುವ ಅಧ್ಯಾಪಕರು ನುರಿತ ಅಧ್ಯಾಪಕರಾಗಿದ್ದಾರೆ. ಅವರಲ್ಲಿ ಬಿ. ಎಸ್. ಪಾಟೀಲ, ಬಿ.ಎಸ್. ದೇಸಾಯಿ, ಎಂ. ಎಸ್. ಪಂಡಿತ, ಪಿ. ಎಸ್. ಕಡಕೋಳ, ಬಿ. ಆರ್. ಭೈರಗೊಂಡ, ಆರ್. ಎಚ್. ಚವ್ಹಾಣ ಇತರೆ ಅರೆಕಾಲಿಕ ಸಿಬ್ಬಂದಿ ಪ್ರಮುಖ ಪಾತ್ರವಹಿಸಿ ಕಲಾ ಸೇವೆ ಗೈಯ್ದಿದ್ದಾರೆ.

ಪ್ರಸ್ತುತ ಕಲಾ ಶಾಲೆಯಲ್ಲಿ ತರಗತಿಗಳು ನಡೆಯುತ್ತಿದ್ದು, ಮೊದಲಿನ ಪಠ್ಯವಸ್ತುವಿಗಿಂತ ಈಗಿನ ನವೀನ ಪಠ್ಯವಸ್ತು ಅಜಗಜಾಂತರ ವ್ಯತ್ಯಾಸವಿದ್ದು ಹೊಸ ಅವಿಸ್ಕಾರಗಳಿಗೆ ಹೊಂದಿಕೊಳ್ಳುತ್ತಾ ಕಲಾ ಕ್ಷೇತ್ರ ಸಾಗಿದೆ.

ನಮ್ಮ ಕಲಾ ಶಾಲೆಯಲ್ಲಿ ಕ್ರಿ. ಶ. ೧೯೮೬ ರಿಂದ ಇಲ್ಲಿಯವರೆಗೆ ಸಾಕಷ್ಟು ಕರಕುಶಲ ತರಬೇತಿಗಳನ್ನು ಮಹಿಳೆಯರಿಗೆ, ಮುಕ್ಕಳಿಗೆ ಜರುಗಿಸಲಾಗಿದೆ. ವರ್ಷಂಪ್ರತಿ ಡಿಶೆಂಬರ ತಿಂಗಳಿನಲ್ಲಿ ಕಲಾ ಪ್ರದರ್ಶನ ರಂಗೋಲಿ ಪ್ರದರ್ಶನ ಏರ್ಪಡಿಸಲಾಗಿರುತ್ತದೆ.

ಖ್ಯಾತ ಕಲಾವಿದರಾದ ಶ್ರೀ ವಿಶ್ವನಾಥ ಬುರಾಣಪೂರ, ಶ್ರೀ ಮೋಹ ಸೀತನೂರ ಸಮಕಾಲಿನ ಕಲಾವಿದ ಪೊನ್ನಪ್ಪ ಕಡೇಮನಿ, ಶ್ರೀ ಬಿ. ಎಸ್. ಪಾಟೀಲ ಇನ್ನು ಅನೇಕ ಹಿರಿಯ ಕಿರಿಯ ಕಲಾವಿದರುಗಳಿಂದ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿದ್ದರು.

ಹಾಲಿ ಕಾರ್ಯನಿರ್ವಹಿಸುತ್ತಿರುವ ಆಯ್. ಸಿ. ಪೂಜಾರ ಇವರು ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಉಪನ್ಯಾಸಕರಾಗಿ ಶ್ರೀ. ಬಿ. ಎನ್. ಮಾರ್ಕಪ್ಪನಹಳ್ಳಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬೋದಕೇತರ ಸಿಬ್ಬಂದಿ ಶ್ರೀ ವಿ.ಪಿ. ಗವಳಿ ಹಾಗೂ ಅರೆಕಾಲಿಕ ಸಿಬ್ಬಂದಿಯವರು ಕೂಡಾ ಕಾರ್ಯನಿರ್ವಹಿಸುತ್ತಿದ್ದಾರೆ.

ಇಲ್ಲಿ ಕಾರ್ಯವರ್ನಿಹಿಸುತ್ತಿರುವ ಶ್ರೀ ಐ. ಸಿ. ಪೂಜಾರ ಹಾಗೂ ಶ್ರೀ ಬಿ. ಎನ್. ಮಾರ್ಕಪ್ಪನಹಳ್ಳಿ ಇವರು ರಾಜ್ಯ ಮಟ್ಟದ, ರಾಷ್ಟ್ರ ಮಟ್ಟದ ಕಲಾ ಶಿಬಿರ, ಕಲಾ ಸ್ಪರ್ದೆಗಳಲ್ಲಿ ಭಾಗವಹಿಸಿ ಸಾಕಷ್ಟು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಬೆಳವಣಿಗೆ ವಿವರ:

ಕ್ರಿ. ಶ. ೧೯೮೬ ರಿಂದ ೧೯೮೭ ರಲ್ಲಿ ಡಿ. ಎಂ. ಸಿ. ಪ್ರಥಮ ವರ್ಷ ೧೯೮೭ ರಿಂದ ೧೯೮೮ ರಲ್ಲಿ ಡಿ. ಎಂ. ಸಿ. ದ್ವಿತಿಯ ವರ್ಷ, ೧೯೯೩ ರಿಂದ ೧೯೯೪ ೩ನೆಯ ವರ್ಷ



ಆದರ್ಶ ಚಿತ್ರಕಲಾ ಮಹಾವಿದ್ಯಾಲಯ, ಇಂಡಿ



ಆದರ್ಶ ಚಿತ್ರಕಲಾ ಮಹಾವಿದ್ಯಾಲಯ, ಇಂಡಿ
ಚಿತ್ರಕಲಾ ಶಿಬಿರದ ಉದ್ಘಾಟನಾ ಸಮಾರಂಭ

ವರ್ಣಕಲೆ, ೧೯೯೪ ರಿಂದ ೧೯೯೫ ೪ನೆಯ ವರ್ಷ ವರ್ಣಕಲೆ, ೧೯೯೫ ರಿಂದ ೧೯೯೬ ೫ನೆಯ ವರ್ಷ ಆರ್ಟ ಮಾಸ್ತರ ಡಿಪ್ಲೊಮಾ, ೨೦೦೦ ರಿಂದ ೨೦೦೧ ಪೌಂಡೇಶನ ಪ್ರಥಮ ವರ್ಷ, ೨೦೦೧ ರಿಂದ ೨೦೦೨ ರಲ್ಲಿ ಪೌಂಡೇಶನ ದ್ವಿತಿಯ ವರ್ಷ ೨೦೦ ರಿಂದ ೨೦೦೩ ೩ನೆಯ ವರ್ಷ ಚಿತ್ರಕಲೆ, ೨೦೦೩ ರಿಂದ ೨೦೦೪ ರಲ್ಲಿ ೪ನೆಯ ವರ್ಷದ ಚಿತ್ರಕಲೆ, ೨೦೦೪ ರಿಂದ ೨೦೦೫ ರಲ್ಲಿ ೫ನೆಯ ವರ್ಷ ಚಿತ್ರಕಲೆ ಡಿಪ್ಲೊಮಾ, ೨೦೦೫ ರಿಂದ ೨೦೦೮ ರವರೆಗೆ ತರಗತಿಗಳು ಮುಂದುವರೆದಿದೆ. (ವಿ.ಪ. ಅಂದರೆ ವಿಶೇಷ ಪರಿಣತಿ).

ಕಲಾ ಪ್ರದರ್ಶನಗಳು:

೧) ಪ್ರತಿ ವರ್ಷ ಡಿಶೆಂಬರ ತಿಂಗಳಲ್ಲಿ ವಾರ್ಷಿಕ ಚಿತ್ರಕಲಾ ಪ್ರದರ್ಶನ.

೨) ಕ್ರಿ. ಶ. ೧೯೮೬ ರಿಂದ ಪ್ರಸಕ್ತ ಸಾಲಿನವರೆಗೆ ಹಲವಾರು ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಸಾಹಿತ್ಯ ಸಮ್ಮೇಳನಗಳಲ್ಲಿ ರಾಷ್ಟ್ರ ಮಟ್ಟದ ಚಿತ್ರಕಲಾ ಸ್ಪರ್ಧೆಗಳಲ್ಲಿ ಭಾಗವಹಿಸಿದ ಕೀರ್ತಿ ಈ ಕಲಾ ಶಾಲೆಗೆ ಇದೆ.

ಶ್ರೀ ಗುರುಪಾದಪ್ಪ ಚಿತ್ರಕಲಾ ಮಹಾವಿದ್ಯಾಲಯ ಮುದ್ದೇಬಿಹಾಳ :

ಐತಿಹಾಸಿಕ ಸ್ಥಳವಾದ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಶ್ರೀ ಘನಮಠೇಶ್ವರ ವಿವಿಧೋದ್ದೇಶದ ಶೈಕ್ಷಣಿಕ ಸಂಸ್ಥೆ ಮುದ್ದೇಬಿಹಾಳ ಈ ಸಂಸ್ಥೆಯ ಅಡಿಯಲ್ಲಿ ೧೯೯೧ ರಲ್ಲಿ ಕರ್ನಾಟಕ ಘನ ಸರಕಾರದಿಂದ ಅನುಮತಿ ಪಡೆದು ಶ್ರೀ ಗುರುಪಾದಪ್ಪ ಚಿತ್ರಕಲಾ ಮಹಾವಿದ್ಯಾಲಯ ಎಂಬ ನಾಮಾಂಕಿತ ಹೊಂದಿ ಈ ಕಲಾ ಶಾಲೆ ಪ್ರಾರಂಭವಾಯಿತು.

ಶ್ರೀ ಎಸ್. ಜಿ. ಬಿರಾದಾರ, ಹಾಗೂ ಶ್ರೀ ಬಿ.ಜೆ. ಬಿರಾದಾರ ಇರ್ವರು ಸಹೋದರರ ತಂದೆಯವರ ಸ್ಮರಣಾರ್ಥ ಸ್ಥಾಪಿಸಿದ ಚಿತ್ರ ಕಲಾ ವಿದ್ಯಾಲಯವು ಗ್ರಾಮೀಣ ಪ್ರದೇಶದ ವಿಧ್ಯಾರ್ಥಿಗಳಿಗೆ ಬಹಳ ಅನೂಕೂಲವಾಗಿದೆ. ಅಂದಿನಿಂದ ಇಂದಿನವರೆಗೆ ಸುಮಾರು ೧೭ ವರ್ಷ ಈ ಚಿತ್ರ ಕಲಾ ವಿದ್ಯಾಲಯವು ಸರಕಾರದಿಂದ ಯಾವ ಧನ ಸಹಾಯವಿಲ್ಲದೆ (ಅನುದಾನ ರಹಿತ) ನಡೆಯುತ್ತಿರುವದು. ಸಂಸ್ಥೆಯ ಅಧ್ಯಕ್ಷರ, ಕಾರ್ಯದರ್ಶಿಗಳ ಹಾಗೂ ಸರ್ವ ಸದಸ್ಯರ ಪ್ರೋತ್ಸಾಹ ಮತ್ತು ಪ್ರಾಚಾರ್ಯರು, ಸಿಬ್ಬಂದಿಯವರ ಪರಿಶ್ರಮದಿಂದ ನಡೆಯುತ್ತಿರುವುದು ಹೆಮ್ಮೆಯ ವಿಷಯ. ಈ ಸಂಸ್ಥೆಗೆ ಶ್ರೀ ಬಿ. ಆರ್. ಪಾಟೀಲ್, ಎಂಬುವರು ಅಧ್ಯಕ್ಷರಾಗಿ ಸುಮಾರು ೧೫ ವರ್ಷ ಶ್ರಮಿಸಿದ್ದಾರೆ. ಈಗ ೨೦೦೫-೦೬ ನೇ ಸಾಲಿನಿಂದ ಶ್ರೀ ಆರ್. ಬಿ. ಪಾಟೀಲ್ ಹಿರಿಯ ವಕೀಲರು ಅಧ್ಯಕ್ಷರಾಗಿ, ಶ್ರೀ ಎಸ್. ಜಿ.

ಬಿರಾದಾರ ಕಾರ್ಯದರ್ಶಿ ಆಗಿ, ೧೧ ಜನ ಜನ ಸದಸ್ಯರು ಆಯ್ಕೆಯಾಗಿ ಈ ಸಂಸ್ಥೆಯನ್ನು ಬಹಳ ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುತ್ತಿರುವದು ಬಹಳ ಸಂತೋಸದ ವಿಷಯ.

ವಿದ್ಯಾಲಯವು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು, ಈಗ ಎರಡು ಎಕರೆ ಭೂಮಿಯನ್ನು ಖರೀದಿಸಿ ವಿದ್ಯಾಲಯ ಕಟ್ಟಡವನ್ನು ನಿರ್ಮಿಸಲು ಅನುವು ಮಾಡಲಾಗಿದೆ. ಈ ವಿದ್ಯಾಲಯು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದರೂ ಅನುಭವಿಕ ಸಿಬ್ಬಂದಿ ಹೊಂದಿದ್ದು, ಇಲ್ಲಿ ಕಲಿತ ವಿಧ್ಯಾರ್ಥಿಗಳ ಕಲಾ ಪ್ರಗತಿಯೆ ಇದಕ್ಕೆ ಸಾಕ್ಷಿ ಎಂದು ಹೇಳಬಹುದು. ಇಲ್ಲಿ ಕಲಿತ ವಿಧ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ಕಲಾ ಶಿಕ್ಷಕರಾಗಿಸೇವೆ ಸಲ್ಲಿಸುತ್ತಿದ್ದಾರೆ. ಮತ್ತು ಕೆಲವು ವಿಧ್ಯಾರ್ಥಿಗಳು ಈ ಸಮಾಜದಲ್ಲಿ ಒಳ್ಳೆಯ ಕಲಾವಿದರಾಗಿ ಬಿಂಬಿಸಲ್ಪಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು.

ಈ ವಿದ್ಯಾಲಯವು ವ್ಯವಸ್ಥಿತವಾದ ಗ್ರಂಥಾಲಯ, ಪಾಠೋಪಕರಣ, ಪಿಠೋಪಕರಣ, ಹೊಂದಿದೆ. ಈ ಚಿತ್ರಕಲಾ ವಿದ್ಯಾಲಯದಲ್ಲಿ ಅನೇಕ ಸಾರಿ ಚಿತ್ರಕಲಾ ಶಿಬಿರ, ಕಾರ್ಯಾಗಾರದಲ್ಲಿ ಶ್ರೀ ಜೆ. ಎಸ್. ಖಂಡೆರಾವ್. ಶ್ರೀ ಪಿ. ಎಸ್. ಕಡೆಮನಿ, ಶ್ರೀ ಬಂಗ್ಲೇವಾಲೆ ಕೆ. ಗಂಗಾಧರ, ಶ್ರೀ ಬಿ. ಎಸ್. ಪಾಟೀಲ್, ಶ್ರೀ ಶ್ರೀಧರ ಚವ್ಹಾನ, ಅನೇಕ ಹಿರಿಯ ಕಲಾವಿಧರು ಬಂದು ಭಾಗವಹಿಸಿ ತಮ್ಮ ಪ್ರಾತ್ಯಕ್ಷಿಕೆಯನ್ನು ನೀಡಿದ್ದಾರೆ.

೧೯೯೭-೯೮ನೇ ಸಾಲಿನಲ್ಲಿ ರಾಜ್ಯ ಮಟ್ಟದ ಚಿತ್ರಕಲಾ ಶಿಬಿರ ಏರ್ಪಡಿಸಿ, ಚಿತ್ರಕಲಾ ಕ್ಷೇತ್ರವನ್ನು ಪ್ರಗತಿಯ ಪಥದತ್ತ ಕೊಂಡೊಯ್ಯಲಾದ ಕೀರ್ತಿ ಪ್ರಾಚಾರ್ಯರಾದ ಶ್ರೀ ಎಂ. ಆಯ್. ಬೆನಕಟ್ಟಿ, ಇವರಿಗೆ ಸಲ್ಲುತ್ತದೆ. ಅನೇಕ ಸ್ಥಳಗಳಲ್ಲಿ ಸಾಮೂಹಿಕ ಚಿತ್ರ ಕಲಾ ಪ್ರದರ್ಶನ ಏರ್ಪಡಿಸಿ, ಪ್ರಶಸ್ತಿ ಪಡೆದುಕೊಂಡು ಬಂದದ್ದು ಇಲ್ಲಿನ ವಿದ್ಯಾರ್ಥಿಗಳ ಹಿರಿಮೆಗೆ ಸಾಕ್ಷಿ ಎಂದು ಹೇಳಬಹುದು. ಪ್ರತಿವರ್ಷ ಪ್ರಾಥಮಿಕ ಪ್ರೌಢ ಶಾಲೆಗಳಲ್ಲಿ ಮಕ್ಕಳಿಗೆಲ್ಲಾ ಚಿತ್ರಕಲಾ ಪ್ರತಿಭೆಯನ್ನು ಹೆಚ್ಚಿಸಲು ಚಿತ್ರ ಕಲಾ ಸ್ಪರ್ಧೆ ಏರ್ಪಡಿಸಿ ವಿದ್ಯಾಲಯದಿಂದ ಪ್ರೋತ್ಸಾಹಿಸುತ್ತಾ ಬರಲಾಗಿದೆ. ವಿದ್ಯಾಲಯದಲ್ಲಿ ಇರುವ ಭಾವ ಚಿತ್ರಗಳ ಸಂಗ್ರಹ ನೋಡುಗರನ್ನು ಬೆರಗುಗೊಳಿಸುತ್ತದೆ.

ಈ ತೆರನಾಗಿ ಸುಮಾರು ೧೭ವರ್ಷ ನಿರಂತರವಾಗಿ ಚಿತ್ರ ಕಲಾ ಕ್ಷೇತ್ರಕ್ಕೆ ಸೇವೆ ಸಲ್ಲಿಸುತ್ತಿರುವ ಈ ವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಚಿತ್ರ ಕಲಾ ಶಿಬಿರ, ಪ್ರದರ್ಶನಗಳಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಮಾದರಿ ಆಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಅದರಂತೆ ಕನ್ನಡ ವಿಶ್ವ ವಿದ್ಯಾಲಯ ಹಂಪಿ



ಗುರುಪಾದಪ್ಪ ಚಿತ್ರಕಲಾ ಮಹಾವಿದ್ಯಾಲಯ, ಮುದ್ದೇಬಿಹಾಳ
ಕಲಾ ಪ್ರದರ್ಶನದಲ್ಲಿ ಡಾ. ಎಸ್.ಸಿ. ಪಾಟೀಲರಿಗೆ ನೆನಪಿನ ಕಾಣಿಕೆ ನೀಡುತ್ತಿರು ಪ್ರಾಚಾರ್ಯರು



ಗುರುಪಾದಪ್ಪ ಚಿತ್ರಕಲಾ ಮಹಾವಿದ್ಯಾಲಯ, ಮುದ್ದೇಬಿಹಾಳ
ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿ ಮಾತನಾಡುತ್ತಿರುವರು, ಡಾ. ಎಸ್.ಸಿ. ಪಾಟೀಲ.

ಇದರ ಅಡಿಯಲ್ಲಿ ಅಫಿಲೇಶನ ಹೊಂದಿದ್ದು, ಪ್ರಸಕ್ತ ೨೦೦೮-೦೯ ನೇ ಸಾಲಿನಿಂದ ಚಿತ್ರಕಲಾ ಪದವಿ ತರಗತಿಗಳು (ಬಿ.ವಿ.ಎ.) ನಡೆಯುತ್ತಲಿವೆ.

ರಾಜಾ ರವಿವರ್ಮ ಚಿತ್ರಕಲಾ ಮಹಾವಿದ್ಯಾಲಯ ಬಸವನ-ಬಾಗೇವಾಡಿ :

ಈ ಮಹವಿದ್ಯಾಲಯವು ಶ್ರೀ ರಾಮಕೃಷ್ಣ ಶಿಕ್ಷಣ ಸಂಸ್ಥೆ ಬೆಂಬಳ ಅಗಸಿ ಇಂಡಿ ರೋಡ ಬಿಜಾಪುರ ಇದರಡಿಯಲ್ಲಿ ೧೯೯೨ ರ ಜೂನ್ ತಿಂಗಳಲ್ಲಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಡಿ.ಎಂ.ಸಿ. ಪ್ರಥಮ ವರ್ಷದಿಂದ ಪ್ರಾರಂಭವಾಗಿ, ಹಂತ ಹಂತವಾಗಿ ಬೆಳೆದು ಹೆಮ್ಮರವಾಗಿ ಆರ್ಟ ಮಾಸ್ಟರ ಡಿಪ್ಲೋಮಾ, ಜಿ. ಡಿ. ವರೆಗೆ ಬೆಳೆದು ಸಾವಿರಾರು ವಿಧ್ಯಾರ್ಥಿಗಳು ಅಧ್ಯಯನ ಮಾಡುವಂತಾಗಿದೆ. ಇಲ್ಲಿ ಕಲಿತ ವಿದ್ಯಾರ್ಥಿಗಳಲ್ಲಿ ಅನೇಕರು ಸ್ವಂತ ಉದ್ಯೋಗ ಹಾಗೂ ಸರಕಾರಿ ನೌಕರಿಯಲ್ಲಿ ತೊಡಗಿರುವರು. ಅತ್ಯುತ್ತುಮ ಕಲಾವಿದರಾಗಿ ಹೊರಹೊಮ್ಮಿರುವರು. ಪ್ರಾರಂಭದ ಹಂತದಲ್ಲಿ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದ. ಚಿತ್ರ ಕಲಾ ವಿದ್ಯಾಲಯವು ಈಗ ಸ್ವಂತ ಕಟ್ಟಡವನ್ನು ಹೊಂದಿರುವದು. ೨೦ ಗುಂಟೆ ಜಾಗೆಯನ್ನು ಹೊಂದಿರುವದು. ಉತ್ತಮ ಆಟದ ಮೈದಾನ, ಗ್ರಂಥಾಲಯ ಚಿತ್ರ ಕಲಾ ಕೋಣೆಯನ್ನು ಹೊಂದಿರುವದು.

ವಿದ್ಯಾಲಯದಲ್ಲಿ ಉತ್ತಮ ಚಿತ್ರ. ಕಲಾಕೃತಿಗಳ ಪ್ರದರ್ಶನ, ಫೈಬರ್ ಪೇಂಟಿಂಗ, ಕರಕುಶಲ ವಸ್ತುಗಳ ತರಬೇತಿ ಶಿಬಿರವನ್ನು ಬೇಸಿಗೆ ಬಿಡುವಿನಲ್ಲಿ ಹಾಕಿಕೊಂಡು ನಿರುದ್ಯೋಗಿ, ಆಸಕ್ತಿಯುಳ್ಳ ಕಲಾವಿದರಿಗೆ ಪ್ರೋತ್ಸಾಹ ನೀಡಲಾಗುವದು.

ರಾಜ್ಯ ಮಟ್ಟದ ಚಿತ್ರ ಕಲಾ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ವಿದ್ಯಾಲಯಕ್ಕೆ ಕೀರ್ತಿ ತಂದಿರುವರು. ಈ ಚಿತ್ರಕಲಾ ಮಹಾವಿದ್ಯಾಲಯವು ಕನ್ನಡ ವಿಶ್ವ ವಿದ್ಯಾಲಯ ಹಂಪಿ ಅಡಿಯಲ್ಲಿ ಬರುವದು. ಪೌಂಡೇಶನ್ ಪ್ರಥಮ ವರ್ಷ, ಪೌಂಡೇಶನ್ ದ್ವಿತೀಯ ವರ್ಷ, ಹಾಗೂ ವಿಶೇಷ ಪರಿಣತಿ III, IV, V ನೆಯ ವರ್ಷದ ವರ್ಗಗಳು ನಡೆಯುತ್ತಲಿವೆ.

ವಾರ್ಷಿಕ ಪರೀಕ್ಷೆಯ ಫಲಿತಾಂಶವು ಪ್ರಸಕ್ತ ಸಾಲಿನಲ್ಲಿ ೯೫ % ರಷ್ಟು ವಿದ್ಯಾರ್ಥಿಗಳು ಪಾಸಾಗಿರುವರು. ಅನೇಕ ವಿದ್ಯಾರ್ಥಿಗಳ ಸಿಮೆಂಟನಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದು, ನೋಡುಗರನ್ನು ಆಕರ್ಷಿಸುವಂತಿವೆ. ಶ್ರೀ ಆರ್. ಆರ್. ಸಿದ್ದಾಪುರ, ಇವರು ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿರುವರು. ಅವರು ಪ್ರತಿಭಾವಂತ ಕಲಾವಿದರಾಗಿರುವರು, ಕರ್ನಾಟಕ ಕಲ್ಚರಲ್ ಅಕ್ಯಾಡೆಮಿಯವರು ಇವರಿಗೆ ೨೦೦೪ ರಲ್ಲಿ ಉತ್ತಮ ಕಲಾವಿದ ಪ್ರಶಸ್ತಿಯನ್ನು ನೀಡಿರುವರು. ಸಹೃದಯರು, ಸದಾ ಕ್ರಿಯಾಶೀಲರು, ಜನಾನುರಾಗಿಗಳಾಗಿ ಕೆಲಸ

ಮಾಡುತ್ತಿರುವರು. ಉತ್ತಮ ಸಿಬ್ಬಂದಿಯನ್ನು ಹೊಂದಿ ಬಸವ ನಾಡಿನಲ್ಲಿ ಉತ್ತಮ ಚಿತ್ರಕಲಾ ಶಾಲೆಯಾಗಿ ಕೆಲಸ ಮಾಡುತ್ತಾ ಅರಳು ಚೇತನಗಳ ಪ್ರತಿಭೆ ಗುರುತಿಸಿ ಬೆಳೆಸುತ್ತಾ ಬಂದಿರುವದು. ಹೆಮ್ಮೆಯ ಸಂಗಾತಿಯಾಗಿದೆ.

ಈ ಕಲಾ ಶಾಲೆಯು ಸಾಂಪ್ರದಾಯಿಕ ಮತ್ತು ಸಮಕಾಲೀನ ಕಲಾಕ್ಷೇತ್ರಗಳಲ್ಲಿ ತನ್ನದೆ ಪಾತ್ರವನ್ನು ನಿರ್ವಹಿಸುತ್ತಲಿದೆ. ಈ ಕಾರಣದಿಂದ ಇಲ್ಲಿಯ ವಿದ್ಯಾರ್ಥಿಗಳು ನೈಜ ಶೈಲಿಯ ಚಿತ್ರಣ ಮತ್ತು ಆಧುನಿಕ ಚಿತ್ರ ರಚನೆಯಲ್ಲಿ ಸಮಾನವಾದ ಆಸಕ್ತಿ ಹೊಂದಿದವರಾಗಿದ್ದಾರೆ. ಇಲ್ಲಿನ ವಿದ್ಯಾರ್ಥಿಗಳ ಮತ್ತು ಆಧ್ಯಾಪಕರ ಕಲಾಕೃತಿಗಳ ಪ್ರದರ್ಶನವು ರಾಜ್ಯ ಮತ್ತು ರಾಷ್ಟ್ರ ಮಟ್ಟಗಳಲ್ಲಿ ಆಗಾಗ ನಡೆಯುತ್ತ ಬಂದಿರುವದು. ಜಿಲ್ಲೆಗೆ ಹೆಮ್ಮೆಯನ್ನು ತಂದುಕೊಡುವ ಸಂಗತಿಯಾಗಿದೆ. ಈ ಕಲಾ ಶಾಲೆಯು ತನ್ನ ಕಲಿಸುವಿಕೆ ಮತ್ತು ಕಲಾಭೋದನೆಯ ಜೊತೆಗೆ ಕಲೆಗೆ ಸಂಬಂಧಿಸಿದಂತೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಕಲಾ ಪ್ರದರ್ಶನ ಪ್ರಾತ್ಯಕ್ಷಿಕೆ, ಶಿಬಿರ, ಉಪನ್ಯಾಸ ಇವುಗಳ ಜೊತೆಗೆ ಸಮಾಜಿಕವಾಗಿ ಸ್ಪಂದಿಸುವ ಸಂಗೀತ ಸಾಹಿತ್ಯ ಮತ್ತು ನಾಟಕ ಕ್ಷೇತ್ರಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಬಿಜಾಪುರ ಜಿಲ್ಲೆಯ ಕಲಾ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡುತ್ತಲಿದೆ. ವಿಜಾಪುರ ಜಿಲ್ಲೆಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳ ಬಗೆಗೆ ಸ್ಥೂಲವಾಗಿ ಈ ಕೆಳಗಿನಂತೆ ನೋಡಬಹುದು.

ಬಿಜಾಪುರದಲ್ಲಿ ಆರಂಭಗೊಂಡ ಶ್ರೀ ಸಿದ್ದೇಶ್ವರ ಕಲಾ ಮಂದಿರವು ಜಿಲ್ಲೆಯಲ್ಲಿ ಅತ್ಯಂತ ಪ್ರಾಚೀನ ಕಲಾ ಶಾಲೆಯಾಗಿದೆ. ಮತ್ತು ರಾಜ್ಯದಲ್ಲಿಯೇ ಹೆಸರು ವಾಸಿಯಾದ ಬಿ. ಎಲ್. ಡಿ. ಇ. ಸಂಸ್ಥೆಯ ಆಶ್ರಯದಲ್ಲಿ ಇದು ನಡೆಯುತ್ತಲಿದೆ. ಸುಸಜ್ಜಿತ ಕಟ್ಟಡ ನುರಿತ ಅಧ್ಯಾಪಕ ವರ್ಗ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿದೆ. ಇವರ ಕಲಾಕೃತಿಗಳು ಕಲಾ ಶಾಲೆಗೆ ಮಾತ್ರವಲ್ಲದೆ, ಇಡೀ ಜಿಲ್ಲೆಗೆ ಹೆಮ್ಮೆಯನ್ನು ತಂದುಕೊಟ್ಟಿವೆ. ಇಲ್ಲಿನ ವಿಧ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಹಿತ ತಮ್ಮ ಸಾಧನೆಯ ಮೂಲಕ ಗುರುತಿಸಿ ಕೊಂಡವರಾಗಿದ್ದಾರೆ. ಹೀಗೆ ಈ ಕಲಾ ಶಾಲೆಯು ಜಿಲ್ಲೆಯಲ್ಲಿ ವಿಶೇಷವಾದ ಕೊಡುಗೆಯನ್ನು ನೀಡುತ್ತಲಿದೆ.

೧೯೮೮ ರಲ್ಲಿ ಪ್ರಾರಂಭವಾದ ಹೂವಿನ-ಹಿಪ್ಪರಗಿಯ ಕಲಾ ಶಾಲೆಯು ಜಿಲ್ಲೆಯ ದಕ್ಷಿಣ ಭಾಗದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನಕೂಲತೆಯನ್ನು ಒದಗಿಸಿಕೊಟ್ಟಿದ್ದು. ನಾಡಿನ ಕಲಾ ಕ್ಷೇತ್ರದಲ್ಲಿ ವಿಶಿಷ್ಟ ಪಾತ್ರ ನಿರ್ವಹಿಸುತ್ತಲ್ಲಿದೆ. ೧೯೮೬ ರಲ್ಲಿ ಪ್ರಾರಂಭಗೊಂಡ ಇಂಡಿಯ



ರಾಜಾರವಿವರ್ಮ ಚಿತ್ರಕಲಾ ಮಹಾವಿದ್ಯಾಲಯ ಬಸವನ ಬಾಗೇವಾಡಿ.
ಕಾರ್ಯಕ್ರಮ ಒಂದರಲ್ಲಿ ಸನ್ಮಾನಿತರಾದ ಪ್ರಾಚಾರ್ಯ ಶ್ರೀ ಸಿದ್ದಾಪೂರವರು



ರಾಜಾರವಿವರ್ಮ ಚಿತ್ರಕಲಾ ಮಹಾವಿದ್ಯಾಲಯ.
ಬಸವನ ಬಾಗೇವಾಡಿ ಚಿತ್ರಕಲಾ ಶಿಬಿರದ ಉದ್ಘಾಟನಾ ಸಮಾರಂಭ

ಕಲಾ ಶಾಲೆಯು ಗಡಿನಾಡಿನ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನಕೂಲತೆಯನ್ನು ಒದಗಸಿಕೊಟ್ಟಿದ್ದು, ಜಿಲ್ಲೆಯ ಕಲಾ ಕ್ಷೇತ್ರಲದಲ್ಲಿ ಮಹತ್ವದ ಪಾತ್ರ ವಹಿಸುತ್ತಲಿದೆ. ಆದರೂ ಸಹಿತ ಶ್ರೇಷ್ಠ ಆಧ್ಯಾಪಕರ ಕೊರತೆಯನ್ನು ಇದು ಎದುರಿಸುತ್ತಿದೆ. ಮುದ್ದೇಬಿಹಾಳದಲ್ಲಿ ೧೯೯೧ ರಲ್ಲಿ ಆರಂಭಗೊಂಡ ಕಲಾ ಶಾಲೆಯು ಚಿಕ್ಕದಾಗಿದ್ದು ಸೀಮಿತ ವ್ಯಾಪ್ತಿಯಲ್ಲಿ ತನ್ನ ಕಾರ್ಯ ಚಟುವಟಿಕೆ ಹಮ್ಮಿಕೊಳ್ಳುವ ಮೂಲಕ ಜಿಲ್ಲೆಯ ಕಲಾ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡುತ್ತಲಿದೆ. ಮುಂದೆ ೧೯೯೨ ರಲ್ಲಿ ಆರಂಭಗೊಂಡ ಬಸವನ-ಬಾಗೇವಾಡಿಯ ಕಲಾ ಶಾಲೆಯು ಹೆಚ್ಚಿನ ವಿದ್ಯಾರ್ಥಿಗಳನ್ನು ಹೊಂದಿದ್ದು ಕಲಾ ಶಿಕ್ಷಣದ ಮೂಲಕ ಬಿಜಾಪುರ ಜಿಲ್ಲೆಗೆ ವಿಶಿಷ್ಟ ಕೊಡುಗೆ ನೀಡುತ್ತಲಿದೆ.

♣♣♣♣♣

ಬಿಜಾಪುರ ಜಿಲ್ಲೆಯು ಪ್ರಾಚೀನ ಕಾಲದಿಂದ ಚಿತ್ರಕಲೆಯಲ್ಲಿ ವಿಶಿಷ್ಟವಾಗಿ ಗುರುತಿಸಿಕೊಂಡು ಬಂದಿದೆ. ಕಾಲ ಕಾಲಕ್ಕೆ ಈ ಪ್ರದೇಶದಲ್ಲಿ ಚಿತ್ರ ಕಲಾವಿದರು, ಶಿಲ್ಪ ಕಲಾವಿದರು, ಕೃತಿಗಳನ್ನು ರಚಿಸುವ ಮೂಲಕ ಈ ಪ್ರದೇಶವನ್ನು ಸಂಪತ್ ಭರಿತವಾಗಿ ಮಾಡಿದ್ದಾರೆ. ಆಯಾ ಕಾಲ ಮಾನಕ್ಕೆ ಅನುಸಾರವಾಗಿ ಚಿತ್ರ ಕಲಾವಿದರು ತಮ್ಮ ಚಿತ್ರಗಳಲ್ಲಿ ಈ ಪ್ರದೇಶದ ಪರಿಸರ, ಜನಜೀವನ,. ಸಂಸ್ಕೃತಿ ನಂಬಿಕೆ, ಆಚರಣೆ, ಧರ್ಮ ಮತ್ತು ವಿಧಿಕ್ರಿಯೆಗಳಂತಹ ಸಂಗತಿಗಳನ್ನು ಜೊತೆಗೆ ಸಮಕಾಲೀನ ಸಸ್ಯವರ್ಗ, ಪ್ರಾಣಿವರ್ಗ ಜೀವ ಜಂತುಗಳನ್ನು ತಮ್ಮ ಕೃತಿಗಳಲ್ಲಿ ಪ್ರತಿಬಿಂಬಿಸಿದ್ದಾರೆ.

ಪ್ರಾಗೈತಿಹಾಸ ಕಾಲದಿಂದಲೇ ಇಲ್ಲಿ ಚಿತ್ರ ರಚನೆ ನಡೆದ ಕುರುಹುಗಳು ಕಂಡುಬರುತ್ತವೆ. ಈ ಕಾಲದ ಚಿತ್ರ ಕಲಾವಿದರು ಶಿಲಾಶ್ರಯಗಳಲ್ಲಿ ಮತ್ತು ಬಯಲು ಬಂಡೆಗಳ ಮೇಲೆ ಚಿತ್ರ ರಚಿಸುವ ಮೂಲಕ ಈ ಪ್ರದೇಶವನ್ನು ಕಲಾ ನೆಲೆಯಾಗಿ ಮಾಡುವಲ್ಲಿ ಅಡಿಪಾಯ ಹಾಕಿ ಕೊಟ್ಟಿದ್ದಾರೆ. ಪ್ರಾಗಿತಿಹಾಸದ ಚಿತ್ರ ಕಲಾವಿದರು ಬಯಲು ಬಂಡೆಗಳ ಮೇಲೆ ವರ್ಣ ರಹಿತವಾದ ಕುಟ್ಟಿದ ಮತ್ತು ಕೊರೆದ ಚಿತ್ರಗಳ ಶಿಲಾಶ್ರಯಗಳಲ್ಲಿ ವರ್ಣದಿಂದ ರಚಿಸಿದ ರೇಖಾ ಚಿತ್ರಗಳು ಮತ್ತು ಚಪ್ಪಟೆ ಬಣ್ಣ ಲೇಪಿಸಿದ ಚಿತ್ರಗಳನ್ನು ರಚಿಸಿದ್ದಾರೆ.[೧] ಈ ಚಿತ್ರಗಳು ವಿಜಾಪುರ ಜಿಲ್ಲೆಯ ಚಿತ್ರಕಲಾ ಪ್ರಾರಂಭಿಕ ಹಂತದ ರಚನೆಗಳೆಂದು ಹೇಳಬಹುದಾಗಿದೆ.

ಮುಂದೆ ಇತಿಹಾಸ ಕಾಲದಲ್ಲಿ ಅನೇಕ ಜನ ಕಲಾವಿದರು ಬೇರೆ ಬೇರೆ ಶೈಲಿಯಲ್ಲಿ ಚಿತ್ರ ರಚಿಸುವ ಮೂಲಕ ಈ ಜಿಲ್ಲೆಯ ಕಲಾ ಕ್ಷೇತ್ರಕ್ಕೆ ತಮ್ಮ ಕೊಡುಗೆ ನೀಡಿದ್ದಾರೆ. ಆದಿಲ್ ಶಾಹಿಗಳ ಕಾಲದಲ್ಲಿ ಈ ಜಿಲ್ಲೆಯ ಚಿತ್ರ ಕಲಾ ಕ್ಷೇತ್ರವು ಉತ್ಕೃಷ್ಟವಾಗಿ ಬೆಳವಣಿಗೆ ಹೊಂದಿರುವುದು ಮಾತ್ರವಲ್ಲದೆ ಈ ಸಂದರ್ಭದಲ್ಲಿ ಅನೇಕ ಜನ ಶ್ರೇಷ್ಠ ಕಲಾವಿದರು ಚಿತ್ರ ರಚನೆಯನ್ನು ತಮ್ಮನ್ನು ತೊಡಗಿಸಕೊಂಡ ಬಗ್ಗೆ ವಿವರಗಳು ಲಭ್ಯವಾಗುತ್ತವೆ. ಈ ಕಾಲದಲ್ಲಿ ಹಿಂದೂ ಮತ್ತು ಮುಸ್ಲಿಮ್ ಧರ್ಮಕ್ಕೆ ಸೇರಿದ ಕಲಾವಿದರಲ್ಲದೆ ಪರ್ಶಿಯನ್ ದೇಶದ ಚಿತ್ರ ಕಲಾವಿದರು ಇಲ್ಲಿದ್ದ ಬಗ್ಗೆ ತಿಳಿದು ಬರುತ್ತದೆ.[೨] ಜೊತೆಗೆ ಕೆಲವು ಪಾಶ್ಚಾತ್ಯ ಕಲಾವಿದರು ಆದಿಲಷಾಹಿಗಳ ಆಸ್ಥಾನಕ್ಕೆ ಭೇಟಿ ನೀಡಿದ ಬಗ್ಗೆ ತಿಳಿದುಬರುತ್ತದೆ. ಈ ರೀತಿ ಹಲವಾರು ಜನ ಕಲಾವಿದರು ಚಿತ್ರ ರಚಿಸಿರುವುದು ಈ ಜಿಲ್ಲೆಯ ವಿಶಿಷ್ಟತೆಯಾಗಿದೆ.

ಇಂತಹ ವಿಚಾರಗಳಲ್ಲದೆ ಜನಪದ ಕ್ಷೇತ್ರದಲ್ಲಿಯೂ ಈ ಪ್ರದೇಶದ ಕಲಾವಿದರು ವಿಶಿಷ್ಟವಾಗಿ ನಿಲ್ಲುತ್ತಾರೆ. ಬೇರೆ ಬೇರೆ ಹಬ್ಬ ಹುಣ್ಣಿಮೆಗಳು, ಜಾತ್ರೆ ಉತ್ಸವಗಳು, ಮದುವೆ ಮುಂಜಿವೆಗಳು ಮುಂತಾದ ಶುಭ ಸಂದರ್ಭದಲ್ಲಿ ಸಂಬಂಧಿಸಿದ ಚಿತ್ರಗಳನ್ನು ಈ ಭಾಗದ ಜನಪದ ಕಲಾವಿದರು ರಚನೆ ಮಾಡುತ್ತಾ ಬಂದಿದ್ದಾರೆ.[೩] ಇವರ ಮೂಲಕವಾಗಿಯೂ ಈ ಜಿಲ್ಲೆಯ ಕಲಾ ಕ್ಷೇತ್ರವು ಶ್ರೀಮಂತಗೊಂಡಿದೆ.

---

೧. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಪುಟ–೩೨೫.
೨. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಪುಟ–೨೨೫.
೩. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ : ಪುಟ– ೪೮.

ಆಧುನಿಕ ಸಂದರ್ಭದಲ್ಲಿ ಹಲವಾರು ಜನ ಚಿತ್ರ ಕಲಾವಿದರು ತಮ್ಮ ಕೃತಿಗಳ ಮೂಲಕ ಜಿಲ್ಲೆಯ ಕಲಾ ಕ್ಷೇತ್ರಕ್ಕೆ ವಿಶಿಷ್ಟವಾದ ಕೊಡುಗೆ ನೀಡಿದ್ದಾರೆ. ಹಳೆಯ ತಲೆಮಾರಿನ ಕೆಲವು ಪ್ರಮುಖ ಕಲಾವಿದರು ಮುಂಬೈ ಜೆ. ಜೆ. ಕಲಾ ಶಾಲೆಯಲ್ಲಿ ಕಲಿತು ಬಂದವರಾಗಿದ್ದು, ಅಕಾಡೆಮಿಕ್ ಶೈಲಿಯಲ್ಲಿ ಚಿತ್ರ ರಚಿಸುವ ಮೂಲಕ ಜಿಲ್ಲೆಯ ಚಿತ್ರಕಲೆಗೆ ಮಹತ್ತರ ಕೊಡುಗೆ ನೀಡಿದ್ದಾರೆ. ಇದಲ್ಲದೆ ಯವ ಪೀಳಿಗೆಯ ಹಲವಾರು ಜನ ಕಲಾವಿದರು ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದು, ತಮ್ಮದೆ ಆದ ವಿಶಿಷ್ಟ ಶೈಲಿಯಿಂದ ಗುರುತಿಸಿಕೊಂಡಿದ್ದಾರೆ.

ಜಿಲ್ಲೆಯಾದ್ಯಂತ ನೂರಾರು ಕಲಾವಿದರು ತಮ್ಮ ಕಲಾ ಕೊಡುಗೆಗಳಿಂದ ಈ ಪ್ರದೇಶದ ಚಿತ್ರಕಲಾ ಕ್ಷೇತ್ರವನ್ನು ಶ್ರೀಮಂತಗೊಳಿಸುತ್ತಿದ್ದಾರೆ. ಇಲ್ಲಿ ಅಧ್ಯಯನದ ಸೀಮಿತ ವ್ಯಾಪ್ತಿ ಮತ್ತು ಅನುಕೂಲತೆಯ ದೃಷ್ಟಿಯಿಂದ ಪ್ರಮುಖವಾಗಿರುವ ಹತ್ತು ಜನ ಕಲಾವಿದರನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಇದರಲ್ಲಿ ೫ ಜನ ಹಿರಿಯ ಕಲಾವಿದರು ಮತ್ತು ೫ ಜನ ಸಮಕಾಲೀನ ಕಲಾವಿದರನ್ನು ಆಯ್ದುಕೊಂಡು, ಅವರ ಸಂಕ್ಷಿಪ್ತ ಕಲಾ ಕೊಡುಗೆಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಶ್ರೀ ಎಮ್. ವಿ ಮಿಣಜಗಿ. :

ವಿಜಾಪುರವು ಈ ನೆಲದ ಕಣ-ಕಣಗಳಲ್ಲಿ ದೈವ ಶಕ್ತಿ ತುಂಬಿಕೊಂಡಿದೆ. ಇಲ್ಲಿ ಅನೇಕ ಮಹಾಪುರಷರು, ವಿಭೂತಿ ಪುರಷರು, ರಸ ಋಷಿಗಳು, ಕವಿಗಳು, ಕಲಾವಿದರು ಬಾಳಿಬೆಳಗಿದ್ದಾರೆ. ಇಂತಹವರಲ್ಲಿ ಹಿರಿಯ ಕಲಾವಿದರಾದ ಡಾ. ಎಂ.ವಿ. ಮೀಣಜಗಿಯವರೂ ಒಬ್ಬರು. ಇವರು ತಮ್ಮ ಕಲೆಯಿಂದ ಸತ್ಯ ಸೌಂದರ್ಯದ ದರ್ಶನ ಮಾಡಿಸಿ ನಾಡನ್ನು, ರಾಷ್ಟ್ರವನ್ನು ಬೆಳಗಿದ ಧೀಮಂತ ಪುರುಷರು.

ಸದುವಿನಯದ ಸತ್ಯ ಸಾಕ್ಷಾತ್ಕಾರದ ಜೀವನ ಸಾಗಿಸಿದ ಅವರು ಚಿತ್ರಕಲಾವಿದರು, ಶಿಕ್ಷಣ ತಜ್ಞರು, ಚಿತ್ರಕಲೆಗೆ ಹೊಸ ತಿರುವು ನೀಡಿ ಕಲಾ ಶಾಲೆ ತೆರೆದು ತಮ್ಮ ಕನಸುಗಳಿಗೆ, ಕಲ್ಪನೆಗಳಿಗೆ, ಸಹಕಾರ ರೂಪ ನೀಡಿದವರು ಸಂಕಲ್ಪ, ನಿಷ್ಠೆ, ಶ್ರಮ, ಶೃದ್ದೆಯಿಂದ ನಾಡಿನಲ್ಲಿ ತಮ್ಮ ಕಲಾ ಶಾಲೆಯನ್ನು ಆದರ್ಶ ಶಾಲೆಯನ್ನಾಗಿ ಮಾಡಿದವರು. ಅ. ಕ. ಕೃ. ಹೇಳುವಂತೆ ಅವರು ರಸಋಷಿಗಳು.

ಇಂಥ ಮಹಾನ್ ವ್ಯಕ್ತಿಗೆ ಜನ್ಮ ನೀಡಿದ ಭಾಗ್ಯ ಕನ್ನಡ ನಾಡಿನ ವಿಜಾಪುರಕ್ಕೆ ಸಲ್ಲುತ್ತದೆ. ೧೯೦೧ ರ ಜನೇವರಿ ೩೦ ರರಿದು ವ್ಯಾಪಾರಸ್ಥ, ಶ್ರೀಮಂತ ಮನೆಯಲ್ಲಿ ಶ್ರೀಯುತ

ವೀರಪ್ಪ, ಶ್ರೀಮತಿ ಶರಣವ್ವ ದಂಪತಿಗಳ ಉದರದಿಂದ ಜನ್ಮ ತಾಳಿದರು. ತಂದೆ ತಾಯಿಗಳ ಪ್ರೀತಿಯ ಮಗನಾದ ಮಡಿವಾಳಪ್ಪನಿಗೆ ಒಳ್ಳೆ ಸಂಸ್ಕಾರ, ಸಂಸ್ಕೃತಿ ಬಾಲ್ಯದಿಂದಲೇ ದೊರೆತು ಶ್ರೇಷ್ಠ ಬದುಕಿಗೆ ಕಾರಣವಾಯಿತು. ವಿಧಿಯ ವಿಕೃತ ದೃಷ್ಟಿ ಮಡಿವಾಳಪ್ಪನವರಿಗೆ ತಾಗಿದಾಗ ಬಾಲ್ಯದಲ್ಲೇ ತಾಯಿಯನ್ನು ಕಳೆದುಕೊಂಡರು. ತಂದೆ ಮಗನನ್ನು ವಾತ್ಸಲ್ಯದಿಂದ ಬೆಳೆಸಿದರು ವಿಧಿಯ ಪೆಟ್ಟು ಮತ್ತೆ ಬಿದ್ದಾಗ ಇದ್ದೊಬ್ಬ ಹಿರಿಯ ಸಹೋದರನನ್ನೂ ಕಳೆದುಕೊಂಡ ಏಕಾಂಗಿಯಾದರು.

ಪ್ರಾಥಮಿಕ, ಮಾಧ್ಯಮಿಕ ಓದು ವಿಜಾಪುರದಲ್ಲೇ ನಡೆಯಿತು, ಓದಿದ್ದು ಮರಾಠಿ ಮಾಧ್ಯಮ. ಬಾಲ್ಯದಲ್ಲಿಯೇ ಮಿಣಜಗಿಯವರು ಕಲಾ ಪ್ರತಿಭೆ ಪ್ರದರ್ಶಿಸಿ ಗೆಳೆಯರ, ಗುರುಗಳ ಮನ ಮೆಚ್ಚಿಸಿದರು. ೧೧-೧೨ ವರ್ಷದ ವಿದ್ಯಾರ್ಥಿ ಜೀವನದಲ್ಲಿಯೇ ಚಿತ್ರ ಸಂಗೀತ ಕಲೆಗಳಲ್ಲಿ ಆಸಕ್ತಿ. ಶಾಲೆಯ ಕಾರ್ಯಕ್ರಮಗಳ ಪ್ರಾರಂಭದಲ್ಲಿ ಮಡಿವಾಳಪ್ಪನಿಂದಲೇ ಪ್ರಾರ್ಥನಾ ಗೀತೆ, ಸ್ವಾಗತ ಗೀತೆ. ಪ್ರತಿ ಸಾಂಸ್ಕೃತಿಕ ಕೆಲಸದಲ್ಲಿ ಉತ್ಸುಕತೆಯಿಂದ, ಆಸಕ್ತಿಯಿಂದ ಭಾಗವಹಿಸುತ್ತಿದ್ದರು.

ಬಾಲ್ಯದಲ್ಲೆ ಕಾಗದಿಂದ ದೋಣಿ ಮಾಡುವದು, ಗಣಪನ ಚಿತ್ರ ಬಿಡಿಸುವದು ಕರಗತ ಮಾಡಿಕೊಂಡಿದ್ದರು. ಮುಂದೆ ಜೆ. ಜೆ. ಕಲಾ ಶಾಲೆ ಸೇರಿದರು. ತಂದೆಯು ಮಡಿವಾಳಪ್ಪ ಪ್ರಸಿದ್ಧ ವಕೀಲನಾಗಬೇಕು ಎಂಬ ಕನಸು ಕಾಣುತ್ತಿದ್ದರು. ಮಿಣಜಗಿಯವರು 'ಆರ್ಟ್ ಮಾಸ್ಟರ್' ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸಾದರು ೧೯೨೭ ರಲ್ಲಿ ' ಡಿಪ್ಲೋಮಾ ಇನ್ ಪೇಂಟಿಂಗ್ ' ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪ್ರಪ್ರಥಮ ವಿದ್ಯಾರ್ಥಿಯಾದರು. ಹಾಗೆ ಇವರ ಕಲಾಕೃತಿಗಳು ಹಲವಾರು ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಚಿತ್ರಕಲಾ ಶಿಕ್ಷಣದ ಹೆಚ್ಚಿನ ಅಧ್ಯಯನಕ್ಕಾಗಿ ಇಂಗ್ಲೆಂಡಿನ ರಾಯಲ್ ಕಾಲೇಜ್ ಆಫ್ ಆರ್ಟ್ಸ್ ಎಂಬ ಕಲಾಶಾಲೆಗೆ ತೆರಳಿದರು.

ಭಾರತಕ್ಕೆ ಬಂದ ಮೇಲೆ ತಮ್ಮ ಕಲಾ ಸೇವಾ ವೃತ್ತಿಗಾಗಿ ಮುಂಬಯಿಯಲ್ಲಿ ನೆಲೆಸಿದರು. ದುಡಿಯುವ ಹುಮ್ಮಸ್ಸು, ಗಳಿಸಿಕೊಂಡು ಬಂದ ಅಭ್ಯಾಸ, ಪಾಂಡಿತ್ಯ, ಸುಪ್ತವಾಗಿದ್ದ ಚೇತನ ಹೊಸ ಪ್ರಯೋಗಗಳಲ್ಲಿ ನಿರತರಾಗುವಂತೆ ಮಾಡಿದವು. ವಿದೇಶದ ರೀತಿ ನೀತಿಗಳನ್ನು ಅರಿತಿದ್ದು, ಮೂರು ವರ್ಷ ಅವರ ಮಧ್ಯದಲ್ಲಿ ಬದುಕಿ ಬಂದಿದ್ದರೂ ನಮ್ಮ ದೇಶದ ಕಲೆ, ಸಂಸ್ಕೃತಿ ಹೆಚ್ಚು ಆಕರ್ಷಿಸಿ ಈ ದೇಶದ ಹಳ್ಳಿಯ ಜನಜೀವನದ ಬಗ್ಗೆ

ಅಭ್ಯಸಿಸಿ, ಭಾರತೀಯ ಪರಂಪರೆಯನ್ನು, ಸಂಸ್ಕೃತಿಯನ್ನು, ಸಂಪ್ರದಾಯವನ್ನು ಪ್ರತಿನಿಧಿಸುವ ಕಲಾವಿದರಾದರು. ಆಗ ಭಾರತದಲ್ಲಿ ದೇಶಿಯ ಕಲೆಯ ಪ್ರಜ್ಞೆ ಬೆಳೆಯುತ್ತಿತ್ತು.

ಹುಬ್ಬಳ್ಳಿಯ ಮೂರುಸಾವಿರ ಮಠದ ಶ್ರೀ ಗುರುಸಿದ್ಧ ಮಹಾಸ್ವಾಮಿಗಳು ಈ ಕಲಾವಿದರ ಸೇವೆ ಕರ್ನಾಟದಲ್ಲಿ, ತಮ್ಮ ಆಶ್ರಯದಲ್ಲಿ ನಡೆಯ ಬೇಕೆಂದು ೧೯೩೩ ರಲ್ಲಿ " ಕರ್ನಾಟಕ ಆರ್ಟ್ಸ್ ಎಜ್ಯುಕೇಷನ್ " ಎಂಬ ಸಂಸ್ಥೆ ಕಟ್ಟಿದರು. ಸಂಸ್ಥೆಯ ಅಂಗವಾಗಿ ಕಲಾ ಮಂದಿರ ಪ್ರಾರಂಭವಾಯಿತು. ಕಲಾ ನಿರ್ದೇಶಕರಾಗಿ ಪ್ರಾಧ್ಯಾಕರಾಗಿ ಮಿಣಜಗಿಯವರು ನಿಂತರು. ಮುಂದೆ ೧೯೬೬ ರಲ್ಲಿ ಕಲಾ ಮಂದಿರವನ್ನು ಜಗದ್ಗುರುಗಳ ಸೂಚನೆಯ ಪ್ರಕಾರ ವಿಜಯ ಮಹಾಂತೇಶ ಕಲಾ ಮಹಾವಿದ್ಯಾಲಯ ಎಂದು ಬದಲಿಸಲಾಯಿತು. ಇದೇ ಸಂಸ್ಥೆಯಿಂದ ಮಿಣಜಗಿಯವರ ಸಲಹೆಯಂತೆ ಬೆಂಗಳೂರಿನಲ್ಲಿ "ಡ್ರಾಯಿಂಗ್ ಟೀಚರ್ಸ್ ಟ್ರೇನಿಂಗ್ ಇನ್‌ಸ್ಟಿಟ್ಯೂಟ್" ತೆರೆಯಲ್ಪಟ್ಟಿತು. ಅಂತೆಯೇ ೧೯೬೩ರಲ್ಲಿ ದಾವಣಗೆರೆಯಲ್ಲಿ ಪ್ರಾರಂಭವಾದ ಚಿತ್ರಕಲಾ ಹಾಗೂ ಕೈಗಾರಿಕೆ ಕಲಾಶಾಲೆ ಸ್ಥಾಪನೆಯಲ್ಲಿಯೂ ಮಿಣಜಗಿಯವರ ಪಾತ್ರ ಪ್ರಮುಖವಾಯಿತು.


೧೯೩೩-೩೬ ರಲ್ಲಿ ಚಾಲುಕ್ಯ ಅರಸರ ಕಾಲದ ಆರನೆಯ ಶತಮಾನದಲ್ಲಿ ಬಾದಾಮಿ ಗುಹೆಯಲ್ಲಿ ರಚನೆಯಾಗಿದ್ದ ಭಿತ್ತಿಚಿತ್ರಗಳನ್ನು ಪ್ರತಿಕೃತಿ ಮಾಡಿದರು. ದಿಲ್ಲಿಯ ಅಠಾರ ಕಛೇರಿಯಲ್ಲಿ ಮಿಣಜಗಿಯವರು ಆದಿಲ್‌ಶಾಹಿ, ಮೊಗಲ್ ಕಾಲದ ಕಲೆಯನ್ನು ಚಿತ್ರಿಸಿದರು, ಇದನ್ನು ಕಂಡ ಅಪೊಲೋ ಮ್ಯಾಗಜಿನ್ ಲಂಡನ್, ಇಲೆಸ್ಟ್ರೇಟಡ್ ವೀಕ್ಲಿ, ಬಹಳಷ್ಟು ಹೊಗಳಿ ಬರೆದವು. ಮಿಣಜಗಿಯವರ ಸೃಜನ ಶಕ್ತಿ ಗುರುತಿಸಲು ಅವರ ರಾಗಮಾಲಾ ಚಿತ್ರಗಳೆ ಸಾಕ್ಷಿ.

ಎಂ.ವಿ. ಮಿಣಜಗಿಯವರು. ಕಲಾದ್ಯಾಪಕರಾಗಿ ಕೇಂದ್ರ ಲಲಿತಕಲಾ ಅಕಾಡೆಮಿ ಮತ್ತು ರಾಜ್ಯ ಲಲಿತಕಲಾ ಅಕಾಡೆಮಿ ಮತ್ತು ಸಂಗೀತ ನಾಟಕ ಅಕಾಡೆಮಿಗಳ ಸದಸ್ಯರು. ರಾಜ್ಯ ಸರಕಾರದ ಲಲಿತಕಲೆ ಮತ್ತು ಉದ್ಯೆಮ ಕಲೆಯ ಶಿಕ್ಷಣ ಮಂಡಳಿಯ ಸದಸ್ಯರೂ ಆಗಿ ಕೆಲಸ ಮಾಡಿರುವ ಶ್ರೀಯುತರು ರಾಜ್ಯದಲ್ಲಿ ಚಿತ್ರಕಲೆ ಬೆಳೆಯಲು ನಾನಾ ಮುಖವಾಗಿ ಸೇವೆ ಸಲ್ಲಿಸಿದ್ದಾರೆ. ಈ ಕಲಾವಿದರಿಗೆ ಇದುವರಿಗೂ ಒದಗಿರುವ ಪ್ರಶಸ್ತಿಗಳು ಈ ಕೆಳಗಿನಂತಿವೆ.

೧೯೬೪ ರಲ್ಲಿ ಮೈಸೂರಿನ ದಸರಾ ಮಹೋತ್ಸವದಲ್ಲಿ " ಕುಂಚಬ್ರಹ್ಮ " ಎಂಬ ಬಿರುದು ೧೯೬೬ ರಲ್ಲಿ ಮೈಸೂರು ಲಲಿತಕಲಾ ಅಕೆಡೆಮೆ ಪ್ರಶಸ್ತಿ, ೧೯೭೬ ರಲ್ಲಿ ಕರ್ನಾಟಕ ವಿಶ್ವವಿಧ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ, ೧೯೭೪ರಲ್ಲಿ ಇಲಕಲ್ಲದ ಚಿತ್ತರಗಿ ವಿಜಯ ಮಹಾಂತೇಶ ಸಂಸ್ಥಾನದ ಸ್ವಾಮಿಗಳಿಂದ " ಕರ್ನಾಟಕ ಕಲಾ ಸಾರ್ವ ಭೌಮ "



ಪಟ ಮಂಜರಿ



ಎಂ. ವಿ. ಮಿಣಜಿಗಿ

ಹೀಗೆ ಕರ್ನಾಟಕದ ವಿವಿಧ ಸಂಘ ಸಂಸ್ಥೆಗಳಿಂದ ಸನ್ಮಾನ ಗೌರವ, ಪ್ರಶಸ್ತಿಗಳಿಸಿದರು ಆ ಸನ್ಮಾನ, ಆ ಗೌರವ ಕಲಾಕ್ಷೇತ್ರಕ್ಕೆ ಕರ್ನಾಟಕಕ್ಕೆ ಹೆಮ್ಮೆತರುವಂತಹವು. ಇವರು ತಮ್ಮ ಕೊಡುಗೆಗಳ ಮೂಲಕ ಬಿಜಾಪುರ ಜಿಲ್ಲೆಯ ಕಲಾಕ್ಷೇತ್ರದಲ್ಲಿ ಅಜರಾಮರವಾಗಿದ್ದಾರೆ.


ಶ್ರೀ ಎಮ್. ಬಿ. ಪಾಟೀಲ :

ಬಿಜಾಪುರ ಜಿಲ್ಲೆಯ ತಿಕೋಟಾ ಗ್ರಾಮದಲ್ಲಿ. ೧೯೩೯ ರಲ್ಲಿ ಮಲ್ಲಿಕಾರ್ಜುನ ಭೀಮಣ್ಣ. ಪಾಟೀಲ ಜನಿಸಿದರು. ಮಲ್ಲಿಕಾರ್ಜುನ. ಭೀಮನಗೌಡ ಪಾಟೀಲ, ಇವರ ತಂದೆ. ಬಟ್ಟೆ ಅಂಗಡಿಯೊಂದರಲ್ಲಿ ಲೆಕ್ಕ ಪತ್ರ ಬರೆಯುವ ಉದ್ಯೋಗದಲ್ಲಿದ್ದರು. ಪಾಟೀಲರಿಗೆ ಬುದ್ಧಿ ತಿಳಿಯುತ್ತಿದ್ದಂತೆಯೇ ತಾವು ಅಣ್ಣದಿಂದರಂತೆಯೇ ಶಾಲೆಗೆ ಹೋಗಬೇಕೆನ್ನುವುದಾಗಿತ್ತು. ಇವರ ತಂದೆಗೆ ಮನಸ್ಸಿಲ್ಲದೆ ಇವರನ್ನು ಶಾಲೆಗೆ ಸೇರಿಸಿದರು. ನಂತರದಲ್ಲಿ ಇವರ ತಂದೆಯವರು ಇವರನ್ನು ಎಮ್ಮೆ ಕಾಯಲಿಕ್ಕೆ ಅಟ್ಟಿದರು. ಗಿಡಮರಗಳ ಮೇಲೆ ಕುಳಿತು ಸುತ್ತಲಿನ ಪ್ರಕಾಶ, ಬೆಟ್ಟಗುಡ್ಡ, ಪ್ರಕೃತಿಯ ರಮ್ಯತೆಯನ್ನು ಸೃಷ್ಟಿಯನ್ನು ನೋಡಿ ದಂಗಾಗುತ್ತಿದ್ದರು. ಪಾಟೀಲರ ಬಾಲ್ಯದ ಮೊದಲ ಕೆಲವು ವರ್ಷಗಳು ಹೀಗೆ ಎಮ್ಮೆ ಕಾಯುವಲ್ಲೇ ಸವೆದು ಹೋದವು.

ಎಂ. ಬಿ. ಪಾಟೀಲರವರ ಶಿಕ್ಷಣ ಕುರಿತು ಹೇಳುವುದಾದರೆ ಇವರ ಶಿಕ್ಷಣ ಏಳುಬಿಳುಗಳಿಂದ ಕೂಡಿದೆ. ಇವರ ತಂದೆಯವರ ಇಚ್ಛೆಯ ಪ್ರಕಾರ ಮೊದಲು ದನಕಾಯುವ ಕೆಲಸಕ್ಕೆ ತೊಡಗಿದ ನಂತರದಲ್ಲಿ ಪಾಟೀಲರವರ ಅಣ್ಣಂದಿರು ಶಾಲೆಗೆ ಹೋಗುವುದನ್ನು ಗಮನಿಸಿ ನಾನು ಇವರ ತರಹ ವಿಧ್ಯಾಭ್ಯಾಸ ಮಾಡಿದರೆ ಚನ್ನಾಗಿರುತ್ತದೆ ಎಂದು ಮನಸ್ಸಿನಲ್ಲೇ ನೊಂದುಕೊಳ್ಳುತ್ತಿದ್ದರು. ಮುಂದೆ ಇವರ ತಂದೆಯವರು ಇವರನ್ನು ಪ್ರಾಥಮಿಕ ಶಾಲೆಗೆ ಸೇರಿಸಿದರು. ಒಂದು ವರ್ಷ ಕಳೆದ ನಂತರದಲ್ಲಿ ಇವರ ತಂದೆ ಮತ್ತೆ ಇವರನ್ನು ಶಾಲೆ ಬಿಡಿಸಿ ಅಜ್ಜಿಯ ಮನೆಗೆ ಕಟ್ಟಿಗೆ ತರವುದಕ್ಕೆ ನೇಮಿಸಿದರು. ಊರ ಹಿರಿಯರ ಮಾತಿನಿಂದ ತಂದೆಯು ಮತ್ತೆ ಇವರನ್ನು ಕರೆತಂದು ಸ್ಕೂಲಿಗೆ ಸೇರಿಸಿದರು. ಮೊದಲು ಒಂದು ವರ್ಷ ಓದಿದ ಗೆಳೆಯರು ಮುಂದಿನ ತರಗತಿಗೆ ಪಾದಾರ್ಪಣೆ ಮಾಡಿದ್ದರು. ಆದರೆ ಎಂ. ಬಿ. ಪಾಟೀಲರಿಗೆ ತಮ್ಮ ಹೆಸರು ಸಹ ಬರೆಯಲ್ಲಿಕ್ಕೆ ಬರುತ್ತಿರಲಿಲ್ಲ. ಅಂತಹ ಸಂದಂರ್ಭದಲ್ಲಿ ಇವರ ಆಪ್ತ ಸ್ನೇಹಿತ ಬಸಪ್ಪ ಬಡತಿಯವರಿಂದ ಕಾಗುಣಿತ, ಅಕ್ಷರಾಭ್ಯಾಸ ಪ್ರಾರಂಭಿಸಿದರು ಮುಂದೆ ನಾಲ್ಕನೇ ಕ್ಲಾಸಿನ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ಮೊದಲ ಸ್ಥಾನ ಪಡೆದರು ಜೊತೆಗೆ ೩೬ ರೂಪಾಯಿ ವ್ಯಾಸಾಂಗ ವೇತನವನ್ನು ಸಹ ಪಡೆದರು. ಏಳನೇ ತರಗತಿವರೆಗೆ



ಎಂ. ಬಿ. ಪಾಟೀಲ



ಮಹಿಳೆಯ ಚಿತ್ರಣ

ತಿಕೋಟಾದಲ್ಲಿ ಶಿಕ್ಷಣ ಮುಗಿಸಿ ಮುಂದೆ ಶ್ರೀ ಸಿದ್ದೇಶ್ವರ ಹೈಸ್ಕೂಲನ್ನು ಸೇರಿದರು. ೧೯೬೦ ರಲ್ಲಿ ಪಾಟೀಲರು ಎಸ್. ಎಸ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು ಹಾಗೆ ಮುಂಬೆಯಲ್ಲಿ ನೂತನ ಕಲಾಮಂದಿರಕ್ಕೆ ಸೇರಿ ಕಲಾ ಶಿಕ್ಷಣ ಪಡೆದುಕೊಂಡರು.

ಮರಾಠಿ ವಾರ ಪತ್ರಿಕೆ ಮುಖ ಪುಟಕ್ಕೆ ನಡೆಸಲಾದ ಸರ್ದೆಯಲ್ಲಿ 'ಕೋಳಿನಿ' ಎಂಬ ಕಲಾಕೃತಿಗೆ ಎರಡನೇ ಬಹುಮಾನ ಪಡೆದರು, ಹೀಗೆ ಮುಂದೆ ಹಲವಾರು ರೀತಿಯ ಕಲಾ ಪ್ರದರ್ಶನ ಪ್ರಾತ್ಯಕ್ಷಿಕೆಗಳು, ಸಮೂಹ ಕಲಾಪ್ರದರ್ಶನ, ಶಿಬಿರಗಳಲ್ಲಿ ಇವರಿಗೆ ಪ್ರಶಸ್ತಿ ಗೌರವಗಳು ಸಂದಿವೆ. ಗಾಂಧಿ ಶತಮಾನೋತ್ಸವ ಹುಬ್ಬಳ್ಳಿ , ಏಕ ವ್ಯಕ್ತಿ ಕಲಾ ಪ್ರದರ್ಶನ, ನಂತರ ೧೯೭೪ ರಲ್ಲಿ ಧಾರವಾಡ, ಮತ್ತು ಹುಬ್ಬಳ್ಳಿ, ೧೯೭೭ ರಲ್ಲಿ ಗುಲಬುರ್ಗಾ, ೧೯೭೫ ರಲ್ಲಿ ಕಿತ್ತೂರ, ೧೯೭೯ರಲ್ಲಿ ಹೈದರಬಾದ್, ೧೯೯೨ ರಲ್ಲಿ ಬೆಂಗಳೂರು, ಇಂತಹ ಪ್ರರ್ಶನದ ಜೊತೆಗೆ ಸಮೂಹ ಪ್ರದರ್ಶನಗಳನ್ನು ೧೯೭೮ ರಲ್ಲಿ ಹುಬ್ಬಳ್ಳಿ, ೧೯೭೫ ರಲ್ಲಿ ಬೆಂಗಳೂರು, ೧೯೭೫ರಲ್ಲಿಯೇ ಎರಡು ಬಾರಿ ಬೆಂಗಳೂರಿನಲ್ಲಿ ಏರ್ಪಡಿಸಿದರು. ೧೯೭೮ ರಲ್ಲಿ ಹಬ್ಬಳ್ಳಿ, ೧೯೮೦ ರಲ್ಲಿ ಗುಲಬುರ್ಗಾ, ೧೯೮೪ ರಲ್ಲಿ ಬೆಂಗಳೂರು ಹಾಗೆ ಅದೇ ವರ್ಷ ಮತ್ತೊಂದು ಪ್ರದರ್ಶನ ಬೆಂಗಳೂರುನಲ್ಲಿಯೇ ನಡೆಯಿತು ಹಾಗೇ ೧೯೮೬-೧೯೯೩-೧೯೯೭ರಲ್ಲಿ ಬೆಂಗಳೂರಿನಲ್ಲಿ ಇವರ ಕೃತಿಗಳ ಪ್ರದರ್ಶನ ನಡೆಯಿತು. ಜೊತೆಗೆ ಹಲವಾರು ಶಿಬಿರಗಳಲ್ಲಿ ಪಾಲ್ಗೊಂಡರು. ಎಂ. ಬಿ. ಪಾಟೀಲರು ನವದೆಹಲಿ, ದಾವಣಗೆರೆ, ಕೇಂದ್ರ ಹಾಗೂ ರಾಜ್ಯ ಲಲಿತ ಕಲಾ ಅಕಾಡಮಿ, ಹಾಗೆ ಮುಂಬೈ, ಮೈಸೂರು, ಮದ್ರಾಸ್, ತುಮಕೂರ, ಕೇರಳ, ಪಾಂಡಿಚರಿ, ಮಡಿಕೇರಿ, ಹಂಪಿ, ಮಂಗಳೂರು, ಬೆಳಗಾಂವಿ, ಹೀಗೆ ಹಲವಾರು ಶಿಬಿರಳಲ್ಲಿ ಪ್ರಾತ್ಯಕ್ಷಿಕೆಗಳನ್ನು ನೀಡಿದ್ದಾರೆ.

ಶ್ರೀ ಎಮ್. ಎಸ್. ಜತ್ತಿ :

ಒಂದು ಕಾಲದಲ್ಲಿ ಜಿಲ್ಲೆಯಾಗಿ ಪ್ರಸಿದ್ದಿ ಪಡೆದ ಕಲಾದಗಿಯಲ್ಲಿ ಜತ್ತಿಯವರ ಪೂರ್ವಜರು ನೆಲೆಸಿದ್ದರು. ಇಂದು ಕಲಾದಗಿ ಬಾಗಲಕೋಟೆ ಜಿಲ್ಲೆಯಲ್ಲಿದೆ. ಈ ನಮ್ಮ ಉತ್ತರ ಭಾಗದ ಜಿಲ್ಲೆಗಳಲ್ಲಿ ಹಬ್ಬಗಳು ತುಂಬಾ ವಿಜೃಂಬನೆಯಿಂದ ನಡೆಯುತ್ತವೆ. ಅವುಗಳಲ್ಲಿ ಗಣೇಶನ ಹಬ್ಬ, ಕಾರ ಹುಣ್ಣಿಮೆ, ಸೀಗೆ ಹುಣ್ಣಿಮೆ, ಗೌರಿ ಹುಣ್ಣಿಮೆ, ಇನ್ನೂ ಮುಂತಾದ ಹಬ್ಬಗಳು ಸಡಗರದಿಂದ ಆಚರಿಸುವುದು ಕಂಡುಬರುತ್ತವೆ. ಜತ್ತಿಯವರು ಬಾಲ್ಯದಲ್ಲೆ ಇಂತಹ ಹಬ್ಬ ಹರಿದಿನಗಳಲ್ಲಿ ಪೂಜಿಸುವ ಮಣ್ಣೆತ್ತು, ಹಾಗೂ ಗಣೇಶ ಇನ್ನೂ ಮುಂತಾದ ಮೂರ್ತಿ ಶಿಲ್ಪಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಹಾಗೆ ಅದರ ರಚನೆಯ ಹಂಬಲ ಹೆಚ್ಚಾಗಿ

ಜಿನಗಾರ ಹುಡುಗರ ಗೆಳೆತನ ಮಾಡಿ ಅವರೊಂದಿಗೆ ಕೂಡಿಕೊಂಡು ಹಲವಾರು ಮೂರ್ತಿಗಳನ್ನು ರಚಿಸುವುದಲ್ಲಿ ಯಶಸ್ವಿಯಾದರು. ನಂತರದ ದಿನಗಳಲ್ಲಿ ತಾವೇ ಸ್ವತಹ ಹಬ್ಬ ಹರಿದಿನಗಳಲ್ಲಿ ತಮ್ಮ ತಾಯಿಯೊಂದಿಗೆ ಮೂರ್ತಿಗಳನ್ನು ತಯಾರಿಸುವುದು ಕಲಿತರು. ತಮ್ಮ ಪರಿಸರದಲ್ಲಿ ಇದ್ದಂತಹ ಚಿತ್ರಕಲೆಯನ್ನು ಹಂತ ಹಂತವಾಗಿ ಕಲಿಯುತ್ತಾ ತಾವು ಬೆಳೆದರು ಎಂ, ಎಸ್. ಜತ್ತಿಯವರು, ಬಡಕುಟುಂಬದಲ್ಲಿ ಜೂನ್ ೮, ೧೯೩೦ ರಲ್ಲಿ ಶಂಕರೆಪ್ಪ. ತಾಯಿ. ಈರವ್ವ ಇವರ ಉದರದಲ್ಲಿ ಜನಿಸಿದರು. ತಾಯಿಯ ಊರು ಪರಮ ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಜನ್ಮಸ್ಥಳವಾದ ವಿಜಾಪುರ ಜಿಲ್ಲೆಯ ಬಿಜ್ಜರಗಿ ಗ್ರಾಮವಾಗಿದೆ.

ಈರವ್ವನವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು ನಾಲ್ಕು ಜನ ಗಂಡು ಮಕ್ಕಳು ಇವರಲ್ಲಿ ಏಳನೆಯವರು ಎಂ. ಎಸ್. ಜತ್ತಿಯವರು, ತಂದೆ ಶಂಕರೆಪ್ಪನವರು ರೇವನ್ಯೂ ಡಿಪಾರ್ಟಮೆಂಟನಲ್ಲಿ ಸರ್ಕಲ್ ಇನಸ್ಪೆಕ್ಟರ ಆಗಿ ಸೇವೆ ಸಲ್ಲಿಸುತ್ತಿದ್ದರು, ಬರುವ ವೆಚ್ಚದಲ್ಲಿ ಮನೆಯನ್ನು ನಡೆಸುವುದು ಆ ಕಾಲದಲ್ಲಿ ಕಷ್ಟವಾಗಿತ್ತು. ಧಾರ್ಮಿಕ ಸುಸಂಸ್ಕೃತಿ ತತ್ವ ದೈವಭಕ್ತಿ, ಸಾತ್ವಿಕತೆಯಲ್ಲಿ ತುಂಬಾ ಸಿರಿವಂತರಾದರೂ ಆರ್ಥಿಕ ದೃಷ್ಟಿಯಿಂದ ದುರ್ಬಲರಾಗಿದ್ದರು. ಮುಂದೆ ಜತ್ತಿಯವರ ತಂದೆಗೆ ಬಡತಿ ದೊರೆತು ಖಜಾಂಚಿಯಾಗಿ ಕಾರ್ಯ ನಿರ್ಹಿಸಿದರು.

ಎಂ.ಎಸ್. ಜತ್ತಿಯವರು ಪ್ರಾಥಮಿಕ ಶಿಕ್ಷಣ ಮುಗಿಸಿ ಮುಂದಿನ ವಿದ್ಯಾಭ್ಯಾಸಕ್ಕೆ ವಿಜಾಪುರದಲ್ಲಿಯ ಬಿ.ಎಲ್.ಡಿ.ಇ. ಸಂಸ್ಥೆಯ ಎಸ್. ಎ. ಮಾಧ್ಯಮಿಕ ಶಾಲೆಗೆ ಸೇರಿದರು. ಅಲ್ಲಿ ನಡೆಯುವ ಚಿತ್ರಕಲಾ, ರಂಗೋಲಿ ಸ್ಪರ್ದೆಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡರು. ಈ ಹಂತದಲ್ಲಿ ಇವರ ರೇಖಾ ಚಿತ್ರ ಕಂಡ ಸಹಪಾಠಿಗಳು ಇವರಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟರು. ಮಾಧ್ಯಮಿಕ ಶಾಲಾ ಶಿಕ್ಷಕರಾದ ಹಳ್ಳಿಯವರಿಗೆ ತಮ್ಮ ಕಲಾಕೃತಿಗಳನ್ನು ತೋರಿಸಿದರು. ಅವರು ನಿನ್ನಲ್ಲಿ ಅಪಾರವಾದ ಕಲಾಶಕ್ತಿಯಿದೆ. ನೀನು ಇದರಲ್ಲಿಯೇ ಮುಂದುವರೆ ಎಂದರು. ಈ ನುಡಿಗಳು ಜತ್ತಿಯವರ ಜೀವನದ ಗತಿಯನ್ನೇ ಬದಲಾಯಿಸಿತು. ನಂತರದಲ್ಲಿ ಇವರ ಮಾರ್ಗದರ್ಶನದಲ್ಲಿಯೇ ಡ್ರಾಯಿಂಗ್ ಪರೀಕ್ಷೆ ಪಾಸಾದರು. ಹಾಗೇ ಎಸ್. ಎಸ್. ಎಲ್. ಸಿ. ಪಾಸ್ ಮಾಡಿಕೊಂಡರು. ಮುಂದೆ ಉಚ್ಚ ಶಿಕ್ಷಣಕ್ಕೆ ಹಾತೊರೆದಾಗ ಮನೆ ಆರ್ಥಿಕ ಸ್ಥಿತಿಯು ಕೆಟ್ಟದಾಗಿತ್ತು. ಈ ನಿಟ್ಟಿನಲ್ಲಿ ಇವರನ್ನು ಜೆ.ಜೆ. ಕಲಾ ಶಾಲೆಗೆ ಕಳುಹಿಸಿಕೊಟ್ಟವರು ಇವರ ಸಹಪಾಠಿಗಳೇ. ಎಲ್ಲರೂ ಹಣವನ್ನು ಸಂಗ್ರಹಿಸಿಕೊಟ್ಟರು, ಇಂತಹ ಸಮಯದಲ್ಲಿಯೇ ಮಹಾಂತ ಜತ್ತಿಯವರ

ತಂದೆಯು ೧೯೪೩ ರಲ್ಲಿ ನಿಧನರಾದರು. ಜತ್ತಿಯವರ ಖಾಸ ಸ್ನೇಹಿತ " ಬಸಣ್ಣ ಮಸಳಿ " ಯವರು ಉನ್ನತ ವ್ಯಾಸಂಗಕ್ಕೆ (ಚಿತ್ರಕಲೆ) ಬಾಂಬೆಗೆ ಕಳುಹಿಸಿದರು. ೧೯೫೪-೧೯೫೫ ರಲ್ಲಿ ಜೆ.ಜೆ. ಕಲಾಶಾಲೆಗೆ ಸೇರಿಕೊಂಡರು. ಮುಂದೆ ಅಲ್ಲಿ ವಾಸ ಮಾಡಲಿಕ್ಕೆ ಅವರ ಇನ್ನೊರ್ವ ಸ್ನೇಹಿತ ಬೆಳಗಾಂ ಜಿಲ್ಲೆಯ ಯಮಕನ ಮರಡಿಯ ವಾಲ್ಕರ, ಹಾಗೂ ರಾಮಚಂದ್ರಪ್ಪ. ರಾಯ್ಕರ, ಅವರ ಆಸರೆ ದೊರೆಯಿತು. ಆಗ ಜಲವರ್ಣ, ತೈಲವರ್ಣಗಳಲ್ಲಿ ಭೂದೃಶ್ಯ ಮತ್ತು ಭಾವ ಚಿತ್ರ ರಚಿಸುವದು ಮುಖ್ಯವಾಗಿತ್ತು. ಜೊತೆಗೆ ದಂತಕಥೆ, ಪುರಾಣದ ಸನ್ನಿವೇಶದ ವಿಷಯಗಳು, ದಿನ ನಿತ್ಯ ಜೀವನದ ಘಟನೆಗಳು ಇವರ ಕಲೆಯಲ್ಲಿ ಹಾಸುಹೊಕ್ಕಾಗಿವೆ. ಇವರು ಬಿಡುವಿನ ವೇಳೆ ಪೋಟೋಗ್ರಫಿ ಟ್ರೇನಿಂಗ್, ಹಾಗೂ ಹ್ಯಾಂಡಿಕ್ರಾಪ್ಟನಲ್ಲಿ ಟ್ರೇನಿಂಗ್ ಪಡೆಯುತ್ತಿದ್ದರು. ಹಾಗೇ ನೂತನ ಕಲಾ ಮಂದಿರ ನಡೆಸುತ್ತಿದ್ದ ' ದಂಡಾವತಿ ಮಠ ' ಅವರಿಂದ ಮಾರ್ಗದರ್ಶನ ಪಡೆದರು. ಚಿತ್ರಕಲೆಯ ಶಿಕ್ಷಣ ಮುಗಿಸಿ ವಿಜಾಪುರಕ್ಕೆ ಆಗಮಿಸಿದರು. ಮತ್ತೆ ೧೯೫೬ ರಲ್ಲಿ ಆಡಿಯೋ ವಿಜ್ಯುವಲ್ ಟ್ರೇನಿಂಗ್ ಪಡೆಯಲು ಬಾಂಬೆಗೆ ಮರಳಿದರು. ಇದರ ಮಧ್ಯದಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯಲ್ಲಿ ಚಾಯಿಲ್ಡ್ ಆರ್ಟ ಅಡ್ವಾಯಿಜರ್ ಎಂದು ಅಲ್ಪಾವಧಿ ಕೆಲಸಕ್ಕೆ ಸೇರಿಕೊಂಡಿದ್ದರು. ಮತ್ತೆ ವಿಜಾಪುರಕ್ಕೆ ಮರಳಿದ ಕ್ಷಣದಲ್ಲಿಯೇ ೧೯೫೭ ರಲ್ಲಿ ಇದೇ ಸಂಸ್ಥೆಯ ಅಂಗ ಸಂಸ್ಥೆ ಎಸ್. ಎಸ್. ಹೈಯರ್ ಸೆಕೆಂಡರಿ ಸ್ಕೂಲ್ ವಿಜಾಪುರದಲ್ಲಿ ಪೂರ್ಣಾವಧಿ ಶಿಕ್ಷಕರಾದರು. ಮುಂದೆ ೧೯೬೪ ರಲ್ಲಿ ಬಾಂಬೆಗೆ ಪ್ರಯಾಣ ಮಾಡಿ ಜೆ.ಜೆ. ಸ್ಕೂಲ್‌ನಿಂದ ಆರ್ಟ ಮಾಸ್ಟರ್ ಪದವಿಯನ್ನು ಪಡೆದು ಮತ್ತೆ ಮರಳಿ ಬಂದರು. ತದನಂತರದಲ್ಲಿಯೇ ಗದಗಿನ ವಿಜಯ ಕಲಾ ಮಂದಿರಕ್ಕೆ ಪಾದಾರ್ಪಣೆಮಾಡಿ ೧೯೬೬ ರಲ್ಲಿ ಕಲಾ ಪ್ರೌಢಕ್ಕೆ ಸೇರಿಕೊಂಡು ಪಾಸು ಮಾಡಿಕೊಂಡರು. ೧೯೬೭ ರಲ್ಲಿ ಕಲಾ ನಿಪುಣ ಪರೀಕ್ಷೆಯಲ್ಲಿ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಪಡೆದುಕೊಂಡು ಪಾಸಾದರು.

ಎಮ್.ಎಸ್. ಜತ್ತಿಯವರು ಕಲೆಗಾಗಿ ಕಲಾ ಶಿಕ್ಷಣಕ್ಕಾಗಿ ತಮ್ಮ ಜೀವಿತಾವಧಿಯ ಮುಕ್ಕಾಲು ಭಾಗವನ್ನು ಸವೆಸಿ ಕಲಾ ಕ್ಷೇತ್ರಕ್ಕೆ ತಮ್ಮನ್ನು ಸಮರ್ಪಿಸಿಕೊಂಡರು. ಯಾವುದೇ ಕೆಲಸ ಕಾರ್ಯಗಳು ಸಣ್ಣದಿರಲಿ, ದೊಡ್ಡದಿರಲಿ, ಕೇವಲ ಹೆಸರಿಗಾಗಿ ಪ್ರತಿಷ್ಠೆಗಾಗಿ ಎಂದೂ ಮಾಡಿದವರಲ್ಲ. ಆದರೂ ವಿಜಾಪುರ ಜಿಲ್ಲೆಗೆ ಇವರ ಕೊಡುಗೆ ಅಪಾರವಾದುದ್ದಾಗಿದೆ. ಇವರಿಗೆ ಮೊದಲು ೧೯೮೩ ರಲ್ಲಿ ವಿಜಾಪುರ ಜಿಲ್ಲಾ ಚಿತ್ರಕಲಾ ಶಿಕ್ಷಕರ ಕಲಾ ಪ್ರದರ್ಶನದಲ್ಲಿ ಪ್ರಶಸ್ತಿ ದೊರೆಯಿತು. ನಂತರದಲ್ಲಿ ೧೯೮೮ ರಲ್ಲಿ ಇದೆ ಜಿಲ್ಲೆಯ ಶಿಕ್ಷರಿಂದ ಪ್ರಶಸ್ತಿ



ಭಾವ ಚಿತ್ರ



ಎಂ. ಎಸ್. ಇತ್ತಿ

ದೊರೆಯಿತು. ಮುಂದಿನ ದಿನಮಾನದಲ್ಲಿ ಅಂದರೆ ೧೯೮೭ ರಲ್ಲಿ ಮೈಸೂರ ದಸರಾದಲ್ಲಿ ಛಾಯಾ ಚಿತ್ರಕ್ಕೆ, ಪ್ರಶಸ್ತಿ ಬಂದಿತು. ಇವರು ಹಲವು ಸಂಸ್ಥೆಗಳಿಗೆ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ೧೯೮೭ ರಿಂದ ೧೯೯೦ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಸದಸ್ಯರು, ೧೯೯೧ ರಲ್ಲಿ ೪ ನೇ ಆಲ್ ಇಂಡಿಯಾ ಆರ್ಟಿಸ್ಟ್ ಪ್ರದರ್ಶನದಲ್ಲಿ ಸನ್ಮಾನ ಪತ್ರ, ೧೯೬೩ ರಲ್ಲಿ ವಿಜಾಪುರ ಜಿಲ್ಲಾ ಛಾಯಾ ಗ್ರಾಹಕರ ಸಂಘದ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ನಂತರ ೧೯೮೦ ರಲ್ಲಿ ವಿಜಾಪುರ ಜಿಲ್ಲಾ ಚಿತ್ರಕಲಾವಿದರ ಸಂಘದ ಸದಸ್ಯರಾಗಿದ್ದರು. ಹೀಗೆ ಬಿಜಾಪುರ ಜಿಲ್ಲೆಯ ಕಲಾಕ್ಷೇತ್ರಕ್ಕೆ ತಮ್ಮ ಕೊಡುಗೆ ನೀಡಿದ್ದಾರೆ.

ಶ್ರೀ ವಿ. ಎಮ್. ಶೋಲಾಪುರಕರ್ :


ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿದ ಶೋಲಾಪುರಕರ್ ಅವರು ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ ೧೯೩೧ ರಲ್ಲಿ ಜನಸಿದರು, ಬಾಲ್ಯದಲ್ಲಿಯೇ ಚಿತ್ರಕಲೆಯ ಬಗ್ಗೆ ಆಸಕ್ತಿ ಉಳ್ಳವರಾದ ಇವರು ೧೯೫೪ ರಲ್ಲಿ ಮುಂಬೈ ಜೆ.ಜೆ. ಶಾಲೆಯಿಂದ ಆರ್ಟ್ಸ ಮಾಸ್ಟರ್ಸ ಪರೀಕ್ಷೆಯನ್ನು ಪಾಸಾದರು. ಅಲ್ಲದೆ ಹೆಚ್ಚಿನ ಚಿತ್ರಕಲಾ ಅಧ್ಯಯನಕ್ಕಾಗಿ ಇಂಗ್ಲೆಂಡಿಗೆ ತೆರಳಿದರು, ಇವರು ಕರ್ನಾಟಕದ ಆಧುನಿಕ ಕಲೆಗೆ ಹೊಸ ರೂಪವನ್ನ ಕೊಟ್ಟ ಕ್ರಿಯಾಶೀಲ ಕಲಾವಿದರಾಗಿದ್ದಾರೆ.

ಮುಂಬೈ ಜೆ.ಜೆ.ಕಲಾ ಶಾಲೆಯಲ್ಲಿ ಕಲಾ ಶಿಕ್ಷಣ ಪಡೆದುಕೊಂಡದ್ದಲ್ಲದೆ, ಕೆಲ ಕಾಲದವರೆಗೆ ಅಲ್ಲಿಯೇ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವುದು ಇವರಿಗೆ ಸಂದ ಗೌರವವಾಗಿದೆ. ಜೆ.ಜೆ. ಕಲಾ ಶಾಲೆಯಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಲೆ ಇನ್ನಿತರ ಸಾಂಸ್ಕೃತಿಕ ಮತ್ತು ಸಾಹಿತ್ಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಇವರು ಸಾಮಾಜಿಕ ಕ್ಷೇತ್ರದಲ್ಲಿಯೂ ಪ್ರಸಿದ್ಧಿ ಪಡೆದುಕೊಂಡಿದ್ದಾರೆ.


ಕರ್ನಾಟಕ ಸರಕಾರವು ಆರಂಭಿಸಿದ ಜಯಚಾಮ ರಾಜೇಂದ್ರ ಚಿತ್ರಕಲಾ ಶಾಲೆಗೆ ನೇತೃತ್ವವಹಿಸಿಕೊಳ್ಳಲು ಇವರನ್ನು ಅಹ್ವಾನಿಸಿತು. ಶೋಲಾಪುರ್‌ಕರ್ ಅವರು ತಮ್ಮ ದಕ್ಷ ಮತ್ತು ಪ್ರಮಾಣಿಕವಾದ ಸೇವೆಯಿಂದ ಈ ಕಲಾ ಶಾಲೆಯನ್ನು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರುಗಳಿಸುವಂತೆ ಮಾಡಿದರು. ಕೇವಲ ಚಿತ್ರ ಕಲೆಯ ತರಬೇತಿಗೆ ಮಾತ್ರ ಮೀಸಲಾಗಿದ್ದ, ಈ ಕಲಾ ಶಾಲೆಯಲ್ಲಿ ಚಿತ್ರಕಲೆಯ ಜೊತೆಗೆ ಮೂರ್ತಿ ಶಿಲ್ಪಕಲೆ, ಗ್ರಾಫಿಕ ಮಾಧ್ಯಮ ಮತ್ತು ಕಲಾ ಇತಿಹಾಸಗಳಂತಹ ವಿವಿಧ ರೀತಿಯ ಹೊಸ ಕೋರ್ಸಗಳನ್ನು ಆರಂಭಿಸಿದರು.

ದಕ್ಷ ಆಡಳಿತಗಾರರಾಗಿ ಈ ಕಲಾ ಶಾಲೆಯನ್ನು ಬೆಳೆಸಿದಂತೆ ಕಲಾಕೃತಿ ರಚನೆಯ ಮೂಲಕ ಕಲಾ ಕ್ಷೇತ್ರದಲ್ಲಿಯೂ ವಿಶಿಷ್ಟ ಸಾಧನೆಯನ್ನು ಇವರು ಮಾಡಿದ್ದಾರೆ. ಹೆಚ್ಚಾಗಿ ನವ್ಯ ಶೈಲಿಯ ಚಿತ್ರಗಳನ್ನು ರಚಿಸುವ ಇವರು ವಿವಿಧ ಮಾಧ್ಯಮಗಳ ಮೇಲೆ ಕೃತಿ ರಚನೆ ಮಾಡಿದ್ದಾರೆ. ಕಾಗದ, ರಟ್ಟು, ಮರದ, ಫಲಕ, ಕ್ಯಾನ್‌ವಾಸ್, ಮತ್ತು ಮಾರ್ಬಲ್ ಕಲ್ಲಿನ ಫಲಕ, ಪ್ಲಾಸ್ಟರ್ ಆಫ್ ಪ್ಯಾರಿಸಿದ ಫಲಕಗಳು, ಮತ್ತು ಗಾಜಿನ ಫಲಕಗಳ ಮೇಲೆ ಚಿತ್ರ ರಚನೆ ಮಾಡಿದ್ದಾರೆ. ಹೆಚ್ಚಾಗಿ ತೈಲ ವರ್ಣವನ್ನು ಬಳಸಿದ ಇವರು ಆಗಾಗ ಜಲವರ್ಣ ಮತ್ತು ಅಕ್ರಾಲಿಕ್ ವರ್ಣಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸಿದ್ದಾರೆ. ಇವರ ಚಿತ್ರ ಕಲಾಕೃತಿಗಳಲ್ಲಿ ನವ್ಯ ಶೈಲಿಯ, ಸ್ಟಿಲ್‌ಲೈಪ್ ಕಲಾಕೃತಿಗಳು, ಸಾಂಕೇತಿಕ ವಿನ್ಯಾಸದ ಸಂಯೋಜನೆಗಳು ಬಹುಮುಖ್ಯವಾಗಿವೆ.

ಇವರು ಚಿತ್ರಕಲಾ ಕೃತಿಗಳಲ್ಲದೆ ಮೂರ್ತಿ ಶಿಲ್ಪ ಕಲಾಕೃತಿ, ಮತ್ತು ಇನ್ಲೇ ಕಲಾ ಕೃತಿಗಳನ್ನು ನಿರ್ಮಿಸುವಲ್ಲಿ ವಿಶಿಷ್ಟ ಪರಿಣಿತಿಯನ್ನು ಪಡೆದುಕೊಂಡವರಾಗಿದ್ದಾರೆ. ಮೂರ್ತಿ ಶಿಲ್ಪಗಳಲ್ಲಿ ಮರ, ಲೋಹ, ಮತ್ತು ಶಿಳೆಯ ಮಾಧ್ಯಮಗಳನ್ನು ಇವರು ಬಳಸಿದ್ದು, ಈ ಕೃತಿಗಳು ಆಧುನಿಕ ಸ್ವರೂಪವನ್ನು ಪಡೆದುಕೊಂಡಿವೆ. ಇನ್ಲೇ ಕಲಾಕೃತಿಯ ರಚನಾ ವಿಧಾನವು ವಿಶಿಷ್ಟವಾಗಿದ್ದು, ಪಾಶ್ಚಾತ್ಯ ಪ್ರಭಾವದಿಂದ ಪ್ರೇರಿತಗೊಂಡಿದೆ. ಈ ವಿಧಾನದಲ್ಲಿ ಮರ ಫಲಕಗಳನ್ನು ಆಯ್ದುಕೊಂಡು ಅದರ ಮೇಲೆ ತಮಗೆ ಬೇಕಾದ ಚಿತ್ರ ಕಲಾಕೃತಿಗಳನ್ನು ರಚನೆ ಮಾಡುತ್ತಾರೆ. ಮುಂದಿನ ಹಂತದಲ್ಲಿ ಚಿತ್ರ ರಚನೆ ಮಾಡಿದ ಆಕಾರಗಳ ಒಳಭಾಗವನ್ನು ಕೊರೆದು ತೆಗೆದು ಅದನ್ನು ತಗ್ಗಾಗಿ ರೂಪಿಸುತ್ತಾರೆ. ಮುಂದಿನ ಹಂತದಲ್ಲಿ ಮತ್ತೊಂದು ಮರದ ತುಂಡನ್ನು ತೆಗೆದುಕೊಂಡು ವಿರುದ್ಧ ವರ್ಣದ ಅದರ ಹೊಳಪನ್ನು ಆಯ್ಕೆ ಮಾಡಿಕೊಂಡು ಬೇಕಾದ ವಿನ್ಯಾಸಕ್ಕೆ ಚಿತ್ರಗಳನ್ನು ಅದರಲ್ಲಿ ನಿರ್ಮಿಸುತ್ತಾರೆ. ಆಮೇಲೆ ಈ ವಿರುದ್ಧ ವರ್ಣದ ಮರದಲ್ಲಿ ನಿರ್ಮಿಸಿದ ಕಲಾಕೃತಿಗಳನ್ನು ಕೊರೆದು, ತಗ್ಗಾಗಿರುವ ಮೊದಲಿನ ಮರದ ಫಲಕಕ್ಕೆ ಸಮಾನಾಂತರವಾಗಿ ಜೋಡಿಸುತ್ತಾರೆ. ಆಮೇಲೆ ಈ ಮರದ ಫಲಕದ ಮೇಲ್ಮೈಯನ್ನು ನುಣುಪುಗೊಳಿಸಿ, ಒಂದೆ ತೆರನಾಗಿರುವಂತೆ ಮಾಡುತ್ತಾರೆ. ಇಂತಹ ವಿಧಾನದಲ್ಲಿ ಇವರು ಅನೇಕ ಕಲಾಕೃತಿಗಳನ್ನು ನವ್ಯ ಶೈಲಿಯಲ್ಲಿ ರಚನೆ ಮಾಡಿದ್ದಾರೆ. ಆಧುನಿಕ ಸ್ಟಿಲ್‌ಲೈಫಗಳು (ಸ್ಥಿರ ಚಿತ್ರಗಳು) ಸಮುದ್ರದ ದೃಶ್ಯಗಳು, ಸಾಂಕೇತಿಕ ಮಾನವ ಆಕಾರಗಳು, ಇವರ ಇನ್ಲೇ ಕಲಾಕೃತಿಯಲ್ಲಿ ಮೂಡಿಬಂದಿವೆ.



ಇನ್ಲೇ ಕಲಾಕೃತಿ



ವಿ.ಎಂ.ಶೋಲಾಪುರಕರ್

ತಮ್ಮ ಕಲಾ ಬದುಕಿನಲ್ಲಿ ಆಡಳಿತ ನಿರ್ವಹಣೆಯ ಜೊತೆಗೆ ಮತ್ತು ಕಲಾಕೃತಿ ರಚನೆಯ ಜೊತೆಗೆ ಕಲಾ ಸಾಹಿತ್ಯವನ್ನು ರಚಿಸುವ ನಿಟ್ಟಿನಲ್ಲಿ ಇವರು ಅನೇಕ ಕಲಾ ಲೇಖನಗಳನ್ನು ಪತ್ರಿಕೆಗಳಿಗೆ ಬರೆದಿದ್ದಾರೆ. ಜೆ ಜೆ. ಕಲಾ ಶಾಲೆಯಲ್ಲಿ 'ರೂಪ ಭೇದ' ಎಂಬ ಪತ್ರಿಕೆಯು ಇವರ ಸಂಪಾದಕತ್ವದಲ್ಲಿ ಉತ್ತಮವಾಗಿ ಹೊರ ಬರುತ್ತಿತ್ತು. ಅಲ್ಲದೆ ಟೈಮ್ಸ್ ಆಫ್ ಇಂಡಿಯಾ ಆಂಗ್ಲ ಪತ್ರಿಕೆಗೆ ಕಲಾ ಲೇಖನಗಳನ್ನು ಇವರು ಬರೆದಿದ್ದಾರೆ. ಇವುಗಳ ಜೊತೆಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಬೇರೆ ಬೇರೆ ಕಡೆಗೆ ಕಲಾ ಉಪನ್ಯಾಸಗಳನ್ನು ನೀಡಿದ್ದು, ಇವರು ಕೆಲವು ವಿದೇಶಿ ಕಲಾ ಶಾಲೆಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಹೀಗೆ ಕಲೆ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ವಿಶಿಷ್ಟ ಸಾಧನೆ ಮಾಡಿದ ಸೋಲಾಪುರ್‌ಕರ್ ಅವರು ಬಿಜಾಪುರ ಜಿಲ್ಲೆಯ ಕಲಾ ಕ್ಷೇತ್ರಕ್ಕೆ ಗಮನಾರ್ಹ ಕೊಡುಗೆ ಕೊಟ್ಟವರಾಗಿದ್ದಾರೆ.

ಶ್ರೀ ವಿಶ್ವನಾಥ ಬುರ್ಹಾನಪುರ :

ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಚುಕ್ಕೆ ಚಿತ್ರಗಳ ಮೂಲಕ ಹೆಸರು ಮಾಡಿದ ಬುರ್ಹಾಣಪುರವರು ೧೯೩೭ರಲ್ಲಿ ವಿಜಾಪುರದಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ರೋಗ ಗ್ರಸ್ತವಾದ ಇವರ ದೇಹವು ಇವರನ್ನು ಅಂಗವಿಕಲರನ್ನಾಗಿ ಮಾಡಿತು. ಆದರೆ ಛಲ ಬಿಡದ ಇವರು ಗದುಗಿಗೆ ಆಗಮಿಸಿ ಟಿ.ಪಿ. ಅಕ್ಕಿ ಅವರ ಮಾರ್ಗದರ್ಶನದಲ್ಲಿ ಕಲಾ ಶಿಕ್ಷಣವನ್ನು ಪಡೆದುಕೊಂಡರು. ರೇಖಾ ಚಿತ್ರ ವರ್ಣ ಚಿತ್ರ ನಿಸರ್ಗ ಚಿತ್ರ, ಸ್ಥಿರ ಚಿತ್ರ, ಸಂಯೋಜನಾ ಚಿತ್ರ, ಹೀಗೆ ಚಿತ್ರಕಲೆಯ ವಿವಿಧ ಪ್ರಕಾರಗಳಿದ್ದು, ಇವರು ಇವುಗಳನ್ನೆಲ್ಲಾ ಹೊರತುಪಡಿಸಿ, ಇವುಗಳಿಗಿಂತ ವಿಶಿಷ್ಟವಾಗಿರುವ ಚುಕ್ಕೆ ಚಿತ್ರದ ರಚನೆಯ ವಿಧಾನವನ್ನು ಹೆಚ್ಚು ಇಷ್ಟಪಟ್ಟುಕೊಂಡರು. ಚುಕ್ಕೆ ಚಿತ್ರ ರಚನೆಗೆ ಬೇಕಾಗುವ ತಾಳ್ಮೆ, ಶಾಂತ ಮನೋಭಾವ, ಸೂಕ್ಷ್ಮ ವಿವೇಚನೆ, ಮುಂತಾದವುಗಳು ಇವರಲ್ಲಿ ದೈವದತ್ತವಾಗಿ ಬಂದವುಗಳಾಗಿದ್ದವು. ಅಲ್ಲದೆ ಇವರ ದೇಹ ಸ್ಥಿತಿಯು ಸಹ ಇದಕ್ಕೆ ಅನುಕೂಲವಾಗಿತ್ತು. ಈ ಎಲ್ಲ ಕಾರಣಗಳನ್ನು ಪೂರಕವಾಗಿ ಬಳಸಿಕೊಂಡ ಇವರು ರಾಷ್ಟ್ರ ಮಟ್ಟದಲ್ಲಿ ಶ್ರೇಷ್ಠ ಚುಕ್ಕೆ ಚಿತ್ರ ರಚನಾಕಾರ ಎಂದು ಗುರುತಿಸಿಕೊಂಡಿದ್ದಾರೆ.

ಚುಕ್ಕೆ ಚಿತ್ರ ರಚನೆಗೆ . ಪ್ರಾರಂಭದಲ್ಲಿ ಸೂಕ್ಷ್ಮ ರೇಖಾ ಚಿತ್ರಗಳನ್ನು ಬರೆದುಕೊಳ್ಳಬೇಕಿದ್ದು, ನಂತರದಲ್ಲಿ ರೇಖೆಗಳ ಉದ್ದಕ್ಕೂ ಚುಕ್ಕೆಗಳನ್ನು ಸೂಕ್ಷ್ಮವಾಗಿ ಇಡುತ್ತಾ ಸಾಗಬೇಕು. ಚಿತ್ರದ ನೆರಳು ಬೆಳಕಿನ ವಿನ್ಯಾಸ ಕಣ್ಣು, ಮೂಗು, ಬಾಯಿಗಳು, ಕೈ, ಕಾಲುಗಳು, ಮತ್ತು ಕೂದಲಿ ನಂತಹ ಪ್ರತಿಯೊಂದು ಭಾಗವನ್ನು ಸಹಿತ ಚುಕ್ಕೆಗಳಿಂದಲ್ಲೇ ರಚಿಸುವ ಈ

ವಿಧಾನದಲ್ಲಿ ಕಲಾವಿದನ ತಾಳ್ಮೆ ಮತ್ತು ವಿಚಾರ ಶಕ್ತಿಗಳು ಒರೆಗೆ ಹೆಚ್ಚಲ್ಪಡುತ್ತವೆ. ಇಂತಹ ವಿಧಾನದಲ್ಲಿ ಬುರ್ಹಾಣಪುರ ಅವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಐತಿಹಾಸಿಕ ಸ್ಥಳಗಳು, ಹಾನ್‌ಗಲ್ ಕುಮಾರ ಸ್ವಾಮಿಗಳು, ಇಂದಿರಾಗಾಂಧಿ, ಆರ್, ಗುಂಡುರಾವ್, ಅಮಿತಾಬ್ ಬಚ್ಚನ್, ನರ್‌ಗಿಸ್, ಮುಂತಾದ ಉನ್ನತ ವ್ಯಕ್ತಿಗಳಲ್ಲದೆ ಸಾವಿರಾರು ವ್ಯಕ್ತಿಗಳ ಭಾವ ಚಿತ್ರಗಳನ್ನು ಇವರು ರಚಿಸಿದ್ದಾರೆ. ಐತಿಹಾಸಿಕ ಸ್ಥಳಗಳಲ್ಲಿ ಬದಾಮಿ, ಐಹೊಳೆ, ಪಟ್ಟದಕಲ್ಲು, ಬಿಜಾಪುರ, ಹಂಪೆ, ಮುಂತಾದ ಕಲಾ ಪ್ರಮುಖ ನೆಲೆಗಳು ಇವರಿಂದ ರಚನೆಗೊಂಡಿವೆ. ಗಿಡ ಮರಗಳು, ಗುಡ್ಡ ಬೆಟ್ಟಗಳು, ಹಳ್ಳ ಕೊಳ್ಳಗಳು ಮತ್ತು ಮನೆ ಮಠಗಳು, ಮುಂತಾದ ಚಿತ್ರಗಳನ್ನುಹೊಂದಿದ ನಿಸರ್ಗ ದೃಶ್ಯಗಳನ್ನು ಸಹಿತ ಇವರು ಚುಕ್ಕೆ ವಿನ್ಯಾಸದಲ್ಲಿ ರಚನೆ ಮಡಿದ್ದಾರೆ. ಇವರು ತಮ್ಮ ಕಲಾ ಕೃತಿಗಳನ್ನು ದೇಶದ ವಿವಿಧ ನಗರಗಳಲ್ಲಿ ಪ್ರದರ್ಶನ ಮಾಡಿ ಜನ ಮೆಚ್ಚುಗೆ ಪಡೆದಿದ್ದಾರೆ. ಇವರ ಕಲಾ ಕೃತಿಗಳು ಮುಂಬೈ, ಬೆಂಗಳೂರು, ಸೋಲಾಪುರ, ದೆಹಲಿ, ಮೈಸೂರ, ಮುಂತಾದ ಅನೇಕ ಸ್ಥಳಗಳಲ್ಲಿ ಸಂಗ್ರಹಗೊಂಡಿವೆ. ಸಧ್ಯದಲ್ಲಿ ಮುಂಬೈನಲ್ಲಿ ನೆಲೆಸಿರುವ ಇವರು ಅಂಗವಿಕಲ ಮಕ್ಕಳಿಗೆ ಚುಕ್ಕೆ ಚಿತ್ರಗಳನ್ನು ರಚಿಸುವ ವಿಧಾನವನ್ನು ಕಲಿಸುವ ಸಲುವಾಗಿ ಶಾಲೆಯೊಂದನ್ನು ಪ್ರಾರಂಭಿಸಿದ್ದಾರೆ. ತಮ್ಮ ವಿಶಿಷ್ಟ ಚಿತ್ರ ರಚನೆಯ ಮೂಲಕ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿದ ಬುರ್ಹಾಣಪುರವರ ವಿಜಾಪುರ ಜಿಲ್ಲೆಯ ಕಲಾ ಕ್ಷೇತ್ರಕ್ಕೆ ಮೌಲಿಕವಾದ ಕೊಡುಗೆಯನ್ನು ನೀಡಿದ್ದಾರೆ.

ಶ್ರೀ ಸಿ. ಬಿ. ಕಾಚಾಪುರ :

ವಿಜಾಪುರ ಜಿಲ್ಲೆಯ ಕಲಾ ಕ್ಷೇತ್ರದಲ್ಲಿ ಪ್ರಖ್ಯಾತರಾದ ಇವರು ಅಪಜಲಪುರ ತಾಲ್ಲೂಕಿನ ಗೌರವೆಂಬ ಸಣ್ಣ ಹಳ್ಳಿಯಲ್ಲಿ ಬೋಗಪ್ಪ ಮತು ಲಕ್ಷ್ಮಿ ಬಾಯಿಯವರ ಮಗನಾಗಿ ಜನಿಸಿದರು. ಕುಂಬಾರಿಕೆಯ ಮನೆತನವಾದ ಇವರ ವಂಶದಲ್ಲಿ ಕಲೆಯು ರಕ್ತಗತವಾಗಿ ಬಂದುದಾಗಿತ್ತು.

ಅಫಜಲ್‌ಪುರದಲ್ಲಿ ಪ್ರೌಢ ಶಿಕ್ಷಣ ಮುಗಿಸಿದ ಇವರು ಕಲಾ ಶಿಕ್ಷಣ ಪಡೆದುಕೊಳ್ಳಲು ಗದುಗಿನ ವಿಜಯ ಕಲಾ ಮಂದಿರಕ್ಕೆ ತೆರಳಿದರು. ಕಲಾ ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಿದ ಇವರು ಕಲಾ ಶಿಕ್ಷಕರಾಗಿ ಮತ್ತು ದಕ್ಷ ಆಡಳಿತಗಾರರಾಗಿ ಮತ್ತು ಮುಂದಿನ ಬದುಕನ್ನು ರೂಪಿಸಿಕೊಂಡವರಾಗಿದ್ದಾರೆ. ಕಲಾ ಶಿಕ್ಷಣದ ಜೊತೆಗೆ ಕಲಾ ಶಾಲೆಯ ಸ್ಥಾಪನೆ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಜಿಲ್ಲೆಯ ಕಲಾ ಕ್ಷೇತ್ರದಲ್ಲಿ

ಚಿರ ಪರಚಿತರಾಗಿದ್ದಾರೆ. ವಿಜಾಪುರದ ಸಿದ್ದೇಶ್ವರ ಕಲಾ ಶಾಲೆಯನ್ನು ಉನ್ನತ ಮಟ್ಟದಲ್ಲಿ ತಂದು ನಿಲ್ಲಿಸಿದ ಇವರ ಸಾಧನೆ ಮಹತ್ವ ಪೂರ್ಣವಾದದು. ರಾಜ್ಯದ ಪ್ರಮುಖ ಕಲಾ ಶಾಲೆಗಳಲ್ಲಿ ಒಂದಾಗಿ ಇದನ್ನು ರೂಪಸುವಲ್ಲಿ ಇವರ ನಿರಂತರ ಶ್ರಮ ಮತ್ತು ದುಡಿಮೆಗಳ ಅಡಕಗೊಂಡಿವೆ. ಕಲಾ ಶಾಲೆಯ ಪ್ರಾಚಾರ್ಯರಾಗಿ ಆಡಳಿತಾತ್ಮಕ ಕೆಲಸ ನಿರ್ಹಿಸುವುದರ ಜೊತೆಗೆ ಅನೇಕ ಕಲಾ ಶಿಬಿರ ಮತ್ತು ಕಲಾ ಪ್ರದರ್ಶನಗಳಲ್ಲಿ ಭಾಗವಹಿಸುವ ಮೂಲಕ ರಾಜ್ಯದ ಕಲಾ ವಲಯದಲ್ಲಿ ಪ್ರಖ್ಯಾತಿಯನ್ನು ಪಡೆದುಕೊಂಡಿದ್ದಾರೆ.

ಕಾಚಾಪುರ ಅವರ ಕಲಾ ಕೃತಿಗಳು ಅನೇಕ ಕಡೆಗಳಲ್ಲಿ ಪ್ರದರ್ಶನ ಕಂಡಿವೆ. ಏಕ ವ್ಯಕ್ತಿ ಪ್ರದರ್ಶನಗಳು ಮತ್ತು ಸಮೂಹ ಪ್ರದರ್ಶನಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ಇವರು ಏರ್ಪಡಿಸಿದ್ದಾರೆ. ೧೯೮೪ ರಲ್ಲಿ ದೆಹಲಿಯಲ್ಲಿ, ೧೯೭೫ ರಲ್ಲಿ ಗದುಗಿನ ವಿಜಯ ಕಲಾ ಮಂದಿರದಲ್ಲಿ, ೧೯೮೩, ೧೯೮೫, ೧೯೮೬ ವಿಜಾಪುರದಲ್ಲಿ, ೧೯೮೭, ೧೯೮೮, ೧೯೮೯ರಲ್ಲಿ ಮೈಸೂರಿನಲ್ಲಿ ಮತ್ತು ೧೯೮೮ ರಲ್ಲಿ ಮುಂಬೈನಲ್ಲಿ ಇವರ ಸಮೂಹ ಕಲಾ ಪ್ರದರ್ಶನಗಳು ಏರ್ಪಾಟಾಗಿದ್ದವು.

ಕಾಚಾಪುರ ಅವರು ಅನೇಕ ರಾಜ್ಯ ಮಟ್ಟದ ಕಲಾ ಶಿಬಿರಗಳಲ್ಲಿ ಭಾಗವಹಿಸಿ ಕೃತಿ ರಚನೆ ಮಾಡಿದ್ದಾರೆ. ೧೯೮೬ ರಲ್ಲಿ ರಾಜ್ಯ ಮಟ್ಟದ ಕಲಾ ಶಿಬಿರ ಬೆಂಗಳೂರು, ೧೯೮೭ರಲ್ಲಿ ರಾಜ್ಯ ಮಟ್ಟದ ಗ್ರಾಫಿಕ ಕಲಾ ಶಿಬಿರ ಬೆಂಗಳೂರು, ೧೯೯೦ ರಲ್ಲಿ ರಾಜ್ಯ ಮಟ್ಟದ ಕಲಾ ಶಿಬಿರ ಬಿಜಾಪುರ, ಇದಲ್ಲದೆ ಇನ್ನು ಅನೇಕ ಕಡೆಗಳಲ್ಲಿ ಮುಖ್ಯವಾಗಿ ದೆಹಲಿ ಹೈದರಾಬಾದ್ ಮತ್ತು ಮುಂಬೈಗಳಲ್ಲಿ ನಡೆದ ಕಲಾ ಶಿಬಿಗಳಲ್ಲಿ ಭಾಗವಹಿಸಿ ಕೃತಿ ರಚನೆ ಮಾಡಿದ್ದಾರೆ. ಹಾಗೂ ಹಲವಾರು ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವ ಮೂಲಕ ಕಲೆಯ ಕುರಿತು ಉಪನ್ಯಾಸಗಳನ್ನು ನೀಡಿದ್ದಾರೆ. ಇವರ ಕಲಾ ಸೇವೆಯನ್ನು ಗುರುತಿಸಿ, ಅನೇಕ ಪ್ರಶಸ್ತಿ ಗೌರವಗಳು ಇವರಿಗೆ ಸಂದಿವೆ. ೨೦೦೩ ರಲ್ಲಿ ರಾಜ್ಯ ಲಲಿತ ಕಲಾ ಅಕಾಡೆಮಿಯ ಗೌರವ ಪ್ರಶಸ್ತಿ, ೨೦೦೨ ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೨೦೦೩ ರಲ್ಲಿ ಟಿ. ಪಿ. ಅಕ್ಕಿ, ಸ್ಮಾರಕ ಪ್ರಶಸ್ತಿ, ಹೀಗೆ ಹಲವಾರು ಪ್ರಶಸ್ತಿ ಗೌರವಗಳು ಇವರಿಗೆ ಒಲಿದು ಬಂದಿವೆ. ಇವರು ಹೆಚ್ಚಿನ ಕಲಾ ಕೃತಿಯನ್ನು ರಚನೆ ಮಾಡದೆ ಇದ್ದರೂ ಸಹಿತ ಕಲಾ ಕ್ಷೇತ್ರದ ಬಗ್ಗೆ ಹೆಚ್ಚಿನ ಅನುಭವ ಉಳ್ಳವರಾಗಿದ್ದಾರೆ. ಇವರ ಕಲಾ ಕೃತಿಗಳು ದೆಹಲಿ, ಬೆಂಗಳೂರು, ಮಂಗಳೂರು, ಮೈಸೂರು, ಗದಗ, ಹಂಪಿ, ಹುಬ್ಬಳ್ಳಿ, ಮುಂತಾದ ಕಡೆಗಳಲ್ಲಿ ಸಂಗ್ರಹಗೊಂಡಿವೆ.



ರೇಖಾ ಚಿತ್ರ



ಸಿ. ಪಿ. ಕಾಟಾಪೂರ

ಶ್ರೀ ಪಿ. ಎಸ್. ಕಡೇಮನಿ :

೧೯೫೫ ರಲ್ಲಿ ಬಿಜಾಪುರ ಜಿಲ್ಲೆಯ ಕುಮಠೆ ಎಂಬ ಚಿಕ್ಕ ಗ್ರಾಮದ ರೈತಾಪಿ ಕುಟುಂಬದಲ್ಲಿ ಜನಿಸಿದ ಶ್ರೀ ಪೊನ್ನಪ್ಪ. ಎಸ್. ಕಡೇಮನಿಯವರು ರಾಜ್ಯದ ಶ್ರೇಷ್ಠ ಕಲಾವಿದರಲ್ಲಿ ಒಬ್ಬರೆಂದು ಪರಿಗಣಿಸಬಹುದಾದ ಅಪ್ಪಟ ಪ್ರತಿಭೆಯುಳ್ಳ ವಿಶಿಷ್ಠ ಕಲಾವಿದರು. ಇವರು ಧಾರವಾಡ ಕಲಾ ಶಾಲೆಯಲ್ಲಿ ಎ. ಎಂ. ಜಿ. ಡಿ. ಕೋರ್ಸನ್ನು ಪಡೆದರು. ವಿದ್ಯಾಭ್ಯಾಸ ಮಾಡುವಾಗ ದಿ. ಡಿ. ವಿ. ಹಾಲಬಾವಿ. ಹಾಗೂ ಶ್ರೀ. ಎಂ. ಎರ್. ಬಾಳಿಕಾಯಿಯವರ ಪಾಲಿಗೆ ನೆಚ್ಚಿನ ಶಿಷ್ಯ ಆಗಿದ್ದ ಪೊನ್ನಪ್ಪನನ್ನು ದಿ. ಶ್ರೀ ಸಿ. ಎಸ್. ಪಾಟೀಲ್ ಹಾಗೂ ದಿ. ಶ್ರೀ ಎಂ. ಎಸ್. ಜತ್ತಿಯವರ ನೇತೃತ್ವದಲ್ಲಿ ೧೯೭೭ ರಲ್ಲಿ. ಪ್ರಾರಂಭವಾದ ಬಿಜಾಪುರದ ಬಿ. ಎಲ್. ಡಿ. ಇ. ಸಂಸ್ಥೆಯ ಶ್ರೀ ಸಿದ್ದೇಶ್ವರ ಕಲಾ ಮಂದಿರವು ಕೈ ಬೀಸೆ ಕರೆದುದರಲ್ಲಿ ಅಚ್ಚರಿಯೇನಿಲ್ಲ. ಓದುವಾಗ ನೆಚ್ಚಿನ ಶಿಷ್ಯ ಪಟ್ಟ ವಹಿಸಿಕೊಂಡುವರು. ಈಗ ಈ ಕಲಾ ಶಾಲೆಯ ವಿದ್ಯಾರ್ಥಿಗಳಿಗೆ ನೆಚ್ಚಿನ ಗುರುಗಳಾಗಿದ್ದಾರೆ.

ರಾಜ್ಯದಲ್ಲಿ ನಾಲ್ಕಾರು ಏಕವ್ಯಕ್ತಿ ಕಲಾ ಪ್ರದರ್ಶನಗಳನ್ನು ಇವರು ನೀಡಿದ್ದಾರೆ. ೧೯೮೮ ಏಪ್ರಿಲನಲ್ಲಿ ಇವರ ಕೃತಿಗಳು ಧಾರವಾಡದ ಆರ್ಟ ಗ್ಯಾಲರಿಯಲ್ಲಿ ಪ್ರದರ್ಶನಗೊಂಡು ಮೆಚ್ಚಿಗೆಗೆ ಪಾತ್ರವಾಗಿವೆ. ಹಲವು ಸಮೂಹ ಕಲಾ ಪ್ರದರ್ಶನಗಳಲ್ಲಿ ಭಾಗಿಯಾದುದಲ್ಲದೇ, ರಾಜ್ಯದ ಪ್ರತಿಷ್ಠಿತ ಕಲಾ ಪ್ರದರ್ಶನಗಳಲ್ಲಿಯೂ ಇವರ ಕೃತಿಗಳು ಪ್ರದರ್ಶನಗೊಂಡಿವೆ. ಅನೇಕ ಪ್ರಶಸ್ತಿ ಗೌರವಗಳು ಇವರಿಗೆ ಸಂದಿವೆ. ೧೯೮೮ ರಲ್ಲಿ ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ ಇವರ ಜಲವರ್ಣ ಕೃತಿಗೆ ಮತ್ತು ೧೯೯೩ರಲ್ಲಿ ಬಿಜಾಪುರದಲ್ಲಿ ನಡೆದ ಯುವ ಚಿತ್ರ ಕಲಾವಿದರ ಶಿಬಿರದಲ್ಲಿ ಪ್ರಶಸ್ತಿ ಬಂದಿವೆ.

ರಾಜ್ಯ ಮಟ್ಟದ ಕಲಾ ಪ್ರದರ್ಶನದಲ್ಲಿ ಪ್ರದರ್ಶಿತವಾದ ಚಿತ್ರಕ್ಕೆ ಹಾಗೂ ೧೯೯೫ ರಲ್ಲಿ ದಾವಣಗೆರೆಯಲ್ಲಿ ಪ್ರದರ್ಶಿತವಾದ ಕಲಾ ಕೃತಿಗಳಿಗೆ ರಾಜ್ಯ ಮಟ್ಟದ ಪ್ರಥಮ ಪ್ರಶಸ್ತಿ ಪಡೆದುದ್ದಲ್ಲದೆ ೧೯೯೬ ರಲ್ಲಿ ಮಹಾಲಿಂಗಪುರದ ರಾಜ್ಯ ಮಟ್ಟದ ಕಲಾ ಪ್ರದರ್ಶನದಲ್ಲಿಯೂ ದ್ವಿತೀಯ ಪುರಸ್ಕಾರ ಪಡೆದ ಗೌರವ ಇವರದು.

ಇವರ ಕೃತಿಗಳು ಕರ್ನಾಟಕ ಲಲಿತ ಕಲಾ ಅಕಾಡೆಮಿ, ರೀಜನಲ್ ಲಲಿತ ಕಲಾ ಅಕಾಡೆಮಿ ಮುದ್ರಾಸ, ಕೇಂದ್ರ ಲಲಿತ ಕಲಾ ಅಕಾಡೆಮಿ ದೆಹಲಿ, ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಕೆನಡಾದ ಕೆಲವು ಸಂಗ್ರಹಗಳಲ್ಲಿ ಇರುವುದು ಹೆಮ್ಮೆಯ ವಿಷಯ. ಅನೇಕ ಕಲಾ



ಮಣ್ಣೆತ್ತಿನ ಹಬ್ಬ



ಪಿ.ಎಸ್. ಕಡೇಮನಿ

ಶಿಬಿರಗಳಲ್ಲಿ ಭಾಗವಹಿಸುವುದರ ಜೊತೆಗೆ ರಾಜ್ಯದ ಉತ್ತರ ಭಾಗದ ಬಹುತೇಕ ಎಲ್ಲಾ ಕಲಾ ಶಾಲೆಗಳಲ್ಲಿ ಪ್ರಾತ್ಯಕ್ಷಿಕೆ ನೀಡಲು ಆಹ್ವಾನಿಸಲ್ಪಟ್ಟಿದ್ದಾರೆ.

ಇವರು ಗ್ರಾಮೀಣ ವಲಯದಿಂದ ಬಂದವರಾದ್ದರಿಂದ ಹಳ್ಳಿಗಾಡಿನ ಜನರ ನೋವು ನಲಿವುಗಳನ್ನು ತೀರಾ ಹತ್ತಿರದಿಂದ ಕಂಡು ಸ್ಪಂದಿಸಿದ ಕಾರಣಗಳಿಗಾಗಿ ಅವರ ಕಲಾ ಕೃತಿಗಳಲ್ಲಿ ಸ್ವಾಭಾವಿಕವಾಗಿಯೇ ಗ್ರಾಮೀಣತೆ ಎದ್ದು ಕಾಣುವದು. ಪ್ರತಿಯೊಂದು ವರ್ಣ ಚಿತ್ರಗಳಲ್ಲಿ ಹಳ್ಳಿಯ ಸೊಗಡಿನ ನೈಜ ಚಿತ್ರಣ ನೀಡಿದ್ದಾರೆ. ಪಟ್ಟಣದ ಥಳಕು-ಬಳುಕಿನಿಂದ ಬಹು ದೂರ ವಿರುವ ನಮ್ಮ ನೆಲದ ಬದುಕಿನ ಮುಖ್ಯ ಧಾರೆಯಾದ ಗ್ರಾಮೀಣ ಸ್ಥಿತಿಗತಿಗಳ ಅರಿವನ್ನು ಇವರ ಚಿತ್ರಗಳು ಮೂಡಿಸುತ್ತವೆ. ದೇಶದ ಬೆನ್ನೆಲುಬಾದ ಅನ್ನದಾತನಾದ ಮಣ್ಣಿನ ಮಗನ ಬಗ್ಗೆ ಅಭಿಮಾನ, ಕನಿಕರ, ಪ್ರೀತಿ ಮೂಡುವಂತೆ ಅವರು ತಮ್ಮ ಕಲಾ ವಸ್ತುಗಳನ್ನು ನಿರ್ವಹಿಸಿದ್ದಾರೆ. ಇವರು ರಚಿಸಿದ ಭಾವ ಚಿತ್ರಗಳು ರಾಜ್ಯದ ವಿವಿಧೆಡೆಗಳಲ್ಲಿವೆ. ಸರಳ ನಡೆ-ನುಡಿಗಳಿಂದ ಇವರು ಅನೇಕ ಪ್ರಶಸ್ತಿ-ಗೌರವಗಳಿಗೆ ಪಾತ್ರರಾಗಿದ್ದರೂ ಸಹ ನಾನಿನ್ನೂ ಸಾಧಿಸಬೇಕಾದುದು ಬಹಳವಿದೆ ಎನ್ನುವ ವಿನಯಶೀಲರು. ಹವ್ಯಾಸಿ ನಾಟಕಗಳಲ್ಲಿ ಅಭಿನಯಿಸಿದ ಯಶಸ್ವಿ ಕಲಾವಿದರು ಆಗಿರುವ ಇವರು ೧೯೭೭ ರಿಂದ ಬಿಜಾಪುರದ ಶ್ರೀ ಸಿದ್ದೇಶ್ವರ ಕಲಾಮಂದಿರದಲ್ಲಿ ಉಪನ್ಯಾಸಕ ವೃತ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಧ್ಯಾಪನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು ಆಗಾಗ ಕಲಾಕೃತಿ ರಚನೆ ಮತ್ತು ಪ್ರದರ್ಶನಗಳನ್ನು ಹಮ್ಮಿಕೊಳ್ಳುವ ಮೂಲಕ ಜಿಲ್ಲೆಯ ಕಲಾಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡುತ್ತಲಿದ್ದಾರೆ. ಮತ್ತು ಲಲಿತ ಕಲಾ ಅಕಾಡಮಿಯ ಸದಸ್ಯರು ಆಗಿದ್ದರು.

ಶ್ರೀ ಮಂಜುನಾಥ ಮಾನೆ :

ಬಿಜಾಪುರದಲ್ಲಿ ೧೯೬೭ರಲ್ಲಿಜನಿಸಿದ ಮಂಜುನಾಥ ಮಾನೆಯವರು ಕಲಾ ಶಿಕ್ಷಣವನ್ನು ವಿಜಾಪುರದಲ್ಲಿಯೇ ಪಡೆದುಕೊಂಡರು. ಡಿಪ್ಲೋಮಾ ಪರೀಕ್ಷೆಯಲ್ಲಿ ರಾಜ್ಯಕ್ಕೆ ೨ನೇ ರ್‍ಯಾಂಕನ್ನು ಪಡೆದುಕೊಂಡರು. ಇವರು ಆರ್ಟ ಮಾಸ್ಟರ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕವನ್ನು ಗಳಿಸಿಕೊಂಡರು. ಪ್ರಸ್ತುತ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬಿಜಾಪುರ ಇಲ್ಲಿ ಶಿಕ್ಷಕರಾಗಿರುವ ಇವರು ಅನೇಕ ಕಲಾ ಶಿಬಿರ ಮತ್ತು ಪ್ರದರ್ಶನಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ಕಲಾ ಪ್ರತಿಭೆಯನ್ನು ಹೊರಹಾಕಿದ್ದಾರೆ.

ಇವರು ಅನೇಕ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕಲಾ ಶಿಬಿರಗಳಲ್ಲಿ ಭಾಗವಹಿಸಿ ಕೃತಿರಚನೆ ಮಾಡಿದ್ದಾರೆ. ೧೯೯೧ ರಲ್ಲಿ ರಾಜ್ಯ ಮಟ್ಟದ ಕಲಾವಿದರ ಶಿಬಿರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತುಮಕೂರ, ೧೯೯೩ ರಲ್ಲಿ ರಾಜ್ಯ ಮಟ್ಟದ ಕಲಾವಿದ ಶಿಬಿರ ಬೆಂಗಳೂರು, ೧೯೯೪ರಲ್ಲಿ ದಕ್ಷಿಣ ಮಧ್ಯ ವಲಯ ಕಲಾವಿದರ ಶಿಬಿರ ನಾಗಪುರ, ೨೦೦೩ ರಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿಯ ಕಲಾ ಶಿಬಿರ, ೨೦೦೫ರಲ್ಲಿ ಚಾಲುಕ್ಯ ಉತ್ಸವದ ಲ್ಯಾಂಡ ಸ್ಕೇಪ್ ಶಿಬಿರ ಹೀಗೆ ಅನೇಕ ಕಲಾ ಶಿಬಿಗಳಲ್ಲಿ ಇವರು ಭಾಗವಹಿಸಿದ್ದಾರೆ.

ಇವರು ಏಕವ್ಯಕ್ತಿ ಮತ್ತು ಸಮೂಹ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸುವ ಮೂಲಕ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ. ಹಲವಾರು ಸಮೂಹ ಕಲಾ ಪ್ರದರ್ಶನಗಳಲ್ಲದೆ ೧೯೮೬, ೧೯೮೭, ೧೯೯೧, ೧೯೯೫, ೨೦೦೧, ೨೦೦೨, ೨೦೦೬, ವರ್ಷಗಳಲ್ಲಿ ಅನುಕ್ರಮವಾಗಿ ಗದಗ, ಹುಬ್ಬಳ್ಳಿ, ವಿಜಾಪುರ, ಬೆಂಗಳೂರು, ಮಂಗಳೂರು, ಗೋವಾ ಮತ್ತು ಮೈಸೂರುಗಳಲ್ಲಿ ಏಕ ವ್ಯಕ್ತಿ ಚಿತ್ರ ಪ್ರದರ್ಶನಗಳನ್ನು ಏರ್ಪಪಡಿಸಿದ್ದಾರೆ.

ಇವರ ಕಲಾ ಸಾಧನೆಯನ್ನು ಗುರುತಿಸಿ ಪ್ರಶಸ್ತಿ ಬಹುಮಾನ ಮತ್ತು ಗೌರವಾದರಗಳು ಇವರನ್ನು ಹುಡುಕಿಕೊಂಡು ಬಂದಿವೆ. ೧೯೯೦ ರಲ್ಲಿ ಕರ್ನಾಟಕ ಸರಕಾರದ ಯುವ ಜನ ಸೇವಾ ಇಲಾಖೆಯ ರಾಜ್ಯ ಪ್ರಶಸ್ತಿ, ೧೯೯೧ ರಲ್ಲಿ ಮೈಸೂರು ದಸರಾ ಪ್ರಶಸ್ತಿ. ೧೯೯೪ ರಲ್ಲಿ ದೆಹಲಿಯ ಅಂತರಾಷ್ಟ್ರೀಯ ಮಟ್ಟದ ಪ್ರಶಸ್ತಿ, ೨೦೦೧ ರಲ್ಲಿ ಬಾಗಲಕೋಟೆ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ, ೨೦೦೨ರಲ್ಲಿ ಡಾ. ರಾಧಾಕೃಷ್ಣ ಪ್ರಶಸ್ತಿ, ೨೦೦೪ ರಲ್ಲಿ ರಾಜ್ಯ ಮಟ್ಟದ ಅತ್ಯುತ್ತಮ ವ್ಯಂಗ ಚಿತ್ರ ಪ್ರಶಸ್ತಿ, ೨೦೦೬ ರಲ್ಲಿ ಜಮಖಂಡಿ ನೃತ್ಯೋತ್ಸವ ಪ್ರಶಸ್ತಿ ಇವುಗಳಲ್ಲದೆ ಇನ್ನು ಅನೇಕ ಪ್ರಶಸ್ತಿ ಬಹುಮಾನಗಳು ಇವರಿಗೆ ದೊರಕಿವೆ.

ಇವರ ಕಲಾ ಪಾತ್ಯಕ್ಷಿಕೆಗಳು ಬಿಜಾಪುರ, ಬದಾಮಿ, ಮಂಡ್ಯ, ಮಂಗಳೂರು, ಮುಧೋಳ, ಧಾರವಾಡ, ಹಾವೇರಿ, ಚಂದರಗಿ, ಬೆಳಗಾಂವಿ, ಮುಂತಾದ ಕಡೆಗಳಲ್ಲಿ ಏರ್ಪಟ್ಟಿವೆ. ಇವರ ಕಲಾ ಕೃತಿಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹಾಗೂ ವಿದೇಶಗಳಲ್ಲಿ ಸಂಗ್ರಹಗೊಂಡಿವೆ. ಲಲಿತ ಕಲಾ ಅಕಾಡೆಮಿ ಬೆಂಗಳೂರು, ದಾವಣಗೆರೆಯ ಲಲಿತ ಕಲಾ ಮಹಾ ವಿದ್ಯಾಲಯ ಹಾಗೂ ಧಾರವಾಡ, ಹುಬ್ಬಳ್ಳಿ, ಗದಗ, ಶಿವಮೊಗ್ಗ, ಮೈಸೂರ, ಮಂಗಳೂರು, ಉಡುಪಿ, ಮುಂತಾದ ಕಲಾ ಶಾಲೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಇವುಗಳ ಜೊತೆಗೆ ಕೇರಳ, ಪುಣೆ, ಕೋಲಾಪರ ಲಾಹೋರ,



ಮಂಜುನಾಥ ಮಾನೆ



ಮಹಿಳೆ ಕೈಯಲ್ಲಿ ಎತ್ತು

ಪಾಂಡಿಚೇರಿ, ನವದೇಹಲಿ, ಇಂಗ್ಲೇಂಡ, ಇಟಲಿ, ಮತ್ತು ಸ್ವಿಡ್ಜರಲ್ಯಾಂಡಗಳಲ್ಲಿ ಇವರ ಕೃತಿಗಳು ಸಂಗ್ರಹಗೊಂಡಿವೆ. ನಿಸರ್ಗ ಚಿತ್ರಣದಲ್ಲಿ ವಿಶೇಷ ಪರಿಣಿತಿ ಪಡೆದ ಇವರು ತಮ್ಮ ಕಲಾಕೃತಿ ರಚನೆಯಿಂದ ವಿಜಾಪುರ ಜಿಲ್ಲೆಯ ಚಿತ್ರಕಲಾ ಕ್ಷೇತ್ರಕ್ಕೆ ವಿಶೇಷವಾದ ಕೊಡುಗೆಯನ್ನು ನೀಡುತ್ತಿದ್ದಾರೆ.

ಶ್ರೀ ವಿ. ವಿ. ಹಿರೇಮಠ :

ರಾಯಚೂರ ಜಿಲ್ಲೆಯ ಮುತ್ನಾಳ ಎಂಬ ಗ್ರಾಮದಲ್ಲಿ ೧೯೬೩ ರಲ್ಲಿ ಜನಿಸಿದರು. ೧೯೮೫ ರಲ್ಲಿ ಗದುಗಿನ ವಿಜಯ ಕಲಾ ಮಂದಿರದಿಂದ ಆರ್ಟ ಮಾಸ್ಟರ ಡಿಪ್ಲೋಮಾ ಕೋರ್ಸಿನಲ್ಲಿ ರಾಜ್ಯಕ್ಕೆ ಎರಡನೇ ರ್‍ಯಾಂಕ ಪಡೆಯುವ ಮೂಲಕ ತಮ್ಮ ಗುರುಗಳಾದ ಶ್ರೀ ದಿ. ಟಿ. ಪಿ. ಅಕ್ಕಿಯವರಿಗೆ ಗೌರವ ತಂದರು. ಉದಾತ್ತ ಧಾರ್ಮಿಕ ಹಿನ್ನೆಲೆಯಲ್ಲಿ ಚಿತ್ರ ಕಲಾ ಅಭ್ಯಾಸವನ್ನು ಪೂರೈಸಿದ ಶ್ರೀ ವಿ. ವಿ. ಹಿರೇಮಠ ಅವರು ಕಲೆ ಮತ್ತು ಜೀವನಗಳೆಡರಲ್ಲಿಯೂ ಸ್ವಂತಿಕೆಯನ್ನು ಬೆಳೆಸಿಕೊಂಡ ಉನ್ನತ ವಿಚಾರ ಆಚಾರಗಳನ್ನು ಬೆಳೆಇಸಿಕೊಂಡ ಕಲಾವಿದ. ಶರಣ ಸಂಪ್ರದಾಯದಲ್ಲಿ ತಮ್ಮ ಬದಕು ರೂಪಿಸಿಕೊಂಡ ಸರಳ ಬದಕನ್ನು ನಡೆಸುತ್ತಿರುವ ಕಲಾವಿದ ಇವರಾಗಿದ್ದಾರೆ.

ತೈಲ ವರ್ಣದ ಮಾಧ್ಯಮಕ್ಕಿಂತ ಜಲ ವರ್ಣದಲ್ಲಿ ಪ್ರಭುತ್ವ ಪಡೆದುಕೊಂಡ ಇವರು ಸಂಯೋಜನೆಗಳಿಗಿಂತ ಭೂ ದೃಶ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಜಲವರ್ಣದಲ್ಲಿ ಇವರು ವಿಶೇಷ ಆಸಕ್ತಿಯಿಂದ ರಚಿಸಿದ ನಿಸರ್ಗ ಚಿತ್ರಗಳನ್ನು ಕಾಣಬಹುದು. ನೆರಳು ಬೆಳಕುಗಳ ಚೆಲ್ಲಾಟ, ಲಾಲಿತ್ಯ ಪೂರ್ಣ ಸಂಯೋಜನೆ, ವರ್ಣವೈಖರಿಗಳನ್ನು ನೋಡಿಯೇ ಆನಂದಿಸಬೇಕು. ಸಾಮಾನ್ಯ ಹಾಗೂ ಕಲಾ ರಸಿಕರೀರ್ವರಿಗೂ ಮುದನೀಡುವ ಇವರ ಲ್ಯಾಂಡ್ ಸ್ಕೇಪಗಳಲ್ಲಿ ಅಪಾರ ಆಕರ್ಷಣೆ ಇದೆ. ಮತ್ತೆ ಮತ್ತೆ ನೋಡಬೇಕೆನ್ನುವ ಹಂಬಲ ಉಂಟಾಗುತ್ತದೆ. ಗುಡಿ ಗುಂಡಾರಗಳೇ ಮೊದಲಾದ ಐತಿಹಾಸಿಕ ಸ್ಮಾರಕಗಳು ಇವರಿಗೆ ಅಚ್ಚು ಮೆಚ್ಚು. ಮುಂಜಾನೆಯ ಅಥವಾ ಮಧ್ಯಾಹ್ನದ ಬಿಸಿಲಿನಲ್ಲಿ ನೆರಳು ಬೆಳಕುಗಳನ್ನು ಹಿಡಿಯುವಲ್ಲಿ ಬಣ್ಣಗಳ ಜೊತೆ ಯಥೇಚ್ಚವಾಗಿ ಚೆಲ್ಲಾಟ ಆಡಿದ್ದನ್ನು ಅವರ ಕೃತಿಗಳು ಸಾರುತ್ತವೆ. ಹಳ್ಳಿಯ ದೃಶ್ಯಗಳು, ಹಂಪಿ, ಐಹೊಳೆ, ಪಟ್ಟದಕಲ್ಲು, ಮತ್ತು ವಿಜಾಪುರದ ಇಮಾರತುಗಳ ಅಸಂಖ್ಯ ಚಿತ್ರಗಳ ಸಂಗ್ರಹವೇ ಅವರಲ್ಲಿದೆ. ಗೋಲಗುಂಬಜ ಎಂದರೆ ಇವರಿಗೆ ಎಲ್ಲಿಲ್ಲದ ಪ್ರೀತಿ. ಅನೇಕ ಕೋನಗಳಿಂದ ಸೆರೆಹಿಡಿದ ವಿಭಿನ್ನ ವರ್ಣ



ವಿ. ವಿ. ಹಿರೇಮಠ



ನಿಸರ್ಗ ಚಿತ್ರಣ. ಹಂಪಿ

ಸಂಯೋಜನೆಯ ಹಲವು ಚಿತ್ರಗಳನ್ನು ಸೃಷ್ಟಿಸಿದ್ದರೂ ಆ ಗುಮ್ಮಟ ಕುರಿತು ಇವರಿಗಿರುವ ಮೋಹ ಚಿರನೂತನ. ಇವರ ಸಂಯೋಜನೆಗಳು ಸರಳ ಹಾಗೂ ಸುಂದರ, ನಿಸರ್ಗ ಪ್ರಿಯರಾದ ಇವರು ಸಂಗೀತ ಪ್ರಿಯರೂ ಹೌದು. ರಾಜ್ಯ ಹಾಗೂ ಕೇಂದ್ರ ಲಲಿತ ಕಲಾ ಅಕಾಡೆಮಿಗಳ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ೧೯೮೪ ರಲ್ಲಿ ಐಹೊಳೆಯಲ್ಲಿ ನಡೆದ ಕಲಾ ಶಿಬಿರ, ೯೩ ರಲ್ಲಿ ತುಮಕೂರಿನ ಗ್ರಾಫಿಕ ಶಿಬಿರ, ೯೪ ರಲ್ಲಿ ಬಿಜಾಪುರದಲ್ಲಿ ನಡೆದ ಅಖಿಲ ಭಾರತ ಕಲಾವಿದರ ಶಿಬಿರ, ೯೬ ರಲ್ಲಿ ಗದಗ ಅಲ್ಲದೇ ಲಲಿತ ಕಲಾ ಅಕಾಡೆಮಿ ಬೆಂಗಳೂರು. ಗಣಕ ಯಂತ್ರ ಮುದ್ರಣ ಕಲಾ ಶಿಬಿರ ಹೀಗೆ ಹಲವಾರು ಶಿಬಿರಗಳಲ್ಲಿ ಭಾಗವಹಿಸಿ ಅನುಭವ ಪಡೆದಿದ್ದಾರೆ.

ಇವರ ಕಲಾಕೃತಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಕೇಂದ್ರ ಲಲಿತ ಕಲಾ ಅಕಾಡೆಮೆ ದೆಹಲಿ ಹಾಗೂ ಕೆನಡಾದ ಕೆಲವು ಸಂಗ್ರಹಗಳಲ್ಲಿವೆ. ಪ್ರಸ್ತುತ ಇವರು ೧೯೮೬ ರಿಂದ ಬಿ. ಎಲ್. ಡಿ. ಇ. ಸಂಸ್ಥೆಯ ಶ್ರೀ ಸಿದ್ದೇಶ್ವರ ಕಲಾ ಮಂದಿರದಲ್ಲಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತ ವಿದ್ಯಾರ್ಥಿಗಳ ಕಲಾಸಕ್ತಿಯ ವಿಕಸನವನ್ನು ಪೋಷಿಸುತ್ತಿದ್ದಾರೆ.

ಶ್ರೀ ಜಿ. ಎಸ್. ಬೂಸಗೊಂಡ:

ವಿಜಾಪುರ ಜಿಲ್ಲೆಯ ತಿಕೋಟಾ ಗ್ರಾಮದಲ್ಲಿ ೨೨ ಜುಲೈ ೧೯೫೫ ರಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಗದಿಗೆಪ್ಪ. ಎಸ್. ಬೂಸಗೊಂಡ ಇವರು ಪ್ರಾಥಮಿಕ ಶಿಕ್ಷಣ ತಿಕೋಟಾ ಗ್ರಾಮದಲ್ಲಿಯೇ ಮುಗಿಸಿದರು. ಜಿ. ಎಸ್. ಬೂಸಗೊಂಡ ರವರು ಚಿಕ್ಕವರಿದ್ದಾಗಿನಿಂದಲೂ ಹಳ್ಳಿಯ ವಾತಾವರಣದಲ್ಲಿಯೇ ತಂದೆ ತಾಯಿಯವರೊಂದಿಗೆ ಬೆಳೆದವರಾಗಿರುವುದರಿಂದ ತುಂಬಾ ಸೌಮ್ಯ ಸ್ವಭಾವದವರು ಮತ್ತು ಜಿ. ಎಸ್. ಬೂಸಗೊಂಡ ರವರು ಯೋಗಾ ಪರಿಣಿತರು. ಪ್ರಾಥಮಿಕ ಶಿಕ್ಷಣ ಮುಗಿದ ನಂತರ ಚಿತ್ರ ಕಲಾ ಶಿಕ್ಷಣದ ಮೇಲೆ ಒಲವು ತೋರಿಸಿ, ಗದುಗಿನ ವಿಜಯ ಕಲಾ ಮಂದಿರದಲ್ಲಿ ಡಿ. ಟಿ. ಸಿ. ಜಿ. ಡಿ (ಪೇಂಟಿಂಗ್ ಮತ್ತು ಮಾಡೆಲಿಂಗ್) ಆರ್ಟ ಮಾಸ್ಟರ ಡಿಪ್ಲೊಮಾ ಕಲಾ ಶಿಕ್ಷಣವನ್ನು ಮುಗಿಸಿದ್ದರು.

ಜಿ. ಎಸ್. ಬೂಸಗೊಂಡ ರವರು ಎಲ್ಲ ಮಾಧ್ಯಮದಲ್ಲೂ ಕಲಾ ಕೃತಿಗಳನ್ನು ರಚಿಸಿದ್ದಾರೆ. ಹೆಚ್ಚಾಗಿ ಇವರ ಕಲಾಕೃತಿಗಳಲ್ಲಿ ನಿಸರ್ಗ ಚಿತ್ರಗಳನ್ನು ನಾವು ಕಾಣಬಹುದು. ಚಿಕ್ಕ

ವಯಸ್ಸಿನಲ್ಲಿದಾಗಿನ ಹಳ್ಳಿಯ ಕೆಲ ಘಟನೆಗಳನ್ನು ಅವರು ನೆನೆಪಿಸಿಕೊಂಡು ಕಲಾಕೃತಿಗಳನ್ನು ರಚಿಸಿದ್ದಾರೆ. ಕಲಾ ಶಿಕ್ಷಣ ಮುಗಿಸಿದ ನಂತರ ಕಲಾ ಶಿಕ್ಷಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಜಿ. ಎಸ್. ಬೂಸಗೂಂಡ ರವರು ಶಿಕ್ಷಕರಾಗಿದ್ದುಕೊಂಡೆ ಚಿತ್ರಕಲಾ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಿದ್ದಾರೆ.

ಶ್ರೀ ಜಿ. ಎಸ್. ಬೂಸಗೂಂಡ ರವರು ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳನ್ನು ಸಾಕಷ್ಟು ಮಾಡಿದ್ದಾರೆ. ಅದರಲ್ಲಿ ಕೆಲವನ್ನು ಮಾತ್ರ ವಿವರಿಸಬಹುದು. ಧಾರವಾಡದಲ್ಲಿ ೧೯೮೧ ರಲ್ಲಿ ಕಲಾ ಪ್ರದರ್ಶನ, ಕೋಲ್ಹಾರ ಜಿಲ್ಲೆಯ ಯಾನಿಗಡೇಳ ೧೯೮೭ ಮತ್ತು ೧೯೮೮ ಕಲಾ ಪ್ರದರ್ಶನ ಇವು ಅವರ ಬಹುಮುಖ್ಯ ಕಲಾ ಪ್ರದರ್ಶನಗಳು.

ಗುಂಪು ಪ್ರದರ್ಶನಗಳು ಗದಗ, ಧಾರವಾಡ, ಬಿಜಾಪುರ, ಬೆಂಗಳೂರು, ಮಂಗಳೂರು, ಸಿಂದಗಿ, ಹಾಸನ, ಮೈಸೂರು ಮತ್ತು ಗುಲಬುರ್ಗಾ ಜಿಲ್ಲೆಗಳಲ್ಲಿ ಇವರು ತಮ್ಮ ಸ್ನೇಹಿತರೊಂದಿಗೆ ಮತ್ತು ಹಿರಿಯ ಕಲಾವಿದರುಗಳೊಂದಿಗೆ ಸೇರಿ ಚಿತ್ರ ಕಲಾ ಕೃತಿಗಳನ್ನು ಇವರು ಪ್ರದರ್ಶಿಸಿದ್ದಾರೆ.

ಶ್ರೀ ಜಿ. ಎಸ್. ಬೂಸಗೂಂಡ . ರವರು ಭಾಗವಹಿಸಿರುವ ಕಲಾಕೃತಿಗಳ ಮಾಹಿತಿ ಇವರು ೧೯೯೧ ರಲ್ಲಿ ಭಾರತದ ಡ್ರಾಯಿಂಗ ಟೀಚರ್ ಸಮ್ಮೇಳನ ಬೆಂಗಳೂರು, ೧೯೯೪ ರಲ್ಲಿ ಭಾರತದ ಡ್ರಾಯಿಂಗ ಟೀಚರ್ ಸಮ್ಮೇಳನ ಮಂಗಳೂರು, ೧೯೯೫ ರಲ್ಲಿ ಬಿಜಾಪುರ ಮತ್ತು ಬಾಗಲಕೋಟೆಯಲ್ಲಿ ಡ್ರಾಯಿಂಗ ಮತ್ತು ಕರಕುಶಲ ಶಿಕ್ಷಕರ ಸಮ್ಮೇಳನ, ಬಿಜಾಪುರದಲ್ಲಿ ಉಡುಪಿ ಜಿಲ್ಲೆಯವರು ನಡೆಸಿದ ಕಲಾಕೃತಿಗಳ ಪ್ರದರ್ಶನ ಮತ್ತು ಕಲಾ ಗ್ರಂಥಕರ್ತ ಸಮ್ಮೇಳನ, ೬೮ನೆಯ ಅಖಿಲ ಭಾರತ ಕನ್ನಡ ಸಮ್ಮೇಳನ ಬಾಗಲಕೋಟೆ, ವಿಚಾರ ಸಂಕೀರ್ಣ ಕನ್ನಡ ಭವನ ಬೆಂಗಳೂರು, ರಾಜ್ಯ ಮಟ್ಟದ ಡ್ರಾಯಿಂಗ ಟೀಚರ್ ಸಮ್ಮೇಳನ ಹಾಸನ, ರಾಷ್ಟ್ರ ಮಟ್ಟದ ನವರಸಪುರ ಸಮಾರಂಭ ಬಾಗಲಕೋಟೆ ಮತ್ತು ವಿಜಾಪುರದಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ.

ಶ್ರೀ ಜಿ. ಎಸ್. .ಬೂಸಗೂಂಡ, ರವರು ಅನೇಕ ಕಡೆಗಳಲ್ಲಿ ಕಲಾ ಶಿಬಿರಗಳಿಗೆ ಭಾಗವಹಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯವರು ನಡೆಸಿದ ಕಲಾ ಶಿಬಿರ ವಿಜಾಪುರದಲ್ಲಿ, ಮತ್ತು ಬಿ.ಡಿ.ಡಿ. & ಸಿ. ಟಿ. ಸಂಸ್ಥೆಯವರು ನಡೆಸಿದ ಶಿಬಿರ ವಿಜಾಪುರ



ಜಿ.ಎಸ್ ಬೂಸಗೊಂಡ



ನಿಸರ್ಗ ಚಿತ್ರಕಲೆ

ರಾಷ್ಟ್ರ ಮಟ್ಟದ ಕಲಾವಿದರ ಶಿಬಿರವನ್ನು ಬಾದಾಮಿ ಬನಶಂಕರಿಯಲ್ಲಿ ನಡೆಸಿದ ಕಲಾ ಶಿಬಿರಗಳಲ್ಲಿ ಇವರು ಭಾಗವಹಿಸಿ ಮತ್ತು ಕಲೆಯ ನೈಪುಣ್ಯತೆಯನ್ನು ತೋರಿಸಿದ್ದಾರೆ.

ಶ್ರೀ ಜಿ. ಎಸ್. ಬೂಸಗೊಂಡ ರವರು ಪಡೆದ ಪ್ರಶಸ್ತಿಗಳು ೧೯೮೬ ಮತ್ತು ೧೯೮೮ ರಲ್ಲಿ ಆದರ್ಶ ಚಿತ್ರಕಲಾ ಶಿಕ್ಷಕರು ಎಂದು ಪ್ರಶಸ್ತಿಯನ್ನು ಗಳಿಸಿಕೊಂಡಿದ್ದಾರೆ. ೧೯೯೨ ರಲ್ಲಿ ಬೆಸ್ಟ್ ಟೀಚರ್ ಪ್ರಶಸ್ತಿ, ೧೯೯೩ ರಲ್ಲಿ ಉತ್ತಮ ಬರಹಗಾರ ಪ್ರಶಸ್ತಿ, ೧೯೯೪ ರಲ್ಲಿ ಉತ್ತಮ ಯೋಗಾ ಶಿಕ್ಷಕರು ಎಂದು ಮತ್ತು ೧೯೯೪ ರಲ್ಲಿ ಉತ್ತಮ ಡ್ರಾಯಿಂಗ್ ಟೀಚರ್ ಪ್ರಶಸ್ತಿ , ೧೯೯೮ ಮತ್ತು ೧೯೯೯ ಉತ್ತಮ ಕಲಾ ಶಿಕ್ಷಕರ ಪ್ರಶಸ್ತಿಯನ್ನು ಗಳಿಸಿಕೊಂಡ ಹೆಗ್ಗಳಿಕೆ ಇವರಿಗೆ ಇದೆ.

ಶ್ರೀ ವಿಧ್ಯಾದರ ಸಾಲಿ :

ವಿಜಾಪುರ ಜಿಲ್ಲೆಯ ಕಲಾಕ್ಷೇತ್ರದಲ್ಲಿ ನವ್ಯ ಪ್ರಯೋಗಗಳನ್ನು ಮಾಡುತ್ತಿರುವ ಕೆಲವೇ ಕಲಾವಿದರಲ್ಲಿ ವಿಧ್ಯಾದರ ಸಾಲಿಯವರು ಒಬ್ಬರಾಗಿದ್ದಾರೆ. ರಾಜ್ಯದ ಹಿರಿಯ ಕಲಾವಿದರು ಕರ್ನಾಟಕ ಲಲಿತಾ ಅಕಾಡಮಿಯ ಮಾಜಿ ಅಧ್ಯಕ್ಷರು ಆದಂತಹ ಸೋಮಶೇಖರ ಸಾಲಿಯವರ ತೃತೀಯ ಪುತ್ರರಾಗಿ ೧೯೫೮ ರಲ್ಲಿ ಬಾಗಲಕೋಟೆಯಲ್ಲಿ ಜನಿಸಿದರು. ದಾವಣಗೆರೆಯ ಲಲಿತಾ ಕಲಾ ಮಹಾವಿದ್ಯಾಲಯದಲ್ಲಿ ವಾಣಿಜ್ಯ ಕಲೆಯ ಡಿಪ್ಲೋಮಾ ಪಡೆದುಕೊಂಡರು. ನಂತರ ಒಂದು ವರ್ಷದವರೆಗೆ ಬೆಂಗಳೂರಿನ ಜಾಹೀರಾತು ಸಂಸ್ಥೆಯಲ್ಲಿ ಕೆಲಸ ಮಾಡಿದರು. ೧೯೮೦ ರಿಂದ ವಿಜಾಪುರದ ಶ್ರೀ ಸಿದ್ದೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ವೃತ್ತಿ ಶಿಕ್ಷಣ ವಿಭಾಗದಲ್ಲಿ ಶಿಕ್ಷಕರಾಗಿ ಸೇರಿಕೊಂಡರು. ಇವರು ಭೋದಿಸುವದು ವಾಣಿಜ್ಯ ಕಲೆಯಾದರೂ ತಮ್ಮೊಳಗಿನ ಲಲಿತ ಕಲೆಯ ತುಡಿತವನ್ನು ಹೊರಹಾಕುವಲ್ಲಿ ಹಲವಾರು ಕಲಾಕೃತಿಗಳನ್ನು ರಚನೆ ಮಾಡಿ ಬೇರೆ ಬೇರೆ ಕಡೆಗೆ ಪ್ರದರ್ಶನ ಮಾಡಿದ್ದಾರೆ.

ಸಾಲಿಯವರು ಜಲವರ್ಣ, ತೈಲವರ್ಣ, ಆಕ್ರಾಲಿಕ್, ಪೇಸ್ಟೆಲ್, ಇಂಕ, ಮುಂತಾದ ಮಾಧ್ಯಮಗಳಲ್ಲಿ ಕೃತಿ ರಚನೆ ಮಾಡುತ್ತಾರೆ. ತಂದೆಯಂತೆ ಚಿತ್ರಕಲೆ ಮತ್ತು ಸಾಹಿತ್ಯಗಳಲ್ಲಿ ಆಸಕ್ತಿ ಇರುವಂತೆಯೇ ಅದರ ಜೊತೆಗೆ ಸಂಗೀತ, ನಾಟಕ, ರಂಗ ಸಜ್ಜಿಕೆ, ಕಾವ್ಯ ರಚನೆಗಳಲ್ಲಿ ಪರಿಶ್ರಮ ಹೊಂದಿದ್ದಾರೆ. ಸಾಲಿಯವರು ಮುಂದೆ ಗುಲಬುರ್ಗಾ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ಪಡೆದರು.

ಇವರ ಕಲಾಕೃತಿಗಳ ಪ್ರದರ್ಶನವು ಅನೇಕ ಸ್ಥಳಗಳಲ್ಲಿ ಏರ್ಪಟ್ಟಿದೆ. ಬಾಗಲಕೋಟೆ, ಬಿಜಾಪುರ, ಭೂಪಾಲಗಳಲ್ಲಿ ಏಕವ್ಯಕ್ತಿ ಪ್ರದರ್ಶನಗಳು ನಡೆದಿದ್ದರೆ, ಸಮೂಹ ಕಲಾ ಪ್ರದರ್ಶನಗಳು ಬಾಗಲಕೋಟೆ, ಕೂಡಲಸಂಗಮ, ಮತ್ತು ಬೆಂಗಳೂರುಗಳಲ್ಲಿ ನಡೆದಿವೆ. ಇವು ರಾಜ್ಯ ಮಟ್ಟದ ಪ್ರದರ್ಶನಗಳಾದರೆ ರಾಷ್ಟ್ರ ಮಟ್ಟದಲ್ಲಿ ಕಲಕತ್ತಾ, ದೆಹಲಿ, ಮದ್ರಾಸಗಳಲ್ಲಿ ಇವರ ಕೃತಿಗಳು ಪ್ರದರ್ಶನಗೊಂಡಿವೆ. ವಿಧ್ಯಾದರ ಸಾಲಿಯವರು ಹಲವಾರು ಕಲಾ ಶಿಬಿರಗಳಲ್ಲಿ ಭಾಗವಹಿಸಿ, ಕೃತಿ ರಚನೆ ಮಾಡಿದ್ದಾರೆ. ವಿಶ್ವ ಕನ್ನಡ ಸಮ್ಮೇಳನ ಮೈಸೂರು, ನಾಲ್ಕನೆಯ ಕಲಾ ಮೇಳ ಬೆಂಗಳೂರು, ಜನಸಂಖ್ಯಾ ನಿಯಂತ್ರಣದ ಅಂಗವಾಗಿ ಧಾರವಾಡದಲ್ಲಿ ನಡೆದ ಕ್ಯಾಂಪ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಶಿಬಿರ ತುಮಕೂರ, ಯುವ ಚಿತ್ರಕಲಾವಿದರ ಶಿಬಿರ ಬಿಜಾಪುರ, ಗುಲಬುರ್ಗಾದ ಕಲಾ ಉತ್ಸವ, ಇನ್ನು ಅನೇಕ ಕಲಾ ಶಿಬಿರಗಳಲ್ಲಿ ಇವರು ಭಾಗವಹಿಸಿದ್ದಾರೆ. ಇದಲ್ಲದೆ ಇವರ ಕವಿತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು, ಆಕಾಶವಾಣಿಯಲ್ಲಿ ಬಿತ್ತರಗೊಂಡಿವೆ. ನಾಟಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಇವರು ಹಲವಾರು ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಾಲಿಯವರು ಕಲಾಪ್ರತಿಭೆಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳು, ಮಾನ ಸನ್ಮಾನಗಳು, ಲಭಿಸಿವೆ. ದಾವಣಗೆರೆ ಕಾಲೇಜಿನಲ್ಲಿ, ಬೆಳಗಾಂವಿಯಲ್ಲಿ ನಡೆದ ರಾಜ್ಯ ಮಟ್ಟದ ಪೋಟ್ರೇಟ್ ಪಿಕ್ಚರ ಕ್ಯಾಂಪ್‌ನಲ್ಲಿ, ಕನ್ನಡ ಸಂಸ್ಕೃತಿ ಇಲಾಖೆ ಬಿಜಾಪುರದಲ್ಲಿ, ಬೆಂಗಳೂರಿನ ಡಾ. ರಾಧಾಕೃಷ್ಣ ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಇವರು ತಮ್ಮ ಕಲೆ, ಕಲಾಕೃತಿ ಮತ್ತು ಕಲಾ ಚಟುವಟಿಕೆಗಳ ಮೂಲಕ ಬಿಜಾಪುರ ಜಿಲ್ಲೆಯ ಚಿತ್ರಕಲಾ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡುತ್ತಲಿದ್ದಾರೆ.

ವಿಜಾಪುರ ಜಿಲ್ಲೆಯ ಕಲಾವಿದರ ಕೃತಿಗಳನ್ನು ಗಮನಿಸಿದಾಗ ಹಲವಾರು ಸಂಗತಿಗಳು ತಿಳಿದುಬರುತ್ತವೆ. ಅವುಗಳನ್ನು ಸ್ಥೂಲವಾಗಿ ಈ ಕೆಳಗಿನಂತೆ ವಿವೇಚಿಸಬಹುದು. ಹಿರಿಯ ತಲೆಮಾರಿನ ಕಲಾವಿದರು ಹೆಚ್ಚಾಗಿ ಆಕಾಡೆಮಿಕ್ ಶೈಲಿಯಲ್ಲಿ ಚಿತ್ರ ರಚನೆ ಮಾಡಿದರೆ ಯುವ ಕಲಾವಿದರು ಸಮಕಾಲೀನ ಸಂದರ್ಭದ ಇತಿಮಿತಿಗಳನ್ನು ಅರಿತುಕೊಂಡು ನವ್ಯ ಶೈಲಿಯಲ್ಲಿ ಕೃತಿ ರಚನೆ ಮಾಡುತ್ತಲಿದ್ದಾರೆ. ಎಮ್. ವಿ. ಮಿಣಜಗಿಯವರು ಮುಂಬೈನಲ್ಲಿ ಕಲಿತರು ಸಹಿತ ಬಂಗಾಲ ಕಲಾ ಶೈಲಿಯ ವಾಶ್ ಮೆಥೆಡ್‌ನ್ನು ಅನುಸರಿಸಿರುವದು ಕಂಡುಬರುತ್ತದೆ. ಅವರ ರಾಗಮಾಲಾ ಚಿತ್ರಗಳು ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ. ಇದಲ್ಲದೆ ಇವರು

ಋತುಗಳ ಸಂಬಂಧವಾಗಿರುವ ಚಿತ್ರಗಳನ್ನು ರಚಿಸಿರುವದು, ಇವರ ಕಲಾ ಬದುಕಿನ ವಿಶಿಷ್ಟ ಕೊಡುಗೆಗಳಲ್ಲೊಂದಾಗಿದೆ. ಮಿಣಜಗಿಯವರು ಕಲಾಶಾಲೆಯನ್ನು ಸ್ಥಾಪಿಸುವ ಜೊತೆಗೆ ಕಲಾಕೃತಿಯನ್ನು ರಚಿಸುವ ಕ್ರಿಯೆಯನ್ನು ಮುಂದುವರೆಸಿಕೊಂಡು ಹೋಗಿರುವದು ತಿಳಿದುಬರುತ್ತದೆ. ಇವರ ಜಲವರ್ಣ ಚಿತ್ರಗಳು ಅದ್ಭುತವಾಗಿದ್ದು, ದಕ್ಷಿಣ ಭಾರತದ ಡಖ್ಖನಿ ಶೈಲಿಯಿಂದ ಪ್ರಭಾವಿತಗೊಂಡಿದ್ದನ್ನು ಗಮನಿಸಬಹುದಾಗಿದೆ.

ಮತ್ತೊಬ್ಬ ಹಿರಿಯ ಕಲಾವಿದರಾದ ಎಮ್. ಬಿ. ಪಾಟೀಲರವರು ಜಲವರ್ಣ ಮತ್ತು ತೈಲವರ್ಣ ಚಿತ್ರ ರಚನೆಯಲ್ಲಿ ಸಿದ್ಧಹಸ್ತರಾಗಿದ್ದು, ಭಾವ ಚಿತ್ರ ರಚನೆಯಲ್ಲಿ ಹೆಸರು ಗಳಿಸಿದ್ದಾರೆ. ಇವರ ಹಳ್ಳಿ ಬದುಕಿನ ಸಂಯೋಜನಾ ಚಿತ್ರಗಳು ಜನರ ಮನಸ್ಸಿನ ಪ್ರತಿಬಿಂಬವೆಂಬತೆ ಮೂಡಿಬಂದಿವೆ. ಇವರ ಕಲಾಕೃತಿಗಳಲ್ಲಿ ಆಕಾಡೆಮಿಕ್ ಶೈಲಿಯ ಜೊತೆಗೆ ನವ್ಯ ಶೈಲಿಯು ಬೆರೆತುಕೊಂಡಿರುವದು ಕಂಡುಬರುತ್ತದೆ. ಆಧುನಿಕ ಸ್ಪರ್ಷವನ್ನು ಕಲಾಕೃತಿಯಲ್ಲಿ ತಂದರು ಸಹಿತ ಅದರ ಹಿನ್ನೆಲೆಯಾಗಿ ಪರಂಪರೆ ಬಗೆಗಿನ ಕಾಳಜಿಯ ರೂಪವಾಗಿ ನಮ್ಮ ಜನಪದ ಶೈಲಿಯ ಪ್ರತಿಬಿಂಬವು ಇವರ ಕೃತಿಗಳಲ್ಲಿ ಕಂಡುಬರುತ್ತದೆ.

ಬಿಜಾಪುರ ಜಿಲ್ಲೆಯ ಮತ್ತೋರ್ವ ಹಿರಿಯ ಕಲಾವಿದರಾದ ಎಮ್. ಎಸ್. ಜತ್ತಿಯವರು ಸಂಯೋಜನಾ ಚಿತ್ರಗಳಲ್ಲಿ ಪ್ರಸಿದ್ಧರಾಗಿದ್ದು, ಜಲವರ್ಣವನ್ನು ಹೆಚ್ಚಾಗಿ ಇಷ್ಟಪಟ್ಟವರಾಗಿದ್ದಾರೆ. ನಿಸರ್ಗ ಚಿತ್ರವಾಗಲಿ, ಸ್ಥಿರ ಚಿತ್ರವಾಗಲಿ, ಸಂಯೋಜನಾ ಚಿತ್ರವಾಗಲಿ, ಇವರ ವಿಶಿಷ್ಟ ಶೈಲಿಯು ಕೃತಿಗಳಲ್ಲಿ ಗೋಚರಿಸುತ್ತದೆ. ಆಕಾರಗಳನ್ನು ತೆಳುವಾಗಿ ರಚಿಸುವ ಇವರು ವರ್ಣ ಲೇಪನವನ್ನು ಕಣ್ಣಿಗೆ ಹಿತವಾಗುವಂತೆ ಲೇಪಿಸುತ್ತಾರೆ. ನೆರಳು ಬೆಳಕಿನ ಕಡಿಮೆ ವಿನ್ಯಾಸದಿಂದ ಕೂಡಿರುವ ಇವರ ಕೃತಿಗಳು ರೇಖಾ ಪ್ರಧಾನವಾಗಿರುತ್ತವೆ.

ಮೈಸೂರಿನ ಚಾಮರಾಜೇಂದ್ರ ದೃಶ್ಯ ಕಲಾ ಆಕಾಡೆಮಿಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿದ ಹಿರಿಯ ಕಲಾವಿದ ವಿ. ಎಂ. ಶೋಲಾಪುರಕರ್, ನವ್ಯ ಶೈಲಿಯ ಅದ್ವಿತೀಯ ಕಲಾವಿದರಾಗಿದ್ದಾರೆ. ಆಕಾಡೆಮಿಕ್ ಶೈಲಿಯಲ್ಲಿ ಕಲಾ ಶಿಕ್ಷಣವನ್ನು ಪಡೆದುಕೊಂಡರು ಸಹಿತ ಆಧುನಿಕ ಶೈಲಿಯನ್ನು ತಮ್ಮ ಕೃತಿಗಳಲ್ಲಿ ಅಳವಡಿಸಿಕೊಂಡ ಇವರ ಕೃತಿಗಳು ಸಮಕಾಲೀನ ಬದುಕಿನ ತಲ್ಲಣಗಳನ್ನು ಹೊರಹಾಕುವಲ್ಲಿ ಯಶಸ್ವಿಯಾಗಿವೆ. ಹೆಚ್ಚು ಆಧುನಿಕತೆಯಿಂದ ಕೂಡಿದ ಇವರ ಕೃತಿಗಳು ಅಮೂರ್ತ ಶೈಲಿಯಲ್ಲಿ ರಚನೆಯಾಗಿವೆ.

ಇವರ ಕೃತಿಗಳಲ್ಲಿ ಹೆಚ್ಚಾಗಿ ತೈಲವರ್ಣದ ಲೇಪನವು ಕಂಡುಬರುತ್ತದೆ. ಇವರು ಸಂಯೋಜನಾ ಚಿತ್ರಗಳು, ಸ್ಥಿರ ಚಿತ್ರಗಳು, ನಿಸರ್ಗ ದೃಶ್ಯಗಳು, ಸಮುದ್ರ ದೃಶ್ಯಗಳು, ಇನ್ನೇ ಕಲಾಕೃತಿಗಳು ಬಹುಮುಖ್ಯವಾಗಿ ಇವರ ಕಲಾ ಬದುಕನ್ನು ಪ್ರತಿಬಿಂಬಿಸಿದರು ಸಹಿತ ಇವರ ಮೂರ್ತಿ ಶಿಲ್ಪಗಳನ್ನು ಕಡೆಗಣಿಸುವಂತಿಲ್ಲ. ಮೂರ್ತಿ ಶಿಲ್ಪಗಳಲ್ಲಿ ಆಧುನಿಕ ಮನೋಭಾವವು ತುಂಬಿಕೊಂಡು ಕರ್ನಾಟಕದ ಯುವ ಪೀಳಿಗಿಗೆ ಮಾರ್ಗದರ್ಶನದಂತೆ ಇವು ಕಂಡುಬರುತ್ತವೆ.

ವಿಶ್ವನಾಥ ಬುರ್ಹಾನಪುರ್ ಅವರು ಅಂಗವಿಕಲ ಕಲಾವಿದರಾಗಿದ್ದು, ಚಿತ್ರಕಲೆಯ ಪ್ರಕಾರಗಳಲ್ಲಿ ಚುಕ್ಕೆ ಚಿತ್ರ ಪ್ರಕಾರವನ್ನು ಆಯ್ದುಕೊಂಡಿದ್ದಾರೆ. ಈ ವಿಧಾನದಲ್ಲಿ ಚಿತ್ರ ರಚನೆ ಮಾಡುವುದು ಹೆಚ್ಚು ಶ್ರಮ ಮತ್ತು ಶಾಂತತೆ ವಾತಾವರಣವನ್ನು ಬಯಸುವದಾಗಿದ್ದು, ಅದು ಪ್ರಕೃತಿದತ್ತವಾಗಿ ಇವರಿಗೆ ಒಲಿದು ಬಂದಿತ್ತು. ಇವರ ಕೃತಿಗಳಲ್ಲಿ ದೇಶದ ಮಹಾನ್ ಸ್ವತಂತ್ರ ಹೋರಾಟಗಾರರು, ಪ್ರಧಾನ ಮಂತ್ರಿಗಳು ಸಮಾಜ ಸೇವಕರು, ಕವಿಗಳು, ಇನ್ನಿತರ ಗಣ್ಯವ್ಯಕ್ತಿಗಳು ಮೂಡಿಬಂದಿದ್ದಾರೆ. ವರ್ಣ ರಹಿತವಾದ ಇವರ ಚುಕ್ಕೆ ಚಿತ್ರಗಳು ನೋಡುವರಿಗೆ ಹೊಸ ಅನುಭವವನ್ನು ತಂದುಕೊಡುತ್ತವೆ.

ವಿಜಾಪುರದ ಮತ್ತೋರ್ವ ಪ್ರಸಿದ್ಧ ಕಲಾವಿದರಾದ ಸಿ. ಬಿ. ಕಾಚಾಪುರವರು ಸಿದ್ದೇಶ್ವರ ಕಲಾ ಮಂದಿರವನ್ನು ಬೆಳೆಸುವದರ ಜೊತೆಗೆ ಕಲಾಕೃತಿಗಳನ್ನು ರಚನೆ ಮಾಡುತ್ತಾ ತಮ್ಮ ಕಲಾ ಬದುಕನ್ನು ರೂಪಿಸಿಕೊಂಡವರಾಗಿದ್ದಾರೆ. ಇವರ ಕೃತಿಗಳಲ್ಲಿ ಪರಂಪರೆಯ ಜೊತೆಗೆ ಆಧುನಿಕತೆಯ ಮೆರಗು ಕಂಡುಬರುತ್ತದೆ. ಉತ್ತಮ ರೇಖಾ ಚಿತ್ರಗಳನ್ನು ರಚಿಸಬಲ್ಲ ಇವರು ಇತ್ತೀಚೆಗೆ ಸೃಜನಶೀಲ ಸಂಯೋಜನೆಗಳನ್ನು ರೂಪಿಸುತ್ತಿದ್ದಾರೆ. ಜಲವರ್ಣ ತೈಲವರ್ಣ ಮತ್ತು ಅಕ್ರ್ಯಾಲಿಕ್ ಮಾಧ್ಯಮಗಳಲ್ಲಿ ಮಾತ್ರವಲ್ಲದೆ ಮಿಶ್ರ ಮಾಧ್ಯಮದಲ್ಲಿ ಇವರು ಕೃತಿ ರಚಿಸುತ್ತಾರೆ.

ಯುವ ಕಲಾವಿದರಲ್ಲಿ ರಾಜ್ಯದಲ್ಲಿ ಹೆಸರು ಮಾಡಿರುವ ಪಿ. ಎಸ್. ಕಡೇಮನಿಯವರು ಸಂಪ್ರದಾಯದೊಂದಿಗೆ ಆಧುನಿಕತೆಯನ್ನು ಮೇಳೈಯಿಸಿಕೊಂಡು ಕೃತಿ ರಚನೆ ಮಾಡುವ ಕಲಾವಿದರಾಗಿದ್ದಾರೆ. ಆಕಾರಗಳಲ್ಲಿ ಸ್ಪಷ್ಟತೆ, ಬಣ್ಣ ಲೇಪನದಲ್ಲಿ ಪ್ರಖರತೆ, ರೇಖಾ ವಿನ್ಯಾಸದಲ್ಲಿ ಜೀವಂತಿಕೆ ಇವರ ಕೃತಿಗಳಲ್ಲಿ ಕಂಡುಬರುವ ಪ್ರಮುಖ ಅಂಶಗಳಾಗಿವೆ. ಇವರ ಕೃತಿಗಳು ಪರಂಪರೆಯನ್ನು ಬಿಂಬಿಸುವ ದಾರಿದೀಪದಂತೆ ಮಾದರಿಯ ಕಲಾಕೃತಿಗಳಾಗಿ ಕಂಡುಬರುತ್ತವೆ. ಜನಪದ ಶೈಲಿಯ ಆಟೋಟಗಳು, ಹಬ್ಬ ಹರಿದಿನಗಳು, ಜಾತ್ರೆ



ವಿದ್ಯಾಧರ ಸಾಲಿ



ಗತಿ ರೇಖೆ

ಉತ್ಸವಗಳು, ನಂಬಿಕೆ ಆಚರಣೆಗಳು, ನಿತ್ಯ ಬದುಕಿನ ಆಗುಹೋಗುಗಳು ಇವರ ಕೃತಿಗಳಲ್ಲಿ ಅನಾವರಣಗೊಂಡಿರುತ್ತವೆ.

ಬಿಜಾಪುರ ಜಿಲ್ಲೆಯ ಮತ್ತೊಬ್ಬ ಯುವ ಕಲಾವಿದ ಮಂಜುನಾಥ ಮಾನೆ, ಇವರ ಕೃತಿಗಳಲ್ಲಿ ಹೆಚ್ಚಾಗಿ ನಿಸರ್ಗ ಚಿತ್ರಗಳು ಕಂಡುಬರುತ್ತವೆ. ಇದರಲ್ಲಿ ವಿಶೇಷ ಪರಿಣಿತಿಯನ್ನು ಪಡೆದ ಇವರು ಇತ್ತೀಚೆಗೆ ಸಮಕಾಲೀನ ಶೈಲಿಯಲ್ಲಿ ಸಂಯೋಜನಾ ಚಿತ್ರಗಳನ್ನು ರಚನೆ ಮಾಡುತ್ತಲಿದ್ದಾರೆ. ಅಮೂರ್ತ ರೂಪಗಳು, ಬಣ್ಣದ ಮೈವಳಿಕೆಗಳು, ರೇಖೆಯ ಜೀವಂತಿಕೆಯ ಎಳೆತಗಳು ಇವರ ಸಂಯೋಜನೆಯಲ್ಲಿ ಕಂಡುಬರುತ್ತವೆ. ಭಾವ ಚಿತ್ರ ಮತ್ತು ವ್ಯಕ್ತಿ ಚಿತ್ರಗಳನ್ನು ರಚಿಸಬಲ್ಲ ಇವರು ಜಲವರ್ಣವನ್ನು ಹೆಚ್ಚಾಗಿ ಇಷ್ಟಪಡುತ್ತಾರೆ.

ವಿಜಾಪುರದಲ್ಲಿರುವ ಮತ್ತೊಬ್ಬ ಯುವ ಕಲಾವಿದ ವಿ. ವಿ. ಹಿರೇಮಠ ಅವರು ಜಲವರ್ಣ ಚಿತ್ರ ರಚನೆಯಲ್ಲಿ ಸಿದ್ಧಹಸ್ತರಾಗಿದ್ದಾರೆ. ಜಲವರ್ಣ ಮಾಧ್ಯಮದಿಂದ ನಿಸರ್ಗ ದೃಶ್ಯಗಳನ್ನು ಪರಿಣಾಮಕಾರಿಯಾಗಿ ಚಿತ್ರಸಬಲ್ಲ ಇವರು ಆಧುನಿಕತೆಯ ಶೈಲಿಯಿಂದ ದೂರ ಉಳಿದವರಾಗಿದ್ದಾರೆ. ಇವರ ನಿಸರ್ಗ ದೃಶ್ಯಗಳಲ್ಲಿ ರಾಜ್ಯ ಮತ್ತು ರಾಷ್ಟ್ರದ ವಿವಿಧ ಐತಿಹಾಸಿಕ ಸ್ಥಳಗಳು, ಪುಣ್ಯ ಕ್ಷೇತ್ರಗಳು, ಸ್ಮಾರಕಗಳು, ಕೋಟೆಕೊತ್ತಲುಗಳು, ದೇವಾಲಯಗಳು, ಮಠ, ಮಸೀದೆಗಳು, ಮುಂತಾದ ಹಲವಾರು ವಿಷಯಗಳು ಮೂಡಿಬಂದಿವೆ.

ವಿಧ್ಯಾದರ ಸಾಲಿಯವರು ವಾಣಿಜ್ಯ ಕಲೆಯನ್ನು ಪಡೆದುಕೊಂಡವರಾದರು ಸಹಿತ ಲಲಿತ ಕಲೆಯಲ್ಲಿ ಪರಿಶ್ರಮವನ್ನು ಹೊಂದಿದವರಾಗಿದ್ದಾರೆ. ಜಲವರ್ಣ, ತೈಲ ವರ್ಣ, ಆಕ್ರ್ಯಾಲಿಕ್, ಇಂಕ್, ಮುಂತಾದ ಮಾಧ್ಯಮಗಳಲ್ಲಿ ಕೃತಿ ರಚಿಸುವ ಇವರು ಆಧುನಿಕ ಶೈಲಿಯನ್ನು ಅಳವಡಿಸಿಕೊಂಡಿದ್ದಾರೆ. ರೇಖಾ ಪ್ರಧಾನವಾಗಿರುವ ಇವರ ಕೃತಿಗಳು ಸಂಪ್ರದಾಯಿಕ ವಿಷಯ ನಿರೂಪನೆಗಳಿಂದ ಕೂಡಿದ್ದರು ಸಹಿತ ಅದರಲ್ಲಿ ಹೊಸತನ ಕಂಡುಬರುತ್ತದೆ. ಸಮಕಾಲೀನ ಸಂದರ್ಭದಲ್ಲಿ ಅಷ್ಟೊಂದು ಪರಿಣಾಮಕಾರಿಯಾದಂತಹ ಕೃತಿ ರಚನೆಗಳು ಇವರಿಂದ ಮೂಡಿಬರದೆ ಇದ್ದರು. ಆ ಒಂದು ತುಡಿತಕ್ಕಾಗಿ ಹಾತೊರೆಯುವಂತೆ ಇವರ ಕೃತಿಗಳು ಕಂಡುಬರುತ್ತವೆ. ಒಟ್ಟಾರೆಯಾಗಿ ಈ ಎಲ್ಲ ಕಲಾವಿದರು ಬೇರೆ ಬೇರೆ ಶೈಲಿಯನ್ನು ತಮ್ಮ ಕೃತಿ ರಚನೆಯಲ್ಲಿ ಅಳವಡಿಸಿಕೊಂಡಿದ್ದರೂ ಸಹಿತ ತಮ್ಮದೇ ಆದ ನಿಟ್ಟಿನಲ್ಲಿ ಚಿತ್ರ ಕಲಾ ಕ್ಷೇತ್ರದಲ್ಲಿ ವಿಜಾಪುರ ಜಿಲ್ಲೆಗೆ ವಿಶಿಷ್ಟವಾದ ಕೊಡುಗೆಯನ್ನು ನೀಡುತ್ತಲಿದ್ದಾರೆ.

♣♣♣♣♣

ಅಧ್ಯಾಯ : ಏಳು

ಸಮಾರೋಪ

ಚಿತ್ರಕಲೆ ಮಾನವನ ಸಾಂಸ್ಕೃತಿಕ ಬದುಕಿನ ಅವಿಭಾಜ್ಯ ಅಂಗವಾಗಿದ್ದು, ಆತ ವಾಸಿಸುವ ಪ್ರದೇಶದ ಜೀವನಾಡಿಯಂತೆ ಕೆಲಸ ಮಾಡುತ್ತದೆ. ಯಾವುದೇ ಒಂದು ಪ್ರದೇಶದ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ಅದರ ಅಂಗಗಳಾದ ಲಲಿತ ಕಲೆಗಳು ಪ್ರಮುಖ ಪಾತ್ರವಹಿಸುತ್ತಲಿರುವದು ಈ ಕಾರಣಕ್ಕಾಗಿಯೇ ಎಂದು ಹೇಳಬಹುದು. ಲಲಿತ ಕಲೆಗಳಲ್ಲಿ ಒಂದಾದ ಚಿತ್ರಕಲೆಯು ಸಹಿತ ಆಯಾ ಭಾಗದ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ಇತರ ಆಕರಗಳಿಗಿಂತ ಭಿನ್ನವಾದ ವಿಶಿಷ್ಟ ಪಾತ್ರವನ್ನು ವಹಿಸುತ್ತ ಬಂದಿದೆ. ಈ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆಯ ವ್ಯಾಪ್ತಿಯ ಪ್ರದೇಶದಲ್ಲಿ ಚಿತ್ರಕಲೆ ಯಾವ ರೀತಿಯ ಸಾಂಸ್ಕೃತಿಕ ಪರಿಣಾಮಗಳನ್ನು ಉಂಟು ಮಾಡಿದೆ ಎನ್ನುವ ಸಂಗತಿಗಳನ್ನು ತಿಳಿದುಕೊಳ್ಳುವಲ್ಲಿ ಈ ಅಧ್ಯಯನ ತುಂಬಾ ಮಹತ್ವದ್ದಾಗಿದೆ. ಕಲೆ ಮತ್ತು ಸಂಸ್ಕೃತಿಯನ್ನು ಒಳಗೊಂಡ ಪ್ರಸ್ತುತ ಅಧ್ಯಯನವು ಏಳು ಅಧ್ಯಾಯಗಳಲ್ಲಿ ಹರಡಿಕೊಂಡಿದೆ. ಪ್ರತಿಯೊಂದು ಅಧ್ಯಾಯಗಳಲ್ಲಿ ನಿರೂಪಿತಗೊಂಡ ವಿಷಯಗಳಿಂದ ಹೊರಬಂದ ಫಲಿತಗಳನ್ನು ಈ ಕೆಳಗಿನಂತೆ ಸ್ಥೂಲವಾಗಿ ಸಮೀಕ್ಷಿಸಬಹುದು.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಗಳನ್ನು ಕುರಿತು ಹೇಳಲಾಗಿಧೆ. ಈ ಅಧ್ಯಯನದ ಮಹತ್ವ ಮೌಲ್ಯ, ಮತ್ತು ಪ್ರಸ್ತುತತೆಗಳನ್ನು ಅಧ್ಯಯನದಲ್ಲಿ ತಿಳಿಸಲಾಗಿದೆ.

ಎರಡನೆಯ ಆಧ್ಯಾಯನದಲ್ಲಿ ವಿಜಾಪುರ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಮತ್ತು ಲಲಿತ ಕಲೆಗಳು ಎಂಬುದಾಗಿದೆ. ಇದರಲ್ಲಿ ಜಿಲ್ಲೆಯ ಸಂಕ್ಷಿಪ್ತ ಇತಿಹಾಸ, ವಾಸ್ತುಕಲೆ, ಶಿಲ್ಪಕಲೆ, ಮತ್ತು ಸಂಗೀತ ಕಲೆಗಳನ್ನು ಕುರಿತಂತೆ ಐತಿಹಾಸಿಕ ಮಹತ್ವಗಳೊಂದಿಗೆ ಚರ್ಚಿಸಲಾಗಿದೆ. ವಿಜಾಪುರದ ಪ್ರಾಚೀನತೆ, ಮೊದಲಿನ ಹೆಸರು, ಪ್ರಾಗಿತಿಹಾಸ ಕಾಲದಲ್ಲಿ ಈ ಪ್ರದೇಶದ ಜನಜೀವನ, ಕಲಾ ನೆಲೆಗಳನ್ನು ಕುರಿತು ಹೇಳಲಾಗಿದೆ. ಅದರಂತೆ ವಿಜಾಪುರದ ಪೌರಾಣಿಕ ಐತಿಹಾಸಿಕ, ಮತ್ತು ಜನಪದ ಹಿನ್ನೆಲೆಯ ಜೊತೆಗೆ ಅದರ ಬೆಳವಣಿಗೆಯನ್ನು ಕ್ರಮಾನುಗತವಾಗಿ ಕಟ್ಟಿಕೊಡಲಾಗಿದೆ. ಮುಂದಿನ ಹಂತದಲ್ಲಿ ವಿಜಾಪೂರ ಜಿಲ್ಲೆಯ ಐದು ತಾಲೂಕಗಳನ್ನು ಒಳಗೊಂಡಂತೆ ಆ ಪ್ರದೇಶದ ಸ್ಥಿತಿಗತಿಗಳೇನಿದ್ದವು ಎಂಬುವದನ್ನು ಇತಿಹಾಸದ ಹಿನ್ನೆಲೆಯೊಂದಿಗೆ ಪ್ರಸ್ಥಾಪಿಸಲಾಗಿದೆ.

ಆದಿಲ್‌ಶಾಹಿ ದೊರೆಗಳು ಆಳ್ವಿಕೆ ಪ್ರಾರಂಭಿಸಿದ ನಂತರ ಈ ಪ್ರದೇಶದ ರಾಜಕೀಯ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಮತ್ತು ಸಾಂಸ್ಕೃತಿ ಬದುಕುಗಳು ಪಲ್ಲಟಗೊಂಡು ಹೊಸ ದಾರಿಯನ್ನು ತುಳಿದವು. ಅದರ ಜೊತೆಗೆ ಇಲ್ಲಿನ ಲಲಿತ ಕಲೆಗಳು ಸಮೃದ್ಧವಾಗಿ ಬೆಳವಣಿಗೆಯಾದವು ಇಂತಹ ಎಲ್ಲ ಅಂಶಗಳನ್ನು ಈ ಆಧ್ಯಾಯದಲ್ಲಿ ವಿವೇಚಿಸಲಾಗಿದೆ. ಜಿಲ್ಲೆಯ ಲಲಿತ ಕಲೆಗಳಲ್ಲಿ ಪ್ರಮುಖವಾದ ಚಿತ್ರಕಲೆ, ಸಂಗೀತ ಕಲೆಗಳನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ. ಬಿಜಾಪುರ ನಗರ ಮಾತ್ರವಲ್ಲದೆ, ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕುಮಟಗಿ ನವರಸಪುರಗಳಂತಹ ಐತಿಹಾಸಿಕ ಮಹತ್ವದ ಸ್ಥಳಗಳಲ್ಲಿನ ಪ್ರಾಚೀನ ಸ್ಮಾರಕಗಳನ್ನು ಪರಿಗಣಿಸಲಾಗಿದೆ. ಈ ಎಲ್ಲ ಅಂಶಗಳು ಎರಡನೆಯ ಅಧ್ಯಾಯದಲ್ಲಿವೆ.

ಮೂರನೆಯ ಅಧ್ಯಾಯನದಲ್ಲಿ ವಿಜಾಪುರ ಜಿಲ್ಲೆಯ ಭಿತ್ತಿ ಚಿತ್ರಕಲೆ ಮತ್ತು ಹಸ್ತಪ್ರತಿ ಚಿತ್ರಕಲೆ ಎಂಬುದಾಗಿದೆ. ಇದರಲ್ಲಿ ಈ ಪ್ರದೇಶದ ಪ್ರಾಗಿತಿಹಾಸ ಕಾಲದ ಭಿತ್ತಿ ಚಿತ್ರಕಲೆ ಮತ್ತು ಇತಿಹಾಸ ಕಾಲದ ಭಿತ್ತಿ ಚಿತ್ರ ಕಲೆಗಳ ಬಗ್ಗೆ ಆಧ್ಯಯನ ಮಾಡಲಾಗಿದೆ. ಪ್ರಾಗಿತಿಹಾಸ ಕಾಲದ ಚಿತ್ರಕಲೆಯಲ್ಲಿ ಜಮಖಂಡಿ ಬಳಿಯ ಕುಳ್ಳೊಳ್ಳಿ, ಆಸಂಗಿ, ಶಿಲಾಶ್ರಯ ಚಿತ್ರಗಳನ್ನು ಪರಿಗಣಿಸಲಾಗಿದೆ. ಇಲ್ಲಿ ಕುಟ್ಟಿದ ಮತ್ತು ಕೊರೆದ ವರ್ಣರಹಿತ ಚಿತ್ರಗಳುಕಂಡು ಬಂದಿವೆ. ಇವುಗಳ ಜೊತೆಗೆ ಕಲಾದಗಿ, ತಾಳಿಕೋಟೆ ಪ್ರದೇಶಗಳಲ್ಲಿ ಲಭ್ಯವಾದ ಪ್ರಾಗಿತಿಹಾಸ ಕಾಲದ

ಮಡಿಕೆ ವರ್ಣ ಚಿತ್ರಗಳನ್ನು ಪರಿಗಣಿಸಲಾಗಿದೆ. ಇವೆಲ್ಲವು ಈ ಪ್ರದೇಶದ ಚಿತ್ರಕಲಾ ಪರಂಪರೆಗೆ ಬುನಾದಿಯಾಗಿವೆ ಎಂದು ತಿಳಿಸಲಾಗಿದೆ.

ಇತಿಹಾಸ ಕಾಲದ ಭಿತ್ತಿ ಚಿತ್ರಗಳಲ್ಲಿ ಬಿಜಾಪುರದ ಭಿತ್ತಿ ಚಿತ್ರಗಳು, ಕುಮಟಗಿಯ ಭಿತ್ತಿ ಚಿತ್ರಗಳೆಂದು ವಿಂಗಡಿಸಿ ವಿವೇಚಿಸಲಾಗಿದೆ. ವಿಜಾಪುರದ ಭಿತ್ತಿ ಚಿತ್ರಕಲೆಗಳಲ್ಲಿ ಅಸರ್‌ಮಹಲ್, ಜಾಮೀಯಾ ಮಸೀದಿ, ಸಿ.ಎಸ್. ಐ. ಚರ್ಚ ಮತ್ತು ಸಾತ್ ಮಂಜಿಲ್‌ಗಳಲ್ಲಿನ ಭಿತ್ತಿ ಚಿತ್ರಗಳ ಕುರಿತು ವಿವರಿಸಲಾಗಿದೆ. ಅಸರ್ ಮಹಲಿನ ಭಿತ್ತಿ ಚಿತ್ರಗಳನ್ನು ಕುರಿತು ಹೇಳುವಾಗ ಗೋಡೆಯ ಮೇಲ್ಭಾಗದ ಚಿತ್ರಗಳು, ಕೆಳಭಾಗದ ಚಿತ್ರಗಳು, ಮತ್ತು ಮಾಡುಗಳಲ್ಲಿ ರಚನೆಯಾಗಿರುವ ಚಿತ್ರಗಳು, ಎಂದು ವಿಂಗಡಿಸಲಾಗಿದೆ. ಗೋಡೆಯ ಮೇಲ್ಭಾಗದಲ್ಲಿ ಜ್ಯಾಮಿತಿಕ ನಕ್ಷೆಯ ವಿನ್ಯಾಸಗಳು ರಚನೆಯಾಗಿದ್ದರೆ, ಕೆಳಭಾಗದಲ್ಲಿ ವ್ಯಕ್ತಿ ಚಿತ್ರಗಳು ರಚನೆಯಾಗಿವೆ. ಅದರಂತೆ ಮಾಡುಗಳಲ್ಲಿನ ಚಿತ್ರಗಳಲ್ಲಿ ಹೂವಿನ ಕುಂಡಗಳು, ವಿವಿಧ ಗಿಡ , ಮರ, ಬಳ್ಳಿಗಳು, ಪಕ್ಷಿಗಳು ರಚಿಸಲ್ಪಟ್ಟಿವೆ. ಇದರ ಜೊತೆಗೆ ಇಲ್ಲಿನ ರೇಖಾ ವಿನ್ಯಾಸ, ಬಣ್ಣಗಾರಿಕೆ ಸಂಯೋಜನಾ ರೀತಿ ಮತ್ತು ಚಿತ್ರದ ಪ್ರಮುಖ ಲಕ್ಷಣಗಳನ್ನು ವಿಶ್ಲೇಷಿಸಲಾಗಿದೆ.

ಜಾಮಿಯಾ ಮಸೀದಿಯ ಚಿತ್ರಗಳಲ್ಲಿ ಕೇವಲ ಹೂಬಳ್ಳಿಯ ನಕ್ಷೆಗಳು , ಜ್ಯಾಮಿತಿಕ ವಿನ್ಯಾಸದ ಮಾದರಿಗಳು, ಖುರಾನಿನ ವಾಕ್ಯಗಳು ರಚಿಸಲ್ಪಟ್ಟಿವೆ. ಉಜ್ವಲವಾದ ವರ್ಣ ಲೇಪನದಿಂದ ಕೂಡಿದ ಈ ಚಿತ್ರಗಳು ಮೊಗಲ್ ಮತ್ತು ಪರ್ಶಿಯನ್ ಪ್ರಭಾವದಿಂದ ಪ್ರೇರಣೆಗೊಂಡಿವೆ ಎಂದು ಕಂಡುಕೊಳ್ಳಲಾಗಿದೆ. ಸಿ.ಎಸ್.ಐ. ಚರ್ಚಿನಲ್ಲಿರುವ ಅಲಂಕಾರಿಕ ವರ್ಣ ಚಿತ್ರಗಳಲ್ಲಿ ಹೆಚ್ಚಾಗಿ ಹೂಬಳ್ಳಿ ನಕ್ಷೆ, ಜ್ಯಾಮಿತಿಕ ಅಲಂಕರಣಗಳು ಕಂಡುಬರುತ್ತಿದ್ದು, ಇವು ಯುರೋಪಿಯನ್ ಪ್ರಭಾವಕ್ಕೊಳಗಾಗಿವೆ ಎಂಬುದನ್ನು ಹೇಳಲಾಗಿದೆ. ಅದರಂತೆ ಬಣ್ಣದ ಲೇಪನ ಮಾತ್ರ ಕಂಡುಬರುವ ಸಾತ್ ಮಂಜಿಲ್ ಕಟ್ಟಡದಲ್ಲಿ ಹಿಂದೆ ಉತ್ತಮ ವರ್ಣ ಚಿತ್ರಗಳಿದ್ದವೆಂದು ತರ್ಕಿಸಲಾಗಿದೆ. ಕುಮಟಗಿಯ ಬೇಸಿಗೆ ಅರಮನೆಯ ವರ್ಣ ಚಿತ್ರಗಳು ಹೆಚ್ಚಿನ ಪ್ರಮಾಣದಲ್ಲಿ ನಾಶವಾಗಿದ್ದು ಉಳಿದಿರುವ ಕೆಲವೇ ಚಿತ್ರಗಳ ಬಗ್ಗೆ ವಿವರಿಸಲಾಗಿದೆ. ರಾಜನು ಸಂತನೊಂದಿಗೆ ಚರ್ಚಿಸುತ್ತಿರುವುದು, ಪೋಲೋ ಆಟದಲ್ಲಿ ತೊಡಗಿರುವ ವ್ಯಕ್ತಿಗಳು, ಉದ್ಯಾನ ವನದಲ್ಲಿರುವ ಸ್ತ್ರೀಯರು, ವಿವಿಧ ಪ್ರಾಣಿ ಪಕ್ಷಿಗಳು, ಗಿಡಮರಗಳು, ಹೂಬಳ್ಳಿಗಳ ಬಗ್ಗೆ ಇರುವ ಚಿತ್ರಗಳನ್ನು ವಿಶ್ಲೇಷಿಸಲಾಗಿದೆ.

ಹಸ್ತಪ್ರತಿ ಚಿತ್ರಕಲೆ, ಸ್ವರೂಪ ಲಕ್ಷಣ, ಮಾಧ್ಯಮ, ರಚನಾಕ್ರಮ, ಪರಿಕರಗಳು, ವಸ್ತು ವಿಷಯ ಇವೆಲ್ಲ ಅಂಶಗಳನ್ನು ಸ್ಥೂಲವಾಗಿ ಬಿಂಬಿಸಲಾಗಿದೆ. ಮುಂದಿನ ಹಂತದಲ್ಲಿ ಆದಿಲ

ಶಾಹಿಗಳ ಕಾಲದ ಹಸ್ತಪ್ರತಿ ಚಿತ್ರಕಲೆ ಬಗ್ಗೆ ವಿವೇಚಿಸಲಾಗಿದೆ. ಈ ಕಾಲದಲ್ಲಿ ರಚನೆಗೊಂಡ ನಜಮ-ಉಲ್-ಉಲೂಮ್ ರತನ್‌ಕಲಿಯಾ, ನಿಮತ್‌ನಾಮಾ, ಕಿತಾಬ್-ಇ-ನವರಸ್, ಖವರ್‌ನಾಮಾ, ದಿವಾನ್-ಇ-ಉರ್ಫ, ಜವಾಹೀರ್-ಅಲ್-ಮುಶೀಕತ್, ಸಂಗೀತರತ್ನಾಕರ, ಮಧುಮಾಲತಿ, ಅಜಾ-ಇಬೂಲ್-ಮಖಾಲಕತ್, ಮತನಬಿ, ಜೋತಿಷ್ಯ ಶಾಸ್ತ್ರ ಗ್ರಂಥಗಳಲ್ಲಿನ ಹಸ್ತಪ್ರತಿ ಚಿತ್ರಗಳ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ. ಈ ಹಸ್ತಪ್ರತಿ ಚಿತ್ರಗಳ ವಸ್ತು ವಿಷಯ, ರಚನಾಕ್ರಮ, ವರ್ಣಗಾರಿಕೆ, ರೇಖಾ ವಿನ್ಯಾಸ ಸಂಯೋಜನಾ ರೀತಿ ಮುಂತಾದ ಅಂಶಗಳನ್ನು ಚರ್ಚೆಗೊಳಪಡಿಸಲಾಗಿದೆ. ಹೀಗೆ ಬಿಜಾಪುರ ಜಿಲ್ಲೆಯ ಭಿತ್ತಿ ಚಿತ್ರ ಮತ್ತು ಹಸ್ತಪ್ರತಿ ಚಿತ್ರಕಲೆಯ ಪ್ರಮುಖ ಅಂಶಗಳನ್ನು ಇಲ್ಲಿ ಬಿಂಬಿಸಲಾಗಿದೆ.

ನಾಲ್ಕನೆಯ ಅಧ್ಯಾಯನದಲ್ಲಿ ಬಿಜಾಪುರದಲ್ಲಿರುವ ಪ್ರಾಚೀನ ಕಾಲದ ವಸ್ತು ಸಂಗ್ರಹಾಲಯದಲ್ಲಿರುವ ಚಿತ್ರಗಳಿಗೆ ಸಂಬಂಧಿಸಿದ್ದಾಗಿದೆ. ಇಲ್ಲಿ ಅನೇಕ ಪ್ರಾಚೀನ ಕಲಾತ್ಮಕ ವಸ್ತುಗಳ ಜೊತೆಗೆ ಚಿತ್ರಕಲಾಕೃತಿಗಳು ಮತ್ತು ಚಿತ್ರಗಳನ್ನು ಹೊಂದಿದ ವಿವಿಧ ರೀತಿಯ ಅಲಂಕಾರಿಕ ವಸ್ತುಗಳನ್ನು ಕಾಯ್ದಿಡಲಾಗಿದೆ. ಇಲ್ಲಿ ಚಿತ್ರಕಲಾಕೃತಿಗಳು ಮತ್ತು ಚಿತ್ರಗಳನ್ನು ಹೊಂದಿದ ವಸ್ತುಗಳನ್ನು ಅಧ್ಯಯನಕ್ಕೆ ಪರಿಗಣಿಸಲಾಗಿದೆ. ಚಿತ್ರಗಳಲ್ಲಿ ಕಿರುರೂಪ ಚಿತ್ರಗಳು ಮತ್ತು ಹಸ್ತಪ್ರತಿ ಚಿತ್ರಗಳಿವೆ. ಹೆಚ್ಚಿನ ಚಿತ್ರಗಳು ಆದಿಲ್ ಶಾಹಿಗಳ ಕಾಲದ ರಚನೆಗಳಾಗಿವೆ. ಕಿರುರೂಪದ ಚಿತ್ರಗಳಲ್ಲಿ ಇಬ್ರಾಹಿಂ ಆದಿಲ್‌ಶಹ, ಚಾಂದಬೀಬಿ, ಬೇರೆಬೇರೆ ಸುಲ್ತಾನರು, ರಾಜಕುಮಾರರು, ರಾಜ ಪರಿವಾರದ ಸ್ತ್ರೀಯರು, ಅಧಿಕಾರಿಗಳು, ಸರದಾರರು, ಸಂತರು, ಯೋಗಿನಿಯರು, ಹೀಗೆ ಅನೇಕ ಚಿತ್ರಗಳಿವೆ. ಅದರಂತೆ ಆನೆಗಳು, ಒಂಟೆಗಳು, ಕುದರೆಗಳು, ಬೇರೆ ಬೇರೆ ಪಕ್ಷಿಗಳು ಹೀಗೆ ಹಲವಾರು ವಿಷಯಗಳಿಗೆ ಸಂಬಂಧಿಸಿದ ಚಿತ್ರಗಳು ಇಲ್ಲಿದ್ದು ಅವುಗಳನ್ನೆಲ್ಲ ಅಧ್ಯಯನಕ್ಕೊಳಪಡಿಸಲಾಗಿದೆ. ಈ ಚಿತ್ರಗಳ ಕಾಲಮಾನ, ರಚನಾ ವಿಧಾನ, ಉದ್ದೇಶ, ವರ್ಣಗಾರಿಕೆ, ರೇಖಾ ವಿನ್ಯಾಸ, ಸಂಯೋಜನಾ ರೀತಿ, ಕಲಾವಿದರು ಮುಂತಾದ ಸಂಗತಿಗಳನ್ನು ಬಿಂಬಿಸಲಾಗಿದೆ. ಅಲ್ಲದೆ ಪ್ರಭಾವ ಪ್ರೇರಣೆ ಮತ್ತು ಪ್ರೋತ್ಸಾಹಗಳ ಬಗ್ಗೆ ಸ್ಥೂಲವಾಗಿ ತಿಳಿಸಲಾಗಿದೆ.

ವಸ್ತು ಸಂಗ್ರಹಾಲಯದಲ್ಲಿ ಕಾಗದದ ಮೇಲಿನ ಚಿತ್ರಗಳು, ಲೋಹದ ಮೇಲಿನ ಚಿತ್ರಗಳು ಮಣ್ಣಿನ ಫಲಕದ ಮೇಲಿನ ಚಿತ್ರಗಳು, ಗಾಜಿನ ಮೇಲಿನ ಚಿತ್ರಗಳು ಹೀಗೆ ವಿಂಗಣೆ ಮಾಡಿ ವಿವೇಚಿಸಲಾಗಿದೆ. ಕಿರು ರೂಪ ಚಿತ್ರಗಳು ಸಾಮಾನ್ಯವಾಗಿ ಕಾಗದದ ಮೇಲೆ ರಚನೆಗೊಂಡಿವೆ, ಅವುಗಳ ಜೊತೆಗೆ ಪ್ಲಾಸ್ಟರ್ ಆಫ್ ಪ್ಯಾರಿಸ್ ಫಲಕಗಳು, ಪಿಂಗಾಣಿ ಮಣ್ಣಿನ

ಪಾತ್ರೆಗಳು, ಲೋಹದ ವಸ್ತುಗಳ ಮೇಲೆ ರಚನೆಯಾದ ಚಿತ್ರಗಳ ಬಗ್ಗೆ ವಿವರಿಸಲಾಗಿದೆ. ಕಲಾತ್ಮಕ ದೃಷ್ಟಿಯಿಂದ ಮಹತ್ವ ಪೂರ್ಣವಾದ ಈ ವಸ್ತು ಸಂಗ್ರಹಾಲಯದಲ್ಲಿನ ಚಿತ್ರ ಕಲಾಕೃತಿಗಳನ್ನು ಮಾಧ್ಯಮ ಮತ್ತು ವಿಷಯಾನುಸಾರ ವಿಂಗಡಿಸಿ ವಿವೇಚಿಸುವ ಮೂಲಕ ಒಂದು ಸ್ಥೂಲನೋಟ ಕೊಡುವ ಪ್ರಯತ್ನ ಮಾಡಲಾಗಿದೆ.

ಐದನೆಯ ಆಧ್ಯಾಯನದಲ್ಲಿ ಬಿಜಾಪುರ ಜಿಲ್ಲೆಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳ ಬಗ್ಗೆ ವಿವೇಚಿಸುತ್ತದೆ. ಜಿಲ್ಲೆಯಲ್ಲಿ ಬಿಜಾಪುರವನ್ನೊಳಗೊಂಡಂತೆ, ಬಸವನ-ಬಾಗೇವಾಡಿ, ಇಂಡಿ, ಹೂವಿನ ಹಿಪ್ಪರಗಿ, ಮತ್ತು ಮುದ್ದೇಬಿಹಾಳದಲ್ಲಿ ಕಲಾಶಾಲೆಗಳಿದ್ದು, ಅವುಗಳ ಕಾರ್ಯ ಚಟುವಟಿಕೆಯನ್ನು ಬಿಂಬಿಸುವ ಮೂಲಕ ಜಿಲ್ಲೆಯ ಕಲಾ ಕ್ಷೇತ್ರಕ್ಕೆ ಈ ಕಲಾ ಶಾಲೆಗಳು ನೀಡಿದ ಕೊಡುಗೆಯನ್ನು ಕಂಡುಕೊಳ್ಳಲಾಗಿದೆ. ಕಲಾ ಶಾಲೆಯ ಪ್ರಾರಂಭದ ಹಿಂದಿರುವ ಉದ್ದೇಶಗಳು, ಅವು ತಮ್ಮ ಕಲಾ ಶಿಕ್ಷಣದ ಜೊತೆಗೆ ಹಮ್ಮಿಕೊಂಡಿರುವ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು, ಅಲ್ಲಿನ ಶಿಕ್ಷಕ ವರ್ಗ ವಿಧ್ಯಾರ್ಥಿವೃಂದ, ಅವರ ಸಾಧನೆ ಸಿದ್ಧಿಗಳು, ಶೈಕ್ಷಣಿಕ ಉನ್ನತಿಗಳು, ಸಮಾಜ ಮತ್ತು ಕಲಾ ಶಿಕ್ಷಣದಲ್ಲಿ ಕಲಾ ಶಾಲೆಗಳ ಪಾತ್ರ ಮುಂತಾದ ಅಂಶಗಳ ಕುರಿತು ವಿವೇಚಿಸಲಾಗಿದೆ. ಜಿಲ್ಲೆಯಲ್ಲಿಯೇ ಬೃಹತ್ತಾದ ಮತ್ತು ಹಳೆಯದಾದ ಕಲಾ ಶಾಲೆಯು ಬಿಜಾಪುರದಲ್ಲಿದೆ. ಬಿ.ಎಲ್.ಡಿ. ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಈಕಲಾ ಶಾಲೆಯಲ್ಲಿ ಮೊದಲಿಗೆ ಡಿ.ಎಂ.ಸಿ.ಎ.ಎಮ್.ಜಿ.ಡಿ. ಶಿಕ್ಷಣ ಕ್ರಮಗಳುನಡೆಯುತ್ತಿದ್ದವು. ನಂತರದಲ್ಲಿ ಕಲಾ ತಳಹದಿ ಎರಡು ವರ್ಷ ಹಾಗೂ ಐದು ವರ್ಷದ ವಿಶೇಷ ಪರಿಣಿತಿ ತರಗತಿಗಳುನಡೆಯ ತೊಡಗಿದವು. ಆದರೆ ಇತ್ತೇಚಿಗೆ ರಾಜ್ಯ ವ್ಯಾಪ್ತಿ ಒಂದೇ ಬಗೆಯ ಕಲಾ ಶಿಕ್ಷಣ ಜಾರಿಗೆ ಬಂದಿರುವುದರಿಂದ ಎರಡು ವರ್ಷದ ಕಲಾ ತಳಹದಿ ಮತ್ತು ಮೂರು ವರ್ಷದ ಬಿ.ವಿ.ಎ. ಪದವಿ ತರಗತಿಗಳು ಇಲ್ಲಿ ಆರಂಭಗೊಂಡಿವೆ. ಶ್ರೀ ಸಿದ್ದೇಶ್ವರ ಚಿತ್ರ ಕಲಾ ಮಹಾವಿಧ್ಯಾಲಯ ಎಂಬ ಹೆಸರಿನಿಂದ ನಡೆಯುತ್ತಿರುವ ಈ ಕಲಾ ಶಾಲೆಯಲ್ಲಿ ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿದ ಶಿಕ್ಷರಿದ್ದಾರೆ. ಇಲ್ಲಿನ ವಿಧ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ ರ್‍ಯಾಂಕುಗಳನ್ನು ಗಳಿಸಿಕೊಂಡಿದ್ದಾರೆ. ಈ ಕಲಾ ಶಾಲೆ ತನ್ನ ಶೈಕ್ಷಣಿಕ ಕೆಲಸದ ನಡುವೆಯೇ ಅನೇಕ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತ ಬಂದಿದೆ. ಇಂತಹ ಅನೇಕ ಅಂಶಗಳು ಈ ಆಧ್ಯಾಯದಲಿ ವಿವೇಚಿಸಲಾಗಿದೆ. ಜಿಲ್ಲೆಯಲ್ಲಿ ಖ್ಯಾತವಾದ ಈ ಕಲಾ ಶಾಲೆಯ ಕೊಡುಗೆಗಳನ್ನು ಸ್ಥೂಲವಾಗಿ ಬಿಂಬಿಸಲಾಗಿದೆ. ಇದರಂತೆಯೇ ಇಂಡಿ, ಬಸವನ-ಬಾಗೇವಾಡಿ, ಮುದ್ದೇಬಿಹಾಳ ಮತ್ತು ಹೂವಿನ ಹಿಪ್ಪರಗಿಗಳಲ್ಲಿರುವ ಕಲಾಶಾಲೆಗಳ ಬಗ್ಗೆ ವಿವರ ಕೊಡಲಾಗಿದೆ. ಆಯಾ

ಕಲಾಶಾಲೆಗಳ ಹುಟ್ಟು ಬೆಳವಣಿಗೆ, ಸದ್ಯದ ಸ್ಥಿತಿಗತಿಗಳು, ವಿಧ್ಯಾರ್ಥಿ ಮತ್ತು ಶಿಕ್ಷಕ ವೃಂದದ ಕಲಾ ಸಾಧನೆಗಳು ಅಲ್ಲಿ ನಡೆಯುವ ಪ್ರಾತ್ಯಕ್ಷಿಕೆ, ಕಲಾ ಪ್ರದರ್ಶನ, ಕಾರ್ಯಾಗಾರ ಮತ್ತು ವಿಚಾರ ಸಂಕಿರಣಗಳಂತಹ ಸಂಗತಿಗಳನ್ನು ಇಲ್ಲಿ ಬಿಂಬಿಸಲಾಗಿದೆ. ಆ ಮೂಲಕ ಈ ಕಲಾ ಶಾಲೆಗಳು ಜಿಲ್ಲೆಯ ಕಲಾ ಕ್ಷೇತ್ರಕ್ಕೆ ಯಾವ ಬಗೆಯ ಕೊಡುಗೆ ನೀಡಿವೆ ಎಂಬುದನ್ನು ಕಂಡುಕೊಳ್ಳುಲಾಗಿದೆ.

ಆರನೆಯ ಆಧ್ಯಾಯನದಲ್ಲಿ ಬಿಜಾಪುರ ಜಿಲ್ಲೆಯ ಕಲಾವಿದರ ಕುರಿತು ವಿವೇಚಿಸುತ್ತದೆ. ಜಿಲ್ಲೆಯಾದ್ಯಂತ ಅನೇಕ ಪ್ರಸಿದ್ಧ ಚಿತ್ರ ಕಲಾವಿದರಿದ್ದು, ಅಧ್ಯಯನದ ಅನುಕೂಲತೆಯಿಂದ ಇಲ್ಲಿ ಕೇವಲ ಹತ್ತು ಜನಕಲಾವಿದರನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. ಇದರಲ್ಲಿ ಐದು ಜನ ಹಿರಿಯ ಕಲಾವಿದರು ಮತ್ತು ಐದು ಜನ ಸಮಕಾಲೀನ ಕಿರಿಯ ಕಲಾವಿದರನ್ನು ಆಧ್ಯಯನಕ್ಕೆ ಪರಿಗಣಿಸಲಾಗಿದೆ. ಈ ಹತ್ತು ಜನ ಕಲಾವಿದರ ಸಂಕ್ಷಿಪ್ತ ಕಲಾಬದುಕು, ವೃತ್ತಿ ಪ್ರವೃತ್ತಿಗಳು, ಕಲಾಕೃತಿ ರಚನೆ, ವಸ್ತು ವಿಷಯ, ಚಿತ್ರ ಶೈಲಿ, ಸಂಯೋಜನಾ ವಿಧಾನ, ಮೈವಳಿಕೆ, ಪ್ರಭಾವ ಪ್ರೇರಣೆ, ಮುಂತಾದ ಸಂಗತಿಗಳ ಬಗ್ಗೆ ವಿವೇಚಿಸಲಾಗಿದೆ. ಜೊತೆಗೆ ಆಯಾ ಕಲಾವಿದರ ಪ್ರಶಸ್ತಿ ಗೌರವಗಳು, ಮಾನ ಸನ್ಮಾನಗಳು, ಭಾಗವಹಿಸಿದ ಕಲಾ ಪ್ರದರ್ಶನ, ಕಾರ್ಯಾಗಾರ, ವಿಚಾರ ಸಂಕಿರ್ಣ ಮುಂತಾದ ಸಂಗತಿಗಳ ಬಗ್ಗೆಯೂ ಈ ಆಧ್ಯಾಯದಲ್ಲಿ ಚರ್ಚಿಸಲಾಗಿದೆ. ಆ ಮೂಲಕ ಜಿಲ್ಲೆಯ ಕಲಾ ಕ್ಷೇತ್ರಕ್ಕೆ ಈ ಕಲಾವಿದರು ನೀಡಿದ ಕೊಡುಗೆಯನ್ನು ಬಿಂಬಿಸಲು ಪ್ರಯತ್ನಿಸಲಾಗಿದೆ.

ಏಳನೆಯ ಅಧ್ಯಾಯನದಲ್ಲಿ ಸಮಾರೋಪವಾಗಿದ್ದು, ಮೇಲಿನ ಆರು ಅಧ್ಯಾಯಗಳ ಫಲಿತಗಳನ್ನು ಒಳಗೊಂಡಿದೆ. ಹೀಗೆ ಏಳು ಅಧ್ಯಾಯಗಳಲ್ಲಿ ನಿರೂಪಣೆಗೊಂಡು ವಿವೇಚಿಸಲ್ಪಟ್ಟಿರುವ ಪ್ರಸ್ತುತ ಅಧ್ಯಯನದಿಂದ ಅಲವಾರು ಪ್ರಮುಖ ಅಂಶಗಳನ್ನು ಕಂಡುಕೊಳ್ಳಲಾಗಿದ್ದು, ಅವುಗಳನ್ನು ಕೆಳಗಿನಂತೆ ಸ್ಥೂಲವಾಗಿ ಹೇಳಬಹುದು.

೧. ಬಿಜಾಪುರ ಪ್ರದೇಶವು ಸಾಂಸ್ಕೃತಿಕವಾಗಿ ಪ್ರಸಿದ್ಧಿಯನ್ನು ಪಡೆದಿರುವಂತೆ ಚಿತ್ರಕಲೆಯ ದೃಷ್ಟಿಯಿಂದಲೂ ಶ್ರೀಮಂತ ಪ್ರದೇಶವಾಗಿದೆ ಎಂಬುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

೨. ಬಿಜಾಪುರ ಜಿಲ್ಲೆಯ ಚಿತ್ರಕಲಾ ಪರಂಪರೆಯು ಪ್ರಾಗಿತಿಹಾಸ ಕಾಲದಿಂದಲೆ ಆರಂಭಗೊಂಡು ಇತಿಹಾಸ ಕಾಲದಲ್ಲಿ ಹೆಮ್ಮರವಾಗಿ ಬೆಳೆದು ಸಮಕಾಲೀನ ಸಂದರ್ಭದಲ್ಲಿ ತನ್ನ ಕಂಪನ್ನು ಸೂಸುತ್ತಿರುವುದು ತಿಳಿದುಭರುತ್ತದೆ.

೩. ಈ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ರಾಜ ಮಹಾರಾಜರು ತಮ್ಮ ಪ್ರೋತ್ಸಾಹದಿಂದ ಚಿತ್ರಕಲೆ ಪ್ರಬುದ್ಧವಾಗಿ ಬೆಳೆಯಲು ಕಾರಣರಾಗಿದ್ದಾರೆ. ಆದಿಲ್‌ಶಾಹಿ ದೊರೆಗಳ ಕಾಲದಲ್ಲಿ ದಖನ್ ಶೈಲಿಯ ಚಿತ್ರಕಲೆ ಈ ಪ್ರದೇಶದಲ್ಲಿ ವಿಶಿಷ್ಟವಾಗಿ ಬೆಳೆಯಿತು.

೪. ಆದಿಲ್‌ಶಾಹಿ ದೊರೆಗಳು ಮುಸ್ಲಿಂ ಧರ್ಮದವರಾಗಿದ್ದರೂ ಚಿತ್ರಕಲೆಯ ಹಿನ್ನೆಲೆಯಲ್ಲಿ ಇನ್ನಿತರ ಧರ್ಮಗಳಿಗೆ ಪ್ರೋತ್ಸಾಹ ನೀಡಿ ಧರ್ಮ ಸಹಿಷ್ಣುತೆಯನ್ನು ಮೆರೆದಿರುವುದು, ಈ ಅಧ್ಯಯನದಿಂದ ತಿಳಿದು ಬರುತ್ತದೆ.

೫. ಬಿಜಾಪುರ ಪ್ರದೇಶದಲ್ಲಿ ಚಿತ್ರಕಲೆಯ ಜೊತೆಗೆ ವಾಸ್ತುಕಲೆ, ಶಿಲ್ಪಕಲೆ, ಮತ್ತು ಸಂಗೀತ ಕಲೆಗಳಂತಹ ಲಲಿತ ಕಲೆಗಳು ಪೂರಕವಾಗಿ ಬೆಳವಣಿಗೆ ಹೊಂದಿರುವುದನ್ನು ಇಲ್ಲಿ ಕಂಡುಕೊಳ್ಳಲಾಗಿದೆ.

೬. ಬಿಜಾಪುರ ಜಿಲ್ಲೆಯಲ್ಲಿ ಭಿತ್ತಿ ಚಿತ್ರಕಲೆ, ಹಸ್ತಪ್ರತಿ ಚಿತ್ರಕಲೆ ಮತ್ತು ಕಿರುರೂಪ ಚಿತ್ರಕಲೆಗಳು ವಿಶೇಷವಾಗಿ ದಖನ್ ಶೈಲಿಯಿಂದ ಪ್ರೇರಣೆಗೊಂಡು ಬೆಳೆದವು.

೭. ಸಾಮಾನ್ಯವಾಗಿ ಮುಸ್ಲಿಂ ಚಿತ್ರಕಲೆಯಲ್ಲಿ ಕಂಡುಬರುವ ಇಂಡೋ ಪರ್ಶಿಯನ್ ಚಿತ್ರ ಶೈಲಿಯ ಜೊತೆಗೆ ಸ್ಥಳೀಯ ಶೈಲಿಗಳ ಪ್ರಭಾವವು ಈ ಪ್ರದೇಶದ ಚಿತ್ರಕಲೆಯ ಮೇಲೆ ಉಂಟಾಗಿರುವುದು ಕಂಡುಬರುತ್ತದೆ.

೮. ಬಿಜಾಪುರ ಪ್ರದೇಶದ ಕಿರುರೂಪ ಚಿತ್ರಗಳಲ್ಲಿ ರಾಗಮಾಲಾ ಚಿತ್ರಗಳು, ಯೋಗಿನಿಯರ ಚಿತ್ರಗಳು, ಮುಸ್ಲಿಂ ಸಂತರ ಚಿತ್ರಗಳು ವಿಶೇಷವಾಗಿವೆ.

೯. ಬಿಜಾಪುರ ಜಿಲ್ಲೆಯ ಕಲಾ ಶಾಲೆಗಳು, ಕಲಾವಿದರು ಕಲಾ ಸಂಸ್ಥೆಗಳು ಜಿಲ್ಲೆಯ ಕಲಾ ಬೆಳವಣಿಗೆಯಲ್ಲಿ ವಿಶಿಷ್ಟ ಪಾತ್ರ ವಹಿಸುತ್ತಲಿವೆ ಎಂಬುದನ್ನು ಕಂಡುಕೊಳ್ಳಲಾಗಿದೆ.

೧೦. ಈ ಜಿಲ್ಲೆಯ ಕಲಾವಿದರು ಸಮಕಾಲೀನ ಕಲಾವಲಯದಲ್ಲಿ ಗಮನಾರ್ಹ ಪಾತ್ರ ವಹಿಸುತ್ತಲಿದ್ದರೂ ನೈಜಶೈಲಿಯ ಚಿತ್ರಕಲಾವಿದರು ಜಿಲ್ಲೆಯಲ್ಲಿದ್ದಾರೆ. ಅಲ್ಲದೆ ನಿಸರ್ಗ ಚಿತ್ರ ರಚನೆಯಲ್ಲಿ ಈ ಪ್ರದೇಶದ ಕಲಾವಿದರು ವಿಶಿಷ್ಟವಾಗಿ ಗುರುತಿಸಿಕೊಂಡ–ವರಾಗಿದ್ದಾರೆ.

೧೧. ಬಿಜಾಪುರ ಜಿಲ್ಲೆಯಲ್ಲಿ ಸಾಂಪ್ರದಾಯಿಕ ನೈಜ ಶೈಲಿಯ ಚಿತ್ರಣ ಮತ್ತು ಆಧುನಿಕ ಚಿತ್ರ ರಚನಾ ಕಾರ್ಯಗಳನ್ನು ಜೊತೆಯಾಗಿ ಇಲ್ಲಿಯ ಕಲಾವಿದರು ನಡೆಸಿಕೊಂಡುಬರುತ್ತಿದ್ದಾರೆ.

೧೨. ಬಿಜಾಪುರ ಜಿಲ್ಲೆಯ ಹಿರಿಯ ತಲೆ ಮಾರಿನ ಕಲಾವಿದರು ಹೆಚ್ಚಾಗಿ ಮುಂಬೈ ಜೆ. ಜೆ. ಕಲಾ ಶಾಲೆಯಲ್ಲಿ ಕಲಿತು ಬಂದವರಾಗಿದ್ದು, ಅಲ್ಲಿನ ಅಕಾಡೆಮಿಕ್ ಶೈಲಿಯ ಪ್ರಭಾವದಿಂದ ಪ್ರೇರಣೆಗೊಂಡಿದ್ದಾರೆ. ಈ ಜಿಲ್ಲೆಯ ಯುವ ಕಲಾವಿದರು ಹೆಚ್ಚಾಗಿ ಆಧುನಿಕ

ಮನೋಭಾವದಿಂದ ಕೃತಿರಚನೆ ಮಾಡುತ್ತಾರೆ ಎಂಬುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಹೀಗೆ ಅನೇಕ ಅಂಶಗಳನ್ನು ಪ್ರತಿ ಫಲಿಸುವ ಈ ಅಧ್ಯಯನವು ಹಲವಾರು ದೃಷ್ಟಿಕೋನಗಳಿಂದ ಮಹತ್ವ ಪಡದುಕೊಂಡಿದೆ. ಕಲಾತ್ಮಕವಾಗಿ ಸೌಂದರ್ಯಾತ್ಮಕವಾಗಿ, ಸಾಮಾಜಿಕವಾಗಿ, ಐತಿಹಾಸಿಕವಾಗಿ, ಮತ್ತು ಸಾಂಸ್ಕೃತಿಕವಾಗಿ ಚಿತ್ರಕಲೆಯ ಬಗ್ಗೆ ವಿವಿಧ ಅಂಶಗಳನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದ್ದರೂ ಇದೊಂದು ಸಮಗ್ರವಾದ ಅಧ್ಯನವಲ್ಲ ಎಂಬ ಮಿತಿ ಇದ್ದಕ್ಕಿದೆ. ಬಿಜಾಪುರ ಜಿಲ್ಲೆಯ ಚಿತ್ರಕಲಾ ಕ್ಷೇತ್ರದ ಬಗ್ಗೆ ಇನ್ನೂ ಹಲವಾರು ದೃಷ್ಟಿಕೋನಗಳಿಂದ ಅಧ್ಯಯನ ಮಾಡಬಹುದಾದ ಸಾಧ್ಯತೆಗಳಿವೆ ಎಂಬುದನ್ನು ಈ ಸಂದರ್ಭದಲ್ಲಿ ವಿನಯದಿಂದ ಹೇಳಬಯಸುತ್ತೇನೆ.

♣♣♣♣♣

ಅನುಬಂಧಗಳು

ಗ್ರಂಥಋಣ

ಕನ್ನಡ ಗ್ರಂಥಗಳು

೧. **ಕರ್ನಾಟಕದ ಜನಪದ ಚಿತ್ರಕಲೆ** : **ಡಾ. ಎಸ್. ಸಿ. ಪಾಟೀಲ**
ವೀರಶೈವ ವಿದ್ಯಾವರ್ಧಕ ಸಂಸ್ಥೆ,
ತೋಂಟದಾರ್ಯಮಠ ಗದಗ
೧೯೯೩.

೨. **ಕರ್ನಾಟಕದ ಕಲೆಗಳು** : **ಬೆನಕನಹಳ್ಳಿ ಜಿ. ನಾಯಕ**
ಕನ್ನಡ ಸಾಹಿತ್ಯ ಪರಿಷತ್
ಬೆಂಗಳೂರು
೧೯೯೬

೩. **ಕರಕುಶಲ ಕಲೆಗಳು** : **ಡಾ. ಕರಿಗೌಡ. ಬೀಚನಹಳ್ಳಿ**
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ
ಹಂಪಿ
೨೦೦೦.

೪. **ಕಿನ್ನಾಳದ ಚಿತ್ರ ಕಲೆ** : **ಆರ್. ಹೆಚ್. ಕುಲಕರ್ಣಿ**
ಕರ್ನಾಟಕ ಲಲಿತ ಕಲಾ ಆಕಾಡೆಮಿ
ಬೆಂಗಳೂರು
೧೯೯೨.

೫. **ಕರ್ನಾಟಕದ ಸಂಸ್ಕೃತಿ ಸಮೀಕ್ಷೆ** : **ಕಪಟರಾಳ ಕೃಷ್ಣರಾವ್**
ಉಷಾ ಸಾಹಿತ್ಯ ಮಾಲೆ
ಮೈಸೂರು,
೧೯೭೦.

೬. **ಕರ್ನಾಟಕದಲ್ಲಿ ಚಿತ್ರಕಲೆ** : **ಶಿವರಾಮ ಕಾರಂತ**
ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ
೧೯೭೧.

೭. **ಕಲಾ ಪ್ರಪಂಚ** : **ಶಿವರಾಮ ಕಾರಂತ**
ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ
೧೯೭೮.

೮. **ಭಾರತೀಯ ಚಿತ್ರಕಲೆ** : **ಶಿವರಾಮ ಕಾರಂತ**
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು
೧೯೯೮.

೯. ವಿಜಯ ನಗರ ಸಾಮ್ರಾಜ್ಯ : ಸೂರ್ಯನಾಥ ಕಾಮತ್
ಅಪರ್ಣ ಪ್ರಕಾಶನ
ಬೆಂಗಳೂರು
೧೯೭೩.

೧೦. ದಖ್ಖನಿ ಚಿತ್ರಕಲೆ : ಎಸ್. ಕೆ. ಅರುಣಿ
ಕರ್ನಾಟಕ ಲಲಿತ ಕಲಾ ಆಕಾಡೆಮಿ
ಬೆಂಗಳೂರು
೨೦೦೦.

೧೧. ವರ್ಣ ಸಂಚಯ : ಡಾ. ಎಸ್. ಪಿ. ಪಾಟೀಲ
ವಿಜಯ ಮಹಾಂತೇಶ
ಲಲಿತ ಕಲಾ ಮಹಾವಿದ್ಯಾಲಯ
ಇಲಕಲ್ಲ
೨೦೦೪.

೧೨. ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ : ಡಾ. ಯಾದಪ್ಪ ಪರದೇಶಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಪಿ.ಎಚ್.ಡಿ. ಮಹಾಪ್ರಬಂಧ
೨೦೦೦.

೧೩. ಕರ್ನಾಟಕದ ಮುಸ್ಲಿಮ್ ಅರಸರ ಕಾಲದ ಚಿತ್ರಕಲೆ : ಡಾ. ಎ. ಎಮ್. ಬಾಗಾಯತ್
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಪಿ.ಎಚ್.ಡಿ. ಮಹಾಪ್ರಬಂಧ
೨೦೦೪.

೧೪. ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ : ಡಾ. ಹೆಚ್. ಎನ್. ಚಿತ್ರಗಾರ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಪಿ.ಎಚ್.ಡಿ. ಮಹಾಪ್ರಬಂಧ
೨೦೦೫.

೧೫. ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ : ಕೆ. ವಿ. ಕಾಳೆ
ಕನ್ನಡ ವಿಶ್ವವಿದ್ಯಾಲಯ
ಹಂಪಿ
೨೦೦೦.

೧೬. **ಚಿತ್ರಕಲಾ ದರ್ಪಣ** : **ಎ. ಟಿ. ಕಾಳೆ**
ಕರ್ನಾಟಕ ಲಲಿತ ಕಲಾ ಅಕಾಡೆಮಿ
ಬೆಂಗಳೂರು
೧೯೯೪.

೧೭. **ಹಸ್ತಪ್ರತಿ ಶಾಸ್ತ್ರ** : **ಚಿದಾನಂದಮೂರ್ತಿ ಮತ್ತು ಸೀತಾರಾಮಯ್ಯ**
ಬಿ.ಎಮ್.ಶ್ರೀ. ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
೧೯೮೩.

೧೮. **ಭಾರತದ ಜನಪದ ಚಿತ್ರಕಲೆ** : **ಎನ್. ಮರಿಶ್ಯಾಮಾಚಾರ್ಯ**
ಸಿ.ಎಮ್.ಎನ್. ಪ್ರಕಾಶನ
ಬೆಂಗಳೂರು,
೧೯೯೧.

೧೯. **ವಿಸ್ಮಯ ಇದು ವಿಜಾಪುರ** : **ಡಾ. ಕೃಷ್ಣಕೋಲಾರ ಕುಲಕರ್ಣಿ**
ಪುರಾತತ್ವ ಇಲಾಖೆ
ಬಿಜಾಪುರ
೨೦೦೬.

೨೦. **ಬಿಜಾಪುರ ಜಿಲ್ಲಾ ಗೆಝೆಟೀಯರ್** : **ಡಾ. ಆರ್. ಮುನಿಸ್ವಾಮಿ (ಸಂ)**
ಕರ್ನಾಟಕ ಸರಕಾರ
ಬೆಂಗಳೂರು
೨೦೦೨.

ಇಂಗ್ಲೀಷ ಗ್ರಂಥಗಳು

1. ***Marwar Murals*** *: R.A Agarwal*
   Agam prakashana
   New Delhi
   1977.

2. ***Lepakshi*** *: A. Gopalrao*
   Archaeological Survey of India ,
   New Delhi
   1969.

3. ***Techniques of Indian Painting*** *: A. K. Bhattacharya*
   Agam prakashana
   New Delhi
   1976.

4. ***The Artist's methods and Materials.*** *: Maria Bazzi*
   Phaildon press
   London,
   1960.

5. ***The letters of Phillip meadows Taylor to henry reeve.*** *: Caddel*
   Oxford University Press
   London
   1947.

6. ***Arts and Crafts of India and ceylon*** *: Anandkumarswamy*
   Oxford University Press
   London
   913.

7. ***Chitra Lakshana*** *: Anandkumarswamy*
   Sir ashutosh Memorial Prakasan
   Patna
   1927

8. ***Techniques in Indian Mural Paintings.*** *: Jayanth Chakravarthi :*
   K. P.Bagachi & Company
   Calcutta
   1980

9. ***Rajaput Paintings*** *: O.C.Ganguly*
   Agam Prakashana
   New Delhi
   1926.

10. ***A Survey of Painting in the Deccan.*** — ***: Stella Karamrich :***
Archaeological Survey of India
New Delhi
1937

11. ***Colour and Meaning*** — ***: Mariciahall***
Cambridge University Press
London
1992.

12. ***Mural Paintings in India.*** — ***: J.C. Nagpal***
Gain Publication
New Delhi
1987.

13. ***Indian Paintings*** — ***: Shivaram Murthy***
Nanational Book Trust of India
Delhi
1970.

14. ***Vijay Nagar Art*** — ***: R. N. Saletore***
Bombay University
1930.

15. ***Traditional Paitings of Karnataka.*** — ***: B.V.K.Shastry and Ramchandrarao :***
Chitra Kala Parishat
Bangalore
1989

ಸಂಕ್ಷೇಪಗಳು

೧. ಕ. ಲ. ಲ. ಅ.	: ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು.
೨. ಬಿ. ಎಲ್. ಡಿ. ಇ.	: ಬಿಜಾಪುರ ಲೀಬರಲ್ ಡಿಸ್ಟ್ರಕ್ಟ್ ಎಜುಕೇಶನ್ ಅಸೋಶಿಯನ್.
೩. ಕ. ವಿ. ವಿ. ಹಂ.	: ಕನ್ನಡ ವಿಶ್ವವಿದ್ಯಾಲಯ ಹಂಪಿ.
೪. ಕ. ವಿ. ವಿ. ಧಾ.	: ಕನ್ನಡ ವಿಶ್ವವಿದ್ಯಾಲಯ ಧಾರವಾಡ.
೫. ಗು. ವಿ. ವಿ.	: ಗುಲಬುರ್ಗಾ ವಿಶ್ವವಿದ್ಯಾಲಯ.
೬. ಮೈ. ವಿ. ವಿ.	: ಮೈಸೂರ ವಿಶ್ವವಿದ್ಯಾಲಯ.
೭. ಬೆಂ. ವಿ. ವಿ.	: ಬೆಂಗಳೂರು ವಿಶ್ವವಿದ್ಯಾಲಯ.
೮. ಮಂ. ವಿ. ವಿ.	: ಮಂಗಳೂರು ವಿಶ್ವವಿದ್ಯಾಲಯ.
೯. ಕ. ರಾ. ಮು. ವಿ.	: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ.
೧೦. ಪು. ಸಂ.	: ಪುಟ ಸಂಖ್ಯೆ.

ಛಾಯಾ ಚಿತ್ರಗಳ ಕೃಪೆ

೧) ಡಾ. ಎಸ್. ಸಿ. ಪಾಟೀಲರು

೨) ಡಾ. ವ್ಹಿ. ಎಮ್. ಬಾಗಾಯತ.

೩) ಡಾ. ಯಾದಪ್ಪ. ಪರದೇಶಿ.

೪) ಡಾ. ಕೃಷ್ಣಕೋಲ್ಹಾರ. ಕುಲಕರ್ಣಿ.

೫) ಶಿಲ್ಪಾ ಕಬ್ಬಿಣಕಂತಿ.

೬) ವಿಜಾಪುರ ಜಿಲ್ಲಾ ಗೆಝೇಟಿಯರ್.

೭) ಕರ್ನಾಟಕ ಲಲಿತ ಕಲಾ ಅಕಾಡಮಿಯ ಪ್ರಕಟಣೆಗಳ ಕಲಾವಿದರ ಪರಿಚಯ ಗ್ರಂಥಗಳು.

೮) ಅರ್ಕಾಲಿಜಿಕಲ್ ಮ್ಯೂಜಿಯಂ ಗೋಲಗುಮ್ಮಜ ಕಾಂಪ್ಲೆಕ್ಸ , ವಿಜಾಪುರ.

೯) ವಿಜಾಪುರ, ಇಂಡಿ, ಮುದ್ದೇಬಿಹಾಳ, ಹೂವಿನಹಿಪ್ಪರಗಿ, ಬಸವನ ಬಾಗೇವಾಡಿಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರರು.

೧೦) ವಿಜಾಪೂರ ಜಿಲ್ಲೆಯ ಎಲ್ಲ ಕಲಾವಿದರರು,


MAHARASTRA STATE
GULBARGA DISTRICT
BELGAUM DISTRICT
BAGALKOT DISTRICT
Bhima
Bhima River
Sindu River
Don
Soogli River
Krishana River
Narayanapura Dam
INDI
SINDGI
BIJAPUR
BASAVANABAGEVADI
MUDDEBIHAL
Taddevadi
Chadachana
Halsang
Agarkhed
Hire Bevnur
Nandaragi
Saletagi
Almel
Rugi
Kannur
Chandakavati
Chattarki
Nagathan
Devar Hippargi
Kannoli
Thoravi
Tikota
Honavad
Bijaragi
Babanagar
Nidoni
Tumgala
Saavalagi
Bobleshwar
Todalbagi
Kakhandaki
Mulvad
Managoli
Ingaleshwara
Dimdavara
salvadgi
Huvinhippargi
Vadavadagi
Tumbagi
Kondaguli
Kalakere
Mitthagi
Hebbala
Kolhar
Chimmalgi
Hoolur
Talikota
Kunthoja
Sarur
Tangadagi
Takkalki
Devarageannur
Yaragall
RIVERS
NATIONAL HIGHWAYS
STATE HIGHWAYS
RAILWAY LINE
Fine Art College's

ವಿಜಾಪೂರ ಜಿಲ್ಲೆ



ಕರ್ನಾಟಕ ರಾಜ್ಯದಲ್ಲಿ ವಿಜಾಪೂರ ಜಿಲ್ಲೆ

